
# ಕಸ್ತೂರಿ




ಅಕ್ಟೋಬರ್, ೧೯೬೨

ಬೆಲೆ: ೭೫ ನ. ಪೈ.

ಇಂದಿನ ವಿಶ್ವಕ್ಕೊಂದು ಬೆಳಕಿಂಡಿ


ನಿಮ್ಮ ಮುಖಕಾಂತಿಯನ್ನು
ರೆಮಿ ಬೆಳಗಿಸಲು
ಸೌಂದರ್ಯ-ಸಾಧನಗಳು:
★ ಸ್ನೋ
★ ಪೌಡರ್‌ಗಳು
★ ಹೇರ್ ಆಯಿಲ್‌ಗಳು
★ ಸಾಬೂನುಗಳು
ಇತ್ಯಾದಿ.
ಏಕಮೇವ ವಿತರಕರು:
ಎ. ವಿ. ಆರ್. ಎ. ಅಂಡ್ ಕಂಪೆನಿ, ಬೊಂಬಾಯಿ-2
Remy
Remy SNOW
Remy SNOW
R.G. 8


ತಲೆನೋವಿನಿಂದ ಕಷ್ಟಪಡುವಾಗ...
"ಈ ಹಾಳು ತಲೆನೋವ್ನಿಂದ ಯಾವ ಕೆಲ್ಸವನ್ನೂ ಮಾಡುವಂತಿಲ್ಲ!"
"ಈ ಸಾರಿಡಾನ್ ತೆಗೆದುಕೊಳ್ಳಿ... ಸೌಖ್ಯವಾಗುವುದು!"
ಸ್ವಲ್ಪ ಸಮಯದ ನಂತರ...
"ನನ್ನ ತಲೆನೋವು ಮಾಯವಾಯ್ತು! ಏನು ಸಾರಿಡಾನ್‌ನ ಪ್ರಭಾವ!"
ಸಾರಿಡಾನ್ ನೋವುಗಳನ್ನೂ, ಸಿಡಿತಗಳನ್ನೂ ಬಲು ಬೇಗನೆ, ನಿಶ್ಚಿತವಾಗಿ ಮತ್ತು ನಿರಪಾಯಕರವಾಗಿ ಉಪಶಮನಗೊಳಿಸುತ್ತದೆ. ತಲೆನೋವು, ಮೈಕೈ ನೋವು, ಹಲ್ಲುನೋವು, ಮೈ ಬಿಸಿಯಾಗುವುದು, ಸಾಮಾನ್ಯ ಅಸ್ವಸ್ಥತೆ — ಇವುಗಳಿಗೆ ಸಾರಿಡಾನ್ ತೆಗೆದುಕೊಳ್ಳಿರಿ.
ದೊಡ್ಡವರಿಗೆ 1 ಮಾತ್ರೆ;
ಮಕ್ಕಳಿಗೆ ¼ ರಿಂದ ½ ಮಾತ್ರೆ.
ಸಾರಿಡಾನ್
'ರೋಶ್'
Saridon
ಉಪಶಮನ, ಆರಾಮ ಮತ್ತು ಉಲ್ಲಾಸವನ್ನು ನೀಡುತ್ತದೆ
ಒಂದೇ ಒಂದು ಮಾತ್ರೆ ಸಾಕು
ಒಂದು ಮಾತ್ರೆಗೆ 13 ನ. ಪೈಸೆ
'ರೋಶ್' ಉತ್ಪಾದನ
ಸೋಲ್ ಡಿಸ್ಟ್ರಿಬ್ಯೂಟರ್ಸ್: ವೋಲ್ಟಾಸ್ ಲಿಮಿಟೆಡ್

# ಕಸ್ತೂರಿ

## ಕನ್ನಡ ಡೈಜೆಸ್ಟ್

ಪ್ರತಿ ತಿಂಗಳ ೧ನೇ ದಿನಾಂಕ
ಪ್ರಕಟವಾಗುವುದು.

**ಮುಖ್ಯ ಸಂಪಾದಕರು :**
ರಂಗನಾಥ ದಿವಾಕರ

**ಸಹಾಯಕ ಸಂಪಾದಕರು :**
ಪಿ. ವಿ. ಆಚಾರ್ಯ

**ಪ್ರಕಾಶಕರು :**
ಲೋಕ ಶಿಕ್ಷಣ ಟ್ರಸ್ಟ್-ಹುಬ್ಬಳ್ಳಿ

**ಕಚೇರಿ :**
ಸಂಯುಕ್ತ ಕರ್ನಾಟಕ ಕಾರ್ಯಾಲಯ
ಹುಬ್ಬಳ್ಳಿ

**ಮುದ್ರಕರು :**
ಸಂಯುಕ್ತ ಕರ್ನಾಟಕ ಮುದ್ರಣಾಲಯ
ಹುಬ್ಬಳ್ಳಿ

**ಮುಖಚಿತ್ರ :**
ವರಾಂಡಾ
ಎ. ಕೆ. ಬಾಲು

**ಚಂದಾ ದರ :**

| | |
|---|---|
| ವಾರ್ಷಿಕ(ಅಂಚೆಸೇರಿ). | ರೂ.೮·೦೦ |
| ಅರ್ಧ ವರ್ಷ — | ರೂ. ೪·೫೦ |
| ಬಿಡಿಸಂಚಿಕೆ — | ರೂ. ೦·೭೫ |

**Kasturi, October 1962**


## ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗೂ ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ **ಲೇಖಗಳ ಸಂಗಡವೇ** ತಿರುಗಿ ಕಳಿಸಲು ಅವಶ್ಯಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು. ಲೇಖಗಳು ಅಕಸ್ಮಾತ್ತಾಗಿ ಕಳೆದು ಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖ ಪ್ರಕಟವಾದರೆ "ಕಸ್ತೂರಿ" ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

## ಚಂದಾದಾರರಿಗೆ ಸೂಚನೆ

ಪ್ರತಿತಿಂಗಳ "ಕಸ್ತೂರಿ" ಆಯಾ ತಿಂಗಳ ೧ನೇ ದಿನಾಂಕದೊಳಗೆ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ನೇ ದಿನಾಂಕದೊಳಗೆ ತಲುಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರು ಕಾಣಿಸಲು ಮರೆಯಬಾರದು.

# ಈ ಸಂಚಿಕೆಯಲ್ಲಿ


| | | |
|---|---|---|
| ಧರ್ಮಧೃತಿ | ... ಗೋವಿಂದಮೂರ್ತಿ ದೇಸಾಯಿ | ೧ |
| ಬಿಳಿಯ ಮುದ್ದಣ: ಎಫ್. ಡಬ್ಲ್ಯು. ಬೇನ್ | 'ದುಷ್ಯಂತ' | ೪ |
| ನೀವೇ ಹೇಳಿದ್ದು (ವ್ಯಂಗ್ಯ ಚಿತ್ರಗಳು) ... | ಆರ್. ಕೆ. ಲಕ್ಷ್ಮಣ | ೮ |
| ತಂದೆಯ ಸರ್ವಸ್ವವೂ ಆಗಿದ್ದ ಮಣಿಬೇನ್ | ಘನಶ್ಯಾಮದಾಸ ಬಿರ್ಲಾ | ೯ |
| ಲೂಸಿ ಫ್ರೇಯ ಅಸಾಮಾನ್ಯ ಧೈರ್ಯ... | | ೧೪ |
| ಮಹಾದೇವನ ಮಹಿಮೆ (ಕಥೆ) ... | ಬನಫೂಲ | ೧೭ |
| ಜಾರ್ನಕನ ಆ-ಸತಿ ಹಿಂದೂ ಮಡದಿ ... | "ಧರ್ಮಯುಗ"ದಿಂದ | ೨೧ |
| ಧೂಮಪಾನ ಮತ್ತು ಆರೋಗ್ಯ ... | "ರೀಡರ್ಸ್ ಡೈಜಸ್ಟ್"ನಿಂದ | ೨೬ |
| ನಾನು ಹೆಂಡತಿಯನ್ನು ಸುಧಾರಿಸಬೇಕೆಂದೆ! | ಗಂಗಾಧರರಾವ ದೇಶಪಾಂಡೆ | ೩೪ |
| ವಿವೇಕ ಜೀವನ | ...ಡಾ. ಕಾಂತರಾವ ಕಮಲಾಪೂರ | ೪೦ |
| ಯುರೋಪಿನ ಸಾಮಾನ್ಯಪೇಟಿ, ಅದರ ಪರಿಣಾಮ | "ಕೌಟಿಲ್ಯ"ದ ಆಧಾರದಿಂದ | ೪೧ |
| ವಾಯುವೇಗದಲ್ಲಿ ಅಂಚೆ ಸಾಗಾಟ ... | "ಹೆಲ್ತ್ ಮ್ಯಾಗಜೀನ್"ನಿಂದ | ೪೬ |
| ಗುಪ್ತದಾನದ ನಿಧಿ ... | "ನವನೀತ" ದಿಂದ | ೪೯ |
| ಇದುವೆ ಜೀವ ಇದು ಜೀವನ ... | | ೫೩ |
| ಸ್ನಾನವೂ ಅಪರಾಧವಾಗಿತ್ತು ... | ಬಳ್ಳೂರು ಸುಬ್ರಾಯ ಅಡಿಗ | ೫೫ |
| ಕರೆವ್ವನ ಗುಡ್ಡ (ಕಥೆ) | ವೆಂಕಟೇಶ ಗಣೇಶ ಚಿಂಚಣೀಕರ | ೫೭ |
| ಮಂಗಳ ಗ್ರಹದಲ್ಲೇನಿದೆ ? ... | ಕೆ. ಎಸ್. ರಮಾನಂದ | ೬೫ |
| ಹೊಲಿಗೆಯಂತ್ರದ ಜನಕ ... | ಆನಂದ ವರ್ಟಿ | ೭೩ |
| ಬಂಗಾ-ಬಂಗಾ ಮತ್ತು ಬ್ರಿಟಿಶ್ ನೌಕಾಪಡೆ ... | ಮುರಲೀಧರ | ೭೭ |
| ವಯೋವೇಧೆಯಿಂದ ಪಾರಾಗಬಲ್ಲೆವು ... | ಸಿ. ಎಸ್ ಶರ್ಮ | ೮೨ |
| ನಿಮ್ಮ ಶಬ್ದ ಭಾಂಡಾರ ಬೆಳೆಯಲಿ ... | | ೮೭ |
| ನಗೆ ಮಲ್ಲಿಗೆ ... | | ೮೯ |
| 'ಇಂಟರ್ವ್ಯೂ'ನಲ್ಲಿ ಹೇಗೆ ಗೆಲ್ಲಬೇಕು ?... | ಬಳ್ಳೂರು ಸುಬ್ರಾಯ ಅಡಿಗ | ೯೧ |
| ನೀವು "ಸ್ವಂತಬುದ್ಧಿ"ಯವರೆ ? ... | | ೯೫ |
| ನಾನು ಹೇಗಾದೆ ? (ಕಥೆ) ... | ಪರ್ಲ್ ಬಕ್ | ೯೭ |
| ಈ ನೊರಜು ಅತ್ಯಂತ ಉಪಕಾರಿ ... | ರಾಧಾಕೃಷ್ಣ ರಾವ್ | ೧೦೬ |
| ಫಾಶಿಹಗ್ಗ ಹರಿದು ಬದುಕಿದ ... | ಮುಕ್ತಾ ರಾಜೆ | ೧೧೦ |
| ಪುಸ್ತಕ ಸಂಗ್ರಹ | | |
| ಬಿ. ಸಿ. ನಂ. ೨೦೮ ... | ಶ್ರೀನಿವಾಸ ಹಾವನೂರ | ೧೧೩ |

ಕಸ್ತೂರಿ

ಸಂಚಿಕೆ ೨ ಅಕ್ಟೋಬರ್, ೧೯೬೨ ವರ್ಷ ೭

# ಧರ್ಮಧೃತಿ

ಗೋವಿಂದಮೂರ್ತಿ ದೇಸಾಯಿ

ಕೌರವ ಪಾಂಡವರಿಬ್ಬರೂ ಮಹಾಭಾರತ ಯುದ್ಧಕ್ಕೆ ಸನ್ನದ್ಧರಾಗಿ ನಿಂತಿದ್ದಾರೆ. ದುರ್ಯೋಧನನಿಗೆ ಹೇಗೆ ವಿಜಯವನ್ನು ದೊರಕಿಸಬೇಕೆಂಬುದೇ ಯೋಚನೆಯಾಗಿತ್ತು ಎಷ್ಟೋ ಸಮಯ ಯೋಚಿಸಿದ ಮೇಲೆ ಅವನಿಗೆ ಒಂದು ಮಾರ್ಗ ಹೊಳೆದಂತಾಯಿತು.

"ನಾನೇಕೆ ಸಹದೇವನ ಬಳಿ ಹೋಗಿ ಯಾವ ಕ್ಷಣದಲ್ಲಿ ಸಂಗ್ರಾಮವನ್ನು ಪ್ರಾರಂಭಿಸಿದರೆ, ನನ್ನ ಪಕ್ಷಕ್ಕೆ ಜಯವಾದೀತು ಎಂಬ ಪ್ರಶ್ನೆಯನ್ನು ಕೇಳಬಾರದು?" ಎಂದು ಅಂದುಕೊಳ್ಳುತ್ತ ಆತ ಶಿಬಿರದಿಂದ ಹೊರಕ್ಕೆ ಬಂದನು. ಪಾಂಡವರಲ್ಲಿ ಕಿರಿಯನಾದ ಸಹದೇವನು ತನ್ನ ಔದಾರ್ಯಕ್ಕೆ ಹೆಸರುವಾಸಿಯಾಗಿದ್ದನು. ತಾತ್ಕಾಲಿಕ ಫಲಜ್ಯೋತಿಷ್ಯವನ್ನು ಹೇಳುವಲ್ಲಿಯೂ ಎತ್ತಿದ ಕೈ ಎಂಬ ಪ್ರತೀತಿಯನ್ನು ಪಡೆದಿದ್ದನು.

ಸಂಧಿಕಾಲ. ಆ ಎರಡೂ ಶಿಬಿರಗಳಲ್ಲಿ ಪರಸ್ಪರರ ರಹಸ್ಯವನ್ನರಿಯಲು ಗುಪ್ತಚಾರರು ಅಲೆದಾಡುತ್ತಿದ್ದರು. ಹೊಸ ಮುಖವನ್ನು ಕಂಡರೆ ಸಂಶಯವನ್ನು ವ್ಯಕ್ತಪಡಿಸಲಾಗುತ್ತಿತ್ತು. ದುರ್ಯೋಧನನು ಸಾಹಸದಿಂದ ಸಹದೇವನ ಶಿಬಿರಕ್ಕೆ ಹೋಗಿ ಅವನನ್ನು ಏಕಾಂತದಲ್ಲಿ ಸಂಧಿಸಿದನು

ನಗುತ್ತ ಬಂದು ನಿಂತ ದುರ್ಯೋಧನನನ್ನು ನೋಡಿ ಸಹದೇವನು ಆಶ್ಚರ್ಯಪಡುತ್ತ "ಅಗ್ರಜರೆ, ಇಲ್ಲಿಗೆ ಬರುವದು ಗಂಡಾಂತರವೆಂದು ಅರಿಯಿರೆ? ಬನ್ನಿ, ಈ ಆಸನವನ್ನು ಸ್ವೀಕರಿಸಿ" ಎಂದು ಪ್ರಾಂಜಲ ಮನಸ್ಸಿನಿಂದ ಆತಿಥ್ಯವನ್ನು ನೀಡಿದನು.

"ಸಹದೇವ, ಇದು ಆತಿಥ್ಯಕ್ಕೆ ಸಮಯವಲ್ಲ. ನಿನ್ನ ಬಳಿ ಒಂದು ಮಹತ್ವದ ಕಾರ್ಯವಿದೆ

'ಮಹಾಭಾರತ'ದ ಆಧಾರದಿಂದ

ಎಂದು. ಜೀವದ ಪರಿವೆಯನ್ನು ತೊರೆದು ನಿನ್ನ ಶಿಬಿರಕ್ಕೆ ಬಂದಿದ್ದೇನೆ. ನಿನ್ನ ವ್ಯತಿರಿಕ್ತ ನನಗಾರೂ ಸಹಾಯವನ್ನು ಸಲ್ಲಿಸಲಾರರು. ನೀನು ನನಗಾಗಿ ಅದನ್ನು ಮಾಡಬಲ್ಲಿ ಎಂಬ ಭರವಸೆ ನನಗಿದೆ, ಸಹದೇವ. ಅಂತಲೇ ನನ್ನ ಜೀವವನ್ನು ಪಣಕ್ಕೆ ಹಚ್ಚಿ ಈ ಶಿಬಿರಕ್ಕೆ ಬಂದಿದ್ದೇನೆ" ಎಂದ ದುರ್ಯೋಧನ.

"ಅಗ್ರಜರೆ, ಈ ಸಹದೇವನ ಮೇಲೆ ವಿಶ್ವಾಸ ವಿಟ್ಟುದಕ್ಕೆ ನಾನು ಧನ್ಯನು. ವೈಯಕ್ತಿಕವಾಗಿ ನಾನೇನು ಮಾಡಲು ಸಾಧ್ಯವೋ ಅದನ್ನು ಮಾಡುವೆ."

"ವಚನವನ್ನು ಕೊಟ್ಟಂತಾಯಿತಲ್ಲವೆ?"

"ತಥಾಸ್ತು."

"ಸಹದೇವ, ನೀನು ಅಂತಹ ಮಹಾತ್ಮನೆಂದೇ ನಿನ್ನ ಬಳಿ ಬಂದೆ. ಯಾವ ಸುಮುಹೂರ್ತದಲ್ಲಿ ನಾವು ಸಂಗ್ರಾಮವನ್ನು ಪ್ರಾರಂಭಿಸಿದರೆ ನಮಗೆ ಜಯವು ಲಭಿಸೀತು? ಆ ಮುಹೂರ್ತವನ್ನಷ್ಟು ಹೇಳಬೇಕು."

ದುರ್ಯೋಧನನ ಪ್ರಶ್ನೆಯಿಂದ ಸಹದೇವನಿಗೆ ಪ್ರಜ್ಞೆ ತಪ್ಪುವಂತಾಯಿತು. ದುರ್ಯೋಧನನ ಸುಮುಹೂರ್ತ ಪಾಂಡವರಿಗೆ ದುರ್ಮುಹೂರ್ತವಾಗಿ ಪರಿಣಮಿಸಲಿತ್ತು. ಆದರೆ ದುರ್ಯೋಧನನಿಗೆ ಮಾತನ್ನು ಕೊಟ್ಟದ್ದಾಗಿತ್ತು. ಕೊಟ್ಟ ಮಾತನ್ನು ನಡೆಸಿಕೊಡದಿರುವದು ಅಧರ್ಮ. ಒಂದೆಡೆ ಧರ್ಮ, ಇನ್ನೊಂದೆಡೆ ಪಾಂಡವರ ಸಮಾಧಿ! ಸಹದೇವನ ಹೃದಯ ಧರ್ಮವನ್ನು ಪಾಲಿಸಲು ಹೇಳಿತು.

ಮರುಕ್ಷಣವೇ ಸಹದೇವನು ನಕ್ಷತ್ರಗಳನ್ನೆಣಿಸಿ, ಗ್ರಹಗಳ ಸ್ಥಾನಬಲದಿಂದ ಒಳ್ಳೆಯ ಮುಹೂರ್ತವನ್ನು ಶೋಧಿಸಿ "ಅಗ್ರಜರೆ ಬರುವ ಅಮವಾಸ್ಯೆಯ ದಿವಸ ನಿಮಗೆ ಯುದ್ಧವನ್ನು ಪ್ರಾರಂಭಿಸಲು ಒಳ್ಳೆಯ ಮುಹೂರ್ತವಿದೆ" ಎಂದು ಹೇಳಿದನು. "ಸಹದೇವಾ, ಉಪಕಾರವಾಯಿತು" ಎಂದವನೇ ದುರ್ಯೋಧನನು ಹೋಗಿಬಿಟ್ಟನು.

ದುರ್ಯೋಧನ ಹೋದ ಮೇಲೆ ಸಹದೇವನಿಗೆ ತಾನೇನು ಮಾಡಿದೆ ಎಂದು ಚಿಂತೆಯಾಯಿತು. ಇನ್ನು ತಮ್ಮ ಸೋಲು ನಿಶ್ಚಿತ. ದಿಗಿಲುಗೊಂಡ ಆತ ಈ ಮಾತನ್ನು ಕೂಡಲೆ ಕೃಷ್ಣನೆದುರು ಹೇಳಬೇಕೆಂದು ಯೋಚಿಸಿ ಅದರಂತೆ ಹೋಗಿ ಹೇಳಿದನು.

ಕೃಷ್ಣನು ಕ್ಷಣಕಾಲ ಯೋಚಿಸಿ "ನಾನು ಈ ಬಗ್ಗೆ ವಿಚಾರಿಸುತ್ತೇನೆ. ನೀನು ವ್ಯಥೆಪಟ್ಟುಕೊಳ್ಳಬೇಡ. ನಿನ್ನ ಕಾರ್ಯಕ್ಕೆ ಉದ್ಯುಕ್ತನಾಗು. ನೀನು ಮಾಡಿದ ಈ ಮೂರ್ಖತನವನ್ನು ಗುಬ್ಬಿಗೂ ಕೂಡ ಹೇಳಬೇಡ. ನೀನು ಬಾಯಿಬಿಟ್ಟರೆ ನಮ್ಮ ಪತನವಾದೀತು" ಎಂದು ಹೇಳಿ ಕಳಿಸಿದನು.

*

ಆ ದುರ್ದೈವಿ ಅಮವಾಸ್ಯೆ ಸಮೀಪಿಸಹತ್ತಿತು. ಕೌರವರು ತಮ್ಮ ಸಿದ್ಧತೆಗಳನ್ನೆಲ್ಲಾ ಮಾಡಹತ್ತಿದರು. ಪಾಂಡವರ ಶಿಬಿರದಲ್ಲಿ ಸಹದೇವ ಮತ್ತು ಕೃಷ್ಣನನ್ನು ಬಿಟ್ಟರೆ ಉಳಿದ ಎಲ್ಲ ವೀರಾಧಿವೀರರು ನಿಶ್ಚಿಂತೆಯಿಂದ ಇದ್ದರು. ಅಮಾವಾಸ್ಯೆಯ ಹಿಂದಿನ ದಿವಸ ಶ್ರೀ ಕೃಷ್ಣನು ನಸುಕಿನಲ್ಲೆದ್ದು ಯುಧಿಷ್ಠಿರನ ಶಿಬಿರಕ್ಕೆ ಹೋಗಿ "ಏನು ಧರ್ಮರಾಜಾ, ನೀನಿನ್ನೂ ಮಲಗಿರುವಿ? ಇಂದು ಅಮವಾಸ್ಯೆ. ಪಿತೃತರ್ಪಣವನ್ನು ಕೊಡುವುದಿಲ್ಲವೆ?" ಎಂದು ಆಶ್ಚರ್ಯ ಚಕಿತನಂತೆ ಕೇಳಿದನು.

ಯುಧಿಷ್ಠಿರನು "ಕ್ಷಮಿಸು ಕೃಷ್ಣ. ಇಂದು ಹದಿನಾಲ್ಕನೇ ದಿವಸ. ನಾಳೆ ಅಮವಾಸ್ಯೆ. ನೀನು ಲೆಕ್ಕಹಾಕುವಾಗ ತಪ್ಪಿರಬೇಕು ದೇವ" ಎಂದನು.

"ಓ! ನಾನು ತಪ್ಪಬಹುದೆ? ನಡೆ, ಇಂದೇ ಅಮವಾಸ್ಯೆ. ಅರ್ಜುನ, ಭೀಮ, ನಕುಲ, ಸಹದೇವರನ್ನು ಕರೆದುಕೊಂಡು ನದಿಯ ಕಡೆ ಹೊರಡೋಣ. ಯಾವಾಗಲೂ ನನ್ನ ಮಾತನ್ನು ನಂಬುವ ನೀನು ಇಂದೇಕೆ ಸಂದೇಹವನ್ನು ವ್ಯಕ್ತಪಡಿಸುವಿ" ಎಂದು ಪಾಂಡವರನ್ನೆಲ್ಲ ಒತ್ತಾಯ

ದಿಂದ ತರ್ಪಣಾದಿ ಕಾರ್ಯಗಳಿಗಾಗಿ ಕೌರವರ ಶಿಬಿರದ ಹಿಂದಿದ್ದ ನದಿಯ ಕಡೆ ಕರೆದುಕೊಂಡು ಹೊರಟನು.

ಹಾದಿಯಲ್ಲಿ ಕೌರವರ ಶಿಬಿರವು ಬಂದೊಡನೆ "ಧರ್ಮರಾಜನೆ, ದರ್ಭೆಯನ್ನು ಮನೆಯಲ್ಲಿಯೇ ಮರೆತು ಬಂದಿಲ್ಲ ತಾನೇ? ತಂದಿರದಿದ್ದರೆ ಮರಳಿ ಹೋಗಿ ತೆಗೆದುಕೊಂಡು ಬಾ. ಅಮವಾಸ್ಯೆ ನಿಮಗಾಗಿ ಎಂದಿಗೂ ಕಾಯದು" ಎಂದು ಒಳ್ಳೇ ಎತ್ತರದ ಧ್ವನಿಯಲ್ಲಿ ಹೇಳಿದ ಕೃಷ್ಣ.

ಕೃಷ್ಣನ ಈ ಶಬ್ದಗಳು ದುರ್ಯೋಧನನ ಕಿವಿಗಳಿಗೆ ಬಿದ್ದವು. ತತ್‌ಕ್ಷಣವೇ ಆತ ದ್ರೋಣ ಭೀಷ್ಮಾದಿ ವೀರರನ್ನು ಕರೆಸಿ "ಅಮವಾಸ್ಯೆ ಎಂದು? ಇಂದೋ ನಾಳೆಯೊ?" ಎಂದು ಕೇಳಿದನು.

"ಅಮವಾಸ್ಯೆ ನಾಳೆ. ಅದರಲ್ಲಿ ಸಂಶಯವೇ ಇಲ್ಲ." ಭೀಷ್ಮ ಹೇಳಿದರು.

"ಹಾಗಿದ್ದರೆ ಕೃಷ್ಣನೇಕೆ ಪಾಂಡವರನ್ನೆಲ್ಲಾ ಕರೆದುಕೊಂಡು ತರ್ಪಣಕ್ಕೆ ನದಿಯ ಕಡೆ ಹೊರಟಿದ್ದಾನೆ?"

"ಇದು ಕೃಷ್ಣನ ತಂತ್ರ. ಇದರಲ್ಲಿ ನಂಬಿಕೆಯನ್ನಿಡಬೇಡ. ಗಣಿತ ಶಾಸ್ತ್ರವೆಂದೂ ಸುಳ್ಳಾಡುವದಿಲ್ಲ. ನಾವು ನಮ್ಮ ಲೆಕ್ಕವನ್ನು ಸರಿಯಾಗಿ ಮಾಡಿ ನಾಳೆ ಅಮವಾಸ್ಯೆ ಎಂದು ನಿರ್ಧಾರ ಮಾಡಿದ್ದೇವೆ" ಎಂದು ಶಿಬಿರದ ಪಂಡಿತರು ಏಕಕಂಠದಿಂದ ಸಾರಿದರು.

"ಆದರೆ ನನಗೇಕೋ ಸಂಶಯವು ಬರುತ್ತಿದೆ. ನಮ್ಮ ಸಂಗ್ರಾಮವೆಲ್ಲವೂ ಅಮವಾಸ್ಯೆ ಮೇಲೆಯೇ ಅವಲಂಬಿಸಿರುತ್ತದೆ. ನಾನು ಈ ಶುಭದಿನವನ್ನು ತಪ್ಪಿಸಿಕೊಂಡರೆ ನನ್ನ ತಲೆ ಹೋಗುವದರಲ್ಲಿ ಸಂದೇಹವಿಲ್ಲ. ನನ್ನದೇಕೆ, ನಿಮ್ಮ ತಲೆಗಳೂ ಹೋಗುತ್ತವೆ" ಎಂದು ದುರ್ಯೋಧನನು ಆಕ್ರೋಶ ಮಾಡಿದನು.

"ಹಾಗಿದ್ದರೆ, ಇಂದು ಸಂಜೆಯ ವರೆಗೂ ಕಾಯೋಣ. ಪಾಂಡವರು ಏನು ಮಾಡುವರೋ ನೋಡೋಣ." ಎಂದು ಯಾರೋ ಹೇಳಿದಾಗ ದುರ್ಯೋಧನನು ಒಪ್ಪಿ ತನ್ನ ಗುಪ್ತಚಾರರನ್ನು ನದಿಯ ಕಡೆ ಕಳಿಸಿದನು.

ಪಾಂಡವರು ಸ್ನಾನವನ್ನು ಮಾಡಿ ತರ್ಪಣಕ್ಕಾಗಿ ಸಿದ್ಧತೆಗಳನ್ನು ಮಾಡಹತ್ತಿದರು.

ಆಕಾಶದಲ್ಲಿ ದೇವತೆಗಳೆಲ್ಲಾ ಒಂದೆಡೆ ಸೇರಿ ಕೃಷ್ಣನ ಈ ಆಟವನ್ನು ನಿರೀಕ್ಷಿಸಹತ್ತಿದರು. ಸೂರ್ಯ-ಚಂದ್ರರಿಬ್ಬರೂ ಕೃಷ್ಣನ ಈ ಮಾತನ್ನು ಕೇಳಿ ತಾವೇ ಲೆಕ್ಕವನ್ನು ತಪ್ಪಿರುವೆವೇನೋ ಎಂಬ ಸಂಶಯದಿಂದ ಕೃಷ್ಣನ ಬಳಿ ಬಂದು ನಮಸ್ಕರಿಸುತ್ತ "ಪರಮಾತ್ಮನೇ..." ಎಂದು ವಿನಯದಿಂದ ಕೇಳತೊಡಗುವಷ್ಟರಲ್ಲಿ "ನೀವು ಏನು ಹೇಳಬೇಕೆಂದು ಮಾಡಿರುವಿರೋ ಅದು ನನಗೆ ಗೊತ್ತು. ಅಮಾವಾಸ್ಯೆಯ ವಿಷಯವಲ್ಲವೆ? ಸೂರ್ಯಚಂದ್ರರ ಸೇರುವಿಕೆಯೇ ಅಮಾವಾಸ್ಯೆಯಲ್ಲವೆ? ನೀವೀಗ ಒಂದೆಡೆ ಸೇರಿಲ್ಲವೆ? ಅಮಾವಾಸ್ಯೆ ಇದರಿಂದ ಆದಂತಾಗಲಿಲ್ಲವೆ? ಅಂದಮೇಲೆ ಪಾಂಡವರೇಕೆ ಪಿತೃತರ್ಪಣವನ್ನು ಕೊಡಬಾರದು? ನಿಮ್ಮ ಸೇರುವಿಕೆಯೇ ನಮಗೆ ಅಮವಾಸ್ಯೆಯಾಯಿತು. ಅಂದಮೇಲೆ ನಮ್ಮ ಧರ್ಮಕ್ಕೆ ಚ್ಯುತಿಯಿಲ್ಲ." ಎಂದುಬಿಟ್ಟನು ಶ್ರೀಕೃಷ್ಣನು.

ತರ್ಪಣದ ಕಾರ್ಯವು ಸಾಗಿತು. ದುರ್ಯೋಧನನಿಗೆ ಅಂದೆ ಅಮವಾಸ್ಯೆ ಎಂಬ ಬಗ್ಗೆ ಸಂದೇಹವೇ ಉಳಿಯಲಿಲ್ಲ. ಕೂಡಲೇ ಅವನು ತನ್ನ ಸೇನಾಧಿಪತಿಗೆ ಯುದ್ಧವನ್ನು ಪ್ರಾರಂಭಿಸಲು ಆಜ್ಞೆಯನ್ನು ಮಾಡಿದನು. ಆ ಆಜ್ಞೆಯೇ ಕೌರವರ ಸಮಾಧಿಯ ನಾಂದಿಯಾಯಿತು. ಕೃಷ್ಣ ಅಮಾವಾಸ್ಯೆ ಸಹದೇವನ ಧರ್ಮವನ್ನೂ ರಕ್ಷಿಸಿತು, ಪಾಂಡವರ ಹಿತವನ್ನೂ ಪಾಲಿಸಿತು, ಕೌರವರ ಅಂತ್ಯವನ್ನೂ ಸೂಚಿಸಿತು. *

ಆತ
'ಸಂಸ್ಕೃತ ಕಥೆ'ಗಳನ್ನು
ಬರೆದ



# ಬಿಳಿಯ ಮುದ್ದಣ

## ಎಫ್. ಡಬ್ಲ್ಯು. ಬೇನ್

**ದುಷ್ಯಂತ**

ಸಂಸಾರ ಸಾಗರಮಂಥನ' ಎಂಬ ಸಂಸ್ಕೃತ ಕಥಾಕೋಶದ ಹೆಸರನ್ನು ನೀವು ಕೇಳಿದ್ದೀರಾ? ಶಕ್ಯವೇ ಇಲ್ಲ. ಸಂಸ್ಕೃತ ಸಾಹಿತ್ಯದಲ್ಲಿ ಸೋಮದೇವನ ಕಥಾಸರಿತ್ಸಾಗರ, ಗುಣಾಢ್ಯನ ಬೃಹತ್ ಕಥಾಕೋಶ, ವೇತಾಳ ಪಂಚವಿಂಶತಿ ಕಥಾ ಇವು ಮಾತ್ರ ಎಲ್ಲರಿಗೂ ಸುಪರಿಚಿತವಾದುವು. 'ಸಂಸಾರಸಾಗರ ಮಂಥನ'ವೂ ಅದೇ ಜಾತಿಗೆ ಸೇರಿದುದೆಂದು ಹೇಳುತ್ತ ಎಫ್. ಡಬ್ಲ್ಯು. ಬೇನ್ ಅದರಲ್ಲಿಯ ಕತೆಗಳನ್ನು ಇಂಗ್ಲೀಷಿಗೆ 'ಭಾಷಾಂತರಿಸಿ' ವಿಖ್ಯಾತ ಸಾಹಿತಿಯೆನಿಸಿಕೊಂಡನು. ನಿಜವಾಗಿ ನೋಡಿದರೆ ಅದು ತೆನ್ನಾಲಿ ರಾಮಕೃಷ್ಣನ 'ತಿಲಕಾಷ್ಠ ಮಹಿಷ ಬಂಧನ'ದ ಜಾತಿಗೆ ಸೇರಿದುದಾಗಿತ್ತು!

ಇದುವರೆಗೆ ಯಾವ ಭಾರತೀಯ ಸಂಸ್ಕೃತ ಪಂಡಿತನಿಗೂ ದೊರೆಯದ ಈ ಗ್ರಂಥವು ತನಗೆ ಹೇಗೆ ಸಿಕ್ಕಿತೆಂಬ ಬಗ್ಗೆ ಬೇನ್ ಹೇಳಿದ ಕತೆ ಹೀಗಿದೆ: ೧೮೯೭ ರ ಸುಮಾರಿಗೆ ಪುಣೆಯಲ್ಲಿ ಪ್ಲೇಗ್ ಬೇನೆ ಹಬ್ಬಿದ್ದಾಗ ಒಬ್ಬ ಬ್ರಾಹ್ಮಣನಿಗೆ ಅವನು ನೆರವಾದುದರ ಸ್ಮರಣಾರ್ಥವಾಗಿ ಆ ಬ್ರಾಹ್ಮಣನು ತನ್ನಲ್ಲಿಯ ಒಂದು ಸಂಸ್ಕೃತ ಹಸ್ತಪ್ರತಿಯನ್ನು ಕೊಟ್ಟನಂತೆ. ಅದೇ 'ಸಂಸಾರ ಸಾಗರ ಮಂಥನ.' ಆ ಬೃಹತ್‌ಗ್ರಂಥದ '೧೬ ನೆಯ ಪ್ರಕರಣವನ್ನು' ಮೊದಲಿಗೆ ಭಾಷಾಂತರಿಸಿ ಕೊಡುವುದಾಗಿ The Digit of the Moon ಎಂಬ ನೀಳ್ಗತೆಯ ಮುನ್ನುಡಿಯಲ್ಲಿ ಬೇನ್ ತಿಳಿಯಪಡಿಸಿದನು.* ಈ ಗ್ರಂಥವು ೧೮೯೮ ರಲ್ಲಿ ಪ್ರಕಟವಾದಂದಿನಿಂದ ೧೯೧೯ ರ ವರೆಗೆ ಸುಮಾರು ೧೩ ಕಥಾವಳಿಗಳನ್ನು ಬೇನ್‌ನು Indian Tales ಎಂಬ ಮಾಲಿಕೆಯಲ್ಲಿ ಹೊರ ತಂದನು.

ಮೊದಲ ಕೃತಿ ಪ್ರಕಟವಾದೊಡನೆಯೇ ಬೇನ್‌ನಿಗೆ ಅದು ಸಾಕಷ್ಟು ಖ್ಯಾತಿಯನ್ನು ತಂದು ಕೊಟ್ಟಿತು. ಇಂಗ್ಲಂಡಿನಲ್ಲಿ ಅವುಗಳಿಗೆ ಬಹಳಷ್ಟು ಬೇಡಿಕೆ ಬಂದಿತು. ವಿದ್ವಾಂಸರಾದವರು ಈ 'ಸಂಸಾರಸಾಗರ ಮಂಥನ' ವೆಂಬುದು ನಿಜವಾಗಿ ಅತ್ಯಪೂರ್ವ ಗ್ರಂಥ. ಇದು ದೊರಕಿದುದು ಮಹಾಯೋಗವೇ ಸೈ ಎಂದು ಆನಂದಪಟ್ಟರು. ಲಂಡನ್ನಿನ ಬ್ರಿಟಿಶ್ ಮ್ಯೂಜಿಯಂನಲ್ಲಿ ಉದ್ದಾಮ ಸಂಸ್ಕೃತ ಪಂಡಿತರಿದ್ದು ಅವರಿಗೂ ಇಂಥ ಒಂದು ಗ್ರಂಥ ನಿಜವಾಗಿ ಇದ್ದಿರಬಹುದೇ ಎಂಬ ಸಂಶಯ ಬರಲೇ ಇಲ್ಲ. ಸ್ವತಃ ಲೇಖಿಕೆ

---

*ಈ ಕತೆಯು ಸಂಗ್ರಹರೂಪವಾಗಿ 'ಸೂರ್ಯಕಾಂತ' ಎಂಬ ಹೆಸರಿನಿಂದ ಕಸ್ತೂರಿಯ ಮೇ, ೧೯೫೯ ರ ಸಂಚಿಕೆಯಲ್ಲಿ ಪ್ರಕಟವಾಗಿದೆ.

ಯಾದ ಅವನ ತಾಯಿ ಆ ಗ್ರಂಥವನ್ನು ಓದಿ ಇಂಥ ಉಜ್ವಲ ಕೃತಿಯನ್ನು ಹುಡುಕಿ ಅನುವಾದಿಸಿದ್ದಕ್ಕೆ ಮನವಾರೆ ಹೊಗಳಿ ಕಾಗದ ಬರೆದಳು. ಬೇನ್ ಒಳಗೊಳಗೇ ತುಂಟ ಸಂತೋಷದಿಂದ ನಕ್ಕನು.

ದಿನಗಳೆದಂತೆ ಅವನ ಇತರ ಕೃತಿಗಳು ಒಂದೊಂದಾಗಿ ಹೊರಬಂದಂತೆ ಜನಕ್ಕೆ ಸಂಶಯ ಬರತೊಡಗಿತು. ಬೇನ್‌ನು ಮೂಲಗ್ರಂಥದ ಬಗ್ಗೆ ಹೆಚ್ಚಿನ ವಿಷಯಗಳನ್ನು ಯಾಕೆ ಕೊಡುತ್ತಲಿಲ್ಲ? ಬೇನ್‌ನು ತನ್ನ ಪ್ರತಿಯೊಂದು ಪುಸ್ತಕಕ್ಕೆ ಒಂದು ಸಂಸ್ಕೃತ ಶಿರೋನಾಮೆಯನ್ನು ಕೊಡುತ್ತಿದ್ದ. ಪುಸ್ತಕದ ಉದ್ದಕ್ಕೂ 'ಸಂಸ್ಕೃತ ಶಬ್ದವನ್ನು ಸುಲಭವಾಗಿ ಇಂಗ್ಲೀಷಿಗೆ ಭಾಷಾಂತರಿಸಲು ಶಕ್ಯವಿಲ್ಲ' ಎಂಬುದಾಗಿ ಅಲ್ಲಲ್ಲಿ ಅಡಿಟಿಪ್ಪಣಿಗಳನ್ನು ಕೊಡುತ್ತಿದ್ದ! ಆದರೆ ಮೂಲಗ್ರಂಥ, ಹಾಗೂ ಲೇಖಕನ ಬಗ್ಗೆ ಚಕಾರಶಬ್ದವೂ ಇಲ್ಲ. ಇಂಗ್ಲಂಡಿನ ಸಾಹಿತ್ಯದ ಪತ್ರಿಕೆಗಳಲ್ಲೆಲ್ಲ ಈ ಬಗ್ಗೆ ಯುದ್ಧವೇ ನಡೆಯಿತು. ಬೇನ್ ಮೂಕನಾಗಿಯೆ ಇದ್ದ. ಕೊನೆಗೆ ಇಳಿವಯಸ್ಸಿನಲ್ಲಿ ಬೇನ್‌ನು "ಅವು ತನ್ನವೇ ಕೃತಿಗಳು" ಎಂಬುದಾಗಿ ಒಪ್ಪಿಕೊಂಡನು-ಅದೂ ಖಾಸಗಿಯಾಗಿ!

ಕನ್ನಡ ಸಾಹಿತ್ಯದಲ್ಲಿ ವರಕವಿಯಾದ ಮುದ್ದಣನು ಕೂಡ ಹೀಗೆಯೆ ಮಾಡಿದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಮುದ್ದಣನು ಹಾಗೆ ಸುಳ್ಳು ಹೇಳಿದುದಕ್ಕೆ ಕಾರಣವೆಂದರೆ, ತಾನು ಬರೆದ ಕೃತಿಯೆಂದರೆ ಜನ ನಂಬಲಿಕ್ಕಿಲ್ಲ ಮತ್ತು ಪ್ರಕಟಿಸಲಿಕ್ಕಿಲ್ಲ ಎಂಬ ಭಾವನೆ. ಬೇನ್‌ನು ಕೂಡ ಇಂಥ ಕೃತಿಗಳ ವಾಚನಕ್ಕೆ ತಕ್ಕ ಮನೋಭೂಮಿಕೆ ಓದುಗರಲ್ಲಿ ಬರಬೇಕಾದರೆ ತೀರ ಪ್ರಾಚೀನವೆಂದು ಹೇಳುವುದು ಉತ್ತಮವೆಂಬುದಾಗಿ ಭಾವಿಸಿದ್ದನು. ಅದರ ಜೊತೆಗೆ ಜನರನ್ನು ಈ ರೀತಿಯಾಗಿ ವಂಚಿಸುವಲ್ಲಿ ತಾನು ಪಡೆಯುವ ಆ ಪ್ರಚ್ಛನ್ನ ತೃಪ್ತಿಯೂ ಅವನನ್ನು ಹಾಗೆ ಮಾಡಲು ಪ್ರೇರಿಸಿತ್ತು!

ಬೇನ್‌ನ 'ಪ್ರಾಚೀನ' ಕಥೆಗಳು ಶುದ್ಧ ಮೋಸವಾಗಿದ್ದರೂ ಅವು ಅಸಾಧಾರಣವಾಗಿದ್ದವು ಭಾರತೀಯ ರಮ್ಯಕಥೆಗಳಲ್ಲಿ ಬರುವಂಥ ಅತ್ಯಪೂರ್ವ ನಾಯಕ-ನಾಯಿಕೆಯರೇ ಅವುಗಳಲ್ಲಿದ್ದಾರೆ. ಹೆಣ್ಣೆಂದರೆ ಶತ್ರು ಎಂದು ಬಗೆದ ರಾಜಕುಮಾರ ಒಂದು ಹೆಣ್ಣಿನ ಚಿತ್ರನೋಡಿ ಮರುಳಾಗುವುದು, ಒಂದು ಹೆಣ್ಣಿಗಾಗಿ ಸಪ್ತಸಿಂಧುಗಳನ್ನು ದಾಟುವ ಸಾಹಸಿ ಪ್ರೇಮಿಕ, ಕನಸಿನ ಕೆಳದಿಯನ್ನು ಹುಡುಕುತ್ತ ಅಲೆಯುವ ಪ್ರೇಮಮುಗ್ಧ, ಶಾಪಗ್ರಸ್ತ ಪ್ರಣಯಿ, ಗಂಡಸರನ್ನು ಮರುಳು ಮಾಡಿ ನಾಶಗೊಳಿಸುವುದನ್ನೇ ಉದ್ಯೋಗವಾಗಿ ಮಾಡಿಕೊಂಡ ನಿಷ್ಠುರ ರಮಣಿ— ಪಾತ್ರಗಳೂ ಸನ್ನಿವೇಶಗಳೂ ಅಚ್ಚ ಭಾರತೀಯ ಕವಿಯೊಬ್ಬನ ಸೃಷ್ಟಿಯೆ ಎನ್ನಿಸುವಂತಿವೆ. ಅವು ಸೋಜಿಗಗೊಳಿಸುತ್ತವೆ, ಸೆರೆಹಿಡಿಯುತ್ತವೆ, ನಗಿಸುತ್ತವೆ, ಕಣ್ಣೀರು ಮಿಡಿಸುತ್ತವೆ.

ಎಫ್. ಡಬ್ಲ್ಯು ಬೇನ್ ಆಕ್ಸ್‌ಫರ್ಡಿನ ಪ್ರಸಿದ್ಧ ಆಲ್ ಸೋಲ್ಸ್ ಕಾಲೇಜಿನಲ್ಲಿ ತನ್ನ ಶಿಕ್ಷಣವನ್ನು ಮುಗಿಸಿಕೊಂಡು ೧೮೮೩ ರಲ್ಲಿ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಇತಿಹಾಸ ಮತ್ತು ಅರ್ಥಶಾಸ್ತ್ರವನ್ನು ಕಲಿಸುವ ಪ್ರೊಫೆಸರ್ ಎಂದು ನೇಮಕಗೊಂಡು ಬಂದ. ಬೇನ್‌ನಿಗೆ ಇಂಗ್ಲಿಷ ಸಾಹಿತ್ಯ ಮತ್ತು ತತ್ವಜ್ಞಾನಗಳಲ್ಲಿಯೂ ಅಷ್ಟೇ ಪರಿಣತಿ ಇದ್ದಿತು. ೧೮೯೨ ರಲ್ಲಿ ಡೆಕ್ಕನ್ ಕಾಲೇಜಿನ ಪ್ರಿನ್ಸಿಪಾಲ್ ಎಂದು ನೇಮಕವಾಯಿತು. ಅವನ ೨೬ ವರ್ಷಗಳ ಪ್ರಾಧ್ಯಾಪಕ ವೃತ್ತಿಯಲ್ಲಿ ನೂರಾರು ಜನ ಶಿಷ್ಯರು ಅವರ ಕೈಯಲ್ಲಿ ಶಿಕ್ಷಣವನ್ನು ಪಡೆದವರಿದ್ದಾರೆ ಗುರುದೇವ ರಾನಡೆ, ಭಾಂಡಾರಕರ, ಬೆಳವಲಕರ,ಸೇನಾಪತಿ ಬಾಪಟ, ಗಜೇಂದ್ರಗಡಕರ, ರಾಜವಾಡೆ ಮುಂತಾದ ಪ್ರಭೃತಿಗಳು ಅವರ ಶಿಷ್ಯವರ್ಗದಲ್ಲಿ ಬರುವಂತಹರು. ಬೇನ್‌ನ ಬಗ್ಗೆ ಅತೀವ ಆದರ ಭಾವನೆಯನ್ನು ಇಟ್ಟುಕೊಂಡವರು.

ಬೇನ್ ಬಲು ವಿಕ್ಷಿಪ್ತ ಸ್ವಭಾವದವ. ತಮ್ಮ ಜನರೊಡನೆ ವಿಶೇಷವಾಗಿ ಬೆರೆಯುತ್ತಿದ್ದಿಲ್ಲ. ಅವನು ಪುಣೆಯಲ್ಲಿದ್ದ ಆ ದೀರ್ಘ ಅವಧಿಯಲ್ಲಿ

ಯಾವ ಕ್ಲಬ್ಬಿಗೂ ಸದಸ್ಯನಾಗಿ ಇದ್ದಿಲ್ಲ. ಸಭೆ ಸಮಾರಂಭಗಳಿಗೆ ಹೆಚ್ಚಾಗಿ ಹೋಗುತ್ತಿರಲಿಲ್ಲ. ಪ್ರೊಫೆಸರರ ಕಾಮನ್ ರೂಮಿನಲ್ಲಿ ಹರಟುತ್ತಿದ್ದಿಲ್ಲ. ಆದರೆ ಅವನ ಪಾಠಗಳೋ ರಸದೂಟವಿದ್ದಂತೆ. ಅನ್ಯ ವರ್ಗಗಳ ವಿದ್ಯಾರ್ಥಿಗಳೂ ಬಂದು ಅವನ್ನು ಕೇಳಲು ಕುಳ್ಳಿರುತ್ತಿದ್ದರು.

ಬೇನ್ ಪ್ರಿನ್ಸಿಪಾಲನಾದೊಡನೆ ವಿದ್ಯಾರ್ಥಿಗಳಿಗೆ ಮಾನಸಿಕ ಸ್ವಾತಂತ್ರ್ಯ ದೊರಕಿತು. ಡಂಬಾಚಾರ ಬೇನನಿಗೆ ಸೇರದು. ಆ ಕಾಲದಲ್ಲಿ ಪ್ರೊಫೆಸರರೂ ವಿದ್ಯಾರ್ಥಿಗಳೂ ಗೌನ್ ಹಾಕಿಕೊಂಡು ಬರಬೇಕು ಎಂದಿತ್ತು. ಬೇನ್ ಪ್ರಿನ್ಸಿಪಾಲನಾದ ಮರುವರ್ಷವೇ ಅದನ್ನು ನಿಲ್ಲಿಸಿಬಿಟ್ಟನು. ಕಾಲೇಜಿನ ಇತರ ಪ್ರೊಫೆಸರರ ಬಗ್ಗೆ ಪ್ರತಿವರ್ಷದ ಖಾಸಗಿ ವರದಿಯನ್ನು ಇನ್ನು ತಾನು ಕಳಿಸಬೇಕಷ್ಟೆ. ಆಗ ಅವನು "ಇದೊಂದು ಔಪಚಾರಿಕವಾದ ನಿರುಪಯೋಗಿ ಕೆಲಸ. ಅವರು ಏನಾದರೂ ತಪ್ಪು ಮಾಡಿದರಷ್ಟೇ ನಾನು ನಿಮಗೆ ರಿಪೋರ್ಟು ಮಾಡುವೆ. ನನ್ನಿಂದ ಯಾವ ವರದಿಯೂ ಬಾರದಿದ್ದರೆ, ಅವರು ತಂತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸುತ್ತಿದ್ದಾರೆಂದೇ ತಿಳಿಯಬೇಕು" ಎಂದು ಉತ್ತರವನ್ನು ಕಳಿಸಿದನು. ಅಂತೂ ಶಿಕ್ಷಣ ಖಾತೆಯವರಿಗೆ ಬೇನ್‌ನ ಸಂಗಡ ವ್ಯವಹಾರವೆಂದರೆ ಒಂದು ದೊಡ್ಡ ಉಪಟಳವೇ ಆಗಿ ಪರಿಣಮಿಸಿತ್ತು.

ಹಾಸ್ಟೆಲ್ ವಿದ್ಯಾರ್ಥಿಗಳು ರಾತ್ರಿ ೯ರ ಒಳಗೆ ತಮ್ಮ ಕೋಣೆಯನ್ನು ಸೇರಿಕೊಳ್ಳದಿದ್ದರೆ ಅವರ ಮೇಲೆ ಶಿಸ್ತಿನ ಕ್ರಮವೆಂಬುದಿರುತ್ತಿತ್ತು. ಬೇನ್‌ನೊ ಅವರನ್ನು ಕರೆಸುತ್ತಿದ್ದಿಲ್ಲ ಕೂಡ. ಅಂಥವರಿಗೆ ಯಾವ ಭೇದಭಾವವಿಲ್ಲದೆ ನಾಲ್ಕಾಣೆಯ ದಂಡವನ್ನು ವಿಧಿಸುತ್ತಿದ್ದನು—ಅವರ ಗೈರಹಾಜರಿಯ ಬೆಲೆ ಅಷ್ಟೇ ಎಂಬಂತೆ! ವಿದ್ಯಾರ್ಥಿಗಳು ಊರಲ್ಲೇ ಇರುವ ಮೂಳಾಮೂಠಾ ನದಿಯಲ್ಲಿ ಸ್ನಾನ ಮಾಡಲು ಹೋಗಕೂಡದು ಎಂಬ ಕಟ್ಟಳೆಯಿತ್ತು. ಹಾಸ್ಟೆಲ್ ಹುಡುಗರೆಲ್ಲ ಒಂದು ದಿನ ಈಸುವುದಕ್ಕೆ ಪರವಾನಿಗೆ ಕೇಳಿದರು. ಹಾಸ್ಟೆಲಿನ ಮೇಲ್ವಿಚಾರಕನು ಅದಕ್ಕೆ ಸಮ್ಮತಿಸಲಿಲ್ಲ. ಆಗ ಬೇನ್ ಅವನನ್ನು ಕರೆದು "ಆ ನಿಯಮವೇನಿದೆ ಓದು ನೋಡುವಾ" ಎಂದನು. ಆತನು ಓದಲು ಆರಂಭಿಸಿದ: "ಹಾಸ್ಟೆಲಿನ ವಿದ್ಯಾರ್ಥಿಗಳು ನದಿಯಲ್ಲಿ ಈಸಕೂಡದು." "Nonsense! ನದಿಯಲ್ಲಲ್ಲದೆ ನೆಲದ ಮೇಲೆ ಈಸಬೇಕಂತೇನು? ಬಿಟ್ಟಬಿಡು ಅವರನ್ನು" ಎಂದನು ಬೇನ್!

ಬೇನನ ವಿನೋದ ಸ್ವಭಾವವು ನಕ್ಷತ್ರದ ಮಿನುಗಿನಂತೆ ಎಲ್ಲೆಲ್ಲಿಯೂ ಕಂಡುಬರುತ್ತಿತ್ತು. 'ಅಶ್ವತ್ಥಾಮಾಚಾರ್ಯ ಬಾಳಾಚಾರ್ಯ ಗಜೇಂದ್ರಗಡಕರ' ಎಂಬುದು ಸಂಸ್ಕೃತ ಪಂಡಿತರಾದ ನಮ್ಮ ಗಜೇಂದ್ರಗಡಕರರ ಹೆಸರಷ್ಟೇ. ಇದರಲ್ಲಿ ಅಡ್ಡ ಹೆಸರನ್ನು ಬರೆಯುವುದು ಬೇನ್‌ನಿಗೆ ಗಡಚಿನದಾಗಿ ಕಂಡಿತು. ಅದಕ್ಕೆ ಅವನು ಅವರಿಗೆ ಪತ್ರ ಬರೆಯುವಾಗ "ಪ್ರಿಯ—" ಎಂದು ಸುರುವು ಮಾಡಿ ಒಂದು ಆನೆಯ ಸೊಂಡಿಲಿನ ಚಿತ್ರವನ್ನು ಬಿಡಿಸುತ್ತಿದ್ದನಂತೆ. ಒಮ್ಮೆ ಅವನ ಕೈಯಲ್ಲಿ ಕಲಿತ ವಿದ್ಯಾರ್ಥಿಯೊಬ್ಬನು, ಕಾಲೇಜು ಬಿಟ್ಟು ಮರುವರ್ಷ ಭೆಟ್ಟಿಯಾದನು. ಆಗ ಬೇನ್ "ಏನಪ್ಪಾ, ಏನು ಮಾಡುತ್ತಿದ್ದೀ?" ಎಂದು ಕೇಳಿದನು. ಆಗ ಆತನು ಅಭಿಮಾನದಿಂದ "ನನ್ನ ಶಿಕ್ಷಣವು ಮುಗಿದ ಕೂಡಲೇ ನಾನು—" ಎಂದು ಹೇಳುತ್ತಿದ್ದಾಗ ಬೇನ್‌ನು ಅವನನ್ನು ನಡುವೆಯೇ ತಡೆದು—"ಶಾಬಾಸ್! ನೀನು ಪುಣ್ಯವಂತ. ಕಲಿಯುವುದನ್ನು ಮುಗಿಸಿಯೇ ಬಿಟ್ಟೆ. ನಾನೊ ಇನ್ನೂ ಕಲಿಯುವುದರಲ್ಲೇ ಇದ್ದೇನೆ" ಎಂದನು!

ಭಾರತದ ಸ್ವಾತಂತ್ರ್ಯದ ಆಂದೋಲನಕ್ಕೆ ಬೇನನ ಸಂಪೂರ್ಣ ಸಹಾನುಭೂತಿ ಇದ್ದಿತು. ಸ್ವಾತಂತ್ರ್ಯದ ಚಳುವಳಿಯ ತಾತ್ವಿಕ ಪುರಸ್ಕರ್ತನಾಗಿ ಅವನು ತನ್ನಪಾಠಗಳನ್ನು ಹೇಳುವಲ್ಲಿ ನಡಸುತ್ತಿದ್ದ ಚರ್ಚೆಗಳಿಂದ, ಆಗಿನ ಕಾಲದಲ್ಲಿದ್ದ ಸೇನಾಪತಿ ಬಾಪಟರಂತಹ ಸ್ವಾತಂತ್ರ್ಯ

ವೀರರಿಗೆ ಅಪ್ರತ್ಯಕ್ಷವಾದ ಪ್ರೋತ್ಸಾಹ ದೊರಕಿತು. "ನೀವು ಬಂಡೇಳುವುದು ಸಹಜವೇಆಗಿದೆ. ಆಳುವವರಾದ ನಾವು ನಿಮ್ಮನ್ನು ಹತ್ತಿಕ್ಕುವುದೂ ನಮ್ಮ ಕರ್ತವ್ಯವಾಗಿದೆ" ಎಂಬ ಅವನ ಸ್ಪಷ್ಟ ನುಡಿಯನ್ನು, ಬಾಪಟರು ಪದ್ಯರೂಪದಲ್ಲಿ ಹೀಗೆ ಅನುವಾದಿಸಿದ್ದಾರೆ: 'ಉಠಣೇ ಯೋಗ್ಯ ತೇ ತುಮ್ಹಾ, ಆಣಿ ಆಮ್ಹಾಸೀ ಹೇ ಯೋಗ್ಯ ಶಿರೇ ಉಡವಿಣೇ ತಧೀ.'


ಬಂಗಾಲದ ಮಾಣಿಕತೋಲಾದಲ್ಲಿ ಬಾಂಬ್ ಪ್ರಕರಣದಲ್ಲಿ ಸೇನಾಪತಿ ಬಾಪಟರದೂ ಅಂಗವಿದೆಯೆಂದು ಅದು ಹೇಗೊ ಪೋಲೀಸರಿಗೆ ಸಂಶಯ ಬಂದಿತು. ಆಗ ಬಾಪಟರು ಡೆಕ್ಕನ್ ಕಾಲೇಜ್ ಹಾಸ್ಟೆಲಿನಲ್ಲಿದ್ದ ದೇವಭಾಣಕರ ಎಂಬ ಮಿತ್ರನ ನೆರವಿನಿಂದ ಕಣ್ಮರೆಯಾದರು. ಸರಿ, ಪೋಲೀಸರು ಹಾಸ್ಟೆಲ್ಲಿಗೆ ಮುತ್ತಿಗೆ ಹಾಕಿದರು. ಅದು ತಿಳಿಯುತ್ತಲೂ ಬೇನ್ ಅವರನ್ನು ಕರಸಿ ತನ್ನ ಪರವಾನಿಗೆಯಿಲ್ಲದೆ ಹಾಗೆಲ್ಲ ಕಾಲೇಜ್ ಆವಾರದಲ್ಲಿ ಹೇಗೆ ಹೊಕ್ಕಿರೆಂದು ಕೇಳಿದನು. ಮತ್ತು ಅವರಿಂದ ವಿವರಗಳನ್ನು ಕೇಳುತ್ತ ಕುಳಿತನು. ಪರಿಣಾಮವಾಗಿ, ದೇವಭಾಣಕರನು ತನ್ನ ಕೋಣೆಯಲ್ಲಿದ್ದ ಆಕ್ಷೇಪಾರ್ಹ ಕಾಗದಪತ್ರಗಳನ್ನು ನಾಶ ಮಾಡಲು ಅವಕಾಶ ಸಿಕ್ಕಿತು. ಅಲ್ಲಿಂದ ಅವನನ್ನು ಪ್ರಿನ್ಸಿಪಾಲ್‌ರ ರೂಮಿಗೇ [illegible] ಲಾಯಿತು—ವಿಚಾರಣೆಗಾಗಿ. ಆಗ ಪೋಲೀಸರನ್ನು ಹೊರಗೇ ಕೂಡಿಸಿ, ಬೇನ್ ದೇವಭಾಣಕರನ ಪೂರ್ವ ವಿಚಾರಣೆಯನ್ನು ನಡೆಸಿದನು. ಮುಂದೆ ಪೋಲೀಸರ ತನಿಖೆಯು, ಪೋಲೀಸ್ ಕಚೇರಿಯಲ್ಲಲ್ಲ, ತನ್ನ ಸಮ್ಮುಖದಲ್ಲೇ ನಡೆಯಬೇಕು ಎಂದು ವಿಧಿಸಿದನು. ಪರಿಣಾಮವಾಗಿ ಪೋಲೀಸರ ಕಾರ್ಯ ಸಿದ್ಧಿಯಾಗಲಿಲ್ಲ.

ಭಾರತೀಯ ಸಂಸ್ಕೃತಿಯಲ್ಲಿ ಬೇನನಿಗೆ ಅತೀವ ಶ್ರದ್ಧೆಯಿತ್ತು. ಅವನು ಸಂಸ್ಕೃತವನ್ನು ಕಲಿತು ಪ್ರಾಚೀನ ಗ್ರಂಥಗಳನ್ನು ಚೆನ್ನಾಗಿ ಓದಿಕೊಂಡಿದ್ದನು. ಹಿಂದೂ ಧರ್ಮದ ತತ್ವಗಳನ್ನು ತಿಳಿದುಕೊಂಡಿದ್ದನು. ಗುಣಕರ್ಮದಿಂದ ವಿಭಾಗಿಸಲ್ಪಟ್ಟ ನಮ್ಮ ಚಾತುರ್ವರ್ಣ್ಯದ ವ್ಯವಸ್ಥೆ ಉತ್ತಮವಾದುದೆಂದು ಹೇಳುತ್ತಿದ್ದನು. ನಮ್ಮ ಜನದ ಬದುಕಿನ ಬಗೆಯೂ ಅವನಿಗೆ ಮೆಚ್ಚಿಕೆಯಾಗಿದ್ದಿತು. ಅವನು ನಿವೃತ್ತನಾಗುವಾಗ, ಕಾಲೇಜಿನ ಹಳೆಯ, ಹೊಸ ವಿದ್ಯಾರ್ಥಿಗಳು ಸೇರಿ ವಿದಾಯ ಸಮಾರಂಭವನ್ನು ನೆರವೇರಿಸಬೇಕೆಂದಾಗ, ಬೇನ್‌ನು ತಾನು ಏನನ್ನೂ ಸ್ವೀಕರಿಸುವುದಿಲ್ಲ ಎಂದು ಹೇಳಿದನು. ಕೊನೆಗೆ ಶಿಷ್ಯರು ಒತ್ತಾಯಿಸಲು, ಅವನು ಒಂದು ಮಹಾಭಾರತದ ಪ್ರತಿಯನ್ನೂ ಗಣಪತಿಯ ವಿಗ್ರಹವನ್ನೂ ಕೇಳಿದನು! ಅವನ ಭಾರತೀಯ ಕತೆಗಳೆಲ್ಲವೂ ಗಣಪತಿಯ ಸ್ತುತಿಯಿಂದಲೇ ಆರಂಭವಾಗುತ್ತವೆ. ಗಣಪತಿಯು ಅವನ ಆರಾಧ್ಯದೈವತವಾಗಿತ್ತೆಂದರೂ ಸರಿ.

೧೯೧೯ ರಲ್ಲಿ ಸ್ವದೇಶಕ್ಕೆ ಹೋದ ಮೇಲೆ ಬೇನ್ ಕೆಲ ಕಾಲ ನೆಮ್ಮದಿಯಿಂದಲೇ ಬಾಳಿದನು. ಆದರೆ ಅವನ ಕೊನೆಗಾಲವು ದುಃಖಮಯವಾಗಿತ್ತು. ಅವನ ಹೆಂಡತಿ ತೀರಿಕೊಂಡಾಗ, ತನ್ನ ಶಿಷ್ಯರಲ್ಲೊಬ್ಬರಾದ ಕಾಪಡಿಯಾ ಎಂಬವರಿಗೆ ಬರೆದ ಪತ್ರದಲ್ಲಿ "ಗಂಡ-ಹೆಂಡತಿ ಕೂಡಿ ಮದುವೆಯಾಗುವಂತೆ, ಕೂಡಿಯೇ ಸಾಯುವಂತಿದ್ದರೆ ಎಷ್ಟು ನೆಟ್ಟಗಿತ್ತು. ಆದರೆ ಜೀವನದಲ್ಲಿ ಹಾಗೆ ಆಗುವುದಿಲ್ಲ. ನನ್ನ ಮಟ್ಟಿಗೆ ನನ್ನದೆಲ್ಲವೂ ಮುಗಿದಂತೆಯೇ" ಎಂದು ಆತ್ಮೀಯತೆಯಿಂದ ಒರಲಿದುದುಂಟು. ೧೯೪೦ ರಲ್ಲಿ ಅವನೂ ತೀರಿಕೊಂಡನು.

*

ಡಾ. ಕೆ. ಎಮ್. ಮುತಾಲಿಕರ ಪಿಎಚ್. ಡಿ. ಮಹಾಪ್ರಬಂಧದ ಆಧಾರದಿಂದ



ನೋಡು! ಇಷ್ಟು ಸುಲಭ ಇದೆ ಈ ಲೆಖ್ಖ! ಮೈಗಳ್ಳಾ, ಇಂಥಾ ಸುಲಭ ಲೆಖ್ಖ ಇಷ್ಟು ಬೇಗ ಮರೆತಿಯಾ?

ಕ್ಷಮಿಸಿ ಮಿತ್ರರೇ ೮-೫೫ ರ ರೈಲು ತಪ್ಪಿದ್ದರಿಂದ ತಡವಾಯಿತು ನಿಮ್ಮನ್ನು ಸೇರಿಕೊಳ್ಳಲಿಕ್ಕೆ.




ಆ ಕಸದ ಕುಪ್ಪೇನೂ ನಾವು ಸ್ವಚ್ಛ ಮಾಡಬೇಕೆ? ಅದು ನಮ್ಮ ಮುಷ್ಕರ ನಿಲ್ಲೋ ಮೊದಲೇ ಇಲ್ಲಿತ್ತಲ್ಲ!





ನಿಮ್ಮ ಉತ್ಪಾದನೆ ಸದ್ಯಕ್ಕೆ ಅತ್ಯಲ್ಪವಾಗಿರಬಹುದು ಆದರೆ ನಿಮ್ಮ ಕೆಲಸಗಾರರು ಇಷ್ಟು ಸಂತುಷ್ಟರಾಗಿರುವುದು ನೋಡಿ ನನಗೆ ಪರಮಾನಂದವಾಗಿದೆ.

ಆಫ್ ಇಂಡಿಯಾ ದಿಂದ

# ತಂದೆಯ ಸರ್ವಸ್ವವೂ ಆಗಿದ್ದ ಮಣಿಬೇನ್

ಘನಶ್ಯಾಮದಾಸ ಬಿರ್ಲಾ

೧೯೪೫ ರ ಚಳಿಗಾಲದ ಕಥೆ. ದಿಲ್ಲಿಯಲ್ಲಿ ಮೈಕೊರೆಯುವಂಥ ಚಳಿ ಬೀಳುತ್ತಿತ್ತು ಆಕಾಶವು ನಿರ್ಮಲವೂ ನಿರಭ್ರವೂ ಆಗಿತ್ತು. ಹಗಲಿನ ಸೂರ್ಯರಶ್ಮಿಗಳು ಪ್ರಖರವಾಗಿದ್ದರೂ ಹಿತಕರವಾಗಿರುತ್ತಿದ್ದವು. ಇಂತಹ ಸಮಯದಲ್ಲಿ ಸರದಾರ ವಲ್ಲಭಭಾಯಿ ಪಟೇಲರು ರಾಜಕಾರಣ ಸಂಬಂಧವಾಗಿ ದಿಲ್ಲಿಗೆ ಆಗಮಿಸಿದ್ದರು. ಮಣಿಬೇನಳು ಅವರೊಂದಿಗಿದ್ದಳು.



ಪ್ರತಿದಿನ ರಾತ್ರಿಯಾಗಲು ನಾವೆಲ್ಲಾ ಕೋಣೆಯ ಬಾಗಿಲನ್ನು ಮುಚ್ಚಿಕೊಂಡು ಅಗ್ಗಿಷ್ಟಿಗೆಯನ್ನು ಹೊತ್ತಿಸಿ ಕಾಸಿಕೊಳ್ಳುತ್ತಿದ್ದೆವು. ಇದಕ್ಕಾಗಿಯೇ ಸರದಾರರು ನಮ್ಮ ವಿಷಯಕ್ಕೆ ಮರಗುತ್ತಿದ್ದರು. ಏಕೆಂದರೆ ಅವರಂತೂ ಒಂದು ಖಾದಿ ಶರ್ಟು ಹಾಗು ಒಂದು ಬೆಚ್ಚನೆಯ ಜಾಕಿಟನಿಂದಲೆ ಚಳಿಯನ್ನು ಎದುರಿಸುತ್ತಿದ್ದರು. ಹಾಗಿದ್ದಲ್ಲಿ ಮಣಿಬೇನಳ ವಿಷಯವಂತೂ ಹೇಳಲೇಬೇಡ. ಎಷ್ಟೇ ಮೈಕೊರೆಯುವ ಚಳಿ ಇರಲಿ, ಅವಳು ಮಾತ್ರ ಒಂದು ಖಾದಿ ಬಿಳಿಯ ದಪ್ಪನೆಯ ಶೀರೆಯನ್ನುಟ್ಟುಕೊಂಡು ಮೇಲೊಂದು ಜಾಕೆಟ್ ತೊಟ್ಟಿರುತ್ತಿದ್ದಳು.

ಸ್ವಲ್ಪ ಸ್ವಲ್ಪ ಬೆಳ್ಳಗಾದ ಕೂದಲುಗಳು, ನೀಳವಾದ ಬಳಕುವ ಎತ್ತರನೆಯ ಶರೀರದ ಮಣಿಬೇನ್, ಒಂದು ವೇಳೆ ಮೂಗಿಗೆ ಬಿಳಿಯ ವಸ್ತ್ರವನ್ನು ಕಟ್ಟಿಬಿಟ್ಟಿದ್ದರೆ ಜೈನ ಸಂನ್ಯಾಸಿಯರಂತೆ ಕಾಣುತ್ತಿದ್ದಳು. 'ಓರಣ' ಪ್ರಿಯಳಾದ ಮಣಿಬೇನ್ ತನ್ನ ಕೋಣೆಯ ಪ್ರತಿಯೊಂದು ವಸ್ತುವನ್ನು ಅಚ್ಚುಕಟ್ಟಾಗಿ ಇರಿಸುತ್ತಿದ್ದಳು. ಅಂತೆಯೇ ಸಂಸಾರದಲ್ಲಿ ಒಳ್ಳೆ 'ಶಿಸ್ತಿ'ನಿಂದಿರುತ್ತಿದ್ದಳು.

ಸರದಾರರ ಮಿದುಳಿನ ಯಂತ್ರ ಯಾವಾಗಲೂ ಕೆಲಸದಲ್ಲಿಯೇ ನಿಕಟವಾಗಿರುತ್ತಿತ್ತು. ಕೋಣೆಯಲ್ಲಿ ಸದಾ ಅವರು ಅತ್ತಿಂದಿತ್ತ ಇತ್ತಿಂ

"ನವನೀತದಿಂದ"

ದತ್ತ ಅಡ್ಡಾಡುತ್ತ ಯಾವಾಗಲೂ ಮೂಗನ್ನು ಕರವಸ್ತ್ರದಿಂದ ಒರೆಸಿಕೊಳ್ಳುತ್ತಿರುವಾಗಲೂ ಅದನ್ನು ತಿಕ್ಕಿಕೊಳ್ಳುತ್ತಲೇ ಇರುತ್ತಿದ್ದರು. ಕೂಡುವ ರೂಢಿಯೇ ಅವರಲ್ಲಿ ಕಡಿಮೆ. ಒಮ್ಮೊಂದೊಮ್ಮೆಲೆ 'ಅವನನ್ನು ಕರೆ' ಎಂದು ಹೇಳಿಬಿಡುತ್ತಿದ್ದರು. ಹೊಸಬರು ಅಲ್ಲಿ ಯಾರಾದರೂ ಇದ್ದುದೇ ಆಗಿದ್ದರೆ ಅದರ ಅರ್ಥವೇ ಆಗುತ್ತಿರಲಿಲ್ಲ. ಯಾರನ್ನು ಎಲ್ಲಿಂದ ಕರೆಯಬೇಕು ಎಂಬುವುದು ಪಾಪ, ಅವರಿಗೆಲ್ಲಿಯ ಕಲ್ಪನೆ? ಆದರೆ ಮಣಿಬೇನ್ 'ಚಟ್ಟನೆ' ಆ ಕೆಲಸವನ್ನೂ ಮಾಡುತ್ತಿದ್ದಳು. ಏಕೆಂದರೆ ಕರೆ ಎಂದರೆ, ತನ್ನನ್ನೇ ಕುರಿತಾಗಿಯೂ, ಅವನನ್ನು ಎಂದಾಗ 'ಫೋನಿನಲ್ಲಿ ಬೇರೆ ವ್ಯಕ್ತಿಯನ್ನು' ಎಂದಾಗಿಯೂ ಅವಳಿಗೆ ತಿಳಿದಿರುತಿತ್ತು. ಹೀಗೆ ಫೋನಿನಲ್ಲಿ ಕರೆಯಲ್ಪಟ್ಟ ವ್ಯಕ್ತಿ ಒಮ್ಮೊಮ್ಮೆ ಮುಂಬಯಿಯಲ್ಲಿಯೋ, ಕಲಕತ್ತೆಯಲ್ಲಿಯೋ ನಾಗಪೂರದಲ್ಲಿಯೋ, ಇಲ್ಲವೇ ಪೇಷಾವರದಲ್ಲಿಯೋ ಇರುತ್ತಿದ್ದ. ಹೀಗಿದ್ದಾಗ ಮಣಿಬೇನ್ ಈ ಎಲ್ಲರ ಫೋನ್ ನಂಬರುಗಳನ್ನು ನೆನಪಿಟ್ಟುಕೊಂಡುದರಿಂದ ಯಾವದಕ್ಕೂ ಹಿಂದುಮುಂದು ನೋಡದೇ ಕೆಲಸದಲ್ಲಿ ನಿಮಗ್ನಳಾಗುತ್ತಿದ್ದಳು. ಇಂಥ ಅವಳ ಅದ್ಭುತ ಕಾರ್ಯದಕ್ಷತೆ ನನ್ನ ಮನದಲ್ಲಿ ಮೊಟ್ಟಮೊದಲನೆಯದಾಗಿ ಅಚ್ಚೊತ್ತಿದಂತೆ ಮೂಡಿತು.

ಮಣಿಬೇನಳ ಜೀವನದ ಗತಿ ಏನೆಂಬುದನ್ನು ಗುರುತಿಸುವುದು ಅಸಾಧ್ಯ. ಬಹುಶಃ ಸ್ವತಃ ಅವಳಿಗೂ ತನ್ನ ಬಾಳಿನ ಬಗೆ ಏನೆಂಬುದು ತಿಳಿದಂತಿಲ್ಲ. ಆದರೆ ಒಂದು ಮಾತು ಸ್ಪಷ್ಟವಿದೆ. ಅವಳ ಬಾಳಿನ ಮಹದುದ್ದೇಶ ಅವಳ ತಂದೆಯಾಗಿದ್ದ. ಸಂಜೆಯಾಗಲು ಸರದಾರರ ಸ್ವಂತ ನೆರಳೆ ವಿಶ್ರಾಂತಿಗಾಗಿ ಹೋಗುತ್ತಿತ್ತು. ಆದರೆ ಮಣಿಬೇನ್‌ಳ 'ಪಹರೆ' ಇಪ್ಪತ್ತನಾಲ್ಕು ಘಂಟೆ ಇರುತ್ತಿತ್ತು.

ಸರದಾರರು ಮಲಗಿರಲಿ ಅಥವಾ ಎದ್ದಿರಲಿ, ಕೆಲಸದಲ್ಲಿ ತೊಡಗಿರಲಿ ಅಥವಾ ವಿಶ್ರಾಂತಿ ತೆಗೆದುಕೊಳ್ಳುತ್ತಿರಲಿ, ಅವಳ ದೃಷ್ಟಿ ಮಾತ್ರ ಯಾವಾಗಲೂ ಎಲ್ಲ ಸಮಯದಲ್ಲಿಯೂ ಅವರಲ್ಲಿಯೇ ನಟ್ಟಿರುತ್ತಿತ್ತು. ಮತ್ತು ಸರದಾರರ ಎಲ್ಲ ಕೆಲಸಗಳಲ್ಲಿಯೂ ಅವ್ಯಕ್ತ ರೂಪದಲ್ಲಿ ಅಡಗಿಕೊಂಡಿರುತ್ತಿದ್ದಳು. ಎಂತಹದೇ ಗುಪ್ತ ಮಂತ್ರಾಲೋಚನೆ ಇರಲಿ, ಅಥವಾ ಯಾರೇ ವೈಯಕ್ತಿಕ ಸಂದರ್ಶನಕ್ಕಾಗಿ ಬಂದಿರಲಿ, ಮಣಿಬೇನಳು ಮಾತ್ರ ಮೂರ್ತಿಯ ಹಾಗೆ ಸರದಾರರ ಬಳಿಯಲ್ಲಿಯೇ ನಿಂತಿರುತ್ತಿದ್ದಳು. ನೋಡುವವರಿಗೆ ಅವಳೊಬ್ಬಳು ಸರದಾರರ ಅವಿಭಾಜ್ಯ ಅಂಗವಾಗಿ ಕಾಣುತ್ತಿದ್ದಳು.

ಅಧಿಕೃತ ನಿಯಮಗಳ ಪ್ರಕಾರ 'ಕ್ಯಾಬಿನೆಟ್ ಮೀಟಿಂಗು'ಗಳಲ್ಲಿ ಮಂತ್ರಿಗಳ ಹೊರತಾಗಿ ಇನ್ನೊಬ್ಬರಿಗೆ ಪರವಾನಿಗೆ ಇರಲಿಲ್ಲ. ಅದಕ್ಕಾಗಿ ಸರದಾರರೊಬ್ಬರೆ ಕ್ಯಾಬಿನೆಟ್ಟಿನೊಳಗೆ ಹೋದಾಗ ಮಣಿಬೇನಳು ಹೊರಗೇ ಕಾಯುತ್ತ ಕುಳಿತಿರುತ್ತಿದ್ದಳು. ಸರದಾರರು ಸಂಸತ್ತಿನಲ್ಲಿ ಹೋಗಿ ಕುಳಿತರೆ ಇವಳು ಗ್ಯಾಲರಿಯಲ್ಲಿ ಹೋಗಿ ಕೂಡುತ್ತಿದ್ದಳು.

ಬೆಳಗ್ಗೆ ಎದ್ದ ಕೂಡಲೆ ಶೌಚ, ಸ್ನಾನ ಮುಗಿಸಿಕೊಂಡು ತಿರುಗಾಡಲಿಕ್ಕೆ ಹೋಗುವುದು ಸರದಾರರ ನಿತ್ಯದ ನಿಯಮವಾಗಿತ್ತು. ಅವರ 'ಅಡ್ಡಾಟ' ತೀವ್ರಗತಿಯಲ್ಲಿರುತ್ತಿತ್ತು. ಅದಾದರೋ ಬೆಳಗ್ಗೆ ಮೂರು ಮೈಲು ಸಾಯಂಕಾಲ ಎರಡು ಮೂರು ಮೈಲಾಗಿರುತ್ತಿತ್ತು. ಮನೆಯಲ್ಲೇನಾದರೂ ಕೆಲಸವಿಲ್ಲದೇ ಹೋದರೆ ಅತ್ತಿಂದಿತ್ತ ಇತ್ತಿಂದತ್ತ 'ಚಕ್ಕರ್' ಹಾಕುತ್ತಲೇ ಇರುತ್ತಿದ್ದರು. ಬಹುಶಃ ಹಾಗೆ ಮಾಡುವುದರಿಂದ ಅವರ ವಿಚಾರದ ಗತಿ ಹೆಚ್ಚುತ್ತಿರುವಂತಿತ್ತು. ಗುಡ್ಡಗಾಡುಗಳಲ್ಲಿ ತಿರುಗಾಡಲು ಹೊರಟರಂತೂ ಆಯಿತು, ಒಮ್ಮೊಮ್ಮೆ ಎರಡೂ ವೇಳೆ, ೧೫-೨೦ ಮೈಲು ದೂರ ಹೋಗಿಬಿಡುತ್ತಿದ್ದರು. ಆದರೆ ಮಣಿಬೇನ್ ಇಂಥ ತಿರುಗಾಟದ ಸಮಯದಲ್ಲಿ ತಮ್ಮ ಎಲುವಿನ ಹಂದರವನ್ನು ಅವರೊಂದಿಗೆ ಓಡಿಸಲು ಹಚ್ಚುತ್ತಿದ್ದರು. ಇಷ್ಟೊಂದು

ಕಡಿಮೆ ಉಣ್ಣುವ ಮಣಿಬೇನಳಲ್ಲಿ ೨೦ ಮೈಲು ಗಳಷ್ಟು ತಿರುಗುವ ಶಕ್ತಿ ಎಲ್ಲಿಂದ ಬರುತ್ತಿತ್ತೊ ಎಂಬುದು ನನಗೆ ಆಶ್ಚರ್ಯವನ್ನುಂಟುಮಾಡು ತ್ತಿತ್ತು.

ಎಂದಿನಿಂದ ಸರದಾರರು ಹೃದ್ರೋಗಪೀಡಿತ ರಾದರೋ, ಅಂದಿನಿಂದ ಅವರ ತಿರುಗಾಟವೂ ಕೊನೆಗೊಂಡಿತು. ಅದರೊಂದಿಗೆ ಮಣಿಬೇನ ಳದೂ ಮುಕ್ತಾಯವಾಯಿತು. ಅಂದಿನಿಂದ ಸರದಾರರು ಕಾರಿನಲ್ಲಿ ತಿರುಗುವುದನ್ನು ಜಾರಿ ಯಲ್ಲಿ ತಂದರು. ಇದರಂತೆ ಮಣಿಬೇನಳ ಕಾರ್ಯ ಕ್ರಮವೂ ಬದಲಾಯಿತು.

ಪ್ರತಿ ದಿನವೂ ಬೆಳಿಗ್ಗೆ ನಾನು ಸರದಾರ ರೊಂದಿಗೆ ತಿರುಗಾಡಲೆಂದು ಅವರ ಮನೆಗೆ ಹೋದಾಗ, ಅವರು ಬಚ್ಚಲು ಮನೆಯಲ್ಲಿ ಸ್ನಾನ ಮಾಡುತ್ತಲೇ ಇರುತ್ತಿದ್ದರು. ಬಾಗಿಲ ಬಳಿ ಮಣಿಬೇನಳು ಕೈಯಲ್ಲಿ ಚರಖವನ್ನು ಹಿಡಿದುಕೊಂಡು ತಿರುವುತ್ತಲೇ ಇರುತ್ತಿದ್ದಳು. ಒಂದು ಕಣ್ಣು ಚರಖದ ಮೇಲಿದ್ದರೆ ಇನ್ನೊಂದು ಕಣ್ಣು ಬಚ್ಚಲು ಮನೆಯ ಬಾಗಿಲದಲ್ಲಿ ನಟ್ಟಿರು ತ್ತಿತ್ತು. ಮತ್ತು ಒಳಗಿನಿಂದ ಬರುವ ನೀರಿನ ಕಲಕಲ ಶಬ್ದ, ಕೆಮ್ಮುವ ಅಥವಾ ಖಡಾವು ಗಳನ್ನು ಮೆಟ್ಟುವ ಶಬ್ದ- ಇವೆಲ್ಲವುಗಳ ಸಂಕೇತ ಮಣಬೇನಳ ನೆನಪಿನಲ್ಲಿರುತ್ತಿತ್ತು. ನೀರಿನ ಒಂದು ತರಹದ ಶಬ್ದದ ಅರ್ಥ- ಈಗ ಸರದಾರರು ಮುಖವನ್ನು ತೊಳೆದುಕೊಳ್ಳುತ್ತಿ ದ್ದಾರೆ, ಇನ್ನೊಂದು ತರಹ ಶಬ್ದವಾದಾಗ ಈಗ ಅವರು ದೇಹದ ಮೇಲೆ ನೀರು ಹಾಕಿಕೊಳ್ಳು ತ್ತಿದ್ದಾರೆ—, ಈಗ ವಸ್ತ್ರದಿಂದ ಶರೀರವನ್ನು ಒರೆಸಿಕೊಳ್ಳುತ್ತಿದ್ದಾರೆ—ಈಗ ಧೋತರ ಉಟ್ಟು ಕೊಳ್ಳುತ್ತಿದ್ದಾರೆ- ಈಗ 'ಖಡಾವು'ಗಳ ಸಪ್ಪಳ ವಾಯಿತು- ಸರದಾರರು ಬಚ್ಚಲಮನೆಯಿಂದ ಹೊರಬಂದರು– ತತ್‌ಕ್ಷಣವೇ ಮಣಿಬೇನಳ ಕೈ- ಚರಖ ನಿಲ್ಲುವದು– ಮತ್ತು ಸರದಾರರ 'ಚಪ್ಪಲಿ' ಗಳು ಬಾಗಿಲ ಬಳಿ ಸಿದ್ಧವಾಗಿ ನಿಂತವು. ಅವರು ಹೊರಟರು. ಅವಳೂ ಹೊರಟಳು. "ಚಲ್ಲೀದು ಮಣಿಬೇನ್ ಬಂದೆಯಾ- ನಡಿ" ಎಂದಾಗ ಅವರ ಹಿಂದೆ ಹಿಂದೆ ನಡೆಯುವಳು.

ಇಂದ್ರಿಯ ಭೋಗಗಳನ್ನು ನಿಗ್ರಹ ಮಾಡಿ ತ್ಯಾಗಿಗಳೆನಿಸಿಕೊಂಡವರುಂಟು. ಎಷ್ಟೋ ಜನ ರಲ್ಲಿ ಭೋಗದ ವಸ್ತುಗಳಿಲ್ಲದೆಯೇ, ಭೋಗ ತ್ಯಾಗ ಮಾಡಿರುವೆನೆಂದು ಹೇಳಿ ತ್ಯಾಗಿಗಳೆನಿಸಿ ಕೊಂಡಿದ್ದಾರೆ. ಆದರೆ ನಿಜವಾಗಿಯೂ ಸರ ದಾರರ ತ್ಯಾಗ ಅಮೋಘವಾದುದು. ಏಕೆಂದರೆ ಮೊದಲು ಬ್ಯಾರಿಸ್ಟರ್ ಪರೀಕ್ಷೆ ಪಾಸುಮಾಡಿ ಭೋಗ್ಯ ವಸ್ತುಗಳನ್ನು ವಿಪುಲವಾಗಿ ಸಂಗ್ರಹಿಸಿ ದರು. ಮನೆಯಲ್ಲಿ ಬಿಳಿಯರ ನೀತಿ ನಡುವಳಿ ಯನ್ನೇ ಜಾರಿಯಲ್ಲಿ ತಂದರು. ಮಕ್ಕಳನ್ನು 'ಕಾನ್ವೆಂಟ್' ಸ್ಕೂಲುಗಳಿಗೆ ಕಳಿಸಿ ವಿದ್ಯೆಯನ್ನಾ ರಂಭಿಸಿದರು. ಸಾಕಷ್ಟು ಸಂಪತ್ತನ್ನು ಗಳಿಸಿ ದರು. ಒಮ್ಮೆಲೆ ಎಲ್ಲವನ್ನೂ ತ್ಯಾಗ ಮಾಡಿದರು. ಮತ್ತೆಂದೂ ಅವುಗಳ ಕಡೆಗೆ ಮುಖ ಹೊರಳಿಸಿ ಸಹ ನೋಡಲಿಲ್ಲ.

ರಾಜಸತ್ತೆ ನಡೆದಾಗಲೂ ಅವರ ಜೀವನದ ಗತಿಯಲ್ಲಿ ಏನೂ ವ್ಯತ್ಯಾಸ ಕಂಡುಬರಲಿಲ್ಲ.ಅದೇ ನಿರಾಡಂಬರ ಜೀವನ—ಅದೇ ನಡೆ-ನುಡಿ, ಅದೇ ಆಹಾರ-ವಿಹಾರ, ಅದೇ ವೇಷಭೂಷಣ. ಆದರೆ ಮಣಿಬೇನಳ ತ್ಯಾಗ ಅದಕ್ಕೂ ಮಿಗಿಲಾಗಿತ್ತು. ಭೋಗವಸ್ತುಗಳ ಸ್ಪರ್ಶ ಕೂಡ—ಅವಳಿಗಿರ ಲಿಲ್ಲ. ಇದರ ಕಲ್ಪನೆ ಅವಳಿಗೆ ಇದ್ದುದೇ ಆಗಿ ದ್ದರೆ ಎಷ್ಟೊಂದು ಅಭಿಮಾನಪಡುತ್ತಿದ್ದಳೊ? "ಬೀರಬಲ್ ಲಾ ಕೋಯಿ ಐಸಾ ನರ್, ಪೀರ್, ಬಾವರ್ಚಿ, ಭಿಷ್ತಿಖರ್" ಬೀರಬಲ್,-ಯಾವ ವ್ಯಕ್ತಿ ತಾನೇ ಸಂತ, ತಾನೇ ಅಡಿಗೆಯವ, ತಾನೇ ನೀರು ತರುವವ ತಾನೇ ದನಗಾಹಿ ಆಗಿರಬಲ್ಲನೊ ಅಂತಹವನನ್ನು ನನ್ನ ಕಡೆ ಕಳಿಸು.) ಎಂಬ ಮಾತು ಮಣಿಬೇನಳಿಗ ಅನ್ವ ಯಿಸುತ್ತದೆ. ಏಕೆಂದರೆ ಅವಳಲ್ಲಿ ಇವೆಲ್ಲವೂ ಅಡ ಗಿವೆ. ಮನೆಗೆಲಸದಲ್ಲಿ ಅವಳೇ ಅಡಿಗೆಯವಳು. ಅವಳೇ ನೌಕರಳು. ಮನೆಯ ಸ್ವಚ್ಛತೆಯಲ್ಲಿ ಇಷ್ಟೊಂದು ದಕ್ಷತೆ ವಹಿಸುತ್ತಿದ್ದಳೆಂದರೆ ಅಂಗ

ಳವೂ ಸಹ ಸುವರ್ಣದಂತೆ ಬೆಳಗುತ್ತಿರುತ್ತಿತ್ತು. ಮಿತವ್ಯಯ ಮಾಡುವಲ್ಲಿ, ರಾಜ ಮಹಾರಾಜರಿಗೂ ರಾಜದೂತರಿಗೂ ಅತಿಥಿಗಳಿಗೂ ಊಟ ಉಪಚಾರದಲ್ಲಿ ಕಡಿಮೆ ಎಂದಿಗೂ ಮಾಡುತ್ತಿರಲಿಲ್ಲ. ಸರದಾರರೊಂದಿಗೆ ಸಭೆಗಳಿಗೆ ಹೋಗಿ ಅವರ ಭಾಷಣಗಳ ಟಿಪ್ಪಣಿ ತೆಗೆದುಕೊಳ್ಳುತ್ತಿದ್ದಳು; ಅವರ ಪ್ರತಿಯೊಂದು ಪತ್ರವ್ಯವಹಾರ ಇವಳ ಮುಖಾಂತರವೆ ನಡೆಯುತ್ತಿತ್ತು. ಸಂದರ್ಶನಗಳ ಸಮಯವನ್ನು ಅವಳೇ ನಿರ್ಧರಿಸುತ್ತಿದ್ದುದಲ್ಲದೇ ಪ್ರತಿದಿನ ರಾತ್ರಿ, ದಿನಚರಿಯನ್ನು ಬರೆದಿಡುತ್ತಿದ್ದಳು. ಇಂಥ 'ಸಂತಳು' ರಾತ್ರಿ ಸರದಾರರನ್ನು ಮಲಗಿಸಿ ಆ ಮೇಲೆ ತಾನೂ ಮಲಗುತ್ತಿದ್ದಳು. ಏಳುವದೂ ಅವರಿಗಿಂತ ಮೊದಲೇ. ಒಂದೇ ಶರೀರ ಧರಿಸಿ ಅವಳು ಸರದಾರರ ಮಗಳಾಗಿ, ಮಂತ್ರಿಯಾಗಿ, ಅಂಗರಕ್ಷಕಳಾಗಿ ಬಾಳಿದಳು.

ಸರದಾರರ ಅಂಗರಕ್ಷಣೆಯಲ್ಲಿ ಎಷ್ಟೋ ಜನರು ಮಣಿಬೇನಳಿಂದ ತೊಂದರೆಪಟ್ಟುಕೊಂಡವರೂ ಉಂಟು, ಅವಳ ಮೇಲೆ ಸಿಟ್ಟಿಗೆದ್ದವರೂ ಉಂಟು. ಇದರಿಂದ ಕೆಲ ಜನರಿಗೆ ಸುಖಭಂಗವಾದುದುಂಟು ಮಣಿಬೇನಳಿಗೆ ಇದಾವುದರ ಕಲ್ಪನೆಯೂ ಇರುತ್ತಿದ್ದಿಲ್ಲ. ಅವಳ ವೃತ್ತಿ ಏಕೀಕೃತವಾದದ್ದು — ಬರಿ ಸರದಾರರ ರಕ್ಷಣೆಯಲ್ಲಿಯೇ.

ಮಣಿಬೇನಳ ಪಿತೃಭಕ್ತಿ ಮೂಕವಾದಂತೆ, ಸರದಾರರ ಪುತ್ರೀವಾತ್ಸಲ್ಯವೂ ಮೂಕವಾಗಿತ್ತು. ಅವರೀರ್ವರ ಹೃದಯದಲ್ಲಿ ಸ್ನೇಹ ಹಾಗು ಭಕ್ತಿಯ ಝರಿ ಹರಿಯುತ್ತಿದ್ದುದರಿಂದ- ಮಾತು ಮೂಕ ಬಿದ್ದಿತ್ತು. ಮಣಿಬೇನಳೇನಾದರೂ ಬೇನೆ ಬಿದ್ದುದಾದರೆ ಸರದಾರರ ಮೌನದ ಬೀಗ ಬಿಚ್ಚಿಬೀಳುತ್ತಿತ್ತು— "ಇವಳು ಸತ್ತರೆ ನಾನೂ ಸತ್ತಂತೆಯೇ?"— ಆದರೆ ಅವರೇ ಮೊದಲು ಮುಕ್ತಿಯನ್ನು ಪಡೆದರು.

ಸರದಾರರು ಮೃತ್ಯುಶಯ್ಯೆಯಲ್ಲಿ ಮಲಗಿದಾಗಲೇ, ಅವರ ಅವಸಾನ ಕಾಲ ಸಮೀಪಿಸಿತೆಂದು, ಮಣಿಬೇನಳಿಗೆ ಸ್ಪಷ್ಟವಾಗಿ ಹೊಳೆಯಿತು. ಮೃತ್ಯುವಿನ ದ್ವಾರ ತೆರೆಯಿತೆಂದು ಸರದಾರರಿಗೂ ತಿಳಿಯಿತು. "ಮಂಗಲ ಮಂದಿರ ಖೋಲೊ ದಯಾಮಯ" (ಮಂಗಲ ಮಂದಿರವ ತೆರೆ ಇನ್ನು ದಯಾನಿಧಿ) ಎಂದು ಮೃತ್ಯುಶಯ್ಯೆಯಲ್ಲಿ ಮಲಗಿದ ಸರದಾರರು ಸದಾ ಗುನುಗುಡುತ್ತಿದ್ದರು. ಆಗಲೂ ಸಹ 'ತಂದೆ-ಮಗಳ' ಮೌನವ್ರತ' ಜಾರಿಯಲ್ಲಿಯೇ ಇತ್ತು. "ಇನ್ನು ನಾನು ಹೊರಟೆ. ಆದರೆ ನೀನು ಇಂತಿಂಥ ಕೆಲಸ ಮಾಡಬೇಕೆಂದು" ಒಮ್ಮೆಯೂ ಸರದಾರರು ಮಗಳನ್ನು ಕರೆದು ಹೇಳಲಿಲ್ಲ. ಅಂತೆಯೇ "ನಿಮಗೆ ಏನಾದರೂ ಹೇಳುವದಿದೆಯೆ?" ಎಂದು ಮಣಿಬೇನಳು ಸಹ ಕೇಳಲಿಲ್ಲ. ಈರ್ವರೂ ದೈವವಾದಿಗಳಾಗಿದ್ದರಿಂದ ಭವಿಷ್ಯವನ್ನು ಭಗವಂತನಿಗರ್ಪಿಸಿ ನಿಶ್ಚಿಂತರಾಗಿರುತ್ತಿದ್ದರು.

"ಯಾವ ದಿವಸದ ಅಂಜಿಕೆ ನನಗಿತ್ತೋ ಅದು ಈಗ ಬರಹತ್ತಿದೆ" ಎಂದು ಅವಳು ಹೇಳುವಾಗ ಅವಳ ಕಣ್ಣಿಂದ ಅಶ್ರುಗಳು ಉದುರಿದವು. ನಾನು ಅವಳಿಗೆ ಧೈರ್ಯವನ್ನು ಕೊಡುತ್ತ "ಹಾಗೇಕೆ ತಿಳಿಯುತ್ತಿ?" ಎಂದು ಹೇಳಿದರೂ ಅವರ ಅಂತ್ಯಕಾಲ ಸಮೀಪಿಸುತ್ತಿದೆ ಎಂಬುದು ನನಗೆ ಒಂದು ವರುಷ ಮೊದಲೇ ಅನಿಸಿತ್ತು.

ಸರದಾರರು ೧೯೪೯ ರ ಚಳಿಗಾಲದಲ್ಲಿ ದಿಲ್ಲಿಗೆ ಬಂದರು ಮತ್ತು ೧೯೫೦ ರ ಚಳಿಗಾಲದಲ್ಲಿ ದಿಲ್ಲಿಯಿಂದ ಏಕೆ ಈ ವಿಶ್ವದಿಂದಲೇ ಅಂತಿಮ ಬೀಳ್ಕೊಡಿಗೆಯನ್ನು ಪಡೆದರು. ಅಂತಿಮ ಯಾತ್ರೆಗೆ ಮೊದಲು ಅವರು ತಮ್ಮ ಎಲ್ಲ ಮಿತ್ರರನ್ನೂ ಒಬ್ಬೊಬ್ಬರನ್ನಾಗಿ ಕರೆಯಿಸಿ ಅಂತಿಮ ದರ್ಶನವನ್ನು ಪಡೆದು ಕೊಂಡರು. ಮಣಿಬೇನಳಿಗೂ ಇದು ಗೊತ್ತಿತ್ತು. ಆದರೆ ಅವಳು ಎಳ್ಳಷ್ಟೂ ಧೈರ್ಯಗುಂದಲಿಲ್ಲ. "ಈಶ್ವರನ ಚಿತ್ತದಂತೆ ಎಲ್ಲವೂ ನಡೆಯುತ್ತದೆ. ವ್ಯರ್ಥ ಬಡಬಡಿಸುವದರಿಂದ ಏನು ಜರುಗುತ್ತದೆ-" ಎಂದು ತನ್ನಷ್ಟಕ್ಕೆ ತಾನೇ ಸಂತೈಸಿಕೊಳ್ಳುತ್ತಿದ್ದಳು.

ಸರದಾರರನ್ನು ದಿಲ್ಲಿಯಿಂದ ಬೀಳ್ಕೊಡುವ

ದಿನ ವಿಮಾನ ನಿಲ್ದಾಣಕ್ಕೆ ಅವರ ಎಲ್ಲ ಮಿತ್ರರೂ ಬಂಧುಗಳೂ ಆಗಮಿಸಿದ್ದರು. ವಿಮಾನದ ಬಾಗಿಲು ಬಳಿ ಇದ್ದ ಒಂದು ಕುರ್ಚಿಯಲ್ಲಿ ಸರದಾರರು ಕುಳಿತುಕೊಂಡು ಮಂದಹಾಸದಿಂದ ಎಲ್ಲರಿಗೂ ನಮಸ್ಕರಿಸುತ್ತ ಬೀಳ್ಕೊಂಡರು. ನನ್ನ ಹೃದಯದಲ್ಲಿ ಅಚ್ಚಳಿಯದಂತೆ ಬಿಂಬಿಸಿದ ಅಂದಿನ ಅವರ ಮಂದಸ್ಮಿತ ಮುಖವನ್ನು ನಾನೆಂದಿಗೂ ಮರೆಯಲಾರೆ. ಶರೀರ ಅತ್ಯಂತ ನಿಶ್ಶಕ್ತವೂ ದುರ್ಬಲವೂ ಆಗಿತ್ತು. ಮುಖ ಬಿಳಿಚಿಕೊಂಡಿತ್ತು. ಹೊಟ್ಟೆಯಲ್ಲಿ ಅಸಹ್ಯ ವೇದನೆಯಾಗುತ್ತಿದ್ದರೂ ಅದನ್ನೆಲ್ಲ ಹತ್ತಿಕ್ಕಿ ಮನಸ್ಸನ್ನು ಸ್ತಿಮಿತಕ್ಕೆ ತಂದುಕೊಂಡು ನಗುಮೊಗದಿಂದ ಎಲ್ಲರಿಂದ ಬೀಳ್ಕೊಂಡರು.

ಆಗ ಅವರಲ್ಲಿ ಕೆಲವೇ ದಿನಗಳ ಅಥವಾ ಕೆಲವೇ ನಿಮಿಷಗಳ ಅವಧಿ ಉಳಿದಿತ್ತು. ಮಣಿಬೇನ್ ಅವರ ಹಿಂದುಗಡೆಯಲ್ಲಿಯೇ ನಿಂತುಕೊಂಡು ಅವರ ಅಂಗರಕ್ಷಣೆಯ ಧ್ಯಾನ ಸಮಾಧಿಯಲ್ಲಿ ನಿಮಗ್ನಳಾಗಿದ್ದಳು. ಅವಳಿಗೆ ಭವಿಷ್ಯದ ಚಿಂತೆ ಎಷ್ಟೆಷ್ಟೂ ಇರಲಿಲ್ಲ. ಮುಂಬಯಿಯನ್ನು ತಲುಪಿದ ನಂತರ ಮೂರು ದಿನಗಳ ವರೆಗೆ ಮಾತ್ರ ಸರದಾರರು ಬದುಕಿದ್ದರು. "ಮಂಗಲ ಮಂದಿರದ ದ್ವಾರ" ತೆರೆಯಿತು.

ಸರದಾರರು ಅಸು ನೀಗಿದ ಸಮಯದಲ್ಲಿಯೂ ಸಹ ಮಣಿಬೇನ್ ತನ್ನ ವಿವೇಕವನ್ನು ಕಳೆದುಕೊಳ್ಳಲಿಲ್ಲ. 'ಬಿರ್ಲಾಹೌಸ್' ನಲ್ಲಿ ದರ್ಶಕರು ತಂಡೋಪತಂಡವಾಗಿ ನುಗ್ಗತೊಡಗಿದರು. 'ಪಿತೃಪ್ರಿಯ'ಳಾದ ಮಣಿಬೇನಳ ಮನಸ್ಸಿಗೆ ಈ ಅವ್ಯವಸ್ಥೆ ನೋವನ್ನುಂಟು ಮಾಡಿತು. 'ಸರದಾರರ ಅವಸಾನವು' ಅವ್ಯವಸ್ಥಿತವಾಗಬಾರದೆಂದು, ಅವರ ಮೃತ ಶರೀರವನ್ನು ಅಲ್ಲಿಯೇ ಬಿಟ್ಟು ವ್ಯವಸ್ಥಿತ ರೀತಿಯಲ್ಲಿ ದರ್ಶನದ ಏರ್ಪಾಡು ಮಾಡುವುದರಲ್ಲಿ ತೊಡಗಿದಳು. "ಸರದಾರರ ದಹನ ಚೌಪಾಟಿಯ ಮೇಲೆ ಆಗಬೇಕು" ಎಂದು ಮಿತ್ರವೃಂದ ಹೇಳಿದಾಗ— "ನನ್ನ ಅಜ್ಜಿಯು ಸೋನಾಪುರಕ್ಕೆ ಹೋಗಿದ್ದಾಳೆ. ಮುಂಬಯಿಯ ಪ್ರತಿಯೊಬ್ಬ ಬಡವನೂ ಅಲ್ಲಿಗೆ ಹೋಗುತ್ತಾನೆ. ಅಂದ ಮೇಲೆ ನನ್ನ ತಂದೆಯೂ ಅಲ್ಲಿಗೆ ಹೋಗಲೇಬೇಕು" ಎಂದು ನಿರ್ಧಾರದ ನುಡಿಗಳನ್ನಾಡಿ ಎಲ್ಲರ ಬಾಯನ್ನೂ ಮುಚ್ಚಿಸಿದಳು. ಕೊನೆಯಲ್ಲಿ ದಹನ ಸೋನಾಪುರದಲ್ಲಿಯೇ ಆಯಿತು.

ಕಥೆಗಳಲ್ಲಿ ಪಿತೃಭಕ್ತ ಪುತ್ರರು ಸಾಕಷ್ಟು ಸಿಗುತ್ತಾರೆ. ಶ್ರೀರಾಮನೇ ಇದಕ್ಕೆ ಸಾಕ್ಷಿ. ಶ್ರವಣಕುಮಾರನೂ ಇದೇ ಶ್ರೇಣಿಯಲ್ಲಿ ಸೇರುವವನಾಗಿದ್ದಾನೆ. ಪತಿವ್ರತೆಯರಾದ ಸೀತಾ, ಸಾವಿತ್ರಿ ಮತ್ತು ಇನ್ನೂ ಅನೇಕ ಸಾಧ್ವಿಯರು ಈ ದೇಶದಲ್ಲಿ ಬಾಳಿಹೋಗಿದ್ದಾರೆ. ಭ್ರಾತೃ ಪ್ರೇಮದಲ್ಲಿ ಭರತನೇ ಅಗ್ರಗಣ್ಯ. "ಜಾನಹೋತಾ ಜಗ ಜನಮು ಭರತಕೊ। ಸಕಲ ಧರಮ ಧರ ಧರನಿ ಧರತಕೊ ॥ (ಈ ಜಗವು ಭರತನಂತಹ ವ್ಯಕ್ತಿಗಳನ್ನು ಕೊಟ್ಟುದರಿಂದಲೇ ಸಕಲ ಧರ್ಮಗಳೂ ಬಾಳಿ ಬೆಳಗಿವೆ.) ಎಂದು ತುಲಸೀದಾಸನೇ ಹೇಳಿದ್ದಾನೆ. ಆದರೆ ತಂದೆಯ ಮೇಲೆ ಅತ್ಯಂತ ನಿಷ್ಠೆಯನ್ನಿಟ್ಟು ಅಚಲ ಪ್ರೇಮವನ್ನು ತೋರಿದ ಮಣಿಬೇನಳಂಥ ಹೆಣ್ಣು ಮಗಳು— ಉದಾಹರಣೆಗೆ ಮತ್ತೆಲ್ಲಿಯೂ ಸಿಗುವುದಿಲ್ಲ.

ಕಲ್ಪನೆಯೂ ಒಂದು ವಿಚಿತ್ರ ವಸ್ತುವಾಗಿದೆ. ಸರದಾರರು ಒಂದು ವೇಳೆ ಗಾಂಧೀಜಿಯವರನ್ನು ಕಾಣದೇ ಹೋಗಿದ್ದರೆ? ಮತ್ತು ಅವರು ತಮ್ಮ ಮೊದಲಿನ ಸಾಹೇಬತನದ ರೀತಿಯನ್ನು ಬಿಡದೇ ಹೋಗಿದ್ದರೆ ಏನಾಗುತ್ತಿತ್ತು? ಬಹುಶಃ ಮಣಿಬೇನಳು ಸಹ ಇಂಗ್ಲೆಂಡಿಗೆ ಹೋಗಿ ವಿದ್ಯಾಭ್ಯಾಸ ಮುಗಿಸಿ, ಶ್ರೀಮಂತ ಹೆಣ್ಣು ಮಕ್ಕಳಂತೆ ಮದುವೆ ಮಾಡಿಕೊಂಡು, ಗೃಹಸ್ಥ ಜೀವನವನ್ನು ಸಾಗಿಸಿಕೊಂಡು ಸಾಮಾನ್ಯ ಜನರಂತೆ ಎಲ್ಲಿಯೋ ಈ ವಿಶ್ವದಲ್ಲಿ ನುಸುಳಿಹೋಗುತ್ತಿದ್ದಳು. ಇದರಿಂದ ನಮ್ಮ ದೇಶಕ್ಕೆ ದೊರೆಯುವ ಲಾಭವಾದರೂ ಏನಿತ್ತು?— *

ಒಂದು
ಸತ್ಯಕಥೆ

# ಲೂಸಿ ಫ್ರೇಯ ಅಸಾಮಾನ್ಯ ಧೈರ್ಯ

ಲೂಸಿ ಫ್ರೇ ತನ್ನ ಹತ್ತನೇ ಮಗುವಿಗೆ ಜನ್ಮವಿತ್ತಳು. ಆದರೆ ಮಗುವಿನೊಂದಿಗೆ ಆಕೆ ಮನೆಗೆ ಬಂದ ಒಂದು ವಾರದಲ್ಲೇ ಅವಳಿಗೆ ತನ್ನ ಸಾವು ಸಮೀಪಿಸಿದೆ ಎಂದು ತಿಳಿಯಿತು.

ಸಾವಿನ ಸುಳಿವು ಹತ್ತಿತ್ತು. ಆದರೂ ಎಂದು, ಯಾವಾಗ? ವಾರಗಳೊ, ತಿಂಗಳುಗಳೊ ಅಥವಾ ದಿನಗಳೊ ಎಂಬುದು ಮಾತ್ರ ಆಕೆಗಿನ್ನೂ ನಿಶ್ಚಿತವಾಗಿ ತಿಳಿದಿರಲಿಲ್ಲ.

ಗಂಡ ಆಗಲೇ ಹಾಸಿಗೆ ಹಿಡಿದವ. ಅವನಿಗೆ ಆಕೆ ಕೂಡಲೆ ತಿಳಿಸಲಿಲ್ಲ. ತಾನು ನಿಶ್ಚಿತ ತಿಳಿದುಕೊಂಡೇ ಗಂಡ ಇವಾನ್‌ನಿಗೆ ತಿಳಿಸಬೇಕೆಂದುಕೊಂಡಳು.

ಆಗ ಆಕೆಗೆ ಮೂವತ್ನಾಲ್ಕು ವರ್ಷ. ಅವರದೊಂದು ಚಿಕ್ಕತೋಟ ಓತ್ತುವ್‌ವಾದಲ್ಲಿತ್ತು. ಅದೇ ಅವರ ಉಪಜೀವಿಕೆಯ ಸಾಧನ. ಯಾವ ಸುಖ ಸೌಕರ್ಯಗಳಿಲ್ಲವಾದರೂ ಹತ್ತು ಮಕ್ಕಳ ಅವರ ಸಂಸಾರಕ್ಕೆ ಅದೇ ಆಧಾರವಾಗಿತ್ತು.

ಇವಾನ್ ಸ್ವಸ್ಥನಿದ್ದಾಗ ತೋಟದಲ್ಲಿ ಕೆಲಸ ಮಾಡುತ್ತಿದ್ದ. ಚಳಿಗಾಲದಲ್ಲಿ ಪೇಟೆಯೂರಲ್ಲಿ ಹೋಗಿ ಕೆಲಸ ಹುಡುಕುತ್ತಿದ್ದ. ಆದರೆ ಮುಂದೆ ಸಂಧಿವಾತದ ಬೇನೆ ಬಲಿತು ಆತ ಹಾಸಿಗೆ ಹಿಡಿಯದೆ ವಿಧಿ ಇಲ್ಲದಾಯಿತು.

ದಿನಗಳೆದಂತೆ ಲೂಸಿಯ ಬೇನೆ ಹೆಚ್ಚಾಗತೊಡಗಿತು. ಕಡೆಗೆ ಆಕೆ ಅವರ ಫ್ಯಾಮಿಲಿ ಡಾಕ್ಟರರ ಕಡೆಗೆ ಚಿಕಿತ್ಸೆಮಾಡಿಕೊಳ್ಳಲು ಹೋದಳು. ಡಾಕ್ಟರರು ವೃದ್ಧರು. ನುರಿತವರು. ಇಲ್ಲಿ ಇವರು ಬಂದಾಗಿನಿಂದಲೂ ಇವರಿಗೆಲ್ಲ ಔಷಧವನ್ನು ಅವರೇ ಕೊಡುತ್ತಿದ್ದರು.

ಪರೀಕ್ಷೆಮಾಡಿ ಡಾಕ್ಟರರು ತಲೆ ಅಲ್ಲಾಡಿಸಿದರು.

"ಉಪಾಯವೇನೂ ಉಳಿದಿಲ್ಲವೆ?" ಎಂದು ಕೇಳಿದಳು ಲೂಸಿ.

"ಮನುಷ್ಯ ಶಕ್ತಿಯು ಕೈಮೀರಿದ ಅವಸ್ಥೆ ಇದು." ಎಂದರು ಡಾಕ್ಟರರು.

ಕಣ್ಣು ಹಿಗ್ಗಿಸಿ ನೆಟ್ಟ ದೃಷ್ಟಿಯಿಂದ ನೋಡುತ್ತ, ಲೂಸಿ, "ಇನ್ನೂ ಎಷ್ಟು ಅವಧಿ ನನಗಾಗಿ ಉಳಿದಿದೆ?" ಎಂದಳು.

"ನಾನು ಸ್ಪಷ್ಟವಾಗಿಯೇ ಹೇಳಬೇಕೆನ್ನುತ್ತೀರಾ?"

"ಹೌದು. ನನ್ನ ಹಿಂದೆ ಒಂದು ಕುಟುಂಬವಿದೆ. ಸಾಯುವ ಮುಂಚೆ ನಾನು ಅದರ ವ್ಯವಸ್ಥೆ ಮಾಡಬೇಕು."

"ಕೆಲ ತಿಂಗಳು, ಆರು ತಿಂಗಳು ಬಹಳವಾದರೆ ಒಂಬತ್ತು ಅತಿ ಹೆಚ್ಚೆಂದರೆ ಹತ್ತು ತಿಂಗಳು ಉಳಿದಿವೆ."

'ನಮಸ್ಕಾರ' ಎಂದು ಗೊಣಗಿ ಲೂಸಿ ಯಾವದೇ ಭಾವನೆಯನ್ನು ತೋರಗೊಡದೆ ಎಂದಿನಂತೆ ಮನೆಗೆ ಮರಳಿದಳು. ಅವಳ ಯಾವ ವರ್ತನೆಯಲ್ಲೂ ಅವಳ ಮನಸ್ಸು ಕೊರೆಯುತ್ತಿದ್ದುದು ಕಂಡುಬರುತ್ತಿದ್ದಿಲ್ಲ.

ಕೂಸು ಸ್ಟಿಫೆನ್‌ನನ್ನು ಮೈತೊಳೆದು ಮಲಗಿಸಿ ಅಡಿಗೆ ಮಾಡಿ ಎಲ್ಲರಿಗೂ ಉಣ ಬಡಿಸಿ ತಾನು ಆವೂರ ಪಾಸ್ಟರ (ಧರ್ಮಗುರು)ವನ್ನು ಕಂಡು ಬರುವೆನೆಂದು ಗಂಡನಿಗೆ ಹೇಳಿದಳು. ಒಂದೆರಡು ವಿಚಾರ ಮಾತಾಡಬೇಕಾಗಿದೆ ಎಂದು ಆಕೆ ಹೇಳಿದ್ದಕ್ಕೆ ಇವಾನ್ ಹೆಚ್ಚು ಮಾತು ಬೆಳಿಸಲಿಲ್ಲ. ಆತ ಜರ್ಜರಿತನಾಗಿದ್ದ.

ಲೂಸಿ ರೆವರೆಂಡ್ ಸ್ಯಾಮುವೆಲ್ ಪ್ಯಾಕ್

ರನ್ನು ಕಂಡು ಹೇಳಿದಳು. "ನಾನು ನನ್ನ ಮಕ್ಕಳ ವಿಚಾರ ಮಾಡುತ್ತಿದ್ದೇನೆ. ಇಂದು ಸಂಜೆ ಮಗುವಿಗೆ ಎರೆಯುತ್ತಿದ್ದಾಗ ಈ ಮಕ್ಕಳು ನಾಳೆ ಅನಾಥಾಶ್ರಮ ಸೇರಬಾರದಲ್ಲ ಎಂಬ ವಿಚಾರ ತೀವ್ರವಾಗಿ ತಲೆಯಲ್ಲಿ ಸುಳಿಯಿತು. ಐಯೋವಾದಲ್ಲಿ ನನ್ನ ಮಕ್ಕಳನ್ನು ತನ್ನ ಮಕ್ಕಳಂತೇ ಸಾಕಿ ನಾನಿಲ್ಲದಾಗ ನನ್ನ ಕೊರತೆ ಎನ್ನಿಸದಂತೆ ನೋಡಿಕೊಳ್ಳ ಬಲ್ಲವರು ಸಿಗದಿರಲಾರರು ಎಂದು ನನ್ನ ಅಂತರಂಗದ ಭಾವನೆ ಹೇಳಿತು. ಅಂಥವರನ್ನು ನಾನು ಹುಡುಕಬೇಕಾಗಿದೆ. ಅವರಿಗೆ ನನ್ನ ಮಕ್ಕಳನ್ನು ಒಪ್ಪಿಸಿ ಅವು ಸುಖವಾಗಿ ಬಾಳಿ ಬೆಳೆಯಬಲ್ಲವೆಂದು ಮನವರಿಕೆ ಮಾಡಿಕೊಂಡು ಸಾಯಬೇಕೆನ್ನುತ್ತೇನೆ."

ಮನೆಗೆ ಬಂದು ಅದೇ ವರ್ಷದ, ೧೯೫೪ರ ಬೇಸಿಗೆಯ ಮಧ್ಯದೊಳಗಾಗಿ ತಾನು ಸಾಯಲಿರುವೆನೆಂದು ಲೂಸಿ ಗಂಡನಿಗೆ ಹೇಳಿದಳು. ಅದಕ್ಕಾಗಿ ತಾನು ಯೋಜಿಸಿರುವ ವಿಚಾರಗಳನ್ನು ಉಸುರಿದಳು. ಎಂದಿನಂತೆ ಆತ ಅವಳ ವಿಚಾರಗಳನ್ನು ಒಪ್ಪಿದ.

ಮರುದಿನ ಮುಂಜಾನೆ ಎಲ್ಲ ಹುಡುಗರನ್ನೂ ಹತ್ತಿರ ಕರೆದು "ನಾನು ಸ್ವರ್ಗಕ್ಕೆ ಹೋಗುವ ಕಾಲ ಸಮೀಪಿಸಿದೆ. ಇನ್ನು ಬಹು ಕಾಲ ನಾನು ನಿಮ್ಮನ್ನು ಲಾಲಿಸಲಾರೆ. ಆದ್ದರಿಂದ ನಾನು ಹೊರಡುವ ಮುಂದೆ ನಿಮಗೆಲ್ಲರಿಗೂ ಒಬ್ಬೊಬ್ಬ ತಾಯಿ ತಂದೆಯರನ್ನು—ನಮ್ಮಂತೇ ಪ್ರೀತಿಸಬಲ್ಲ ತಾಯಿ ತಂದೆಯರನ್ನು—ದೊರಕಿಸಿ ಕೊಡುವವಳಿದ್ದೇನೆ" ಎಂದಳು.

ಸಾವಿನ ದಾರಿಯಲ್ಲಿರುವ ಈ ಮಾತೆಯ ಕತೆ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಐಯೊವಾದ ರಾಜಧಾನಿ ಡೆಸ್ ಮೊಯಿನ್ಸ್‌ನ ಪತ್ರಿಕೆಯಲ್ಲೂ ಹತ್ತು ಸುಂದರ ಮಕ್ಕಳಿಗೆ ಸಾಕು ತಾಯ್ತಂದೆಗಳು ಬೇಕಾಗಿರುವ ವೃತ್ತಾಂತ ಪ್ರಕಟವಾಯಿತು. ಆಮೇಲೆ ಎಲ್ಲ ಪತ್ರಿಕೆಗಳ ಮುಖಪುಟಗಳಲ್ಲೂ ಲೂಸಿಯ ಕತೆ ಪ್ರಕಟವಾಯಿತು.

ನೂರಾರು ಸಾವಿರಾರು ಮೈಲುಗಳಾಚೆಯಿಂದ ದಂಪತಿಗಳು ಮಕ್ಕಳಿಗಾಗಿ ಬಂದರು. ಲೂಸಿ ಅವರೆಲ್ಲರ ಇತಿವೃತ್ತಗಳನ್ನು ಕೇಳಿಕೊಂಡಳು. ಅವರಲ್ಲಿ ಲೂಸಿ ಕೆಲ ದಂಪತಿಗಳ ಆಯ್ಕೆ ಮಾಡಿದಳು. ಮತ್ತು ಹತ್ತು ದಿನಗಳ ವರೆಗೆ ಮಕ್ಕಳನ್ನು ಒಯ್ಯಲು ಅವರಿಗೆ ಒಪ್ಪಿಗೆ ಇತ್ತಳು. ಹತ್ತು ದಿನಗಳಾದ ಮೇಲೆ ಆ ಮಕ್ಕಳನ್ನು ಮತ್ತೆ ತನಗೆ ತಂದು ಭೆಟ್ಟಿ ಮಾಡಿಸಬೇಕೆಂದು ಹೇಳಿದಳು. ಆಗ ಅವರಿಂದ ಹತ್ತು ದಿನಗಳ ಅನುಭವದ ಬಗ್ಗೆ ತಾನು ವಿಚಾರಿಸಿ ತಿಳಿದುಕೊಳ್ಳುವೆನೆಂದೂ ತಿಳಿಸಿದಳು.

ಮೊದಲು ಬಾರಿ ಹೋದವ ಚಿಕ್ಕ ಕೂಸು ಸ್ಟಿಫೆನ್. ಎರಡನೆಯ ಬಾರಿ ಮೂರು ವರ್ಷದ ವಾರೆನ್. ಮೂರನೇ ಸಲ ಎರಡು ವರ್ಷದ ಲಿಂಡಾ. ಆಗ ಉಳಿದ ಹುಡುಗರು ಬರಿದಾಗುತ್ತ ನಡೆದ ಮನೆಯ ವಾತಾವರಣದಿಂದ ಹೆದರಿದವು.

ಹಿರಿಯ ಮಗ ಜೋನ್ ಮತ್ತು ಅವನ ಬೆನ್ನ ಮೇಲೆ ಹುಟ್ಟಿದ ಪಾಲಿನ್ (ಮೂರನೇ ಮಗ) ಇದು ಹೀಗೇಕೆಂದು ತಾಯಿಗೆ ಕೇಳಿದರು.

ತಾಯಿ "ನಾನು ಸಾಯುವವಳಿದ್ದೇನೆ. ಯಾರೂ ನನ್ನನ್ನು ಬದುಕಿಸಲಾರರು" ಎಂದಳು. ಮತ್ತು "ಮುಂದೆ ನೀವೆಲ್ಲರೂ ಅನಾಥರಾಗಬಾರದೆಂದು ಈಗಲೇ ನಿಮ್ಮನ್ನು ಉತ್ತಮ ರೀತಿಯಲ್ಲಿ ಸಲಹಬಲ್ಲ ಹಾಗೂ ಆಗಾಗ ನಿಮ್ಮೆಲ್ಲರಿಗೂ ಪರಸ್ಪರರನ್ನು ಭೆಟ್ಟಿಮಾಡಿಸಬಲ್ಲ ಸಹೃದಯ ಸ್ಥಿತಿವಂತ ತಾಯ್ತಂದೆಗಳು ನಿಮಗೆ ಸಿಗುವಂತೆ ನಾನು ಮಾಡಬೇಕಾಗಿದೆ" ಎಂದು ವಿವರಿಸಿದಳು.

ಮಕ್ಕಳೂ ತಿಳುವಳಿಕೆಯುಳ್ಳವಾಗಿದ್ದವು. ಕೇಳಿ ಸುಮ್ಮನಾದವು. ಬಹು ದೂರವಲ್ಲದ ನೆರೆಹೊರೆಯವರಲ್ಲಿ ಬಹುತರ ಎಲ್ಲರೂ ಹಂಚಿ ಹೋದರು. ೧೯೫೪ರ ಏಪ್ರಿಲ್ ವರೆಗೆ ಏಳು ಮಕ್ಕಳು ಹೋಗಿ ಜೊಯ್ಸ್, ಫ್ರ್ಯಾಂಕ್ ಮತ್ತು ವರ್ಜೀನಿಯಾ ಈ ಮೂವರು ಉಳಿದರು. ಕೊನೆಗೆ ಜೊಯ್ಸ್ ಮತ್ತು ವರ್ಜೀನಿಯಾರ ಏರ್ಪಾಡೂ ಆಯಿತು. ಉಳಿದುಕೊಂಡ ಫ್ರ್ಯಾಂಕ್ ಒಬ್ಬನೆ.

ಲೂಸಿಯ ಕಾಲ ಸಮೀಪಿಸಿತು.

ಫ್ರ್ಯಾಂಕನಿಗಾಗ ಆರು ವರ್ಷ. ಅವನು ಮಲರೋಗ ಪೀಡಿತ ಇವನನ್ನು ಸಂಸ್ಥೆಯಲ್ಲಿ ಡಡೆ ವಿಧಿ ಇಲ್ಲ ಎಂದುಕೊಂಡಳು ಲೂಸಿ. ಎಲ್ಲ ಮಕ್ಕಳನ್ನೂ ಸಾಕು ತಾಯ್ತಂದೆಗಳು ಒಯ್ಯುವಾಗ ಆಯಾ ಮಕ್ಕಳ ವೈಗುಣ್ಯಗಳೇನಾದರೂ ಇದ್ದರೆ ಅವನ್ನು ಹೇಳಿದ್ದಳು. ಆಗ ೬ ವರ್ಷದ ಫ್ರ್ಯಾಂಕ್‌ನಿಗೆ ಮಲರೋಗದಿಂದ ಆಗಾಗ ಮೂರ್ಛೆ ಬರುವದೆಂದೂ ಆಕೆ ಹೇಳಿದ್ದಳು.

ರೆವರಂಡ್ ಪ್ಯಾಕರ ಮುಂದೆ ಲೂಸಿ ಅಂದಳು. "ಎಲ್ಲರಿಗಿಂತ ಹೆಚ್ಚು ಪ್ರೀತಿಯನ್ನು ಅಪೇಕ್ಷಿಸುವ ಫ್ರಾಂಕನನ್ನು ಮಾತ್ರ ಯಾರೂ ಒಯ್ಯಲಾರರು" ಎಂದು.

ಮುಂದೆ ಕೆಲವೇ ದಿನಗಳಲ್ಲಿ ವಾರೆನ್‌ನನ್ನು ಒಯ್ದ ದಂಪತಿಗಳು ವಾರೆನ್‌ನನ್ನು ತಾಯಿಗೆ ಭೆಟ್ಟಿಮಾಡಿಸಲು ಕರೆತಂದರು. ವಾರೆನ್ ತಾಯಿಯನ್ನು ಕಂಡು ಅವಳ ಹತ್ತಿರ ಓಡಿದ. ದಂಪತಿಗಳಿಬ್ಬರೂ ಆಸನದಲ್ಲಿ ಕೂತರು. ಆಗ ಮುದ್ದು ಮಗ ಫ್ರ್ಯಾಂಕ್ ದುಡುದುಡು ನಡೆಯುತ್ತ ದಂಪತಿಗಳ ಹತ್ತಿರ ಬಂದು, "ನಾನು ಯಾರಿಗೂ ಬೇಕಾಗಿಲ್ಲ. ಆದ್ದರಿಂದ ಯಾರಿಗೂ ಬೇಕಾಗದ ಮಕ್ಕಳು ಇರುವ ಮನೆಗೆ ನಾನು ಹೋಗುವ ನಿದ್ದೇನೆ." ಎಂದು ಅಂದ. ಮತ್ತೆ ತನ್ನ ಮಣ್ಣಿನ ಕುದುರೆಯೊಂದಿಗೆ ಆಡಲಿಕ್ಕೆ ಹೋಗಿಬಿಟ್ಟ.

ಅಂದು ರಾತ್ರಿ ಆ ದಂಪತಿಗಳಿಬ್ಬರಿಗೂ ಊಟ ಹೋಗಲಿಲ್ಲ. ಮುಂದೆ ಅವರು ರೆವರಂಡ್ ಪ್ಯಾಕ್‌ರ ಎದುರಿಗೆ ಅದನ್ನು ಹೇಳಿದರು: "ನಾವು ಬರೆ ಊಟದ ತಟ್ಟೆಗಳನ್ನು ನೋಡುತ್ತ ಕೂತೆವು. ಊಟಕ್ಕೆ ಮನಸ್ಸೆ ಆಗಲಿಲ್ಲ. ನನ್ನಾಕೆ ಅಂದಳು, 'ಮಗು ಮುದ್ದಾಗಿದೆ. ಆದರೆ ಅದಕ್ಕೂ ಅದರ ಅಣ್ಣತಂಗಿಯರಂತೆ ಸಾಕು ತಾಯ್ತಂದೆಗಳು ಸಿಗದಿರುವುದು ಪಾಪವಲ್ಲವೆ?' ಅವಳ ಕಣ್ಣುಗಳತ್ತ ನೋಡಿದೆ, ನೀರು ಕೂಡಿತ್ತು. ನಾನು ಎದ್ದು, 'ನಮ್ಮಲ್ಲೇ ಅವನನ್ನೂ ತಂದಿಡೋಣ' ಎಂದೆ.

ಲೂಸಿಗೆ ಅವರ ವಿಚಾರ ಕೇಳಿ ಅತ್ಯಾನಂದವಾಯಿತು. ಆಗ ರಾತ್ರಿಯಾಗಿತ್ತು. ಮಲಗಿದ ಮಗುವನ್ನು ಹಾಸಿಗೆಯಿಂದ ಎತ್ತಿಕೊಂಡರು. ಮರುದಿನ ಎಚ್ಚರಾದಾಗ ಫ್ರ್ಯಾಂಕ್ ತನ್ನ ತಮ್ಮನೊಂದಿಗೆ ತಾನು ಮಲಗಿದ್ದುದು ಅವನಿಗೆ ಕಾಣಿಸಿತು.

ಜೂನ ೧೪ ಉದಿಸಿತು. ಲೂಸಿಯ ವೇದನೆಗಳು ಹೆಚ್ಚಿದವು. ಇವಾನ್ ರೆವರಂಡ್ ಪ್ಯಾಕ್‌ರಿಗೆ ಈ ಸಮಾಚಾರ ತಿಳಿಸಿದ. ನಂತರದ ದಿನದಲ್ಲಿ ಮಕ್ಕಳು ಒಂದೊಂದಾಗಿ ತಾಯಿಯನ್ನು ಇಹಲೋಕದಿಂದ ಬೀಳ್ಕೊಡಲು ಬರತೊಡಗಿದವು.


ಎಲ್ಲರನ್ನೂ ಕೂಡಿಸಿಕೊಂಡು ಲೂಸಿ ಹೇಳಿದಳು. "ನಾನಿನ್ನು ಹೊರಟೆ ಕಂದಗಳಿರಾ, ಮತ್ತೆ ಬರುವೆ. ಮರಗಬೇಡಿ. ಈಗ ನಿಮಗೆಲ್ಲರಿಗೂ ಒಳ್ಳೇ ತಾಯ್ತಂದೆಗಳು ಸಿಕ್ಕಿದ್ದಾರೆ. ಅವರಿಗೂ ನೀವು ಒಳ್ಳೇ ಮಕ್ಕಳೆನ್ನಿಸುವಂತೆ ವರ್ತಿಸಿರಿ. ದೇವರು ನಿಮ್ಮ ಕಲ್ಯಾಣ ಮಾಡಲಿ." ಒಂದೊಂದಾಗಿ ಎಲ್ಲರನ್ನೂ ಮುದ್ದಿಸಿದಳು. ಅವರೆಲ್ಲರನ್ನು ಅವರವರ ಹೊಸ ಮನೆಗಳಿಗೆ ಮರಳಿ ಕಳಿಸಿದಳು. ಆ ಮೇಲೆ ಶಾಂತಳಾಗಿ ಹಿಂದೊರಗಿ ತಲೆದಿಂಬಿನ ಮೇಲೆ ಒಂದು ಹನಿ ಕಣ್ಣೀರನ್ನು ಉರುಳಗೊಟ್ಟಳು.

ಲೂಸಿಯ ಪ್ರಾಣಪಕ್ಷಿ ಹಾರಿತು. ಕೆಲಕ್ಷಣಗಳಲ್ಲೇ ನರ್ಸ ಬಂದಳು. ಆಗಲೂ ಒಂದು ಬಗೆಯ ಆಳವಾದ ಸಮಾಧಾನ ಲೂಸಿಯ ನಗುಮುಖದ ಮೇಲೆ ಮೆರೆಯುತ್ತಿತ್ತು. *

ಎರಡನೆಯವರನ್ನು ಕಂಡು ನಗುವುದಕ್ಕಿಂತ ಸುಲಭವಾದ ಮತ್ತು ಎರಡನೆಯವರಿಗಾಗಿ ಅಳುವುದಕ್ಕಿಂದ ಕಠಿಣವಾದ ಕೆಲಸ ಈ ಜಗತ್ತಿನಲ್ಲಿ ಇನ್ನೊಂದಿಲ್ಲ.

ಬಂಗಾಲಿ

ಕಥೆ



# ಮಹಾದೇವನ ಮಹಿಮೆ

ಬನಫೂಲ

ದೇವಾಲಯ ಜೀರ್ಣವಾಗಿದ್ದರೂ ಸುತ್ತಲೂ ಪೊದೆ ಮುಳ್ಳುಕಂಟಿ ಬೆಳೆದಿದ್ದರೂ ಸಂಜೆಯು ವರೆಗೂ ದೇವನ ತಲೆಯ ಮೇಲೊಂದು ತಂಬಿಗೆ ನೀರು ಬಿದ್ದರೆ ಬಿತ್ತು ಇಲ್ಲದಿದ್ದರೆ ಇಲ್ಲ ಎಂಬಂತಿದ್ದರೂ ಮಹಾದೇವ ಮಾತ್ರ ಜಾಗ್ರತನೇ ಎನಿಸಿದ್ದ. ಸನಾತನಪುರದ ಮಹಾದೇವನ ಹೆಸರು ಕೇಳದವರಾರು? ಮಹಾದೇವನ ಮಹಿಮೆ ಕತೆ ಕತೆಯಾಗಿ ಹರಡಿ ಆಬಾಲವೃದ್ಧರಿಗೆಲ್ಲ ಗೊತ್ತಿತ್ತು. ವಿಪಿನ ಚೌಧುರಿ ಈ ಮಹಾದೇವನಿಗೆ ಹರಕೆ ಹೇಳಿಕೊಂಡೇ ಒಂದು ವ್ಯಾಜ್ಯ ಗೆದ್ದಿದ್ದ. ಭಾರಿ ಆಸ್ತಿಗೆ ಉತ್ತರಾಧಿಕಾರ ಪಡೆದಿದ್ದ. ಪಾಲರ ಮನೆಯ ಹುಡುಗ ಟೈಫಾಯ್ಡಿನಿಂದ ಸತ್ತೇ ಹೋಗಿದ್ದ, ಆದರೆ ಅವನ ತಾಯಿ ಈ ಮಹಾದೇವನ ಬಾಗಿಲಲ್ಲಿ ಧರಣಿ ಕುಳಿತು ಮಗನನ್ನು ಬದುಕಿಸಿಕೊಂಡಿದ್ದಳು. ಮುಖರ್ಜಿ ಮನೆತನದ ಭರಭರಾಟೆ ಇಂದು ಇಷ್ಟು ಇದ್ದರೆ ಅದಕ್ಕೆ ಕಾರಣ ಈ ಮಹಾದೇವನ ಕೃಪೆಯೆ. ಮಹಾದೇವ ಸಾಕ್ಷಾತ್ತಾಗಿ ಅವರಿಗೆ ಕನಸಿನಲ್ಲಿ ಕಾಣಿಸಿಕೊಂಡು ಬಟ್ಟೆ ವ್ಯಾಪಾರದ ಗೂಢಗಳೆನ್ನೆಲ್ಲ ತಿಳಿಸಿಕೊಟ್ಟಿದ್ದ. ಈ ಮಹಾದೇವನ ಸನ್ನಿಧಾನಕ್ಕೆ ಹರಕೆ ಹೊತ್ತದ್ದರಿಂದಲೇ ಹರಿಹರ ಘೋಷಾಲನಿಗೆ ಲಾಟರಿ ಎದ್ದಿತ್ತು. ಈ ಎಲ್ಲ ಚಿಕ್ಕಪುಟ್ಟ ಪ್ರಮಾಣಗಳನ್ನು ಬಿಟ್ಟರೂ ಜೀರ್ಣ ಮಂದಿರ ನಿವಾಸಿಯಾದೀ ಮಹಾದೇವನ ಮಹಿಮೆಗೆ ಭಯಂಕರ ಪ್ರಮಾಣವೊಂದು ಪ್ರತಿವರ್ಷವೂ ಸಿಗುತ್ತಿದೆ. ವೈಶಾಖ ಪೂರ್ಣಿಮೆಯ ದಿನ ಈ ಮಹಾದೇವನನ್ನೇ ಕೇಂದ್ರವಾಗಿರಿಸಿಕೊಂಡು ಒಂದು ಭಾರಿ ಜಾತ್ರೆ ನಡೆಯುತ್ತಿದೆ. ಅಂದು ಅಸಂಖ್ಯ ಸ್ತ್ರೀಪುರುಷರು ಮಹಾದೇವನ ನೆತ್ತಿಯ ಮೇಲೆ ಜಲಾಭಿಷೇಕ ಮಾಡುತ್ತಿದ್ದರು. ಶಿವಶಿವ ಹರಹರ ಬಂಬಂ ಧ್ವನಿಯಿಂದ ಭೂಮ್ಯಾಕಾಶಗಳು ಪ್ರತಿಧ್ವನಿಸುತ್ತಿದ್ದವು. ಮುಖರ್ಜಿಗಳು ಅಂದು ಯಾತ್ರಾ, ಥಿಯೇಟರ್ ಮೊದಲಾದ ವ್ಯವಸ್ಥೆಗಳನ್ನು ಮಾಡಿ ಮಹಾದೇವನ ಸ್ವಪ್ನ ಋಣವನ್ನು ತೀರಿಸುತ್ತಿದ್ದರು. ಚೌಧರಿಯವರ ಮನೆ ಅಂದು ದೀಪಮಾಲೆಗಳಿಂದ ಸುಶೋಭಿತ

ವಾಗುತ್ತಿತ್ತು. ಅಂದು ಗ್ರಾಮನಿವಾಸಿಗಳಿಗೆಲ್ಲ ಅವರಲ್ಲಿ ಭೂರಿಭೋಜನ ಸಂತರ್ಪಣೆಯಾಗುತ್ತಿತ್ತು. ಇವಲ್ಲದೆ ಇನ್ನೂ ಒಂದು ಘಟನೆ ಘಟಿಸುತ್ತಿತ್ತು--ಅದೇ ಸನಾತನಪುರದ ಮಹಾದೇವನ ಮಹಾತ್ಮೆಗೆ ಅಪ್ರತಿಹತ ಪ್ರಮಾಣವಾಗಿತ್ತು: ಅದೆಂದರೆ ಅಂದಿನ ದಿನ ಯಾರಾದರೂ ಒಬ್ಬನಿಗೆ ಹುಚ್ಚು ಹಿಡಿಯುತ್ತಿತ್ತು. ವರ್ಷ ವರ್ಷವೂ ಹೀಗಾಗುತ್ತ ಬಂದಿದೆ. ಮರುಳು ಭೋಲಾನಾಥ ಪ್ರತಿವರ್ಷವೂ ತನ್ನ ಪಂಗಡಕ್ಕೆ ಒಬ್ಬನನ್ನು ಸೇರಿಸಿಕೊಳ್ಳುತ್ತಿದ್ದ.

೨

ಆ ವರ್ಷವೂ ವೈಶಾಖ ಪೂರ್ಣಿಮೆಯ ಉತ್ಸವ ಸಾಂಗವಾಯಿತು. ಮುಖರ್ಜಿಯವರ ಮನೆಯಲ್ಲಿ ಆಡಿದ ಕರ್ಣಾರ್ಜುನ ನಾಟಕದ ಅಭಿನಯ ಕೌಶಲವನ್ನು ನೋಡಿ ಎಲ್ಲರೂ ಪುಲಕಿತರಾದರು. ಚೌಧುರಿಯವರಲ್ಲಿ ಸಮಾರಾಧನೆಗಾಗಿ ಮಾಡಿದ ಪಾಯಸ ಸ್ವಲ್ಪ ಉಳಿದು ಹೋಗಿದ್ದರೂ ಎಲ್ಲರೂ ಪೂರ್ಣ ಸಹಕಾರದಿಂದಲೇ ಭೋಜನ ಮಾಡಿದ್ದರೆಂಬಲ್ಲಿ ಸಂದೇಹಕ್ಕೆಡೆಯಿದ್ದಿಲ್ಲ. ಜಾತ್ರೆ ಕೂಡ ತುಂಬ ಸಹಕಾರದಿಂದಲೇ ಕೂಡಿತ್ತು. ಬೇರೆ ಗ್ರಾಮಗಳಿಂದ ಬಂದ ಯಾತ್ರಿಕರಿಗೂ ಕೊರತೆಯಿರಲಿಲ್ಲ. ಜಾತ್ರೆಯ ಮರುದಿನ ಇವೆಲ್ಲ ಸಂಗತಿಗಳನ್ನು ಕುರಿತು ಪಾಲರ ಚಂಡೀ ಮಂಟಪದಲ್ಲಿ ಚರ್ಚೆ ನಡೆದಿತ್ತು. ಈ ನಡುವೆ ಯಾದವ ಬಂದು ಒಮ್ಮಿಂದೊಮ್ಮೆ ಹೇಳಿದ:

"ಅಲ್ಲಾ, ಈ ವರ್ಷ ಯಾರಿಗೂ ಹುಚ್ಚು ಹಿಡಿದಿಲ್ಲವಲ್ಲ !"

ಎಲ್ಲ ಹರಟೆ ತಣ್ಣಗಾಗಿ ಹೋಯಿತು. ಅಂದರೆ ? ಇದು ಅಸಾಧ್ಯ!

ಹರೇಂದ್ರ ಹೇಳಿದ: "ಯಾಕೆ ? ಆ ಗೇಂಜೇಲ ಬಿಶಿ?"

ಯಾದವ ಹೇಳಿದ: "ಇಲ್ಲ. ನೋಡಿ ಬಂದಿದ್ದೇನೆ. ಸರಿಯಾಗಿಯೆ ಇದ್ದಾನೆ."

ಈ ಸಲ ಗೇಂಜೇಲ ಬಿಶಿಯೆ ಮಹಾದೇವನ ಹೆಸರನ್ನುಳಿಸುವನೆಂದು ಎಲ್ಲರೂ ನಿರೀಕ್ಷಿಸಿದ್ದರೆ ಅವನೂ ಸರಿಯಾಗಿದ್ದಾನೆಯೆ ?

ಪ್ರವೀಣ ನೀಲಮಣಿ ಈ ವರೆಗೆ ಮಾತಿಲ್ಲದೆ ತಂಬಾಕು ಜಗಿಯುತ್ತಿದ್ದ. ಈಗ ಆತ ಹೇಳಿದ: "ಹೀಗಾಗಲು ಸಾಧ್ಯವೇ ಇಲ್ಲ. ಸರಿಯಾಗಿ ಹುಡುಕಿ ನೋಡು. ಖಂಡಿತ ಯಾರಿಗಾದರೂ ಹುಚ್ಚು ಹಿಡಿದಿರಲೇಬೇಕು. ಅನಾದಿಯಿಂದ ನಡೆದು ಬಂದ ಮಾತು."

ಯಾದವ ಹೇಳಿದ: "ಈ ಸಲ ಎಲ್ಲರ ತಲೆಯೂ ಸರಿಯಾಗಿದೆ. ಯಾರದೂ ಕೆಟ್ಟಿಲ್ಲ."

ನೀಲಮಣಿ ಅಂದ : "ಅಸಾಧ್ಯ."

ಯಾದವ ನಕ್ಕು ಹೇಳಿದ: "ನಾ ಹೇಳುತ್ತೇನೆ. ಯಾರಿಗೂ ಈ ಸಾರೆ ಹುಚ್ಚು ಹಿಡಿದಿಲ್ಲ."

ನೀಲಮಣಿ ದಿಗ್ಗನೆದ್ದ.

"ನಿನ್ನೆ ಮೊನ್ನೆಯ ಹುಡುಗರು ನೀವು. ನಿಮ್ಮ ಮಾತಿಗೆ ಬೆಲೆ ಕೊಡಲಾದೀತೆ? ನೀವು ಹೇಳುತ್ತೀರಿ ಅಂತ ಅನಾದಿಯಿಂದ ನಡೆದು ಬಂದದ್ದು ಬದಲಾಗುತ್ತದೆಯೆ ? ಖಂಡಿತ ಒಬ್ಬರಲ್ಲ ಒಬ್ಬರಿಗೆ ಹುಚ್ಚು ಹಿಡಿದಿರಲೇಬೇಕು. ಇನ್ನೂ ಹೊರಬಿದ್ದಿಲ್ಲ, ಇಷ್ಟೆ."

ಯಾದವ ನಕ್ಕು ಸುಮ್ಮನಾದ.

೩

ಮರುದಿನವೂ ಯಾರಿಗೂ ಹುಚ್ಚುಹಿಡಿದದ್ದು ಗೊತ್ತಾಗಲಿಲ್ಲ.

ಸನಾತನಪುರ ನಿವಾಸಿಗಳಿಗೆ ಒಳಗೊಳಗೇ ಅಂಜಿಕೆ ಮೂಡಿತು. ಖಂಡಿತವಾಗಿ ಏನೋ ಅಮಂಗಲವಾಗಲಿದೆ. ನಿಜವಾಗಿ ಈ ವರ್ಷ ಯಾರಿಗೂ ಹುಚ್ಚು ಹಿಡಿಯಲಿಲ್ಲ. ಕಂಡಕಂಡವರು ಕಂಡಕಂಡಂತೆ ಆಡಿಕೊಂಡರು. ಹೀಗೇನಾದರೂ ಆದೀತೆಂದು ತಮಗೆ ಮೊದಲೇ ಅನಿಸಿತ್ತೆಂದು ಹೆಂಗಸರು ಹೇಳಿದರು. ವರ್ಷಕ್ಕೊಂದು ದಿನ ಜಂಗುಳಿ ಕೂಡಿ ಗದ್ದಲ ಹಾಕಿಬಿಟ್ಟರೆ ತೀರಿತೆ? ಉಳಿದ ಮುನ್ನೂರಾ ಅರುವತ್ತುನಾಲ್ಕು

ದಿನ ಮಹಾದೇವನ ತಲೆಯ ಮೇಲೊಂದು ಥಾಲಿ ನೀರು ಕೂಡ ಬೀಳುವುದಿಲ್ಲ. ಮಹಾದೇವನಾದ್ದರಿಂದಲೇ ಇಷ್ಟು ದಿನ ಸುಮ್ಮನಿದ್ದ. ಆದರೆ ಇನ್ನೆಷ್ಟು ದಿನ ಸಹಿಸಬೇಕಾತ? ಮಹತೋಭಾರ ಹಾಲದಾರ ಮಹಾಶಯರ ಅಭಿಪ್ರಾಯದಲ್ಲಿ ಇದೆಲ್ಲ ಮತ್ತೇನೂ ಅಲ್ಲ, ಕೇವಲ ಕಲಿ ಪ್ರಭಾವ. ಕಲಿ ತನ್ನ ಪ್ರತಾಪ ತೋರಿಸದೆ ಬಿಡುವನೆ? ಸನಾತನ ಪುರದ ಮಹಾದೇವನಾದ್ದರಿಂದಲೇ ಇಷ್ಟು ಕಾಲ ತನ್ನ ಪ್ರತಾಪವನ್ನು ಸಜೀವವಾಗಿಟ್ಟಿದ್ದ. ಇನ್ನಾವ ಮಹಾದೇವನಾಗಿದ್ದರೆ ಎಂದೋ ನೆಲ ಕಾಣಬಹುದಿತ್ತು. ಉದಾಹರಣೆಗಾಗಿ ಅವರು ಅನೇಕ ಮಹಾದೇವರ ಅಧಃಪತನದ ವಿವರಗಳನ್ನು ಕೊಟ್ಟರು. ಮುಖರ್ಜಿಯವರ ಅಭಿಮತದಲ್ಲಿ ಇದಕ್ಕೆಲ್ಲ ಪೂಜಾರಿಯೇ ಕಾರಣ. ಆ ಮಗನೇ ಏನೋ ಕಿಡಿಗೇಡಿತನ ಮಾಡಿರಬೇಕು. ಪೂಜಾರಿ ಚೌಧುರಿಗಳಿಗೆ ಶರಣು ಹೋಗಿ ಆತ್ಮರಕ್ಷಣೆ ಮಾಡಿಕೊಳ್ಳಲನುವಾದ. ಹೇಳಲರಿಯದ ಯಾವುದೋ ವಿಪತ್ತಿನ ಶಂಕೆಯಿಂದ ಸನಾತನಪುರದವರೆಲ್ಲರೂ ಆತಂಕಗೊಂಡರು.

೪

ನಿಶ್ಶಂಕನಾಗಿದ್ದವನೆಂದರೆ ದೃಢ ವಿಶ್ವಾಸಿಯಾದ ನೀಲಮಣಿ ಮಾತ್ರ.

ಯಾರಾದರೊಬ್ಬರಿಗೆ ಹುಚ್ಚು ಹಿಡಿದಿರಲೇಬೇಕು. ಇವರಿಂದ ಹುಡುಕಿತೆಗೆಯುವುದಾಗಿಲ್ಲ ಎಂಬುದೆ ಅವನ ನಂಬಿಕೆ. ಸನಾತನಪುರದ ಪುರಾತನ ಮಹಾದೇವನ ಮಹಿಮೆ ಕುಂದಿದೆಯೆ? ಸರ್ವಥಾ ಇಲ್ಲ.

ದಾರುಣ ಮಧ್ಯಾಹ್ನ. ವೈಶಾಖದ ಮಧ್ಯಾಹ್ನ.

ಪ್ರಖರ ಬಿಸಿಲು ದಿಕ್ಕುದಿಕ್ಕಿಗೂ ವ್ಯಾಪಿಸಿದೆ. ಮನೆಮನೆಯ ಬಾಗಿಲು ಕಿಡಿಕಿಗಳು ಮುಚ್ಚಿವೆ. ನೀಲಮಣಿ ಮಾತ್ರ ಬೀದಿಬೀದಿ ಅಲೆಯುತ್ತಿದ್ದಾನೆ. ಅವನ ಕಣ್ಣುಗಳು ಕೆಂಪೇರಿವೆ. ಮೂಗು ಅರಳಿದೆ. ಮನೆಮನೆಗೂ ಹೋಗಿ ಆತ ವಿಚಾರಿಸುತ್ತಿದ್ದಾನೆ: "ಹುಚ್ಚ ಎಲ್ಲಿ ಹೋದ? ಅವನನ್ನು ಹುಡುಕಿ ತೆಗೆಯಲೇಬೇಕು."

ಈಗ ಸನಾತನ ಪುರನಿವಾಸಿಗಳು ಸಮಾಧಾನದ ನಿಟ್ಟುಸಿರುಗರೆದರು.

ಜಾಗ್ರತ ಮಹಾದೇವನ ಮಹಿಮೆ ಜಾಗ್ರತವಾಗಿಯೆ ಇದೆ ಎಂದು. *

## ತಕ್ಕ ಉತ್ತರ

ಮುಂದೆ ಅಪ್ರತಿಮ ವಕೀಲರಾಗಲಿದ್ದ ದೇಶಬಂಧು ಚಿತ್ತರಂಜನ ದಾಸರು ಆಗ ನೌಕರಿಗಾಗಿ ಅಲೆದಾಡುತ್ತಿದ್ದರು. ಒಮ್ಮೆ ಅವರು ಒಬ್ಬ ದೊಡ್ಡ ಅಧಿಕಾರಿಯ ಹತ್ತಿರ ಹೋಗಿ "ನಾನು ಬಿ. ಎ. ವರೆಗೆ ಓದಿದ್ದೇನೆ. ಯಾವುದಾದರೂ ಒಂದು ನೌಕರಿ ಕೊಡಬೇಕು" ಎಂದು ವಿನಂತಿಸಿಕೊಂಡರು. ಆ ಅಧಿಕಾರಿ ಕುಟಿಲ ವ್ಯಂಗ್ಯದಿಂದ "ಈಗ ನಾವು ಯಾರಿಗೆ ನೌಕರಿ ಕೊಟ್ಟಿದ್ದೇವೆಯೋ ಅವನು ನಿನಗಿಂತಲೂ ಯೋಗ್ಯನಾಗಿದ್ದಾನೆ. ಏಕೆಂದರೆ, ನೀನು ಕೇವಲ ಬಿ. ಎ. ವರೆಗೆ ಓದಿರುವಿ, ಆದರೆ ಅವನು ಬಿ. ಎ. ನಾಪಾಸು ಆಗಿದಾನೆ," ಎಂದು ಉತ್ತರಿಸಿದನು.

ಆಗ ಚಿತ್ತರಂಜನ ದಾಸರು ಅತ್ಯಂತ ವಿನಯದಿಂದ ಕೇಳಿದರು: "ಸಾಹೇಬರೇ, ನಾನೂ ಪರೀಕ್ಷೆಗೆ ಕುಳಿತರೆ ಅವನಂತೆ ನಾಪಾಸು ಆಗಲಿಕ್ಕಿಲ್ಲವೆ?.."

ಸಂಗ್ರಾಹಕ: ಪಿ. ಎಮ್. ಗಲಗಲಿ

# ಬಾಯಿಯ ದುರ್ಗಂಧವನ್ನು ಕಾಲ್ಗೇಟಿನಿಂದ ತೊಲಗಿಸಿರಿ

ಅದರೊಂದಿಗೆ ದಿನವಿಡೀ

# ದಂತಕ್ಷಯವನ್ನು ಇದಿರಿಸಿರಿ !





ನಿಮಗೆ ಹಲ್ಲುಪುಡಿ ಹೆಚ್ಚು ಇಷ್ಟವಾಗಿದ್ದರೆ ಈ ಎಲ್ಲಾ ಪ್ರಯೋಜನಗಳನ್ನು ಕಾಲ್ಗೇಟ್ ಟೂತ್ ಪೌಡರ್‌ನಿಂದಲೂ ಪಡೆಯಿರಿ... ಒಂದು ಡಬ್ಬಿ ಹಲವು ತಿಂಗಳುಗಳವರೆಗೆ ಸಾಕಾಗುವುದು !

ಏಕೆಂದರೆ : ಕಾಲ್ಗೇಟ್ ಡೆಂಟಲ್ ಕ್ರೀಮ್‌ನೊಂದಿಗೆ ಒಮ್ಮೆ ಹಲ್ಲುಜ್ಜುವುದರಿಂದ ಬಾಯಿಯಲ್ಲಿ ದುರ್ಗಂಧವನ್ನುಂಟುಮಾಡುವ ಹಾಗೂ ಹಲ್ಲುಗಳನ್ನು ಕ್ಷಯಿಸುವ ಶೇಕಡ 85ರಷ್ಟು ಕ್ರಿಮಿಗಳು ನಾಶವಾಗುತ್ತವೆ.

ಊಟವಾದೊಡನೆ ಕಾಲ್ಗೇಟ್‌ನಿಂದ ಹಲ್ಲುಜ್ಜುವುದರಿಂದ ದಂತಮಂಜನಗಳ ಇತಿಹಾಸದಲ್ಲೇ ಹಿಂದೆಂದೂ ಆಗದಷ್ಟು ಅಧಿಕ ಜನರ ದಂತಕ್ಷಯವನ್ನು ಅಧಿಕ ಪ್ರಮಾಣದಲ್ಲಿ ತಡೆಗಟ್ಟಲು ಸಾಧ್ಯವಾಗುತ್ತದೆ. ಇದಲ್ಲದೆ ಕಾಲ್ಗೇಟ್‌ನಿಂದ 10ರಲ್ಲಿ 7 ಸಂದರ್ಭಗಳಲ್ಲಿ ಬಾಯಿಯ ದುರ್ಗಂಧವು ಕೂಡಲೇ ನಿವಾರಿಸಲ್ಪಡುತ್ತದೆ. ಈ ಎರಡು ಪ್ರಮಾಣಗಳನ್ನು ಕಾಲ್ಗೇಟ್ ವೈಜ್ಞಾನಿಕ ಪರೀಕ್ಷೆಗಳ ಮುಖೇನ ಸಿದ್ಧಗೊಳಿಸಿರುತ್ತದೆ. ಕಾಲ್ಗೇಟಿಗೆ ಮಾತ್ರ ಈ ಪ್ರಮಾಣವಿದೆ!

ಊಟವಾದ ಮೇಲೆ ಬರೇ ಬಾಯಿ ಮುಕ್ಕಳಿಸುವುದರಿಂದ ಪ್ರಯೋಜನವಾಗಲಾರದು ಪ್ರತಿ ಊಟದ ಮೇಲೆ ತಪ್ಪದೆ ನಿಮ್ಮ ಹಲ್ಲುಗಳನ್ನು ಕಾಲ್ಗೇಟಿನಿಂದ ಉಜ್ಜಿರಿ. ಇದರ ಪ್ರಬಲವಾದ, ಸಂದು ಸಂದುಗಳಿಗೆ ಒಳನುಗ್ಗುವ ನೊರೆಯು ಅಗೋಚರವಾದ ಹಲ್ಲುಗಳ ನಡುವಿನ ಸಂದುಗಳಿಗೆ ಹೊಕ್ಕು ನಿಮ್ಮ ಬಾಯಿಯ ದುರ್ಗಂಧಕ್ಕೂ, ಹಲ್ಲುಗಳ ಕ್ಷಯಿಸುವಿಕೆಗೂ ಕಾರಣವಾದ ಆ ಕೊಳೆಯುತ್ತಿರುವ ಆಹಾರ ಕಣಗಳನ್ನು ನಿವಾರಿಸಿ ಸ್ವಚ್ಛಗೊಳಿಸುವುದು.

ಮಕ್ಕಳಿಗೆ ಕಾಲ್ಗೇಟಿನಿಂದ ಹಲ್ಲುಜ್ಜುವುದೆಂದರೆ ತುಂಬಾ ಪ್ರೀತಿ, ದೀರ್ಘಕಾಲ ಉಳಿಯುವ ಅದರ ನೈಜ್ಜ ಪೆಪರ್‌ಮಿಂಟ್ ಸ್ವಾದವು ಇದರಲ್ಲಿ ಕೂಡಿರುತ್ತದೆ.




ಕಾಲ್ಗೇಟಿನಿಂದ ತಪ್ಪದೆ ಹಲ್ಲುಜ್ಜುವುದರಿಂದ

- ✔ ಬಾಯಿಯ ದುರ್ಗಂಧವು ನಿವಾರಿಸಲ್ಪಡುತ್ತದೆ
- ✔ ದಂತಕ್ಷಯವನ್ನು ವಿರೋಧಿಸಲಾಗುವುದು
- ✔ ಹಲ್ಲುಗಳು ಪರಿಶುಭ್ರವಾಗಿ ಉಳಿಯುವವು

ಬಾಯಿಯ ದುರ್ಗಂಧವನ್ನು ನಿವಾರಿಸಲು ಮತ್ತು ಹಲ್ಲುಗಳು ಶುಭ್ರವಾಗಿರಲು...ಹೆಚ್ಚಿಗೆ ಜನರು ಪ್ರಪಂಚದ ಇನ್ನಿತರ ಡೆಂಟಲ್ ಕ್ರೀಮ್‌ಗಳಿಗಿಂತ ಅಧಿಕವಾಗಿ ಕಾಲ್ಗೇಟನ್ನೇ ಕೊಂಡುಕೊಳ್ಳುತ್ತಾರೆ



೩೦೦ ವರ್ಷಗಳ ಹಿಂದಿನ ಒಂದು ಆಖ್ಯಾಯಿಕೆ

# ಚಾರ್ನಕನ ಅ-ಸತಿ ಹಿಂದೂ ಮಡದಿ

ಲಾವಣ್ಯ ಪ್ರಭಾ ರಾಯ್

ನೀಲ ಸಮುದ್ರದಿಂದ ಸುತ್ತುವರಿಯಲ್ಪಟ್ಟ ಇಂಗ್ಲಂಡಿನ ನೈಸರ್ಗಿಕ ವಾತಾವರಣದಲ್ಲಿ ಬೆಳೆದ ಜಾಬ್ ಚಾರ್ನಕನ ಸ್ವಪ್ನಮಯ ನೀಲಿ ಕಣ್ಣುಗಳಲ್ಲಿ ಅಪಾರ ಧನಸಂಪತ್ತನ್ನು ಗಳಿಸಬೇಕೆಂಬ ದುರ್ದಮನೀಯವಾದ ಆಕಾಂಕ್ಷೆ ಬೆಳಗುತ್ತಿತ್ತು. ಈ ಮಹತ್ವಾಕಾಂಕ್ಷೆಯಿಂದಲೇ ಬ್ರಿಟಿಶರ ಯುದ್ಧ ಹಡಗುಗಳು ಹಿಂದುಸ್ತಾನದ ಬಂದರಗಳಿಗೆ ಬಂದಿದ್ದವು. ಆಗ ಮೊಗಲ ಬಾದಶಾಹ ಶಾಹಂಶಾಹ ಔರಂಗಜೇಬನಿಗೆ ಇಳಿಗಾಲ ಪ್ರಾಪ್ತವಾಗಿತ್ತು. ಮುದಿ ಸಿಂಹದ ಟೊಂಕ ಬಾಗಿತ್ತು; ಒಳಿತು ಕೆಡಕುಗಳ ತಾರತಮ್ಯ ಜ್ಞಾನ ಉಳಿದಿರಲಿಲ್ಲ. ಬ್ರಿಟಿಶ್ ವ್ಯಾಪಾರಿಗಳಿಗೆ ಹಿಂದುಸ್ತಾನದಲ್ಲಿ ವ್ಯಾಪಾರ ಮಾಡಲು, ಅಲ್ಲಲ್ಲಿ ವಖಾರಗಳನ್ನು ಕಟ್ಟಿಕೊಳ್ಳಲು ಆತ ಅಪ್ಪಣೆಯನ್ನಿತ್ತಿದ್ದ. ಬಂಗಾಲ ಪ್ರಾಂತದ ಸುತಾನುಟಿ ಎಂಬ ಊರಿನಲ್ಲಿ ಬ್ರಿಟಿಶರ ಮೊದಲನೆಯ ವಖಾರ ಕಟ್ಟಲ್ಪಟ್ಟಿತ್ತು. ಈ ಮೊಟ್ಟಮೊದಲನೆ ಬ್ರಿಟಿಶ್ ವಖಾರವನ್ನು ಸುತಾನುಟಿಯಲ್ಲಿ

• ಧರ್ಮಯುಗ • ದಿಂದ

ಕಟ್ಟಿದಾತ ಜಾಬ್ ಚಾರ್ನಕನೇ.

ಸುತಾನುಟಿಯಲ್ಲಿ ತನ್ನ ಪ್ರಸ್ಥವನ್ನು ಬೆಳೆಸಿಕೊಂಡ ಬಳಿಕ ಚಾರ್ನಕ್ ಗಂಗಾತೀರದಲ್ಲಿ ಇನ್ನೂ ಕೆಲ ವಖಾರಗಳನ್ನು ಕಟ್ಟಿಸಿದನು. ಸುತಾನುಟಿಯಿಂದ ತುಸು ಅಂತರದಲ್ಲಿ ಇನ್ನೊಂದು ವಖಾರವನ್ನು ಕಟ್ಟಿಕೊಂಡು ಚಾರ್ನಕನು ಡಾಕ್ಕಾ ನಗರದ ಜಗತ್ಪ್ರಸಿದ್ಧ ಮಸಲಿನ್ ಬಟ್ಟೆ ಮತ್ತು ಇನ್ನೂ ಹಲವಾರು ಬಗೆಯ ಸಾಮಾನುಗಳ ವ್ಯಾಪಾರವನ್ನು ಬಲು ಜೋರಾಗಿ ನಡೆಸಿದ. ಅವಿವಾಹಿತನಾಗಿದ್ದ ಈ ಸುಂದರ ತರುಣನಲ್ಲಿ ಆ ಸಮಯದಲ್ಲಿ ಯೌವನಸಹಜವಾದ ಯಾವ ಬಗೆಯ ವಿಲಾಸಕಲ್ಪನೆ ಕೂಡ ಇರಲಿಲ್ಲ.

ಯಾವ ಹಬ್ಬವೋ ತಿಳಿಯದು- ಈ ವಖಾರಕ್ಕೆ ತುಸುವೇ ದೂರದಲ್ಲಿ ಗಂಗಾತೀರದ ಮಳಲ ಬಯಲಲ್ಲಿ ಜಾತ್ರೆಯೊಂದು ನೆರೆದಿತ್ತು. ನಾನಾ ವಿಧವಾದ ಜನರಿಂದ, ಬಗೆಬಗೆಯ ಸಾಮಾನುಗಳಿಂದ ತುಂಬಿದ್ದ ಅಂಗಡಿಗಳಿಂದ, ಬಿರುಸಾದ ವ್ಯಾಪಾರದಿಂದ, ಕಣ್ಮನಗಳನ್ನು ಸೆಳೆಯುವ ಹಲವಾರು ಬಗೆಯ ವಸ್ತುಗಳಿಂದ ಜಾತ್ರೆ ಕಳೆಗಟ್ಟಿತ್ತು. ಮುದುಕರು, ತರುಣರು, ಮಕ್ಕಳು, ಹೆಂಗಸರು ಕಿಕ್ಕಿರಿದು ನೆರೆದಿದ್ದರು. ಕೈಮೇಲೆ ಏನೂ ಕೆಲಸವಿಲ್ಲದೆ ಕುಳಿತಿದ್ದ ಚಾರ್ನಕನಿಗೆ ಜಾತ್ರೆಯನ್ನು ನೋಡಿ ಬರೋಣವೆಂಬ ಅಭಿಲಾಷೆ ಹುಟ್ಟಿ ಆತ ಅತ್ತ ಹೊರಟ. ಅವನ ವಿಧಿಯೆ ಅವನಲ್ಲಿಂದು ಈ ಪ್ರೇರಣೆಯನ್ನುಂಟು ಮಾಡಿತೊ ಏನೊ !

ಜಾತ್ರೆಯಲ್ಲಿ ಚಾರ್ನಕ್ ಅತ್ತಿತ್ತ ಅಲೆದಾಡುತ್ತಿದ್ದ. ಒಂದು ಅಂಗಡಿಯ ಎದುರು ಹೆಂಗಸರ ಗುಂಪೊಂದು ನೆರೆದಿತ್ತು. ಅಲ್ಲಿಂದ ಹೋಗಬೇಕೆಂದು ಮಾಡಿದರೂ ಚಾರ್ನಕನ ಕಾಲುಗಳು ಆ ಸ್ಥಳ ಬಿಟ್ಟು ಕದಲಲಿಲ್ಲ. ಅವನೆದುರಿನಲ್ಲಿ ಆ ಹೆಂಗಳೆಯರ ಗುಂಪಿನಲ್ಲಿ ಒಬ್ಬ ಹುಡುಗಿ ಇದ್ದಳು. ಅವಳು ಕಿಶೋರಿಯೋ ತರುಣಿಯೋ ಎಂಬುದು ಕೂಡ ಚಾರ್ನಕನಿಗೆ ತಿಳಿದಿರಲಿಲ್ಲ. ಅವನ ಮುಗ್ಧ ದೃಷ್ಟಿ ಆ ಹುಡುಗಿಯ ವಿಶಾಲ ಮಾಯಾವಿ ಕೃಷ್ಣ ನೇತ್ರಗಳಲ್ಲಿ ನೆಲೆಸಿಬಿಟ್ಟಿತ್ತು. ಸ್ತ್ರೀಯ ಕಪ್ಪು ಕಣ್ಣುಗಳಲ್ಲಿ ಇಷ್ಟೊಂದು ಸೌಂದರ್ಯವಡಗಿರುವುದೇ ಎಂದು ಅವನ ನೀಲಿ ಕಣ್ಣುಗಳು ಆಶ್ಚರ್ಯದಿಂದ ಇನ್ನಿಷ್ಟು ನೀಲಿಯಾದವು. ಹುಡುಗಿಯ ಕಣ್ಣುಗಳ ಮೋಹಜಾಲದಲ್ಲಿ ಸಿಕ್ಕಿಬಿದ್ದಿದ್ದ ಅವನ ದೃಷ್ಟಿ ಈಗ ಅವಳ ತುಟಿಗಳ ಮೇಲಿಳಿಯಿತು. ಅಹಾ ! ಎಂಥ ಮಧುರ ರಸಭರಿತ ರಕ್ತವರ್ಣದ ತುಟಿಗಳು ! ಕಾಮನಬಿಲ್ಲುಗಳೋಪಾದಿಯಲ್ಲಿದ್ದ ಎರಡು ಹುಬ್ಬುಗಳ ನಡುವೆ ಚಂದನದ ಬೊಟ್ಟು ಹೊಳೆಯುತ್ತಲಿತ್ತು. ಮೆಹಂದಿಯಿಂದ ಕೆಂಪು ಬಣ್ಣ ತಾಳಿದ್ದ ಕಾಲುಗಳಲ್ಲಿ ಬೆಳ್ಳಿಯ ನೂಪುರಗಳಿದ್ದವು. ಅವಳು ಒಂದಿಷ್ಟು ಚಲನವಲನಗೈದರೂ ಸಾಕು, ಅವುಗಳ ಗೆಜ್ಜೆಗಳು ಮಧುರ ನಿನಾದವನ್ನು ಹೊರಡಿಸುತ್ತಿದ್ದವು. ಚಾರ್ನಕನ ನೀಲಿ ಕಣ್ಣುಗಳು ಇದುವರೆಗೆ ಏನೇನನ್ನೆಲ್ಲ ನೋಡಿದ್ದರೂ ಇಂಥ ಮಧುರ ಸುಂದರ ರೂಪವನ್ನು ಕಂಡಿರಲಿಲ್ಲ.

ಚಾರ್ನಕನ ನೆಟ್ಟ ದೃಷ್ಟಿಯ ಆಕರ್ಷಣೆಯಿಂದಲೇ ಇರಬೇಕು, ಹುಡುಗಿ ಕೂಡ ಕಣ್ಣೆತ್ತಿ ಆತನತ್ತ ನೋಡಿದಳು ನೋಡಿದ್ದೇ, ಆಕೆ ಕೂಡ ಎಲ್ಲವನ್ನು ಮರೆತು ಅವನನ್ನೇ ನೋಡುತ್ತ ನಿಂತಳು. ಅವಳು ಕೂಡ ಈ ಮೊದಲು ಇಂಥ ವಿಚಿತ್ರ ಉಡುಪು, ವಿಚಿತ್ರ ರೂಪ, ವಿಚಿತ್ರ ನೀಲಿ ಕಣ್ಣುಗಳ ಮೋಹಕ ದೃಷ್ಟಿಯನ್ನು ಕಂಡಿರಲಿಲ್ಲ. ಈ ವಿದೇಶೀಯ ತರುಣ ಯಾವ ದೇಶದ, ಯಾವ ರಾಜ್ಯದ ರಾಜಕುಮಾರನಾಗಿರಬಹುದು? ಎಲ್ಲಿಂದ, ಹೇಗೆ ಇಲ್ಲಿಗೆ ಬಂದ? ಅಹಾ ! ಕಣ್ಣುಗಳೆಂದರೆ ನೀಲ ಮಣಿಗಳೇ ಸರಿ. ಬಿಳಿಯ ಬಣ್ಣದ ದೇಹಕ್ಕೆ ಬಂಗಾರ ಬಣ್ಣದ ಕೂದಲು ಮೆರುಗನ್ನು ತಂದಿತ್ತು. ಅಲ್ಲಾ, ಈತನೇನಾದರೂ ಆಕಾಶದಲ್ಲಿಯ ತನ್ನ ರಥವನ್ನು ಬಿಟ್ಟು ಪೃಥ್ವಿಗಿಳಿದು ಬಂದಿರುವ ಅರುಣದೇವನಿರಬಹುದೆ ?

ನಾಲ್ಕೂ ಕಣ್ಣುಗಳು ಕೂಡಿದಾಗ ಹುಡುಗಿ ನಾಚಿದಳು. ಅವಳ ಶಿರ ಬಾಗಿತು. ಅವಳ ತಲೆ

ಬಾಗಿದೊಡನೆ ಚಾರ್ನಕನಿಗೆ ಅಡವಿಯ ನಡುವೆ ಹಾಯ್ದು ಹೋಗುವ ಕೆಂಪು ಮಣ್ಣಿನ ರಸ್ತೆಯಂತೆ ಅವಳ ಕಪ್ಪು ಕೂದಲಿನ ನಡುವೆ ಒಂದು ಕೆಂಪು ಗೆರೆ ಕಾಣಿಸಿತು. ಕೂದಲಿನ ನಡುವೆ ಇರುವ ಈ ಕೆಂಪು ಗೆರೆಯ ಅರ್ಥವನ್ನು ಚಾರ್ನಕ್ ಬಲ್ಲ. ಸತ್ಯ ತಿಳಿದರೂ ಅವನ ಮನಸ್ಸು ಅದನ್ನೊಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಇಂಥ ಮೋಹಕ ಮೂರ್ತಿಯನ್ನು ಯಾರು ತಾನೆ ಧಿಕ್ಕರಿಸಬಲ್ಲರು? ಚಾರ್ನಕನ ಮನಸ್ಸು ಅಧೀರತೆಯಿಂದ ವ್ಯಗ್ರವಾಗಿ ಪುಟಿದೆದ್ದಿತು. ಆತ ಎಲ್ಲವನ್ನೂ ಮರೆತು ಆ ರೂಪಸುಧೆಯನ್ನು ಹೀರುತ್ತ ನಿಂತುಬಿಟ್ಟ.

ಆ ಕಿಶೋರಿಯ ಮನದಲ್ಲೂ ಕುತೂಹಲ ಚಿಗಿದೆದ್ದಿತ್ತು. ಬೇಡ ಬೇಡವೆಂದುಕೊಂಡರೂ ಈ ವಿದೇಶಿ ತರುಣನ ಬಗ್ಗೆ ಅವಳ ಮನದಲ್ಲಿ ಆಕರ್ಷಣೆ ಮೂಡಿತು. ಅವಳ ಲಗ್ನವಾಗಿತ್ತು. ಪರಪುರುಷನಲ್ಲಿ ಹೀಗೆ ಆಕರ್ಷಿತಳಾಗುವುದೆಂದರೆ ಘೋರ ಪಾಪವೇ. ಅವಳಿಗದು ಅತ್ಯಂತ ನಾಚಿಕೆಗೇಡಿನ ಮಾತೂ ಆಗಿತ್ತು. ಹಾಗಿದ್ದರೂ ಅವಳ ಮನದಲ್ಲಿ ವಿದ್ರೋಹದ ತೆರೆಯೆದ್ದಿತ್ತು.

ಪರಪುರುಷ? ಈ ವಿದೇಶೀ ತರುಣ ಪರಪುರುಷನಾದರೆ ಅವಳ ಪುರುಷ, ಪತಿ, ಎಲ್ಲಿದ್ದಾನೆ, ಹೇಗಿದ್ದಾನೆ? ಅವಳ ಮನಸ್ಸಿನಲ್ಲಿ ಅವಳ ಪತಿಯ ಅಸ್ಪಷ್ಟ ಛಾಯೆ ಕೂಡ ಇದ್ದಿರಲಿಲ್ಲ ಲಗ್ನವೆ? ಅಲ್ಲ. ಅದೊಂದು ಅವಳ ಅಜ್ಞಾನಪೂರ್ಣ ಬಾಲ್ಯ ಜೀವನದಲ್ಲಿ ಆಡಿದ ನಿರ್ದಯ ಪರಿಹಾಸದ ಆಟವಾಗಿತ್ತು, ಅಷ್ಟೆ. ಇಪ್ಪತ್ತು ವರ್ಷಗಳ ಹಿಂದಿನ ಮಾತು. ಆಗವಳು ಇನ್ನೂ ಮೂರು ವರ್ಷದ ಹಸುಳೆ. ಕೇವಲ ಕುಲೀನ ಮನೆತನದವ ಎಂಬೊಂದು ಅರ್ಹತೆಯನ್ನು ಬಿಟ್ಟರೆ ಇನ್ನಾವ ಅರ್ಹತೆಯೂ ಇಲ್ಲದ ಅಪರಿಚಿತ ಬ್ರಾಹ್ಮಣನೋರ್ವನೊಡನೆ ಅವಳ ಲಗ್ನವನ್ನು ಮಾಡಿಬಿಟ್ಟಿದ್ದರು. ಲಗ್ನವಾದ ದಿನವೇ ಸಂಜೆ ಅವಳನ್ನು ಬಿಟ್ಟು ಹೊರಟು ಹೋಗಿದ್ದ ಅವಳ ಗಂಡ ತಿರುಗಿ ಒಮ್ಮೆಯೂ ಅವಳಿಗೆ ಮುಖ ತೋರಿಸಿರಲಿಲ್ಲ. ತನ್ನ ಸಮಾಚಾರವನ್ನೂ ತಿಳಿಸಿರಲಿಲ್ಲ. ಹೀಗಿರುವಾಗ ಈ ಅಪರಿಚಿತ ವಿದೇಶೀ ಯುವಕನನ್ನು ಕಂಡಾಗ ಅವಳಲ್ಲಿ ಆಕರ್ಷಣೆ ಮೂಡಿದರೆ ಅದು ಪಾಪ ಹೇಗಾದೀತು? ಅವಳ ಮನಸ್ಸು ದಾರುಣವಾದೊಂದು ವ್ಯಥೆಯಿಂದ ರೋದಿಸಿತು. ಈ ವಿದೇಶೀ ಯುವಕನ ಮೋಹಕ ದೃಷ್ಟಿಗೆ ಮಾರುಹೋಗಿ ತಾನು ತನ್ನ ಮನವನ್ನು ಅವನಿಗೆ ಅರ್ಪಿಸಿಬಿಟ್ಟಿದ್ದೇನೆ ಎಂದವಳು ಮನಸ್ಸಿನಲ್ಲಿಯೆ ಒಪ್ಪಿಕೊಳ್ಳಬೇಕಾಗಿ ಬಂತು.

ಆ ತರುಣಿಯ ಹೆಸರು ಲೀಲಾ ಎಂದು. ಅವಳೊಬ್ಬ ಶ್ರೀಮಂತ ಬ್ರಾಹ್ಮಣನ ಮಗಳು. ಪ್ರತಿನಿತ್ಯ ಮುಂಜಾನೆ ಮೇಣೆಯಲ್ಲಿ ಕುಳಿತು ಅವಳು ಗಂಗಾಸ್ನಾನಕ್ಕಾಗಿ ಹೋಗುತ್ತಿದ್ದಳು. ಅವಳ ಈ ನಿತ್ಯಕ್ರಮವನ್ನು ಪತ್ತೆ ಹಚ್ಚಿದ ಚಾರ್ನಕ್. ಆ ಮೇಲೆ ಆರಂಭವಾಯಿತು ರೋಮಾಂಚಕಾರಿಯಾದ, ವಿಚಿತ್ರವಾದ ಒಂದು ಪ್ರಣಯಾರಾಧನೆ. ನಿತ್ಯವೂ ಯಾವ ಹಾದಿಯಿಂದ ಲೀಲಾಳ ಮೇಣೆ ಹೋಗುತ್ತಿತ್ತೊ ಆ ಹಾದಿಯ ಪಕ್ಕದಲ್ಲಿ ಚಾರ್ನಕ್ ಅವಳ ಆಗಮನವನ್ನು ನಿರೀಕ್ಷಿಸುತ್ತ ನಿಲ್ಲತೊಡಗಿದ. ಮೇಣೆಯ ಅರ್ಧ ತೆರೆದ ಬಾಗಿಲಿಂದ ಒಂದು ಸುಂದರ ಮುಖ ಹೊರಗಿಣಿಕುತ್ತಿತ್ತು. ಕೆಲ ಕ್ಷಣ ನಾಲ್ಕೂ ಕಣ್ಣುಗಳು ಸಂಧಿಸುತ್ತಿದ್ದವು. ಬರಬರುತ್ತ ಈ ದೃಷ್ಟಿಮಿಲನ ಇಬ್ಬರ ಜೀವನಕ್ಕೂ ಆಧಾರವಾಗಿಬಿಟ್ಟಿತು. ಚಾರ್ನಕನಿಗಂತೂ ಅಮಲೇರಿದಂತಿತ್ತು. ಲೀಲಾಳನ್ನು ನೋಡದೆ ಅವನ ಮನಸ್ಸು ಶಾಂತವಾಗುತ್ತಿರಲಿಲ್ಲ. ದಿನಗಳು, ವಾರಗಳು, ತಿಂಗಳುಗಳು ಕಳೆದುಹೋದವು. ಒಂದು ದಿನವಾದರೂ ಈ ದೃಷ್ಟಿಮಿಲನ ತಪ್ಪಲಿಲ್ಲ.

ಆದರೆ ಅಂಥ ಒಂದು ದಿನ ಬಂತು. ಅಂದು ಮುಂಜಾನೆಯಿಂದಲೂ ಅಧೀರನಾಗಿ ಲೀಲಾಳ ಆಗಮನವನ್ನು ಕಾಯುತ್ತ ನಿಂತಿದ್ದ ಚಾರ್ನಕ್. ಆದರೆ ಎಷ್ಟು ಹೊತ್ತಾದರೂ ಮೇಣೆ ಬರಲಿಲ್ಲ. ನಿರಾಶನಾದ ಚಾರ್ನಕ್ ಭಾರವಾದ ಹೆಜ್ಜೆಗಳ

ನ್ನೆತ್ತಿ ತಿರುಗಿ ಹೋಗತೊಡಗಿದಾಗ ಗಂಗಾ ತೀರದಲ್ಲಿ ಏನೋ ಗದ್ದಲ ನಡೆದಿರುವುದು ಅವನಿಗೆ ಕೇಳಿಸಿತು. ಜನರ ದೊಡ್ಡ ಗುಂಪೇ ನೆರೆದಿತ್ತು. ವಾದ್ಯಗಳು ಮೊಳಗುತ್ತಿದ್ದವು. ಕುತೂಹಲದಿಂದ ಆತ ಒಬ್ಬ ಹಾದಿಹೋಕನನ್ನು ವಿಚಾರಿಸಿದ. ಜಾತ್ರೆಯೇನೂ ನೆರೆದಿಲ್ಲ, ಯಾವಳೊ ಒಬ್ಬಳು 'ಸತಿ' ಹೋಗಲಿದ್ದಾಳೆಂದು ತಿಳಿಯಿತು.

ಅಲ್ಲಾ, ಎಂಥ ವಿಚಿತ್ರ ದೇಶವಿದು! ಅದಕ್ಕೂ ವಿಚಿತ್ರವಾಗಿರುವ ಈ ಹಿಂದೂ ಧರ್ಮ! ಸತಿ? ಸತ್ತ ಗಂಡನ ಚಿತೆಯಲ್ಲಿ ಜೀವಂತ ಹೆಂಡತಿ ಸುಟ್ಟು ಭಸ್ಮವಾಗುವ ಇದೆಂಥ ಭಯಾನಕ, ಘೋರ ಪದ್ಧತಿ! ಯಾರೂ ಇದನ್ನು ವಿರೋಧಿಸುವುದಿಲ್ಲವೆ? 'ಸತಿ' ಹೋಗುವ ಹೆಂಗಸಿಗೆ ತಂದೆ-ತಾಯಿ, ಬಂಧು-ಬಳಗ ಯಾರೂ ಇರುವುದಿಲ್ಲವೆ? ಇದ್ದರೆ ಅವರ ಹೃದಯ ಕಲ್ಲಿನದಾಗಿರುತ್ತದೆಯೆ?

ವಿಚಾರ ಮಾಡುತ್ತ ತನಗರಿವಿಲ್ಲದಂತೆಯೆ ಚಾರ್ನಕ್ ಸ್ಮಶಾನದತ್ತ ನಡೆದನು. ಗದ್ದಲದಲ್ಲಿ ದಾರಿ ಮಾಡಿಕೊಂಡು ಮುಂದೆ ಹೋಗಿ ನೋಡಿದ. ಒಂದೆಡೆ ಚಿತೆಯನ್ನು ಸಿದ್ಧಗೊಳಿಸುತ್ತಿದ್ದರು. ಚಂದನದ ಕಟ್ಟಿಗೆ, ತುಪ್ಪ ಮುಂತಾದವುಗಳ ರಾಶಿ ಹಾಕಿದ್ದರು. ಚಾರ್ನಕ್ ನೋಡುತ್ತಿದ್ದಂತೆಯೆ ಚಿತೆಗೆ ಅಗ್ನಿಸ್ಪರ್ಶ ಮಾಡಿದರು. ಅಲಂಕಾರಪೂರ್ಣಳಾದ ನಾರಿಯೊಬ್ಬಳು ಮುಂದೆ ನಡೆದು ಬಂದಳು. ಅವಳನ್ನು ಕಂಡ ಕೂಡಲೇ ಚಾರ್ನಕ್ ನಡುಗಿ ಬೀಳುಪೇರಿದ. ಲೀಲಾ!

ಲೀಲಾ ಇಲ್ಲೇನು ಮಾಡುತ್ತಿದ್ದಾಳೆ? ಸತಿ ಹೋಗುವವಳು ಅವಳೆಯೇ?

ಹುಚ್ಚನಂತೆ ಜನರನ್ನು ಬದಿಗೆ ಸರಿಸುತ್ತ ಚಾರ್ನಕ್ ಮುನ್ನುಗ್ಗಿದ. ನೆಟ್ಟಗೆ ಬಂದು ಲೀಲಾಳ ಸಮ್ಮುಖದಲ್ಲಿ ನಿಂತ. ಲೀಲಾ ಕಣ್ಣೆತ್ತಿ ನೋಡಿದಳು. ಅವಳ ಉದಾಸ ನೇತ್ರಗಳಲ್ಲಿ ನಿಸ್ತೇಜ ಮುಗುಳ್ನಗು ಇತ್ತು. ಕೆಲ ಕ್ಷಣ ಇಬ್ಬರೂ ತಮ್ಮನ್ನೇ ಮರೆತು, ಜಗತ್ತನ್ನೆ ಮರೆತು ಪರಸ್ಪರರನ್ನು ನೋಡುತ್ತ ನಿಂತುಬಿಟ್ಟರು.

ತನ್ನ ದೃಷ್ಟಿಯನ್ನು ಮೊದಲಿಗೆ ಬೇರೆಡೆಗೆ ತಿರುಗಿಸಿದವಳು ಲೀಲಾ. ಅವಳು ಚಿತೆಯನ್ನು ದಿಟ್ಟಿಸಿ ನೋಡತೊಡಗಿದಳು. ಒಂದು ಅಜ್ಞಾತ ಮೂಕ ವೇದನೆಯಿಂದ ಚಾರ್ನಕನ ಹೃದಯ ಪೀಡಿತವಾಗಿ ಅವನ ಮನದಲ್ಲಿ ಹಾಹಾಕಾರವೆದ್ದಿತು. ಆತ ಹೆಚ್ಚಿಗೇನನ್ನೂ ಬೇಡಿರಲಿಲ್ಲ. ಬಯಸಿರಲಿಲ್ಲ. ನಿತ್ಯ ಕ್ಷಣಕಾಲದ ದರ್ಶನದಿಂದಲೆ ಸಂತುಷ್ಟನಾಗಿದ್ದ. ಇನ್ನಾತ ಈ ದೃಷ್ಟಿ ಸುಖದಿಂದಲೂ ವಂಚಿತನಾಗಲಿದ್ದ. ಎಂಥ ನಿಷ್ಠುರ ವಿಧಿ!

ಒಮ್ಮಿಂದೊಮ್ಮೆ ಗದ್ದಲವೆದ್ದಿತು. ಚಾರ್ನಕ್ ಕಣ್ಣು ಹೊರಳಿಸಿ ನೋಡಿದಾಗ ಚಿತೆಯ ಬಳಿ ಜನ ಮಾತಾಡತೊಡಗಿದ್ದರು. ಅವರ ಮಾತುಗಳನ್ನರಿತುಕೊಳ್ಳಲು ಆತ ಯತ್ನಿಸಿದ. ಪುರೋಹಿತನ ಶಬ್ದ ಕೇಳಿಸಿತು, "ಏನು? ಏನಿದು? ನೀನು ಸತಿ ಹೋಗುವುದಿಲ್ಲವೆ? ಯಾಕೆ?"

ಲೀಲಾ ಸ್ಪಷ್ಟ ಉತ್ತರ ಕೊಟ್ಟಳು: "ಯಾವ ಪತಿಯನ್ನು ನಾನೆಂದೂ ಕಾಣಲಿಲ್ಲವೊ, ಯಾವ ಪತಿಯನ್ನು ಅರಿತು ಗುರುತಿಸಲಿಲ್ಲವೊ ಅವನ ಹೆಸರಿನಲ್ಲಿ ನಾನು ಸತಿ ಹೋಗಲಾರೆ. ಒಂದು ಭ್ರಮೆಯಲ್ಲಿ ನಾನು ನನ್ನನ್ನು ಸುಟ್ಟುಕೊಳ್ಳಲಾರೆ."

ನಾಲ್ಕೂ ದಿಕ್ಕುಗಳಲ್ಲಿ ಕೋಲಾಹಲವೆದ್ದಿತು. "ಕಲಂಕಿನಿ, ದುಷ್ಟೆ, ಪತಿದ್ರೋಹಿ!" ಕೆಲವರಂತೂ ಅವಳನ್ನು ಬಲಾತ್ಕಾರದಿಂದ ಚಿತೆಗೆ ದಬ್ಬಲು ಯತ್ನಿಸತೊಡಗಿದರು. ಚೀರಾಟ, ಕೂಗಾಟ, ನೂಕುನುಗ್ಗಲು ಆರಂಭವಾಯಿತು. ಚಾರ್ನಕ್ ಇನ್ನು ಸಹಿಸದಾದ. ಕ್ರುದ್ಧವ್ಯಾಘ್ರನಂತೆ ಆತ ಗರ್ಜಿಸಿದ. ಟೊಂಕದಲ್ಲಿದ್ದ ಖಡ್ಗವನ್ನು ಹಿರಿದು ಜನಸಮೂಹದಲ್ಲಿ ನುಗ್ಗಿದ. ಸೂರ್ಯಪ್ರಕಾಶದಲ್ಲಿ ಅವನ ಖಡ್ಗ ಮಿಂಚಿತು. ಅವನ ಮತ್ತ ಗರ್ಜನೆ ಮತ್ತು ಹೊಳೆಯುತ್ತಿದ್ದ ಖಡ್ಗಕ್ಕೆ ಅಂಜಿದ ಜನ ಅತ್ತಿತ್ತ ಓಡತೊಡಗಿದರು. ಚಾರ್ನಕ್ ಲೀಲಾಳ ಎದುರು ಬಂದು ನಿಂತ.

ವ್ಯಥಿತ ನಯನಗಳ ವಿಸ್ಮಿತ ದೃಷ್ಟಿಯನ್ನೆತ್ತಿ "ನೀವು!" ಎಂದಳು ಮೆಲ್ಲಗೆ ಲೀಲಾ.

"ಹೌದು. ನಾನೇ."

"ನೀವೇತಕ್ಕೆ ಇಲ್ಲಿಗೆ ಬಂದಿರಿ?"

"ನಿನ್ನನ್ನು ಕರೆದೊಯ್ಯಲು. ನಡೆ ನನ್ನ ಸಂಗಡ."

"ನನ್ನನ್ನು? ಓರ್ವ ಪತಿದ್ರೋಹಿಯನ್ನು ಕರೆದೊಯ್ದು ಏನು ಮಾಡುವಿರಿ?"

"ದ್ರೋಹ, ಕಲಂಕ ಯಾವುದೂ ನನಗೆ ತಿಳಿಯದು. ನಾನು ನಿನ್ನನ್ನು ಪ್ರೀತಿಸುವೆ ಎಂಬುದನ್ನಷ್ಟೇ ನಾನು ಬಲ್ಲೆ. ನೀನು ಈ ರೀತಿ ಸಾಯಲು ನಾನು ಬಿಡುವುದಿಲ್ಲ," ಚಾರ್ನಕ್ ಆವೇಶದಿಂದ ಹೇಳಿದ.

ಲೀಲಾಳ ಕಣ್ಣಲ್ಲಿ ನೀರು ತುಂಬಿತು. ಅಳುತ್ತಲೇ ಅವಳು ಹೇಳಿದಳು: "ಎಲ್ಲಿಯ ವರೆಗೆಂದು ನನಗೆ ಆಶ್ರಯ ನೀಡುವಿರಿ?"

ಅತ್ಯಂತ ಭಾವಾವೇಗದಿಂದ ಅವಳ ಕೈಗಳನ್ನು ಹಿಡಿದುಕೊಂಡು ಚಾರ್ನಕ್ ಹೇಳಿದ: "ಚಿರಕಾಲದವರೆಗೆ. ಜೀವನದಲ್ಲಿ, ಜೀವನದ ಅಂತ್ಯದಲ್ಲಿ, ಸಾವಿನಲ್ಲಿ ಕೂಡ ನೀನು ನನ್ನವಳು. ಸದಾ ನನ್ನವಳಾಗಿಯೆ ಇರುವಿ. ನಡೆ."

ಧರ್ಮ ಮತ್ತು ಸ್ವಜನರಿಂದ ಬಹಿಷ್ಕೃತೆಯಾದ ಸುಂದರಿ ಲೀಲಾಳನ್ನು ಕರೆದುಕೊಂಡು ಚಾರ್ನಕ್ ಸುತಾನುಟಿಯಲ್ಲಿಯ ತನ್ನ ವಖಾರಕ್ಕೆ ಬಂದ. ಚಾರ್ನಕ್ ತಿರುಗಿ ಇಂಗ್ಲಂಡಿಗೆ ಹೋಗಲಿಲ್ಲವೆಂದು ಇತಿಹಾಸ ಹೇಳುತ್ತದೆ. ಆತ ವೈಭವದಿಂದ ಲೀಲಾಳನ್ನು ಲಗ್ನವಾದ. ಈ ಇಬ್ಬರು ಅಸಾಮಾನ್ಯ ಪ್ರೇಮಿಗಳ ಸ್ಮೃತಿಚಿಹ್ನ ಇಂದಿಗೂ ಕಲಕತ್ತೆಯ ಒಂದು ಹಳೆಯ ಚರ್ಚಿನ ಸ್ಮಶಾನ ಭೂಮಿಯಲ್ಲಿದೆ. ಅಕ್ಕಪಕ್ಕದಲ್ಲಿರುವ ಎರಡು ಗೋರಿಗಳು ಚಾರ್ನಕ್ ಮತ್ತು ಲೀಲಾಳ ಅಮರ ಪ್ರೇಮದ ಸಾಕ್ಷಿಯಾಗಿ ಇನ್ನೂ ನಿಂತಿವೆ. *

"ನನಗೆ ಒಂದೇಸವನೆ ಅಂಚೆಯಿಂದ ಬೆದರಿಕೆ ಪತ್ರಗಳು ಬರುತ್ತಿವೆ," ಹೆದರುತ್ತಾ ಒಬ್ಬ, ಅಂಚೆ ಇಲಾಖೆಯ ಮುಖ್ಯಸ್ಥನಿಗೆ ಹೇಳಿದ.

ಅಂಚೆ ಮುಖ್ಯಸ್ಥ: "ಸರಿ, ಇದು ಕಾಯದೇಬಾಹಿರವಿದೆ. ನಿಮಗೆ ಪತ್ರ ಯಾರಿಂದ ಬರುತ್ತಿವೆ, ಅವರ ವಿಳಾಸಕೊಟ್ಟಲ್ಲಿ ನಾವು ಏನಾದರೂ ಮಾಡಬಹುದು."

"ಪತ್ರಗಳು ವಿದ್ಯುತ್ ಕಂಪನಿಯ ಮುಖ್ಯ ಇಂಜನಿಯರರಿಂದ ಬರುತ್ತಿವೆ: ದಿನಾಲು ಹಿಂದಿನ ೩ ತಿಂಗಳ ವಿದ್ಯುತ್ ಬಿಲ್ ಕೊಡದಿದ್ದರೆ ನಿಮ್ಮ ವಿದ್ಯುತ್ ವ್ಯವಸ್ಥೆಯನ್ನು" ಬಂದುಮಾಡುತ್ತೇನೆಂದು.

—ವಿ. ಜೆ. ಪ್ಯಾಟ

* * *

ಆತ- ಅಲ್ರೀ, ನಿಮಗೆ ಯಾರೋ ಒಬ್ಬರು ನೂರು ರೂಪಾಯಿ ಕೊಟ್ಟರೆಂದು ಭಾವಿಸುವ. ಆಕಸ್ಮಾತ್ ಅವರು ತೀರಿಕೊಂಡರು. ಅವರು ಹಣ ಕೊಟ್ಟ ವಿಷಯ ಯಾರಿಗೂ ತಿಳಿದಿಲ್ಲ. ಅಂತಹ ಸಂದರ್ಭದಲ್ಲಿ ನೀವೇನು ಮಾಡುವಿರಿ?

ಈತ- ಅಂಥಾ ಮಹಾನುಭಾವರು ಇನ್ನೂ ನನಗೆ ಸಿಗುವಂತಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

—ನಾಗೇಶ ರಾವ್

**ದಿನದಿನಕ್ಕೆ ಬೆಳೆಯುವ ಈ ಚಟದ ಬಗ್ಗೆ ಭಾರತಾದಿಯಾಗಿ ಅನೇಕ ದೇಶಗಳಲ್ಲಿ ನಡೆದ ಸಂಶೋಧನೆ ಭಯಪ್ರದವಾದ ಪರಿಣಾಮಗಳನ್ನು ಬೆಳಕಿಗೆ ತಂದಿದೆ**

# ಧೂಮಪಾನ ಮತ್ತು ಆರೋಗ್ಯ

ಲುಯಿಸ್ ಮೆಟಾಕ್ಸ್ ಮಿಲ್ಲರ್

"ಅನೇಕ ರೋಗಗಳು, ವಿಶೇಷವಾಗಿ ಕ್ಯಾನ್ಸರ್ ರೋಗವು ಧೂಮಪಾನಮಾಡದವರಿಗಿಂತಲೂ ಧೂಮಪಾನ ಮಾಡುವವರನ್ನು ಹೆಚ್ಚಾಗಿ ಪೀಡಿಸುತ್ತದೆ. . ." ಈ ಚಳಿ ಹುಟ್ಟಿಸುವ ಸಂಗತಿ ಕಳೆದ ಮಾರ್ಚ್ ತಿಂಗಳಲ್ಲಿ ಪ್ರಕಟವಾಗಿ ಹೊಗೆಬತ್ತಿ ಸೇದುವವರಲ್ಲಿ ವಿವೇಕವನ್ನು ಜಾಗರಿಸಿತು; ಮತ್ತು ಅಟ್ಲಾಂಟಿಕ್ ಸಾಗರದ ಎರಡೂ ಮಗ್ಗುಲಿನ ದೇಶಗಳಲ್ಲಿ ತಂಬಾಕಿನ ಉದ್ಯಮಕ್ಕೆ ಆಘಾತವುಂಟುಮಾಡಿತು.

ಬ್ರಿಟನ್ನಿನಲ್ಲಿ ೪೪೪ ವರ್ಷಗಳ ಇತಿಹಾಸವುಳ್ಳ ಗೌರವಾರ್ಹ "ರಾಯಲ್ ಕಾಲೇಜ್ ಆಫ್ ಫಿಜೀಶಿಯನ್ಸ್" ಎಂದೂ ಕ್ಷುಲ್ಲಕ ವಿಚಾರಗಳಲ್ಲಾಗಲಿ ಉದ್ವೇಗಕಾರಕ ಪ್ರಚಾರದಲ್ಲಾಗಲಿ ತೊಡಗುವುದಿಲ್ಲ. ಆ ಕಾಲೇಜು ಸಮಗ್ರವಾದೊಂದು ಪರಿಶೀಲನೆಯನ್ನು ಪೂರ್ಣಗೊಳಿಸಿ "ಧೂಮಪಾನ ಮತ್ತು ಆರೋಗ್ಯ" ಎಂಬ ವರದಿಯನ್ನು ಪ್ರಕಟಿಸಿದೆ. ತಥ್ಯಾಂಶಗಳಿಂದ ತುಂಬಿದ ಈ ವರದಿಯ ಉದ್ದೇಶ, "ಡಾಕ್ಟರರಿಗೂ ಇತರರಿಗೂ ಧೂಮಪಾನದಿಂದಾಗುವ ಅಪಾಯಗಳ ಬಗ್ಗೆ ಪ್ರಮಾಣಗಳನ್ನೊದಗಿಸುವುದು ಮತ್ತು ಆ ಮೂಲಕ ಮುಂದೇನು ಮಾಡಬೇಕೆಂದು ನಿರ್ಣಯಿಸಲು ಅನುಕೂಲ ಮಾಡಿಕೊಡುವುದಾಗಿದೆ."

ರಾಯಲ್ ಕಾಲೇಜ್ ಆಫ್ ಫಿಜೀಶಿಯನ್ಸ್ ವರದಿ ನಿಸ್ಸಂದಿಗ್ಧವಾಗಿ ಹೀಗೆ ಹೇಳುತ್ತದೆ:

- "ಸಿಗರೇಟು ಸೇದುವುದು ಪುಪ್ಪುಸದ ಕ್ಯಾನ್ಸರ್ ಮತ್ತು ಬ್ರಾಂಕೈಟಿಸ್ (ಶ್ವಾಸನಾಳಗಳ ಊತ) ರೋಗಗಳಿಗೆ ಒಂದು ಕಾರಣವಾಗಿದೆ; ಅದು ಬಹುಶಃ ಕೊರೋನರಿ ಹೃದಯ ರೋಗ ಮತ್ತು ಇನ್ನೂ ಅಪರೂಪವಾದ ಇತರ ರೋಗಗಳ ಬೆಳವಣಿಗೆಗೂ ಉತ್ತೇಜನ ಕೊಡುತ್ತದೆ."
- "ಸಿಗರೇಟು ಸೇದುವವರೇ ಮೇಲಿನ ರೋಗಗಳಿಂದ ಸಾಯುವ ಸಂಭವ ಅತಿ ಹೆಚ್ಚಾಗಿದೆ; ಹೆಚ್ಚು ಸೇದುವವರಿಗೆ ಈ ಭಯ ಇನ್ನೂ ಹೆಚ್ಚಾಗಿದೆ."
- "ಈ ರೋಗಗಳಿಂದ ಬರುವ ಅನೇಕ ಮರಣಗಳು ವೈದ್ಯವೃತ್ತಿಗೊಂದು ಆಹ್ವಾನದಂತಿವೆ; ಅವು ಧೂಮಪಾನದಿಂದ ಹುಟ್ಟುವ ಮಟ್ಟಿಗಾದರೂ ಅವುಗಳನ್ನು ತಡೆಯುವುದು ಸಾಧ್ಯವಿದೆ."
- "ಸಿಗರೇಟ್ ಸೇದುವುದರಿಂದಾಗುವ" ದುಷ್ಪರಿಣಾಮಗಳನ್ನು, ಒಳ್ಳೆಯ ಫಿಲ್ಟರುಗಳ ಉಪಯೋಗದಿಂದಾಗಲಿ, ಕೊನೆಯಲ್ಲಿ ಹೆಚ್ಚು ಉದ್ದವಾದ ತುಣುಕನ್ನು ಸೇದದೆ ಬಿಡುವುದರಿಂದಾಗಲಿ, ಸಿಗರೇಟಿನ ಬದಲು ಪೈಪ್ ಅಥವಾ ಸಿಗಾರ್ ಸೇದುವುದರಿಂದಾಗಿ, ಕಡಿಮೆ ಮಾಡಿಕೊಳ್ಳಲು ಸಾಧ್ಯವುಂಟು."

ವರದಿಯ ಪರಿಣಾಮ ಬ್ರಿಟಿಶ್ ಪಾರ್ಲಿಮೆಂಟಿನಲ್ಲಿ ಕೂಡಲೆ ಕಂಡುಬಂತು. ತಂಬಾಕಿನ ಉದ್ಯಮದವರೇನೋ ತಮ್ಮ ವಾಡಿಕೆಯ ಪ್ರತ್ಯುತ್ತರವನ್ನೇ ಕೊಟ್ಟು, ಈ ಪುರಾವೆಗಳಲ್ಲಿ ಬರಿ

"ರೀಡರ್ಸ್ ಡೈಜೆಸ್ಟ್" ನಿಂದ

"ಹಳೇ ಅಂಶಗಳೇ ಇದ್ದು ಹೊಸ ಸಂಶೋಧನೆಯ ವಿವರಗಳೇನೂ ಇಲ್ಲ" ಎಂದರು. ಆದರೆ ಅವರ ವಾದವೀಗ ಹಿಂದಿಗಿಂತಲೂ ಟೊಳ್ಳು ಮತ್ತು ಕರುಣಾಜನಕವಾಗಿ ಕಂಡಿತು.

ರಾಯಲ್ ಕಾಲೇಜ್ ಆಫ್ ಫಿಜೀಶಿಯನ್ಸ್ ಅಧ್ಯಕ್ಷರಾದ ಸರ್ ರಾಬರ್ಟ್ ಪ್ರಾಟರು ಹೀಗೆ ಹೇಳಿದರು: "ಈ ರೋಗಗಳು ಸಿಗರೇಟ್ ಸೇದುವುದರಿಂದ ಹುಟ್ಟುತ್ತವೆಂಬ ಕಲ್ಪನೆಗೆ ಎಲ್ಲಾ ಬಗೆಯ ಆಕ್ಷೇಪಗಳನ್ನೆತ್ತಲಾಗಿದೆ. ಇದು ಸ್ವಾಭಾವಿಕವೇ. ಆದರೆ ಇದಕ್ಕೆ ಪ್ರತಿಯಾಗಿ ಮಂಡಿಸಲಾದ ಯಾವ ಸಿದ್ಧಾಂತದಲ್ಲೂ ಹುರುಳಿಲ್ಲ; ತದ್ವಿರುದ್ಧವಾಗಿ ಪ್ರತಿಯೊಂದು ತಥ್ಯವೂ ಸಿಗರೇಟಿನ ಅಂಗವನ್ನು ದೃಢಪಡಿಸುತ್ತದೆ."

**ಧೂಮಪಾನಿಗಳ ಪುಪ್ಫುಸ.** "ಹಿಂದೆ ಪುಪ್ಫುಸದ ಕ್ಯಾನ್ಸರು ಅಪರೂಪವಾಗಿತ್ತು. ಕಳೆದ ೪೫ ವರ್ಷಗಳಲ್ಲಿ ಅದೇ ಅನೇಕ ದೇಶಗಳಲ್ಲಿ ಸಾವಿನ ಪ್ರಾಮುಖ್ಯ ಕಾರಣಗಳಲ್ಲೊಂದಾಗಿ ಪರಿಣಮಿಸಿದೆ. ಈ ಹೆಚ್ಚಳಕ್ಕೆ ಕಾರಣ ಹುಡುಕುವಾಗ್ಗೆ, ಈ ಶತಮಾನದಲ್ಲಿ ಹೊಸತಾಗಿ ಮಾನವನ ಪುಪ್ಫುಸಗಳು ಯಾವ ಪದಾರ್ಥದ ಸಂಸರ್ಗಕ್ಕೊಳಗಾಗಿವೆ ಎಂದು ನೋಡಬೇಕಾಗುತ್ತದೆ; ಅಂಥ ಪದಾರ್ಥಗಳಲ್ಲಿ ಸಿಗರೇಟು ಒಂದು. ಸಿಗರೇಟಿನ ಹೊಗೆ ಈ ರೋಗದ ಮುಖ್ಯ ಕಾರಣಗಳಲ್ಲೊಂದೆಂಬುದಕ್ಕೆ ಈಗ ತುಂಬಾ ಪ್ರಮಾಣಗಳು ದೊರೆತಿವೆ" ಎಂದು ಈ ವರದಿಯು ವಿವರಿಸುತ್ತದೆ.

೧೯೫೩ ರಿಂದೀಚೆಗೆ ಒಂಭತ್ತು ಬೇರೆ ಬೇರೆ ದೇಶಗಳಲ್ಲಿ (ಬ್ರಿಟನ್, ಅಮೇರಿಕ ಸಹಿತ) ನಡೆದ ಕನಿಷ್ಠ ೨೩ ಪರಿಶೀಲನೆಗಳ ವರದಿಗಳು ಪುಪ್ಫುಸದ ಕ್ಯಾನ್ಸರಿಗೂ ಧೂಮಪಾನಕ್ಕೂ ಸಂಬಂಧವಿದೆಯೆಂದು ಸಾರುತ್ತವೆ. "ಈ ಎಲ್ಲ ವರದಿಗಳೂ ಸಿಗರೇಟಿನ ಬಳಕೆ ಹೆಚ್ಚಾದಂತೆ ಮರಣ ಪ್ರಮಾಣವೂ ತೀವ್ರವಾಗಿ ಹೆಚ್ಚುತ್ತದೆಂದು ತೋರಿಸಿವೆ. ಮಿತಿಮೀರಿ ಸಿಗರೇಟ್ ಸೇದುವವರ ಮರಣ ಪ್ರಮಾಣವು ಸೇದದವರಿಗಿಂತ ೩೦ ಪಟ್ಟು ಹೆಚ್ಚಾಗಿದೆ. ಪೈಪ್ ಅಥವಾ ಸಿಗಾರುಗಳನ್ನು (ಹೊಗೆ ನುಂಗದೆ) ಸೇದುವವರಿಗಿಂತ ಸಿಗರೇಟು ಸೇದುವವರ ಮೇಲೆಯೆ ದುಷ್ಪರಿಣಾಮವಾಗುತ್ತದೆ; ಮತ್ತು ಪರಿಶೀಲನೆಗಳು ಪ್ರಾರಂಭವಾದೊಡನೆ ಧೂಮಪಾನವನ್ನು ವರ್ಜಿಸಿದವರಲ್ಲಿ ಮರಣ ಪ್ರಮಾಣವು ಧೂಮಪಾನ ಮಾಡುತ್ತಲೇ ಹೋದವರಿಗಿಂತ ಕಡಿಮೆಯಾಯಿತೆಂದೂ ಅವೇ ವರದಿಗಳು ಖಚಿತಪಡಿಸಿವೆ.

ಸಿಗರೇಟ್ ಸೇದುವುದಕ್ಕೂ ಪುಪ್ಫುಸ ಕ್ಯಾನ್ಸರಿಗೂ ಇರುವ ಸಂಬಂಧವು ಹೀಗೆ ಅಂಕೆ ಸಂಖ್ಯೆಗಳಿಂದ ದೃಢಪಟ್ಟಂತಾಗಿದೆ; ಅಲ್ಲದೆ, "ಪ್ರಯೋಗಗಳಿಂದಲೂ ರೋಗ ಶಾಸ್ತ್ರೀಯ ಅನ್ವೇಷಣೆಗಳಿಂದಲೂ ಇದಕ್ಕೆ ಪರಿಪೂರ್ಣವಲ್ಲದಿದ್ದರೂ ಧಾರಾಳವಾದ ಪುಷ್ಟಿ ದೊರೆತಿದೆ." ಪ್ರಾಣಿಗಳಲ್ಲಿ ಕ್ಯಾನ್ಸರನ್ನು ಪ್ರಚೋದಿಸಬಲ್ಲ ಸುಮಾರು ೧೬ ಪದಾರ್ಥಗಳು ತಂಬಾಕಿನ ಹೊಗೆಯಲ್ಲಿ ಸಿಕ್ಕಿವೆ. ಸಾಲದ್ದಕ್ಕೆ ಆ ಹೊಗೆಯಲ್ಲಿರುವ ನಾನಾ ತರದ ಉತ್ತೇಜನಕಾರಿ ಪದಾರ್ಥಗಳು "ಕ್ಯಾನ್ಸರ್‌ಪೂರ್ವ" ಬದಲಾವಣೆಗಳನ್ನುಂಟುಮಾಡಬಲ್ಲವಾಗಿವೆ. ಪುಪ್ಫುಸ ಕ್ಯಾನ್ಸರಲ್ಲದೆ ಬೇರೆ ಕಾರಣಗಳಿಂದ ಸತ್ತಾಗಲೂ ಸಿಗರೇಟ್ ಸೇದುವವರ ಪುಪ್ಫುಸಗಳಲ್ಲಿಯೂ ಶ್ವಾಸನಳಿಕೆಗಳ ಪರೆಗಳಲ್ಲಿಯೂ ಈ ಬದಲಾವಣೆಗಳು ಕಂಡು ಬಂದಿವೆ.

**ಸಂಶಯ ಚಿತ್ತರಿಗೆ ಸಮಾಧಾನ:** ರಾಯಲ್ ಕಾಲೇಜ್ ಆಫ್ ಫಿಜೀಶಿಯನ್ಸ್ ವರದಿಯ ಒಂದು ದೊಡ್ಡ ಅಧ್ಯಾಯವು ಸಿಗರೇಟ್-ಕ್ಯಾನ್ಸರ್ ಸಂಬಂಧವನ್ನು ಒಪ್ಪದವರು ಮುಂದೊಡ್ಡಿದ ವಾದಗಳ ಚರ್ಚೆಗೆ ಮೀಸಲಾಗಿದೆ. "ಧೂಮಪಾನವು ಪುಪ್ಫುಸ ಕ್ಯಾನ್ಸರಿಗೆ ಒಂದು ಕಾರಣ ಎಂಬ ಸಹಜ ಸಿದ್ಧಾಂತದಷ್ಟು ಚೆನ್ನಾಗಿ ಇವರ ಯಾವ ಪ್ರತಿ ಸಿದ್ಧಾಂತಗಳೂ ನಮಗೆ ಗೊತ್ತಿರುವ ಎಲ್ಲ ತಥ್ಯಗಳಿಗೆ ಹೊಂದಿಕೆಯಾಗುವುದಿಲ್ಲ."

ತಂಬಾಕಿನ ಪಕ್ಷಪಾತಿಗಳು ವಾತಾವರಣದಲ್ಲಿರುವ ಮಾಲಿನ್ಯದ ಮೇಲೆ ತಪ್ಪು ಹೊರಿಸುತ್ತಾರಲ್ಲ, ಅದಕ್ಕೇನನ್ನುತ್ತೀರಿ? ಇದಕ್ಕೆ "ಧೂಮಪಾನ ಮತ್ತು ಆರೋಗ್ಯ" ವರದಿಯನ್ನು ಹೊರಡಿಸಿದ ಸಂಶೋಧಕರು ಹೇಳುವುದಿದು: ಅರೆ


ಶಹರು, ಹಳ್ಳಿ ಅಥವಾ ಹೆಚ್ಚುಕಡಿಮೆ ಮಲಿನ ವಾತಾವರಣವೇ ಇಲ್ಲದ ದೇಶಗಳಲ್ಲಿ ಕೂಡ ಸಿಗರೇಟು ಸೇದುವವರ ಮತ್ತು ಸೇದದವರ ಮರಣ ಪ್ರಮಾಣಗಳಲ್ಲಿ ಬಹು ಅಂತರ ಕಾಣಿಸುತ್ತಿದೆ.

ಉದಾಹರಣೆಗೆ ಪುಪ್ಪುಸ ಕ್ಯಾನ್ಸರಿನಿಂದಾದ ಮರಣಗಳ ವಿಷಯದಲ್ಲಿ ಫಿನ್ಲಂಡಿಗೆ ಯುರೋಪಿನ ದೇಶಗಳಲ್ಲೆಲ್ಲ ದ್ವಿತೀಯ ಸ್ಥಾನವಿದೆ. ಆದರೆ ಅದೊಂದು ಹಳ್ಳಿಗಾಡಿನ ನಾಡು; ಅಲ್ಲಿ ಮಲಿನ ವಾತಾವರಣವೇ ಇಲ್ಲವೆಂದರೂ ಸಲ್ಲುವುದು. ಮಾತ್ರ ಅಲ್ಲಿಯ ಜನ ಬಹಳ ಧೂಮಪಾನ ಮಾಡುತ್ತಾರೆ. "ಅಂದ ಮೇಲೆ ಧೂಮಪಾನವು ವಾತಾವರಣದ ಮಾಲಿನ್ಯಕ್ಕಿಂತ ಬಲವಾದ ಕಾರಣ ಎಂದು ಸಿದ್ಧವಾಗುತ್ತದೆ." ವರದಿ ಹಾಗೆಯೆ ಮುಂದುವರಿದು, "ಮೇಲಾಗಿ, ವಾತಾವರಣ ಮಾಲಿನ್ಯದ ಪ್ರತಿಯೊಂದು ಮಟ್ಟದಲ್ಲಿಯೂ ಹೆಚ್ಚು ಹೆಚ್ಚು ಸಿಗರೇಟು ಸೇದಿದಂತೆ ಪುಪ್ಪುಸ ಕ್ಯಾನ್ಸರ್ ಪ್ರಮಾಣವೂ ಹೆಚ್ಚುತ್ತ ಹೋಗುತ್ತದೆ. ಈ ದೇಶದ (ಬ್ರಿಟನ್) ಅತ್ಯಂತ ಗ್ರಾಮಾಂತರ ಪ್ರದೇಶದಲ್ಲಿ ಕೂಡ ವಿಃತಿಮೀರಿ ಸಿಗರೇಟ್ ಸೇದುವವರು ಸೇದದವರಿಗಿಂತ ೧೫-೨೦ ಪಟ್ಟು ಹೆಚ್ಚು ಪುಪ್ಪುಸ ಕ್ಯಾನ್ಸರಿಗೆ ತುತ್ತಾಗುತ್ತಾರೆ."

ಧೂಮಪಾನದ ಕೆಮ್ಮು. ರೂಢಮೂಲ ಬ್ರಾಂಕೈಟಿಸ್ ರೋಗವು ಹೆಚ್ಚಾಗಿ ಮಧ್ಯ ಮತ್ತು ಅಪರ ವಯಸ್ಸಿನ ಜನರ ಮರಣದ ಮುಖ್ಯ ಕಾರಣಗಳಲ್ಲೊಂದು. ಅದು ಹಾಸಿಗೆ ಹಿಡಿಸುವ ರೋಗವೂ ಆಗಿದೆ. ಅದು ಸಾಧಾರಣವಾಗಿ ನಿತ್ಯ ಕೆಮ್ಮು ಮತ್ತು ಕಫದಿಂದ ಪ್ರಾರಂಭವಾಗುತ್ತದೆ. ಆ ಮೇಲೆ ಶ್ವಾಸನಲಿಕೆಗಳಿಗೆ ಸೋಂಕು ರೋಗ ತಗಲುತ್ತದೆ ಮತ್ತು ಕಾಲಾಂತರದಲ್ಲಿ ಉಸಿರಿಗಾಗಿ ಮೇಲಿಂದ ಮೇಲೆ ಏದುವುದು ಮೊದಲಾಗುತ್ತದೆ. ಅನೇಕ ವೇಳೆ ಈ

**ಪುಪ್ಪುಸ ಕ್ಯಾನ್ಸರಿನಿಂದಾದ ಮರಣಗಳಿಗೂ ಸೇದಿದ ಹೊಗೆ ಬತ್ತಿಯ ಪ್ರಕಾರಕ್ಕೂ ಇರುವ ಸಂಬಂಧ.**

ಬ್ರಿಟನ್ ಮತ್ತು ಅಮೇರಿಕದಲ್ಲಿ ನಡೆದ ಪರಿಶೀಲನೆಗಳ ಮೇಲಿಂದ ಪ್ರತಿ ೧,೦೦,೦೦೦ ಪುರುಷರಲ್ಲಿ ಧೂಮಪಾನ ಮಾಡದವರು, ಸಿಗಾರ್ ಸೇದುವವರು, ಪೈಪ್ ಸೇದುವವರು, ಪೈಪ್ ಮತ್ತು ಸಿಗಾರುಗಳನ್ನು ಸೇರಿಯೆ ಸೇದುವವರು ಮತ್ತು ಸಿಗರೇಟ್ ಮಾತ್ರ ಸೇದುವವರು ಯಾವ ಯಾವ ಪ್ರಮಾಣದಲ್ಲಿ ಪುಪ್ಪುಸ ಕ್ಯಾನ್ಸರಿನಿಂದ ಸಾಯುವವರೆಂದು ತೋರಿಸುತ್ತದೆ.



ಏದುವಿಕೆಯ ಫಲವಾಗಿ ಹೃದಯಸ್ತಂಭ ಮತ್ತು ಮರಣ ಒದಗುತ್ತದೆ.

“ಧೂಮಪಾನದಿಂದ ಕೆಮ್ಮು ಮತ್ತು ಕಫ ಉತ್ಪತ್ತಿಯಾಗುತ್ತದೆ” ಎಂದು ವರದಿ ಹೇಳುತ್ತದೆ. “ಹೆಚ್ಚಿನವರಿಗೆ ಹೊಗೆಬತ್ತಿಯಿಂದುಂಟಾದ ಕೆಮ್ಮು ಚಟವನ್ನು ಬಿಟ್ಟರೆ ಹೊರಟು ಹೋಗುತ್ತದೆ. ಧೂಮಪಾನ ಮಾಡದವರ ಪುಪ್ಪುಸಗಳೊಡನೆ ಹೋಲಿಸಿದರೆ ಸೇದುವವರ ಪುಪ್ಪುಸಗಳು ಸಾಮಾನ್ಯವಾಗಿ ಹಾನಿಗೊಳಗಾಗಿರುವುದು ಅನೇಕ ಪರಿಶೀಲನೆಗಳಲ್ಲಿ ವ್ಯಕ್ತಪಟ್ಟಿದೆ. ವಿಶೇಷವಾಗಿ ಅವರ ಶ್ವಾಸನಲಿಕೆಗಳಲ್ಲಿ ವಾಯು ಸಂಚಾರಕ್ಕೆ ಧಕ್ಕೆಯಾಗಿರುತ್ತದೆ. ಬ್ರಿಟಿಶ್ ಡಾಕ್ಟರರ ಪೈಕಿ ಡಾಲ್ ಮತ್ತು ಹಿಲ್ ಎಂಬವರು, ಧೂಮಪಾನವು ಹೆಚ್ಚು ಹೆಚ್ಚು ಮಿತಿಮೀರಿದಂತೆ ಬ್ರಾಂಕೈಟಿಸ್‌ನಿಂದೊದಗುವ ಮರಣಗಳೂ ಒಂದೇ ಸಮನೆ ಹೆಚ್ಚಾಗುತ್ತವೆಂದು ಕಂಡುಹಿಡಿದರು. ದಿನಕ್ಕೆ ೨೫ ಕ್ಕಿಂತ ಹೆಚ್ಚು ಸಿಗರೇಟ್ ಸೇದುವವರು ಬ್ರಾಂಕೈಟಿಸ್‌ನಿಂದ ಸಾಯುವುದು ಸೇದದವರಿಗಿಂತ ಆರುಪಟ್ಟು ಅಧಿಕವಾಗಿದೆ. ಅಮೇರಿಕದಲ್ಲಿ ಡಾರ್ನ್ ಅವರು ಬ್ರಾಂಕೈಟಿಸ್ ಮತ್ತು ಎಂಫಿಸೆಮಾ ರೋಗಗಳಿಂದ ಸಾಯುವವರ ಸಂಖ್ಯೆಯು ಅನೂಚಾನವಾಗಿ ಸಿಗರೇಟು ಸೇದುವವರಲ್ಲಿ ಸೇದದವರಿಗಿಂತ ಮೂರುಮಡಿ ಇದೆಯೆಂದು ಕಂಡು ಹಿಡಿದಿದ್ದಾರೆ.”

ಸಿಗರೇಟುಗಳು ಬ್ರಾಂಕೈಟಿಸ್‌ಗೆ ಏಕೈಕ ಅಥವಾ ಪ್ರಾಮುಖ್ಯ ಕಾರಣವಾಗಿರಲಿಕ್ಕಿಲ್ಲವೆಂದು ವರದಿಯಲ್ಲಿ ಒಪ್ಪಲಾಗಿದೆ. ವಾಯುಮಾಲಿನ್ಯ ಮೊದಲಾದವುಗಳ ಪಾತ್ರವೂ ಇರಬಹುದು.

ಆದರೆ “ಸಿಗರೇಟು ಸೇದುವುದರಿಂದ ಎಷ್ಟೋ ವೇಳೆ ಕಫಯುಕ್ತ ಕೆಮ್ಮು ಹುಟ್ಟುತ್ತದೆ. ಇದ

**ಸೇದುವ ಸಿಗರೇಟಿನ ಸಂಖ್ಯೆ ಹೆಚ್ಚಿದಂತೆ ಪುಪ್ಪುಸ ಕ್ಯಾನ್ಸರಿನ ಸಂಭವವೂ ಹೆಚ್ಚುತ್ತದೆ.**


ರಾಯಲ್ ಕಾಲೇಜಿನವರು ಪ್ರಕಟಿಸಿದ ಈ ನಕ್ಷೆ ಮೂರು ಪರಿಶೀಲನೆಗಳ ಆಧಾರದಿಂದ ತಯಾರಾಗಿದೆ.

—*— ಈ ರೇಖೆ ೪೫ ಮತ್ತು ಮೇಲಿನ ವಯಸ್ಸಿನ ಬ್ರಿಟಿಶ್ ಡಾಕ್ಟರರ ಪರಿಶೀಲನೆಯ ಫಲಿತಾಂಶದ್ದು. (ಡಾಲ್ ಮತ್ತು ಹಿಲ್ಲರಿಂದ)

—-○—- ಈ ರೇಖೆ ೫೦-೬೯ ವಯಸ್ಸಿನ ಅಮೇರಿಕನ್ ಪುರುಷರ ಪರಿಶೀಲನೆಯ ಫಲಿತಾಂಶದ್ದು (ಹ್ಯಾಮಂಡ್ ಮತ್ತು ಹಾರ್ನರಿಂದ)

—●— ಈ ರೇಖೆ ೪೦ ಮತ್ತು ಹೆಚ್ಚು ವಯಸ್ಸಿನ ಅಮೇರಿಕನ್ ನಿವೃತ್ತ ಸೈನಿಕರ ಪರಿಶೀಲನೆಯ ಫಲಿತಾಂಶದ್ದು (ಹಾರ್ನರಿಂದ)

× ೧೦ ಅಡ್ಡ ರೇಖೆ ಪುಪ್ಪುಸ ಕ್ಯಾನ್ಸರಾಗುವ ೧೦ ಪಟ್ಟು ಭಯವಿರುವುದನ್ನೂ ×೨೦ ಮತ್ತು × ೩೦ ಅದರ ೨೦ ಮತ್ತು ೩೦ ಪಟ್ಟು ಭಯವನ್ನೂ ಸೂಚಿಸುತ್ತದೆ. (ಬ್ರಿಟನ್ನಿನಲ್ಲಿ ದಿನವೂ ಏಳು ಸಿಗರೇಟು ಸೇದುವವರಿಗೆ ಸೇದದವರಿಗಿಂತ ೧೦ ಪಟ್ಟು ಅಪಾಯವಿದೆ, ೨೦ ಸೇದುವವರಿಗೆ ೧೬ ಪಟ್ಟು ಇತ್ಯಾದಿಯಾಗಿ ತಿಳಿದುಕೊಳ್ಳಬೇಕು. ಹೀಗೆಯೆ ಅಮೇರಿಕದ ಪರಿಶೀಲನೆಗಳು ಕೂಡ.)



ರಿಂದ ಮನುಷ್ಯನಿಗೆ ಅಶಕ್ತಿಕಾರಕ ಇಲ್ಲವೇ ಪ್ರಾಣಾಂತಿಕ ಬ್ರಾಂಕೈಟಿಸ್ ಪ್ರಕಾರಗಳು ಅಂಟಲು ಮಾರ್ಗವಾಗುತ್ತದೆ. ಧೂಮಪಾನ ತರಬಹುದಾದ ಈ ನಿತ್ರಾಣಕಾರಕ ರೋಗವು ಅನೇಕ ಸ್ತ್ರೀ ಪುರುಷರಿಗೆ ತಗಲಲು ಸಿಗರೇಟ್ ಸೇದುವುದು ಒಂದು ಮುಖ್ಯ ಆನುಷಂಗಿಕ ಕಾರಣವೆಂದು ಭಾವಿಸಬೇಕಾಗಿದೆ."

**ಧೂಮಪಾನ ಮತ್ತು ಹೃದಯ.** ಸಿಗರೇಟ್ ಸೇದದವರಿಗಿಂತ ಸೇದುವವರಲ್ಲಿ ಹೃದ್ರೋಗದಿಂದ ಸಾಯುವವರು ಹೆಚ್ಚು. ಆದರೆ ಸಿಗರೇಟ್ ಸೇದುವುದು ಕೋರೋನರಿ ಹೃದಯವಿಕಾರಕ್ಕೆ ಕಾರಣವಾಗಿದೆಯೆಂಬುದಕ್ಕೆ ಆಧಾರ ದೊರೆತಿಲ್ಲವೆಂದು ರಾಯಲ್ ಕಾಲೇಜ್ ಆಫ್ ಫಿಜೀಶಿಯನ್ಸ್ ವರದಿಯಲ್ಲಿ ಹೇಳಲಾಗಿದೆ. ಧೂಮಪಾನ ಮಾಡದವರಿಗೂ ಸಾಧಾರಣವಾಗಿ ಕೊರೋನರಿ ರೋಗ ಬರುತ್ತದೆ. ಆದರೂ "ಧೂಮಪಾನ ನಿಲ್ಲಿಸಿದವರಲ್ಲಿ ಈ ರೋಗದಿಂದ ಸಾಯುವವರ ಪ್ರಮಾಣ ಇಳಿಮುಖವಾಗುತ್ತದೆ."

ಈ ಬಗ್ಗೆ ರಾಯಲ್ ಕಾಲೇಜ್ ಆಫ್ ಫಿಜೀಶಿಯನ್ಸ್ ಅಭಿಪ್ರಾಯ ಹೀಗಿದೆ: "ಕೊರೋನರಿ ರೋಗಕ್ಕೂ ಸಿಗರೇಟು ಸೇದುವುದಕ್ಕೂ ಇರುವ ಸಂಬಂಧ ಮಧ್ಯ ವಯಸ್ಸಿನಲ್ಲಿ ಮಾತ್ರ ಎದ್ದು ಕಾಣುತ್ತದೆ. ಕೊರೋನರಿ ಥ್ರಾಂಬಾಸಿಸ್ (ಹೃದಯದ ಧಮನಿಗಳಲ್ಲಿ ರಕ್ತ ಹೆಪ್ಪುಗಟ್ಟುವುದು) ರೋಗ ಬರುವ ಸಂಭವವು ಮಾನಸಿಕ ತ್ರಾಸ, ಕೂತಲ್ಲೇ ಕೆಲಸ ಮಾಡುವಿಕೆ, ಅಧಿಕ ಕೊಬ್ಬಿನ ಆಹಾರ ಸೇವನೆ ಮೊದಲಾದವುಗಳಿಂದ ಹೆಚ್ಚುತ್ತದೆಂದು ನಂಬಲಾಗಿದೆ. ಈ ಕಾರಣಗಳು ಮಿತಿಮೀರಿ ಧೂಮಪಾನ ಮಾಡುವವರಲ್ಲೇ ಸಾಮಾನ್ಯವಾಗಿ ಕೂಡಿಕೊಂಡಿರುವುದು ಒಂದು ವಿಶೇಷ ಅಮೇರಿಕದ ಹೃದಯ ರೋಗ ಸಂಸ್ಥೆಯ ಸಮಿತಿಯೊಂದು ಧೂಮಪಾನಕ್ಕೂ ಹೃದ್ರೋಗಕ್ಕೂ ಇರುವ ಸಂಬಂಧವನ್ನು ಕುರಿತು ಈಚೆಗೊಂದು ಹೇಳಿಕೆ ಹೊರಡಿಸಿದೆ. ಅದರಲ್ಲಿ 'ಸದ್ಯಕ್ಕೆ ಉಪಲಭ್ಯವಿರುವ ಆಧಾರಗಳ ಮೇಲಿಂದ ಹೇಳುವುದಾದರೆ, ೫೫ ರೊಳಗಿನ ವಯಸ್ಸಿನವರಲ್ಲಂತೂ ಮಿತಿಮೀರಿದ ಸಿಗರೇಟ್ ಸೇವನೆಯಿಂದ ಕೊರೋನರಿ ರೋಗದ ಉತ್ಪತ್ತಿ ಅಥವಾ ಉಲ್ಬಣಕ್ಕೆ ಸಹಾಯವಾಗುತ್ತದೆಂದು ಬಲವಾಗಿ ಸೂಚಿತವಾಗುತ್ತದೆ' ಎಂದು ಹೇಳಲಾಗಿದೆ. ಇದು ಒಪ್ಪಬೇಕಾದ ಅಭಿಪ್ರಾಯ."

**ಧೂಮಪಾನ ಮತ್ತು ವ್ರಣಗಳು:** ತಂಬಾಕಿನ ಹೊಗೆಯಿಂದ ಜಠರ ಮತ್ತು ಕರಳುಗಳ ಮೇಲೆ ಪರಿಣಾಮವಾಗುತ್ತದೆಂದು ಪ್ರಯೋಗ ಮೂಲಕ ತೋರಿಸಬಹುದಾಗಿದೆ. ಹಸಿವಾದಾಗ ಜಠರದಲ್ಲಾಗುವ ಆಕುಂಚನಗಳು ಕೆಲವೇ ಝುರಿಕೆ ಹೊಗೆ ಸೇದಿದೊಡನೆ ಸ್ಥಗಿತವಾಗುತ್ತವೆ. ಧೂಮಪಾನ ಮಾಡುವವರಿಗಿಂತ ಮಾಡದಿರುವವರಿಗೆ ಹಸಿವೆ ಚೆನ್ನಾಗಿರುವಂತೆ ಕಾಣುತ್ತದೆ; ಸೇದುವುದನ್ನು ಬಿಟ್ಟವರ ತೂಕ ಒಡನೆ ಹೆಚ್ಚಾಗುವುದೂ ಸಾಮಾನ್ಯವಾಗಿದೆ.

ಧೂಮಪಾನದಿಂದ ಜಠರ ಅಥವಾ ಮುಂಗರುಳಿನ (Duodenal) ವ್ರಣಗಳು (Ulcers) ಉಂಟಾಗುವವೆಂಬುದಕ್ಕೆ ಆಧಾರಗಳಿಲ್ಲವಾದರೂ ಈ ವ್ರಣಗಳು ಮೊದಲೇ ಉಳ್ಳವರ ಮೇಲೆ ಧೂಮಪಾನದಿಂದ ದುಷ್ಪರಿಣಾಮವಾಗುತ್ತದೆಂಬುದು ಅನೇಕ ವೈದ್ಯರ ಗಮನಕ್ಕೆ ಬಂದ ವಿಷಯ.

"ಜಠರ ವ್ರಣಗಳ ಮೇಲೆ ಧೂಮಪಾನದ ಪರಿಣಾಮವನ್ನು ಕುರಿತು ಬ್ರಿಟನ್ನಿನಲ್ಲಿ ಒಂದು ಸುನಿಯಂತ್ರಿತ ಪರಿಶೀಲನೆ ಕೈಕೊಳ್ಳಲಾಗಿದೆ" ಎಂದು ರಾಯಲ್ ಕಾಲೇಜ್ ವರದಿ ಹೇಳಿದೆ. ಆಸ್ಪತ್ರೆಗಳಲ್ಲಿದ್ದ ಧೂಮಪಾನ ಚಟವುಳ್ಳ ರೋಗಿಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಯಿತು. "ಅ" ಗುಂಪಿಗೆ ಧೂಮಪಾನ ನಿಲ್ಲಿಸಲು ಕೇಳಿಕೊಳ್ಳಲಾಯಿತು, "ಬ" ಗುಂಪಿಗೆ ಹಾಗೆ ಕೇಳಿಕೊಳ್ಳಲಿಲ್ಲ. ಇತರ ವಿಚಾರಗಳಲ್ಲಿ ಎರಡೂ ಗುಂಪುಗಳಿಗೆ ಒಂದೇ ಬಗೆಯ ಔಷಧೋಪಚಾರ ನಡೆಯುತ್ತಿತ್ತು. "ಧೂಮಪಾನ ಮುಂದುವರಿಸಿದ ರೋಗಿಗಳ ಜಠರ ವ್ರಣಗಳು ದೊಡ್ಡವಾಗುತ್ತ ಬಂದವು; ಸೇದುವುದನ್ನು ಬಿಟ್ಟವರಾರಿಗೂ ಹೀಗಾಗಲಿಲ್ಲ" ಕೊನೆಯದಾಗಿ: "ಧೂಮಪಾನವು ಜಠರ ಅಥವಾ ಮುಂಗರುಳಿನ ವ್ರಣಗಳಿಗೆ ಕಾರಣವಾಗಿರುವಂತೆ ಕಾಣುವುದಿಲ್ಲ; ಆದರೆ ಬಹುಶಃ ಅದಕ್ಕೆ ಉತ್ತೇಜನ ಕೊಟ್ಟು ಅದನ್ನು

ಶಾಶ್ವತಗೊಳಿಸುತ್ತದೆ."

**ಡಾಕ್ಟರರಿಗೆ ಸೂಚನೆ :** "ಬ್ರಾಂಕೈಟಿಸ್, ಜಠರ ವ್ರಣ, ಮತ್ತು ಅಪಧಮನಿ ರೋಗಗಳಿರುವವರಿಗೆ ಧೂಮಪಾನ ನಿಲ್ಲಿಸಲು ಸೂಚಿಸಬೇಕು.. ಧೂಮಜನ್ಯ ಕೆಮ್ಮು ತಲೆದೋರಿದರೆ ಕೂಡ ಚಟವನ್ನು ತ್ಯಜಿಸಬೇಕೆಂದು ಸೂಚಿತವಾಗುತ್ತದೆ," ಎಂದು ರಾಯಲ್ ಕಾಲೇಜ್ ವರದಿಯ ಅಭಿಮತ.

ಬ್ರಿಟನ್ನಿನಲ್ಲಿ ಈಚೆಗೆ ಅ-ಧೂಮಪಾನಿ ಡಾಕ್ಟರರ ಸಂಖ್ಯೆ ಇಮ್ಮಡಿಸಿದೆ. ೧೯೫೧ ರಲ್ಲಿ ಸೇಕಡಾ ೨೪ ಡಾಕ್ಟರರು ಮಾತ್ರ ಧೂಮಪಾನ ಮಾಡುತ್ತಿದ್ದಿಲ್ಲ. ೧೯೬೧ ರಲ್ಲಿ ಸೇಕಡಾ ೫೦ ಡಾಕ್ಟರರು ಆ ಚಟವಿಲ್ಲದವರಿದ್ದಾರೆ. "ಧೂಮಪಾನ ಮಾಡುವ ಡಾಕ್ಟರನು ತನಗೆ ಸಿಗುವ ಧೂಮಾನಂದಕ್ಕೆ ಇತರರಂತೆಯೆ ಬೆಲೆ ತೆರಬೇಕಾಗುತ್ತದೆ. ಆದರೆ ಡಾಕ್ಟರನು ಧೂಮಪಾನ ಮಾಡಿದರೆ ಈ ಚಟದಿಂದಾಗುವ ದುಷ್ಪರಿಣಾಮಗಳನ್ನು ಕುರಿತು ಜನರಿಗೆ ಬೋಧನೆ ಕೊಡುವುದು ಅಷ್ಟು ಸಫಲವಾಗುವುದಿಲ್ಲ. ತನ್ನ ರೋಗಿಗಳಿಗೆ ಧೂಮಪಾನ ಬಿಡಿಸುವುದು ಅವನಿಗೆ ಹೆಚ್ಚು ಕಠಿನ ಹೋಗುತ್ತದೆ."

**ಪ್ರತಿಬಂಧಕೋಪಾಯಗಳು :** ಧೂಮಪಾನ-ಆರೋಗ್ಯ ಸಮಸ್ಯೆಯನ್ನು ಕುರಿತು ರಾಯಲ್ ಕಾಲೇಜ್ ವರದಿ ಪ್ರಪ್ರಥಮ ಸಮಗ್ರ ವರದಿಯೇನಲ್ಲ. ಆದರೆ ಅದು ತಥ್ಯಗಳ ಅತ್ಯುತ್ತಮ ಸಂಗ್ರಹವೆನ್ನಬಹುದು. ಅದರಲ್ಲಿ ೨೦೦ ಕ್ಕೂ ಮಿಕ್ಕಿ ವೈಜ್ಞಾನಿಕ ಆಧಾರಗಳನ್ನು ಕಲೆಹಾಕಲಾಗಿದೆ. ಅದು ಸಾಮಾನ್ಯರಿಗೂ ಡಾಕ್ಟರರಿಗೂ ಅರ್ಥವಾಗುವಂತೆ ಸರಳ ಇಂಗ್ಲೀಷಿನಲ್ಲಿ ಬರೆಯಲ್ಪಟ್ಟಿದೆ. (ಅದರ ಪ್ರಥಮ ೧೫,೦೦೦ ಪ್ರತಿಗಳು ಪ್ರಕಟನೆಯ ದಿನವೇ ಮಾರಿಹೋದವು. ಅನಂತರ ಹೊರಟ ಅದರ ಅಗ್ಗದರದ ಆವೃತ್ತಿಯ ಲೆಕ್ಕವಿಲ್ಲದಷ್ಟು ಪ್ರತಿಗಳು ಮಾರಾಟವಾಗಿವೆ.)

"ಧೂಮಪಾನ ಮತ್ತು ಆರೋಗ್ಯ ವರದಿಯು ಈ ಪ್ರತಿಬಂಧಕೋಪಾಯಗಳನ್ನು ಕೈಕೊಳ್ಳುವ ಬಗ್ಗೆ ಸರಕಾರ ಮತ್ತು ವ್ಯಕ್ತಿಗಳಿಬ್ಬರಿಗೂ ವ್ಯಾವಹಾರಿಕ ಸೂಚನೆಗಳನ್ನು ಕೊಡುವ ಏಕಮೇವ ವರದಿಯೂ ಆಗಿದೆ. ಅದರ ಕೆಲ ಸ್ಪಷ್ಟ ಸೂಚನೆಗಳು ಕೆಳಗಿನಂತಿವೆ :

- ಸಾರ್ವಜನಿಕರಿಗೆ, ವಿಶೇಷತಃ ಶಾಲಾ ಮಕ್ಕಳಿಗೆ, ಧೂಮಪಾನದ ದುಷ್ಫಲಗಳನ್ನು ಕುರಿತು ಹೆಚ್ಚು ತಿಳಿವಳಿಕೆ ಕೊಡಬೇಕು. "೧೯೫೬-೬೦ ರಲ್ಲಿ ಆರೋಗ್ಯ ಶಿಕ್ಷಣದ ಕೇಂದ್ರ ಸಮಿತಿ ಮತ್ತು ಸ್ಥಾನಿಕ ಸಂಸ್ಥೆಗಳು ಸೇರಿ ೫,೦೦೦ ಪೌಂಡಿಗಿಂತ (ರೂ. ೬೬,೦೦೦) ಕಡಿಮೆ ವೆಚ್ಚ ಮಾಡಿದ್ದರೆ ತಂಬಾಕಿನ ಕಾರಖಾನೆದಾರರು ತಮ್ಮ ಸರಕಿನ ಜಾಹಿರಾತಿಗಾಗಿ ಅದೇ ಅವಧಿಯಲ್ಲಿ ೩೮೦ ಲಕ್ಷ ಪೌಂಡುಗಳನ್ನು (ರೂ. ೫೦ ಕೋಟಿ) ವೆಚ್ಚ ಮಾಡಿದರು." ಸಾರ್ವಜನಿಕ ಪ್ರಚಾರ ಮಾಡುವಾಗ ಧೂಮಪಾನದ ಚಟವನ್ನು ಸರ್ವಥಾ ಬಿಡಲಾರದವರಿಗೆ ಹೆಚ್ಚು ಸುರಕ್ಷಿತ ಧೂಮಪಾನ ವಿಧಾನಗಳನ್ನು (ಫಿಲ್ಟರ್ ತುದಿ, ಹೆಚ್ಚು ಉದ್ದನ್ನ ತುಣುಕನ್ನು ಸೇದದೆ ಒಗೆಯುವುದು, ಪೈಪ್ ಇಲ್ಲವೇ ಸಿಗಾರಿಗೆ ಬದಲಿಸುವುದು ಇತ್ಯಾದಿ) ಸೂಚಿಸಬಹುದು.
- ಮಕ್ಕಳಿಗೆ ಸಿಗರೇಟು ಮಾರುವುದನ್ನು ತಡೆಯಲು ಹೆಚ್ಚು ಪರಿಣಾಮಕಾರಿ ನಿಯಂತ್ರಣಗಳು ಬೇಕು. ಈಗ ಬ್ರಿಟನಿನಲ್ಲಿ ಸ್ಲಾಟ್ ಮಶೀನ್‌ಗಳಲ್ಲಿ ನಿರಾತಂಕವಾಗಿ ಸಿಗರೇಟುಗಳು ಸಿಗುತ್ತವೆ* ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟು ಸೇದಲು ವಿಸ್ತೃತವಾದ ಆತಂಕಗಳು ಇರಬೇಕು.
- ಸಿಗರೇಟಿನ ಮೇಲೆ ಹೆಚ್ಚು ಕರಭಾರ ಹೇರಿ, ಅಗತ್ಯ ಬಿದ್ದರೆ ಪೈಪ್ ತಂಬಾಕಿನ ಮೇಲಿನ ಕರ ಇಳಿಸಬಹುದು.

"ಪೈಪ್ ಸೇದುವವರಿಗೆ ರೋಗ ಭಯವು ಸಿಗರೇಟ್ ಸೇದುವವರಿಗಿಂತ ತುಂಬ ಕಡಿಮೆಯಾಗಿದೆ...ಸಿಗಾರುಗಳನ್ನು ಮಾತ್ರ ಸೇದುವವರಿಗಿರುವ ಅಪಾಯ ಇನ್ನೂ ಕಡಿಮೆ. ಅದು ಧೂಮಪಾನ ಮಾಡದೆನೇ ಇರುವವರಿಗಿಂತ ವಿಶೇಷ ಹೆಚ್ಚಾಗಿಲ್ಲವೆಂದು ತೋರುತ್ತದೆ"

* ವರದಿ ಪ್ರಕಟವಾದ ಒಂದು ತಿಂಗಳೊಳಗೆ ಒಂದು ಸಿಗರೇಟ್ ಕಂಪನಿಯು ತನ್ನ ೬೦೦೦ ಸ್ಲಾಟ್ ಮಶಿನ್‌ಗಳನ್ನು ಹಿಂತೆಗೆದುದಾಗಿ ಸಾರಿದೆ.

ಎಂದು ರಾಯಲ್ ಕಾಲೇಜ್ ವರದಿ ಉಲ್ಲೇಖಿಸಿದೆ.

[ಮೊನ್ನೆ ಎಪ್ರಿಲ್ ಮುಂಗಡ ಪತ್ರದಲ್ಲಿ ಬ್ರಿಟನ್ನಿನ ಅರ್ಥಮಂತ್ರಿಗಳು ಹೀಗಂದಿದ್ದಾರೆ: "ತೊಂದರೆಯೆಂದರೆ, ಕರಭಾರದಲ್ಲಿ ಹೀಗೆ ತಾರತಮ್ಯ ಮಾಡಿದರೆ ತಮ್ಮ ಸಿಗರೇಟುಗಳನ್ನು ತಂಬಾಕಿನಿಂದ ತಾವೇ ಮಾಡಿಕೊಳ್ಳುವವರು ಸುಲಭವಾಗಿ ಇದರಿಂದ ತಪ್ಪಿಸಿಕೊಳ್ಳಬಲ್ಲರು... ಒಟ್ಟು ಸುಂಕವನ್ನೇ ಇನ್ನೂ ಹೆಚ್ಚು ಕಠೋರವಾಗಿ ಹೆಚ್ಚಿಸಿದ್ದಾದರೆ, ಮಿತವಾದ ಧೂಮಪಾನ ಕೂಡ, ಶ್ರೀಮಂತರಲ್ಲದವರ ಶಕ್ತಿಗೆ ಸಿಲುಕಲಿಕ್ಕಿಲ್ಲ. ಇದಕ್ಕೆ ನಾನು ಸಿದ್ಧನಿಲ್ಲ.]

◆ ಫಿಲ್ಟರುಗಳ ಗುಣ ಒಂದೇ ಬಗೆಯಾಗಿಲ್ಲ. ಅದರಿಂದ ಅವುಗಳನ್ನು ಸರಕಾರಿ ಶಾಖೆಯಿಂದ ಪರೀಕ್ಷಿಸಿ ಅವವುಗಳ ಪ್ಯಾಕಿಂಗಿನ ಮೇಲೆ ಅವುಗಳ ಯೋಗ್ಯತೆಯನ್ನು ಮುದ್ರಿಸಿ ಬಿಡುವುದೊಳ್ಳೆಯದು.

ರಾಯಲ್ ಕಾಲೇಜ್ ವರದಿಯನ್ನು ಕೂಡಲೆ ಪಾರ್ಲಿಮೆಂಟಿನಲ್ಲಿ ಆಮೂಲಾಗ್ರ ಚರ್ಚಿಸಲಾಯಿತು. ಆರೋಗ್ಯಮಂತ್ರಿ ಶ್ರೀ ಇನೋಕ್ ಪೊವೆಲ್ಲರು ಕಾಮನ್ಸ್ ಸಭೆಯಲ್ಲಿ ಹೀಗೆ ತಿಳಿಸಿದರು: "ಇದರಲ್ಲಿ ಪುಪ್ಪುಸದ ಕ್ಯಾನ್ಸರಿಗೂ ಧೂಮಪಾನಕ್ಕೂ ಇರುವ ಕಾರ್ಯಕಾರಣ ಸಂಬಂಧವೂ ಧೂಮಪಾನದಿಂದ ಆರೋಗ್ಯಕ್ಕಾಗುವ ಇತರ ಸಾಮಾನ್ಯ ಅಪಾಯಗಳೂ ಅಕೃತ ಮತ್ತು ನಿರ್ವಿವಾದವಾಗಿ ಪ್ರಮಾಣಿತವಾಗಿವೆಯೆಂದು ಸರಕಾರ ಖಂಡಿತವಾಗಿ ಒಪ್ಪುತ್ತದೆ." ವರದಿಯ ಸೂಚನೆಗಳು "ಸರಕಾರದ ಪರ್ಯಾಲೋಚನೆಯಲ್ಲಿವೆ" ಎಂದೂ ಅವರು ಹೇಳಿದರು.

ಬ್ರಿಟಿಶರು ಹೀಗೆ ಈ ಸಮಸ್ಯೆಯನ್ನು ಧೈರ್ಯದಿಂದ ಎದುರಿಸಲಣಿಯಾಗಿರುವಾಗ ಅಮೇರಿಕನ್ ಅಧಿಕಾರಿ ವರ್ಗವು ಮಾತ್ರ ನಿಸ್ಸಂದಿಗ್ಧವಾಗಿ ಸಿದ್ಧವಾದ ಧೂಮಪಾನ - ಆರೋಗ್ಯ ಸಂಬಂಧದ ಪ್ರಶ್ನೆಯಲ್ಲಿ ಧೈರ್ಯಗೇಡಿಗಳಂತೆ ಜಾರಿಕೊಳ್ಳುವ ನೀತಿಯನ್ನು ವಹಿಸಿದೆ.

೧೯೫೯ ರಲ್ಲಿ ಅಮೇರಿಕದ ಆರೋಗ್ಯಶಾಖೆಯ ಸರ್ಜನ್ ಜನರಲ್ಲರು ಅಮೇರಿಕನ್ ಮೆಡಿಕಲ್ ಅಸೋಸಿಯೇಶನ್ ಪತ್ರಿಕೆಯಲ್ಲಿ ಒಂದು ಸುದೀರ್ಘ ವರದಿಯನ್ನು ಪ್ರಕಟಿಸಿದರು. ಅದರಲ್ಲಿ ಈಗ ರಾಯಲ್ ಕಾಲೇಜಿನ ವರದಿಯಲ್ಲಿರುವ ಅನೇಕ ಅಂಶಗಳು ಅಡಕವಾಗಿದ್ದು ಪುಪ್ಪುಸ ಕ್ಯಾನ್ಸರಿನಲ್ಲಿ ಸಿಗರೇಟಿನ ಕಾರಕ ಪಾತ್ರವನ್ನು ಒಪ್ಪಲಾಗಿತ್ತು.

ಆದರೆ ದುರ್ದೈವದಿಂದ ಸರ್ಜನ್ ಜನರಲ್ಲರ ಕೆಲ ಸಹೋದ್ಯೋಗಿಗಳು ಆ ವರದಿಯಲ್ಲಿ ಒಂದು ಚಿಕ್ಕ ಪರಿಚ್ಛೇದವನ್ನು ಸೇರಿಸಿ ಫಿಲ್ಟರುಗಳು ಅಂಶತಃ ರಕ್ಷಣೆ ನೀಡುತ್ತವೆಂಬ ಅಂಶವನ್ನು ಹೀಗಳೆದರು. ಅಮೇರಿಕದ ಫೆಡರಲ್ ವ್ಯಾಪಾರ ಇಲಾಖೆಯು ಈ ನೆವವನ್ನು ಉಪಯೋಗಿಸಿಕೊಂಡು ಅಮೇರಿಕನ್ ಸಿಗರೇಟುಗಳಲ್ಲಿರುವ ತಾರು ಮತ್ತು ನಿಕೊಟೈನ್ ಅಂಶದ ಪ್ರಶ್ನೆಯನ್ನೇ ಮೂಲೆಪಾಲು ಮಾಡಿಬಿಟ್ಟಿತು.

ಆದರೂ ಹೃದಯ ಪರಿವರ್ತನೆಯ ಅಲ್ಪಸ್ವಲ್ಪ ಪ್ರೋತ್ಸಾಹಕರ ಲಕ್ಷಣಗಳು ಕಾಣಿಸಿಕೊಳ್ಳುತ್ತಿವೆ. ಸರ್ಜನ್ ಜನರಲ್ಲರ ವರದಿಯನ್ನು ಬರೆಯುವುದರಲ್ಲಿ ಸಹಾಯಕರಾಗಿದ್ದ ರಾಷ್ಟ್ರೀಯ ಕ್ಯಾನ್ಸರ್ ಸಂಸ್ಥೆಯ ಡಾ. ಮೈಕೆಲ್ ಶಿಮ್‌ಕಿನ್ನರು ಈಗ ಸಿಗರೇಟಿನ ಎಲ್ಲ ಎಲ್ಲ ಪ್ಯಾಕುಗಳ ಮೇಲೂ ಒಳಗಿನ ಸಿಗರೇಟಿನಲ್ಲಿ ಎಷ್ಟು ಅಂಶ ತಾರು ಮತ್ತು ನಿಕೊಟೈನ್ ಇದೆಯೆಂದು ಸ್ಪಷ್ಟವಾಗಿ ಮುದ್ರಿಸಬೇಕೆಂದು ಕಾನೂನು ಮಾಡಬೇಕೆಂಬ ಅಮೇರಿಕನ್ ಕ್ಯಾನ್ಸರ್ ಸಂಘದ ಸೂಚನೆಗೆ ಬಹಿರಂಗ ಬೆಂಬಲವಿತ್ತಿದ್ದಾರೆ.

ರಾಯಲ್ ಕಾಲೇಜ್ ವರದಿ ಪ್ರಕಟವಾದ ನಂತರ, ಒಂದುತಿಂಗಳ ಮುಂಚೆಯೆ ಅಮೇರಿಕದ ಪ್ರತಿನಿಧಿ ಸಭೆಯ ಹಣವಿನಿಯೋಗ ಸಮಿತಿಯ ಗುಪ್ತ ಅಧಿವೇಶನದಲ್ಲಿ ರಾಷ್ಟ್ರೀಯ ಆರೋಗ್ಯ ಸಂಸ್ಥೆಗಳ ಡಾಕ್ಟರರ ಸಾಕ್ಷ್ಯ ಕೇಳಿಕೊಳ್ಳಲಾಯಿತೆಂದೂ ಅವರು ಕ್ಯಾನ್ಸರ್ ಮತ್ತು ಇತರ ರೋಗಗಳಿಗೂ ಸಿಗರೇಟಿಗೂ ಇರುವ ಸಂಬಂಧದ ಬಗ್ಗೆ ಪ್ರಚಂಡ ಪುರಾವೆಗಳಿರುವುದನ್ನು ಒತ್ತಿ ಹೇಳಿ ಧೂಮಪಾನದ ಅಪಾಯಗಳ ಬಗ್ಗೆ ಪ್ರಚಾರಸತ್ರ ಪ್ರಾರಂಭಿಸಬೇಕೆಂದು ಬಲವಾಗಿ ಪ್ರತಿಪಾದಿಸಿದರೆಂದೂ ತಿಳಿದುಬಂತು.

ಖಾಸಗಿಯಾಗಿ ಅನೇಕ ಅಮೇರಿಕನ್ ಸಿಗ

ರೇಟ್ ಉದ್ದಿಮೆಗಾರರು ಪ್ಯಾಕಿನ ಮೇಲೆ ಲೇಬಲ್ ಹಚ್ಚುವುದನ್ನೂ ಪ್ರಮಾಣ ಪರೀಕ್ಷೆಯನ್ನೂ ತಾವು ಸ್ವಾಗತಿಸುವುದಾಗಿ ಹೇಳುತ್ತಾರೆ. ಆದರೆ ಇದರ ಬಗ್ಗೆ ಸರಕಾರವೇ (ಕಾಯದೆಯ ದೃಷ್ಟಿಯಿಂದ) ನಿಶ್ಚಿತ ಸೂಚನೆ ಮಾಡಲು ಮುಂದಾಗಬೇಕೆಂದು ಅವರ ಹೇಳಿಕೆ.

ಮುಂದಡಿಯಿಡಬೇಕಾದರೂ ಯಾರು? ಎಂದೀಗ ಅಮೇರಿಕನ್ನರು ಕೇಳುತ್ತಿದ್ದಾರೆ. ಬ್ರಿಟನ್ ದಾರಿ ತೋರಿಸುವ ವರೆಗೂ ಅಮೇರಿಕ ಏನೂ ಮಾಡಲಿಕ್ಕಿಲ್ಲವೆಂದು ಕೂಡ ಅನೇಕ ಅಮೇರಿಕನ್ನರಿಗೆ ಅನಿಸತೊಡಗಿದೆ.

ಇತ್ತ "ಲ್ಯಾನ್ಸೆಟ್" ಪತ್ರಿಕೆಯಲ್ಲಿ ಹೀಗೊಂದು ಅಭಿಪ್ರಾಯ ಪ್ರಕಟವಾಗಿದೆ: "ಧೂಮಪಾನದಿಂದಾಗುವ ಅನರ್ಥಗಳು ತಿಳಿದು ಬಂದ ಮೇಲೂ ಹತ್ತು ವರ್ಷಗಳ ವರೆಗೆ ಈ ಸಮಸ್ಯೆಗೆ ಆಂಶಿಕ ಪರಿಹಾರವನ್ನು ಕೂಡ ಕಂಡು ಹಿಡಿಯಲು ನಮ್ಮಿಂದಾಗಲಿಲ್ಲೆಂದು ಭಾವಿ ಇತಿಹಾಸಕಾರರು ಅಭಿಪ್ರಾಯಪಡುವರು. ಧೂಮಪಾನಜನ್ಯ ಕ್ಯಾನ್ಸರಿನಿಂದ ಸಾಯುವವರ ಸಂಖ್ಯೆ ವಿಪರೀತವಾಗಿ ಮತ್ತು ಅಧಿಕಾಧಿಕವಾಗಿ ಬೆಳೆಯುತ್ತಿರುವುದು ನಮ್ಮ ರಾಜಕೀಯ ಮತ್ತು ಆರ್ಥಿಕ ಜೀವನ ಕ್ರಮವೇ ದುಷ್ಟವಾಗಿತ್ತೆಂಬುದಕ್ಕೆ ನಿದರ್ಶನವೆಂಬುದಾಗಿ ಇತಿಹಾಸದಲ್ಲಿ ಉಲ್ಲೇಖಿಸಲ್ಪಡಬಹುದು." *



"ಮಗೂ, ಮೇಜಿನ ಮೇಲೆ ನಶ್ಯದ ಪೊಟ್ಟಣ ಇಟ್ಟಿದ್ದೆನಲ್ಲ ಎಲ್ಲಿ? ನಿನ್ನ ಕಣ್ಣಿಗೇನಾದರೂ ಬಿತ್ತೆ?"

"ಇಲ್ಲಪ್ಪಾ, ಕಣ್ಣಿಗೆ ಬಿದ್ದೀತೆಂದು ಹೊರಗೆ ಒಗೆದಿದ್ದೇನೆ."

—ರಮೇಶ್ ಭಟ್ಟ

*

ಆತ- ಕೆಟ್ಟೆ ಸ್ವಾಮಿ. ಏನೋ ಅನುಕೂಲವಾಗಲೆಂದು ಮನೆಯಲ್ಲಿಯ ಎರಡು ಕೋಣೆಗಳನ್ನು ಬಾಡಿಗೆಗೆ ಕೊಟ್ಟೆ. ಈಗಾತ ಬಾಡಿಗೆಯನ್ನೂ ಕೊಡುವುದಿಲ್ಲ, ಮನೆಯನ್ನೂ ಬಿಡುವುದಿಲ್ಲ. ಏನು ಮಾಡಲಿ ತಿಳಿಯದಾಗಿದೆ.

ಈತ- ಛೆ ನಿಮ! ಅದಕ್ಕೇನ್ರೀ ಚಿಂತೆ? ನಿಮ್ಮ ಮಗಳಿಗೆ ನಿತ್ಯ ಅರ್ಧರಾತ್ರಿಯ ವರೆಗೆ ಸಂಗೀತ ಪಾಠ ಹೇಳಿಸಿಬಿಡಿ.

ಎಚ್. ಎ. ದಂಬಳ

*

ಗಂಡ- "ಲೇ, ಅಷ್ಟು ಹೊತ್ತಿನ ತನಕ ಗೇಟಿನ ಬಳಿ ನಿಂತು ನಿನ್ನೊಡನೆ ಮಾತಾಡುತ್ತಿದ್ದ ಆ ಹೆಂಗಸು ಯಾರೆ?"

ಹೆಂಡತಿ- "ಅವಳು ಶ್ಯಾಮಲೆ, ರಾಮರಾಯರ ಪತ್ನಿ. ಅವಳಿಗೆ ಒಳಗಡೆ ಬಂದು ಮಾತಾಡುವಷ್ಟು ಪುರುಸೊತ್ತಿರಲಿಲ್ಲವಂತೆ."

—ಕೆ ರಮೇಶ ಶೈ.

ಕರ್ನಾಟಕ ಸಿಂಹ ಎಂದು ಹೆಸರಾಂತ ನಾಯಕ ಮನೆಯಲ್ಲಿ ಅಷ್ಟು ಸುಖಿಯಾಗಿರಲಿಲ್ಲ!

# ನಾನು ಹೆಂಡತಿಯನ್ನು ಸುಧಾರಿಸಬೇಕೆಂದೆ!

ಮೂಲ : ಗಂಗಾಧರರಾವ್ ದೇಶಪಾಂಡೆ

ಕನ್ನಡಕ್ಕೆ: ದ. ಬಾ. ಕುಲಕರ್ಣಿ

ಮದುವೆಯ ವೇಳೆಗೆ ನನ್ನ ವಯಸ್ಸು ಚಿಕ್ಕದಾಗಿತ್ತಾದರೂ ಮದುವೆಯ ಉದ್ದೇಶದ ಬಗ್ಗೆ ನಾನು ಅಜ್ಞಾನಿಯಾಗಿದ್ದೆನೆಂದು ಹೇಳಲಾರೆ.

ಆದರೆ ನಮ್ಮ ಮನೆತನ ತೀರ ಹಳೆಯ ತರಹದ್ದು. ನಮ್ಮ ಪ್ರಾಂತ ಕರ್ನಾಟಕವೂ ಹಿಂದುಳಿದದ್ದು. ಅಂತೆಯೇ ಪುಣೆ-ಮುಂಬಯಿ ಕಡೆಯ ರೀತಿರಿವಾಜುಗಳಿಗಿಂತ ನಮ್ಮ ಕಡೆಯ ಪದ್ಧತಿ ಬಹಳ ಹಳೆಯ ರೀತಿಯದು. ನನ್ನ ತಂದೆ ೧೯೧೨ ರಲ್ಲಿ ತೀರಿಕೊಂಡರು. ನನ್ನ ತಂದೆ-ತಾಯಿಯರು ಮಾತಾಡುತ್ತ ಕುಳಿತದ್ದನ್ನು ನಾನು ನೋಡಿದ್ದೇ ಇಲ್ಲ. ಅಡಿಗೆಯ ವ್ಯವಸ್ಥೆಯಲ್ಲಲ್ಲದೆ ಇತರ ಪ್ರಾಪಂಚಿಕ ಕೆಲಸಗಳಲ್ಲಿ ನನ್ನ ತಾಯಿ ನನ್ನ ತಂದೆ ಜೀವಿಸಿರುವಷ್ಟು ಕಾಲ ಅವರೊಡನೆ ಪಾಲುಗೊಳ್ಳಲಿಲ್ಲ.

ಅಂದಮೇಲೆ ನನಗೆ ಗೊತ್ತುಮಾಡಿದ ಹುಡುಗಿಯನ್ನು ನನಗೆ ತೋರಿಸಿದ್ದರೆಂಬುದೇನು ಕಡಿಮೆ ಪ್ರಮಾಣದ ಸುಧಾರಣೆಯಲ್ಲ. ಆಗ ಹುಡುಗ-ಹುಡುಗಿಯರ ಎತ್ತರಗಳನ್ನು ದಾರದಿಂದ ಅಳೆದು ಅಂತರ ನೋಡುವ ಪದ್ಧತಿ ಇತ್ತು. ನಮಗೂ ಈ ಪ್ರಯೋಗವಾಗಿತ್ತು. ಅಲ್ಲದೆ ಹುಡುಗಿಯನ್ನು ನನಗೆ ತೋರಿಸಲು ಕರೆತಂದಾಗ ನಮ್ಮಿಬ್ಬರನ್ನೂ ಜತೆಗೆ ನಿಲ್ಲಿಸಿ ಜೋಡಿ ಹೇಗೆ ಶೋಭಿಸುತ್ತದೆಂದು ನೋಡುವ ಪ್ರಯೋಗವೂ ಆಯಿತು.

ನನ್ನ ತಾಯಿ ತೀರಿಕೊಂಡದ್ದು ೧೯೩೯ ರಲ್ಲಿ. ನನ್ನ ತಂದೆ ಮತ್ತು ಅಜ್ಜಿ ತೀರಿಕೊಂಡನಂತರವೂ ಅವರು ಮನೆಯಲ್ಲಿ ಗಟ್ಟಿಯಾಗಿ ಮಾತನಾಡಿದ ಸಂದರ್ಭಗಳು ತೀರ ಕಡಿಮೆ. ಈ ಎಲ್ಲದರ ಪರಿಣಾಮ ನನ್ನ ಮತ್ತು ನನ್ನ ಹೆಂಡತಿಯ ಮೇಲಾಗುವುದು ಸ್ವಾಭಾವಿಕವಷ್ಟೆ.

ನನ್ನ ತಂದೆ, ತಾಯಿ ಮತ್ತು ಅಜ್ಜಿ ಇವರೆಲ್ಲರಿಗೆ ನನ್ನ ಹೆಂಡತಿಯ ಮೇಲೆ ತುಂಬ ಪ್ರೀತಿ. ತಂದೆಯವರಂತೂ ಅವಳ ಚಿಕ್ಕಂದು "ಬುದ್ಧಿವಂತೀ" ಎಂದು ಕರೆಯುತ್ತಿದ್ದರು. ಇಷ್ಟೊಂದು ಅಚ್ಚುಮೆಚ್ಚಾಗಿದ್ದರೂ ಅವಳು ನನ್ನ ತಾಯಿಯನ್ನೇ ಅನುಕರಿಸಿದಳು. ೧೯೧೪ ರಲ್ಲಿ ಅವಳು ತೀರಿಕೊಂಡಳು. ಸಾಯುವವರೆಗೂ ಈ ವ್ರತವನ್ನು ಅವಳು ಬಿಟ್ಟೂಬಿಡದೆ ಪಾಲಿಸಿದಳು. ಹೀಗಾಗಿ ಪ್ರಪಂಚದ ಒಂದು ಪ್ರಮುಖವಾದ ಸೌಖ್ಯವು ನನಗೆ ಲಭ್ಯವಾಗದೆ ಹೋಯಿತು.

*

ಶ್ರೀ ಮೋಡಕ ವಾಮನರಾಯರು ಮುಂಬಯಿಯ ಎಲ್‌ಫಿನ್‌ಸ್ಟನ್

ಹಾಯಸ್ಕೂಲಿನ ನಿವೃತ್ತ ಪ್ರಿನ್ಸಿಪಾಲರು. ಅವರು ಅದೇ ಆಗ ಪುಣೆಗೆ ಬಂದು ನೆಲಸಿದ್ದರು. ಆಗಿನ ಪ್ರತಿಷ್ಠಿತ ಸುಧಾರಕರಲ್ಲಿ ಅವರ ಗಣನೆಯಾಗಿತ್ತು. ಮೋಡಕರ ಒಬ್ಬ ಮಗ ಗೋವಿಂದರಾಯರೆಂಬವರು ನಮ್ಮ ಕಾಲೇಜಿಗೆ ಬಂದರು. ನನಗೂ ಅವರಿಗೂ ಗೆಳೆತನ ಕೂಡಿತು. ಈ ಗೆಳೆತನದಿಂದ ನಾನು ಮೋಡಕರ ಮನೆಗೆ ಹೋಗಿಬರುವ ಸಂಧಿ ಬಹಳವಾಗಿ ದೊರಕಿತು. ಸುಧಾರಕರಲ್ಲಿ ಅಗ್ರಣಿಗಳೆಂದು ಹೇಳಲಾದವರ ಕೌಟುಂಬಿಕ ಸ್ಥಿತಿಗತಿ ಕೆಲಮಟ್ಟಿಗಾದರೂ ತಿಳಿದುಬಂತು.



ನಮ್ಮ ಕಡೆಯ ಗೃಹಸ್ಥಿತಿಗಿಂತ ಈ ಜನರ ಗೃಹಸ್ಥಿತಿ ಎಷ್ಟೋ ಪಟ್ಟು ಸುಧಾರಿಸಿದ್ದೆಂದು ನನಗರಿವಾಯಿತು. ಮನೆಯಲ್ಲಿ ಹೆಂಗಸರು ಮತ್ತು ಗಂಡಸರು ಕೂಡಿ ಬೆರೆತು ನಡೆದುಕೊಳ್ಳುವುದು, ಗಂಡಹೆಂಡತಿ ಪರಸ್ಪರ ಮುಕ್ತವಾಗಿ ಮಾತಾಡುವುದು—ಇತ್ಯಾದಿ ವಿಷಯಗಳು ಕೇವಲ ನನ್ನ ಕಲ್ಪನೆಗಳಾಗಿದ್ದವು. ಆದರೆ ಅಂಥದನ್ನು ಪ್ರತ್ಯಕ್ಷ ನೋಡುವ ಮತ್ತು ಅನುಭವಿಸುವ ಯೋಗ ಬಂದಿರಲಿಲ್ಲ. ಮೋಡಕರ ಕುಟುಂಬದಲ್ಲಿ ಹೀಗಿರುವುದನ್ನು ನೋಡುವ ಸಂಧಿ ದೊರೆಯಿತಲ್ಲದೆ ನಾನು ಅವರ ಮಗನ ಗೆಳೆಯನೆಂಬುದರಿಂದ ನನಗೂ ಅವರೊಡನೆ ನಿಸ್ಸಂಕೋಚವಾಗಿ ನಡೆದುಕೊಳ್ಳುವ ಅವಕಾಶವಾಯಿತು.

ಮೊದಮೊದಲು ನಾನು ಆ ಮನೆಯ ಹೆಂಗಸರೊಡನೆ ನಮ್ಮ ಕಡೆಯಂತೆಯೇ ನಡೆದುಕೊಳ್ಳುತ್ತಿದ್ದೆ. ಸ್ವತಂತ್ರವಾಗಿ ನಡೆನುಡಿಯಲು ಬಹಳ ಸಂಕೋಚವೆನಿಸುತ್ತಿತ್ತು. ಅಲ್ಲದೆ ಗಂಡಸರು ಯಾರಾದರೂ ಇರುವಾಗಲಲ್ಲದೆ ನಾನು ಮನೆಯ ಯಾವ ಹೆಂಗಸರೊಡನೆಯೂ ಮಾತಾಡುತ್ತಿದ್ದಿಲ್ಲ. ಬಹಳವಾದರೆ ಪ್ರಶ್ನೆಗೆ ಉತ್ತರ ಕೊಡುವ ಮಟ್ಟಿಗೆ ಮಾತಾಡುತ್ತಿದ್ದೆ. ಆದರೆ ಕೆಲ ದಿನಗಳಲ್ಲೇ ಈ ಸಂಕೋಚ ಅಥವಾ ನಾಚಿಕೆ ಕಡಿಮೆಯಾಗುತ್ತ ಬಂತು. ಮೋಡಕರ ಕುಟುಂಬ ಮತ್ತು ಹುಡುಗಿಯರು ನನ್ನೊಡನೆ ನಡೆನುಡಿಯುವ ರೀತಿಯಿಂದಲೇ ನನ್ನಲ್ಲಿ ಈ ಬಗೆಯ ಸುಧಾರಣೆ ಕಂಡುಬಂತು.

ವಾಮನರಾಯರ ಮನೆಯವರಿಗೆ ನಾನೊಬ್ಬ ಕರ್ನಾಟಕದ ಸುಧಾರಕ ಮನೆತನದ ಪೈಕಿ ಎಂಬ ಭಾವನೆಯಾಗಿತ್ತು. ನನ್ನ ಮಾತು ರೀತಿಗಳ ಮೇಲಿಂದ ಅವರಿಗೆ ಹಾಗೆನ್ನಿಸುವುದು ಸ್ವಾಭಾವಿಕವಾಗಿತ್ತು. ಅವರ ತಿಳಿವಳಿಕೆ ತಪ್ಪಾದದ್ದೆಂಬುದನ್ನು ಬಿಂಬಿಸಲು ನಾನು ಒಂದೆರಡು ಬಾರಿ ಪ್ರಯತ್ನಿಸಿದೆ.

ಆದರೆ ಅವರು ತಮ್ಮ ಅಭಿಪ್ರಾಯವನ್ನು ಒಂದಿಷ್ಟೂ ಬದಲಿಸಲಿಲ್ಲವೆನ್ನಬೇಕು.

ಮಾಮನರಾಯರ ಚಿಕ್ಕ ಮಗಳನ್ನು ಧಾರವಾಡದ ರಾಮಚಂದ್ರ ಬಾಳಾಜಿ ಕರಂದೀಕರ ಇವರಿಗೆ ಕೊಟ್ಟಿತ್ತು.

ನನಗೆ ಮೋಡಕರ ಪರಿಚಯವಾದ ನಂತರ ಧಾರವಾಡಕ್ಕೆ ಅತ್ತೆಯ ಮನೆಗೆ ಹೋಗುವಾಗ ಈ ಹುಡುಗಿ ನಮ್ಮಲ್ಲಿ ಇಳಿದುಕೊಂಡು ಹೋಗುತ್ತಿದ್ದಳು. ಅವಳ ದೃಷ್ಟಿಗೆ ನಮ್ಮ ಹಿಂದುಳಿದ ರೀತಿ ಬೀಳಬಾರದೆಂದು ನಾನು ಬಹಳ ಜಪ್ಪಿಸುತ್ತಿದ್ದೆ. ಅವಳು ಬರುವ ಬಗ್ಗೆ ಪತ್ರ ಬಂದಿತೆಂದರೆ ನನ್ನ ಹೆಂಡತಿ ಮತ್ತು ತಂಗಿಯರು ಹೇಗೆ ನಡೆದುಕೊಳ್ಳಬೇಕೆಂಬುದನ್ನು ನಾನು ಮುಂದಾಗಿ ಹೇಳಿ ಇಡುತ್ತಿದ್ದೆ. ಆದರೆ ನಮ್ಮ ಮನೆಯಲ್ಲಿ ಆ ಸೂಚನೆಗಳೊಂದೂ ಫಲಿಸುತ್ತಿದ್ದಿಲ್ಲ. ಆ ಹೆಂಗಸು ನಮ್ಮ ಮನೆಯವರಿಗೆ ತಿಳಿಯದ ವಿಷಯದ ಬಗೆಗೆ ಮಾತಾಡುತ್ತಿದ್ದಳು. ಆಗ ನನ್ನ ಹೆಂಡತಿ ಏನೊಂದೂ ಮಾತಾಡದೆ ಸ್ವಸ್ಥವಾಗಿ ಕುಳಿತುಬಿಡುವಳು. ನನ್ನ ಹೆಂಡತಿಗಿಂತ ನನ್ನ ತಂಗಿಗೆ ನಮ್ಮ ಮನೆಯಲ್ಲಿ ಹೆಚ್ಚಿನ ಸ್ವಾತಂತ್ರ್ಯ; ಮತ್ತವಳು ಮರಾಠೀ ಐದನೆಯ ಇಯತ್ತೆಯ ವರೆಗೆ ಕಲಿತವಳಾದ್ದರಿಂದ ಮನೆಗೆ ಬರುವ ವರ್ತಮಾನಪತ್ರ ಮುಂತಾದವುಗಳನ್ನು ಆಗಾಗ ಓದುತ್ತಿದ್ದಳು. ಅದರಿಂದ ಬಂದವರ ಮಾತು ಕೇಳಿ ಏನಾದರೂ ಉತ್ತರಕೊಡಬಲ್ಲವಳಾಗಿದ್ದಳವಳು. ಆದರೆ ಮಡಿಮೈಲಿಗೆಯ ಬಗೆಗಿನ ನಮ್ಮ ಮನೆಯ ಕಟ್ಟುನಿಟ್ಟು ಅವರಿಗೆ ಚೆನ್ನಾಗಿ ತಿಳಿದುಬರುವಂತಿತ್ತು.

ನನ್ನ ಹೆಂಡತಿಯನ್ನು ಜತೆಗೆ ಕಳಿಸಿ ಅವರಿಗೆ ಊರನ್ನು ತೋರಿಸಬೇಕೆಂದು ನಾನು ಮನಸ್ಸಿನಲ್ಲೇ ಯೋಚಿಸಿದ್ದೆ. ಆದರೆ ನಾನೂ ಜೊತೆಗಿರಬೇಕೆಂದು ಆ ಹೆಂಗಸು ಪಟ್ಟು ಹಿಡಿದರು. ನಾನಾದರೂ ಒಪ್ಪಿಕೊಂಡೆ. ಆ ಕಾರಣದಿಂದ ನಾನು ಗೊತ್ತುಮಾಡಿದ ವ್ಯವಸ್ಥೆಯೆಲ್ಲ ಹದಗೆಟ್ಟಿತು. ನಾನೂ ಜತೆಗೆ ಹೊರಡುವವನೆಂಬುದು ತಿಳಿದಾಗ ನನ್ನ ಹೆಂಡತಿ ನಮ್ಮೊಡನೆ ಬರಲು ನಿರಾಕರಿಸಿದಳು. ಆಗ ನಾನೊಬ್ಬನೇ ಹೊರಡುವಂತಾಯಿತು. ರಸ್ತೆಗುಂಟ ಗಾಡಿಯಲ್ಲಿ ಒಬ್ಬ ತರುಣ ಸ್ತ್ರೀಯೊಂದಿಗೆ ತಿರುಗಾಡಲು ಹೊರಡುವ ಪ್ರಸಂಗ ನನಗೆ ಅದೇ ಮೊದಲಿನದಾದ್ದರಿಂದ ನನಗಾದರೂ ಆಗ ಹೇಗೆಹೇಗೋ ಅನ್ನಿಸಿತು. ಆದರೂ ಮೋಡಕರೊಡನೆ ನನಗೆ ಒಳ್ಳೆಯ ಸಂಬಂಧ ಬೆಳೆದುಬಂದುದರಿಂದ ಹೆಚ್ಚಿನ ತೊಂದರೆಯೇನೂ ಉಂಟಾಗಲಿಲ್ಲ. ಬೀದಿಯಲ್ಲಿ ನಮ್ಮನ್ನು ಕಂಡ ಪರಿಚಿತರಿಗೂ ಅಪರಿಚಿತರಿಗೂ ಮಾತ್ರ ಈ ನೋಟ ಆಶ್ಚರ್ಯಕರವೆನ್ನಿಸಿರಬೇಕು. ಮರುದಿನ ಒಂದಿಬ್ಬರು ಈ ಮಹಿಳೆ ಯಾರೆಂದು ನನ್ನೊಡನೆ ಕೆದರಿ ಕೇಳಿಯೂಬಿಟ್ಟರು.

ನಾಲ್ವತ್ತು ವರುಷಗಳ ಹಿಂದೆ ಬೆಳಗಾವಿಯಲ್ಲಿ ಇಂಥ ಪರಿಸ್ಥಿತಿ ಇತ್ತು. (ಇತ್ತೀಚೆ ವೈಚಾರಿಕವಾಗಿ ಬಹಳ ಮಟ್ಟಿಗೆ ಬದಲು ಕಂಡಿದೆ.) ಅತಿಥಿಗಳಿಗೆ ಹೀಗೇಕೆ-ಎನ್ನಿಸುವುದು ಸಹಜ. ಹಾಗೆ ನನ್ನೆದುರು ಅವರು ಉದ್ಗಾರವನ್ನು ಸಹ ಎತ್ತಿದ್ದುಂಟು. ಆಗ ಮಾತ್ರ ನನಗೆ ತೀರ ನಾಚಿಕೆಯೆನ್ನಿಸುತ್ತಿತ್ತು. ಮೋಡಕರ ಮನೆಯಲ್ಲಿ ಮಾತಾಡುವಾಗ ನಾನು ಸುಧಾರಕರ ಡೌಲಿನಲ್ಲಿ ಮಾತಾಡುತ್ತಿದ್ದೆ.

ನನ್ನ ವಿಚಾರವೂ ಹಾಗೇ ಇದ್ದದ್ದು. ಮಡಿಮೈಲಿಗೆಯ ವಿಧಿನಿಷೇಧಗಳನ್ನು ಲೆಕ್ಕಿಸಬಾರದು, ಜಾತಿಭೇದವನ್ನು ಗಣಿಸಲಾಗದು— ಇತ್ಯಾದಿಯಾಗಿ ನನ್ನ ಅಳವಿನಲ್ಲಿರುವ ಯೋಚನೆಗಳನ್ನು ಆಚರಣೆಯಲ್ಲಿ ತರಲು ಸಾಧ್ಯವಿದ್ದಷ್ಟೂ ಯತ್ನಿಸುತ್ತಿದ್ದೆ. ಆದರೆ ಯಾವ ವಿಷಯದಲ್ಲಿ ಇನ್ನೊಂದು ವ್ಯಕ್ತಿಯ ಸಂಬಂಧ ಬರುವುದೋ ಆ ಪ್ರಸಂಗದಲ್ಲಿ ನಾನು ಪರಾಧೀನನಾಗುತ್ತಿದ್ದೆ. ಆಗ ನನ್ನದೇನೂ ನಡೆಯುತ್ತಿದ್ದಿಲ್ಲ.

ನನ್ನ ಮನೆಯ ಇರುವಿಕೆ ನನ್ನ ಆಚಾರವಿಚಾರಗಳಿಗೆ ವ್ಯತಿರಿಕ್ತವಾಗಬಾರದೆಂದು ನಾನು ಮನೆಯಲ್ಲಿ ಪ್ರಯತ್ನಿಸುತ್ತಿದ್ದಿಲ್ಲವೆಂದಲ್ಲ. ಆದರೆ

ಕೇವಲ ನನ್ನ ಮಟ್ಟಿಗೆ, ನನ್ನ ನಡವಳಿಕೆಯ ಸಂಬಂಧವಾಗಿ ಮನೆಯ ಜನ—ವಿಶೇಷತಃ ಹಿರಿಯರಾದವರು-ಕಣ್ಣು ಮುಚ್ಚಿಕೊಂಡಿದ್ದರು. ಮನೆಗೆ ನಾನೊಬ್ಬನೆ ಮಗನಾದ್ದರಿಂದ ಅವರು ನಿರುಪಾಯರಾಗಿದ್ದರು. ಹಾಗಿದ್ದರೂ ಅವರ ಇರುವಿಕೆಯ ಮೇಲೆ ಮಾತ್ರ ಯಾವ ಹೆಚ್ಚಿನ ಪರಿಣಾಮವೂ ಉಂಟಾಗಲಿಲ್ಲ. ತೀರ ಇತ್ತೀಚೆಗೆ ನನ್ನ ಅಭಿಪ್ರಾಯ ನನ್ನ ತಾಯಿಗೆ ಮಾತ್ರ ಸ್ವಲ್ಪ ಸ್ವಲ್ಪವಾಗಿ ಒಪ್ಪಿತವಾಗುತ್ತಿರುವಂತೆ ನನಗನಿಸ ತೊಡಗಿತ್ತು.

ಆಗ ನನ್ನ ಸತ್ತೆ ಕೆಲಮಟ್ಟಿಗಾದರೂ ನಡೆಯುತ್ತಿದ್ದ ಸ್ಥಳವೆಂದರೆ ನನ್ನ ಹೆಂಡತಿ! ಹೆಂಡತಿ ಓದಲು ಬರೆಯಲು ಕಲಿಯಲೆಂದು ನಾನು ಪ್ರಯತ್ನಿಸಿದೆ. ಆದರೆ ಯಶ ನನ್ನ ಕೈಗೂಡಲಿಲ್ಲ. ಇಂಥ ಕೆಲಸಗಳೆಲ್ಲ ಯಶಸ್ವಿಯಾಗಬೇಕಾದರೆ ಮನೆಯಲ್ಲಿ ಸ್ವತಂತ್ರವಾಗಿ ಇರುವಂತೆ ಯಾವ ಅನುಕೂಲತೆಗಳು ಅವಶ್ಯವಾಗಿ ಬೇಕಾಗುವವೋ ಅದಾವುದೂ ನನಗೆ ದೊರೆಯಲಿಲ್ಲ. ನನ್ನ ತಂಗಿಯ ಮೂಲಕ ನನ್ನ ಹೆಂಡತಿ ಸ್ವಲ್ಪವಾದರೂ ಓದು ಬರಹ ಕಲಿಯಲೆಂದು ನಾನು ಬಯಸಿದೆ. ಅವರಿಗೆ ಹಾಗೆಂದು ನಾನು ಹೇಳಿ ನೋಡಿದೆ. ನನ್ನ ತಂಗಿ ಒಪ್ಪಿಕೊಂಡಳು. ಆದರೆ ಹೆಂಡತಿಯ ಮನಸ್ಸಿಗೆ ಈ ವ್ಯವಸ್ಥೆ ಸರಿಬರಲಿಲ್ಲ. ಹೀಗೇಕಾಗಬೇಕೆಂಬುದನ್ನು ಪರೀಕ್ಷಿಸಲು ಒಮ್ಮೆ ನನ್ನ ಹೆಂಡತಿಯನ್ನು ಜಬರಿಸಿ ಕೇಳಿ ನೋಡಿದೆ. ನನ್ನ ಒತ್ತಾಯಕ್ಕೆ ಉತ್ತರವೇನೋ ದೊರೆಯಿತು. ಆದರೆ ನಾನವಳಿಗೆ ಕಲಿಸಬೇಕೆಂದಿದ್ದ ಹುಮ್ಮಸ್ಸು ತಣ್ಣಗಾಯಿತು. ಮತ್ತೆ ನಾನೆಂದೂ ಇಂಥ ಪ್ರಯತ್ನ ಮಾಡಲಿಲ್ಲ. ಹೆಂಗಸರು ಬರೆಯಲು ಓದಲು ಕಲಿತರೆಂದರೆ ಸರಸ್ವತೀ ದೇವಿ ಶಾಪಕೊಡುತ್ತಾಳೆಂದು ನನ್ನ ಹೆಂಡತಿಯಿಂದ ಸ್ಪಷ್ಟೀಕರಣ ದೊರಕಿತ್ತು!

ಜ್ಯೂನಿಯರ್ ಬಿ. ಎ. ತರಗತಿಗೆ ನಮಗೆ ಭವಭೂತಿಯ "ಉತ್ತರ ರಾಮಚರಿತ" ನಾಟಕವು ಪಠ್ಯವಾಗಿತ್ತು. ಪ್ರೊ. ಭಾಂಡಾರಕರರು ಅದನ್ನು ಮನಃಪೂರ್ವಕವಾಗಿ ಕಲಿಸುತ್ತಿದ್ದರು. ಪ್ರೇಮ ಸಂಬಂಧದ ಮತ್ತು ಸ್ತ್ರೀದಾಕ್ಷಿಣ್ಯದ ಅನೇಕ ಪ್ರಸಂಗಗಳು ಆ ನಾಟಕದಲ್ಲಿ ಇದ್ದೇ ಇವೆ. ಭಾಂಡಾರಕರರು ಈ ಪ್ರಸಂಗಗಳನ್ನು ಮನಃಪೂರ್ವಕವಾಗಿ ಕಲಿಸುತ್ತಿದ್ದರಿಂದ ಮೇಲೆ ಅದರ ಪರಿಣಾಮ ತರುಣ ವಿದ್ಯಾರ್ಥಿಗಳ ಮೇಲಾಗುವುದು ತೀರ ಸಹಜವಾಗಿತ್ತು. ಕನಿಷ್ಠ ನನ್ನ ಮೇಲಂತೂ ಅಂಥ ಪರಿಣಾಮವಾಯಿತಲ್ಲದೆ ಈ ಅನುಭವ ಮನೆಯಲ್ಲೂ ಉಂಟಾಗಬೇಕೆಂದು ನಾನು ಇಚ್ಛಿಸಿದೆ. ಆದರೆ ಹಿರಿಯರಿದ್ದ ಮನೆಯಲ್ಲಿ ನನ್ನ ವಿಚಾರಗಳನ್ನು ಆಚರಣೆಯಲ್ಲಿ ತರುವುದು ಕಠಿಣವೆನ್ನಿಸಿತು. ಕರ್ಮಧರ್ಮ ಸಂಯೋಗದಿಂದ ಹಿರಿಯರಾದವರು ಬೆಳಗಾವಿಯಲ್ಲಿ ಇಲ್ಲದಿರುವಾಗ ನಾವಿಬ್ಬರೇ ಮನೆಯಲ್ಲಿ ಇರುವಂಥ ಯೋಗವೊಮ್ಮೆ ಒದಗಿಬಂತು. ಈ ಸಮಯದ ಲಾಭವನ್ನು ಪೂರ್ತಿಯಾಗಿ ಪಡೆಯಬೇಕೆಂಬ ಮನಸ್ಸಾಯಿತು. ಹಾಗೆ ಪ್ರಯತ್ನವನ್ನೂ ಆರಂಭಿಸಿದೆ.

ಕಾಲೇಜಿನಲ್ಲಿರುವಾಗ ಚಹಾ, ಬಿಸ್ಕೀಟು, ಬ್ರೆಡ್ಡು ಮುಂತಾದವುಗನ್ನು ಆಗಾಗ ತೆಗೆದುಕೊಳ್ಳುತ್ತಿದ್ದೆ. ಮನೆಯಲ್ಲೂ ಚಹಾ, ಹುಟ್ಲೆ ಪಾಮರ ಬಿಸ್ಕೀಟು ನನ್ನ ಮಟ್ಟಿಗೆ ನಡೆಯುತ್ತಿತ್ತು. ಆದರೆ ಬ್ರೆಡ್ಡನ್ನು ಮಾತ್ರ ಆ ವರೆಗೆ ತಂದಿದ್ದಿಲ್ಲ. ಮನೆಯಲ್ಲಿ ನಾವಿಬ್ಬರೇ ಇರುವಾಗ ಒಂದು ದಿನ ಬ್ರೆಡ್ ತಂದು ಟೋಸ್ಟ್ ಮಾಡಿ ಚಹಾದ ಜೊತೆಗೆ ತೆಗೆದುಕೊಳ್ಳಬೇಕೆಂಬ ಹುಮ್ಮಸ್ಸು ಬಂತು. ಹೆಂಡತಿಗೂ ಟೋಸ್ಟ್ ಮಾಡುವ ವಿದ್ಯೆಯನ್ನು ಕಲಿಸಬೇಕು— ಅಂದರೆ ಮುಂದೆ ಎಂದಾದರೂ ಟೋಸ್ಟ್ ಬೇಕೆನ್ನಿಸಿದರೆ ಅವಳೇ ಕೈಯಾರೆ ಮಾಡಿಕೊಡಬಹುದು— ಎಂಬ ಆಸೆ ನನ್ನದು. ಎಂತಲೇ ನಾನು ನಡುಮನೆಯಲ್ಲಿ ಕುಳಿತು ಬ್ರೆಡ್ಡನ್ನು ತುಂಡುಗಳಾಗಿ ಹೆಚ್ಚಿ ಟೋಸ್ಟ್ ಮಾಡುವ ಎತ್ತುಗಡೆ ಮಾಡಿದೆ. ಅಲ್ಲದೆ ಟೋಸ್ಟ್ ಮಾಡುವ ವಿಧಾನವನ್ನೂ ತಿಳಿಸಿಕೊಟ್ಟೆ. ನನ್ನ ಹೆಂಡತಿ ಈ ಎಲ್ಲ ಕ್ರಮ

ಗಳನ್ನೂ ಬ್ರೆಡ್ಡಿಗೆ ಕೈ ಹಚ್ಚದೆ ದೂರದಿಂದಲೇ ನೋಡಿದಳು. ನನಗೆ ಅದೊಂದು ವಿಶೇಷವೆನ್ನಿಸಲಿಲ್ಲ. ಆದರೆ ನನ್ನ ಉಪಾಹಾರವಾಗಿ ನಾನು ಹೊರಗೆ ಹುಸಿಯಲ್ಲಿ ಬರುತ್ತಲೆ ನನ್ನ ಕುಟುಂಬ ವಸ್ತ್ರಾಂತರಳಾಗಿ ನಡುಮನೆಯನ್ನೆಲ್ಲಾ ಸಾರಿಸಿ ಆ ಸ್ಥಳವನ್ನು ಶುದ್ಧಗೊಳಿಸಿದಳು. ಇದು ನನಗೆ ತಿಳಿದುಬಂದಾಗ ನನ್ನ ಮನೋರಾಜ್ಯ ಬಹು ಮಟ್ಟಿಗೆ ಕುಸಿದುಬಿತ್ತು. ನೀವು ನಿಮ್ಮ ಮಟ್ಟಿಗೆ ಹೊರಗೆ ಏನನ್ನಾದರೂ ಮಾಡಿರಿ; ನಾವದನ್ನು ಗಣಿಸುವುದಿಲ್ಲ. ಆದರೆ ಇಂಥದೆಲ್ಲ ಮನೆಯಲ್ಲಿ ನಡೆಯದಿದ್ದರೆ ಒಳ್ಳೆಯದು— ಎಂದು ನನಗೆ ಸೌಮ್ಯ ಶಬ್ದಗಳಲ್ಲಿ ಎಚ್ಚರವನ್ನು ಕೊಡಲಾಯಿತು.

ಹೀಗೇ ಇನ್ನೊಮ್ಮೆ ನಾವಿಬ್ಬರೇ ಉಗಿಬಂಡಿಯಲ್ಲಿ ಪ್ರವಾಸ ಮಾಡುವ ಯೋಗ ಒದಗಿಬಂತು. ಸ್ಟೇಶನ್ನಿಗೆ ಹೋದ ಮೇಲೆ ಎರಡನೆಯ ವರ್ಗದ ಡಬ್ಬಿಯಲ್ಲಿ ಯಾರೂ ಇಲ್ಲದ್ದು ಕಂಡು ಬಂತು. ಸಹಪ್ರವಾಸದ ಪ್ರಸಂಗವನ್ನು ಕಳೆದುಕೊಳ್ಳಬಾರದೆಂದೆಣಿಸಿ ನಾನು ನಮ್ಮಿಬ್ಬರಿಗೂ ಎರಡನೆಯ ವರ್ಗದ ಟಿಕೀಟನ್ನು ತೆಗೆಸಿದೆ. ಮೂರನೆಯ ವರ್ಗದ ಹೆಂಗಸರ ಡಬ್ಬಿಯಲ್ಲಿದ್ದ ನನ್ನ ಕುಟುಂಬಕ್ಕೆ ಇತ್ತ ಕಡೆಗೆ ಬರಬೇಕೆಂದು ಆಳಿನಿಂದ ಹೇಳಿ ಕಳಿಸಿದೆ. ನಿರುಪಾಯಳಾಗಿ ಅವಳು ಇತ್ತ ಬರಬೇಕಾಯಿತು. ಆದರವಳು ಆ ಡಬ್ಬಿಯಲ್ಲಿ ಕುಳಿತುಕೊಳ್ಳದೆ ನಿಂತೇ ಇದ್ದಳು. ಡಬ್ಬಿಯ ಬಳಿಯಲ್ಲಿ ಪ್ಲಾಟ್‌ಫಾರ್ಮಿನ ಮೇಲಿದ್ದ ಪರಿಚಿತರೊಡನೆ ನಾನು ಮಾತಾಡುತ್ತ ನಿಂತುಕೊಂಡಿದ್ದೆನೆಂದು ಅವಳು ಕುಳಿತಿರಲಾರಳು, ಗಾಡಿ ಚಲಿಸಿದ ನಂತರ ಕುಳಿತುಕೊಳ್ಳಬಹುದು ಎಂದು ನಾನೆಣಿಸಿದ್ದೆ. ಗಾಡಿ ಹೊರಟ ಮೇಲೆ ನಾನು ಒಳಗೆ ಹೋಗಿ ಕುಳಿತೆನಾದರೂ ಅವಳು ಕೂಡಲಿಲ್ಲ. ಹೀಗೇಕೆಂದು ಕೇಳಿದರೆ, ಈ ಡಬ್ಬಿ ಸಾಹೇಬರದು. ಇಲ್ಲಿ ಹೆಂಗಸರು ಕುಳಿತರೆ ಅವರಿಗೆ ಮೈಲಿಗೆಯಾಗುತ್ತದೆ— ಎಂದು ಉತ್ತರಿಸಿದಳು.

ಈ ಪ್ರಸಂಗದಿಂದ ಮತ್ತು ಇಂಥವೇ ಇತರ ಕೆಲವು ಪ್ರಸಂಗಗಳಿಂದ ನನ್ನ ಗೃಹಸೌಖ್ಯದಲ್ಲಿ ಬಹಳ ತೊಂದರೆ ಉದ್ಭವಿಸುವುದೆಂದು ನನಗನ್ನಿಸಿತು. ಮತ್ತು ಈ ಅನಿಸಿಕೆ ನನ್ನ ಹೆಂಡತಿ ಸಾಯುವವರೆಗೆ ನಿಜವಾಗಿಯೇ ಪರಿಣಮಿಸಿತು. ಈ ವಿಷಯದಲ್ಲಿ ಹೆಚ್ಚಿನ ಹೊಣೆಗಾರಿಕೆ ನನ್ನ-ಮೇಲಿರುವುದೆಂಬುದನ್ನು ನಾನೊಪ್ಪಿಕೊಳ್ಳುತ್ತೇನೆ. ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಸಹ ಇಷ್ಟವಾದ ಅನೇಕ ಸಂಗತಿಗಳು ಸಹನೆಯಿಂದ ಮತ್ತು ಜಿಗುಟುತನದಿಂದ ಪೂರೈಸಲ್ಪಡಬಹುದಾಗಿತ್ತು. ಆದರೆ ಅಂಥ ಸಹನೆಯಾಗಲಿ, ಜಿಗುಟುತನವಾಗಲಿ ನನ್ನ ಸ್ವಭಾವದಲ್ಲಿ ಆಗ ತೋರಿಬರಲಿಲ್ಲ. ಆದಕಾರಣ ಎಲ್ಲ ಯೋಜನೆಗಳು ತಲೆಕೆಳಗಾದವು.

ಈ ಎಲ್ಲ ಕಾರಣಗಳಿಂದ ಬಾಲವಿವಾಹದ ಸಂಬಂಧವಾಗಿ ಮುಂಚಿಂದಲೇ ಪ್ರತಿಕೂಲವಾ-ಗಿದ್ದ ನನ್ನ ಅಭಿಪ್ರಾಯ ಹೆಚ್ಚು-ಹೆಚ್ಚಾಗಿ ದೃಢಪಡುತ್ತ ಬಂದಿದೆ. ಈ ಬಗೆಯಾಗಿ ಮನೆಯ ಹಿರಿಯರಾದವರೇ ತಮಗೆ ಇಷ್ಟ ಬಂದಂತೆ ಮದುವೆ ಗೊತ್ತುಪಡಿಸುವುದು, ಮದುವೆಯಾದ ವರ ಜೀವದ ಸಂಬಂಧ ಬೆಳೆದುಬರಬೇಕಾಗಿರುವಾಗ ಅವರ ಇಚ್ಛೆಯನ್ನು ಒಂದಿಷ್ಟೂ ಲಕ್ಷ್ಯಕ್ಕೆ ತಾರದಿರುವುದು,— ಹೆಚ್ಚೇನು?—ಆ ಇಚ್ಛೆಗೆ ಯಾವ ಬಗೆಯ ಪುರಸ್ಕಾರವನ್ನೂ ಕೊಡದಿರುವುದು! ಹೀಗೆ ನನಗೆ ನಮ್ಮ ಹಳೆಯ ಪದ್ಧತಿಯ ಬಗ್ಗೆ ಆಗಾಗ ಸಂತಾಪವೇಳುತ್ತಿತ್ತು.

ಈಗ—ನಾಲ್ವತ್ತು ವರ್ಷಗಳ ನಂತರ ಕೆಲವೊಂದು ಬಗೆಯ ಅಪರಿಹಾರ್ಯ ಆರ್ಥಿಕ ಅಡ-ಚಣೆಗಳ ಮೂಲಕ ಮದುವೆಯ ವಯೋಮಿತಿ ಸಾರ್ವತ್ರಿಕವಾಗಿ ಹೆಚ್ಚಿಕೊಂಡಿದೆ. ಆದರೆ ಹೀಗೆ ಬದಲಾದ ಪರಿಸ್ಥಿತಿಯ ಮೂಲದಲ್ಲಿ ವಿವಾಹ ಪದ್ಧತಿಯ ಸಾಧಾರಣೆಯ ಅಪೇಕ್ಷೆ ಎಷ್ಟರ ಮಟ್ಟಿಗೆ ತೀವ್ರವಾಗಿರಬಹುದೆಂಬುದು ನಿಶ್ಚಿತವಾಗಿ ತಿಳಿದುಬರುವಂತಿಲ್ಲ. ಬಾಲವಿವಾಹ ಕೆಟ್ಟದ್ದೆಂದು ಅಪವಾದಾತ್ಮಕವಾಗಿ ಕೆಲವು ಪ್ರೌಢ

ವಿವಾಹಗಳು ಜರಗುತ್ತಿರಬಹುದು. ಆದರೆ ಇತರ ವಿಷಯಗಳಲ್ಲಿ ವಿಚಾರದ ದಿಕ್ಕು ಬದಲಾಗಿದೆ—ಎನ್ನುವಂತಿಲ್ಲ.

ಕೆಲದಿನಗಳಿಗೆ ಮೊದಲು ಪುಣೆಯ ಯುವಕ ಸಂಘದ ಪರವಾಗಿ "ವಿವಾಹೋತ್ತರ ಪ್ರೇಮವೋ ಪ್ರೇಮೋತ್ತರ ವಿವಾಹವೋ" ಎಂಬ ವಿಷಯದ ಮೇಲೆ ಚರ್ಚೆ ನಡೆಯಬೇಕೆಂದು ಒಂದು ಸಭೆ ಸೇರಿತ್ತು. ಆಗ ಇಂಥ ಗಂಭೀರ ಸ್ವರೂಪದ ವಿಷಯವಾಗಿ, ತರುಣರು ದಂಗೆ ಎಬ್ಬಿಸಿ ಚರ್ಚೆಯನ್ನೇ ನಡೆಯಗೊಡಲಿಲ್ಲ. ಇದರ ಮೇಲಿಂದ ನನ್ನ ಅಭಿಪ್ರಾಯಕ್ಕೆ ಪುಷ್ಟಿ ದೊರೆಯುವಂತಿದೆ. ಪಾಶ್ಚಾತ್ಯ ಶಿಕ್ಷಣದಿಂದ ಯಾರ ವಿಚಾರಗಳು ಬದಲುಗೊಳ್ಳಬೇಕಾಗಿದೆಯೋ ಅಂಥ ತರುಣರ ಸ್ಥಿತಿಯೇ ಹೀಗೆ! ಇನ್ನು ಹಳೆಯ ರೂಢಿಗಳಿಂದ ಬಂಧಿತರಾದವರ ಬಗೆಗಂತೂ ಮಾತಾಡುವುದೇ ಬೇಡ. ಪಾಶ್ಚಾತ್ಯ ನವ್ಯ ವಾಙ್ಮಯವನ್ನೋದಿ ಮನಸ್ಸಿಗಾದ ಸಂಸ್ಕಾರ ಒಂದಾದರೆ ಮನೆತನದ ಪರಿಸ್ಥಿತಿ ಮತ್ತು ವ್ಯವಹಾರಗಳು ತದ್ವಿರುದ್ಧ! ಇಂಥ ಸಂದಿಗ್ಧಾವಸ್ಥೆಯಲ್ಲಿ ನಮ್ಮ ತರುಣ ಪೀಳಿಗೆ ಸಿಕ್ಕಿಕೊಂಡಿದೆ. ಹಳೆಯ ಸಂಸ್ಕಾರಗಳಲ್ಲಿ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬುದನ್ನು ಗುರುತಿಸಿ ಒಳ್ಳೆಯದನ್ನು ಉಳಿಸಿಕೊಳ್ಳುವ ಪ್ರಯತ್ನವೂ ನಡೆಯದಾಗಿದೆ. ಹೊಸದೆಲ್ಲ ಒಳ್ಳೆಯದೆಂದು ಒಪ್ಪಿಕೊಂಡರೂ ಅದರಂತೆ ನಡೆದುಕೊಳ್ಳಲಾಗುವಂತಿಲ್ಲ. ಇಂಥ ಕತ್ತರಿಯಲ್ಲಿ ಸುಶಿಕ್ಷಿತರೆಂದು ಕರೆದುಕೊಳ್ಳುವ ನಮ್ಮ ಮಧ್ಯಮವರ್ಗ ಸಿಕ್ಕಿಕೊಂಡಿದೆ. ಈ ಪರಿಸ್ಥಿತಿಯ ಪರಿಣಾಮ ಅನಿಷ್ಟವಾಗುವಂಥದೇ. ಅಂಥದನ್ನೇ ನಾನು ಅನುಭವಿಸುವಂತಾದದ್ದು.

ಈ ಬಗೆಯ ದೌರ್ಬಲ್ಯವು ನನ್ನ ಇಬ್ಬರು ಹುಡುಗಿಯರ ಮದುವೆಯ ಸಮಯದಲ್ಲೂ ಕಂಡುಬಂತು. ಅವರ ಮದುವೆ ನನ್ನ ಕಲ್ಪನೆಯ ಪ್ರೌಢ ವಿವಾಹವಾಗಿ ಜರುಗಬೇಕೆಂಬುದು ನನ್ನ ಉತ್ಕಟವಾದ ಇಚ್ಛೆಯಾಗಿತ್ತು. ಆದರೆ ನಾನು ನನ್ನ ಹಿರಿಯರ ಇಚ್ಛೆಗೆ ವಿರೋಧವಾಗಿ ನಡೆದುಕೊಳ್ಳಲು ಸಮರ್ಥನಾಗಲಿಲ್ಲ. ಯಾವ ಮಾತು ನನ್ನ ಸ್ವಂತದ ವಿಷಯವಾಗಿ ನನ್ನ ಅಜ್ಞಾನದ ಕಾರಣದಿಂದ ನಡೆಸಲು ಶಕ್ಯವಾಗಲಿಲ್ಲವೋ ಅದೇ ಮಾತನ್ನು ನನಗೆ ತಿಳಿವಳಿಕೆ ಬಂದ ನಂತರವೂ ನನ್ನ ಹುಡುಗಿಯರ ವಿಷಯವಾಗಿ ನಡೆಸಿಕೊಡುವುದು ಶಕ್ಯವಾಗಲಿಲ್ಲ! *

ಮರಾಠಿಯಲ್ಲಿ ದಿವಂಗತ ಗಂಗಾಧರರಾಯರು ಬರೆದ ಆತ್ಮಚರಿತ್ರೆಯಿಂದ ಸಂಗೃಹೀತ. ಮೂಲ ಪ್ರಕಾಶಕರು: "ಮೌಜ ಪ್ರಕಾಶನ", ಮುಂಬಯಿ

ಪಾಪ-ಪುಣ್ಯ. ಮಂಜುಗಡ್ಡೆ ನೀರಾಗದೇ ಒಮ್ಮೆಗೇ ಆವಿಯಾಗಲಾರದು. ಪಾಪಿ ನಿಷ್ಪಾಪಿಯಾಗದೇ ಪುಣ್ಯವಂತನಾಗಲಾರ. ಬಾಳನ್ನು 'ಜೀವನ' ವೆಂದು ಕರೆದವರು ಜ್ಞಾನಿಗಳಷ್ಟೇ ಅಲ್ಲ; ವಿಜ್ಞಾನಿಗಳೂ ಆಗಿರಲೇಬೇಕು. "ಶಾರದಾ"

* * *

ಕೇರಳದ ಮಾಜಿ ಮುಖ್ಯಮಂತ್ರಿ ಶ್ರೀ ನಂಬೂದ್ರಿಪಾಡರು ಮಾತಾಡುವಾಗ ಉಗ್ಗುತ್ತಾರೆ. ಒಮ್ಮೆ ಒಬ್ಬ ವಿದೇಶೀ ಸುದ್ದಿಗಾರ ವ್ಯಂಗ್ಯಪೂರ್ಣ ಧ್ವನಿಯಲ್ಲಿ "ಏನು ಸ್ವಾಮಿ, ತಾವು ಯಾವಾಗಲೂ ಉಗ್ಗುತ್ತೀರಾ?" ಎಂದು ಕೇಳಿದ.

ಅದಕ್ಕೆ ಶ್ರೀ ನಂಬುದ್ರಿಪಾಡರು ಮುಗುಳ್ನಗುತ್ತ ಉತ್ತರವಿತ್ತರು: "ಇಲ್ಲ, ಮಾತಾಡುವಾಗ ಮಾತ್ರ ಉಗ್ಗುತ್ತೇನೆ."

ದಾರಿ ದೀಪ

# ವಿವೇಕ ಜೀವನ

ಸಂಗ್ರಹ: ಡಾ. ಕಾಂತರಾವ್ ಕವಲಾಪುರ

ಸರ್ ಥಾಮಸ್ ಲುಯಿಯವರ ವಿವೇಕ ಜೀವನದ ವರ್ಣನೆಯು ನಮ್ಮಲ್ಲಿ ಅನೇಕರಿಗೆ ರುಚಿಸಲಿಕ್ಕಿಲ್ಲ. ಆದರೆ ಅದರಂತೆ ನಮ್ಮ ದೈನಂದಿನ ಜೀವನವನ್ನು ಸಾಗಿಸಿದ್ದಾದರೆ ನಮ್ಮ ದೇಶದಲ್ಲಿಯ ಪ್ರಮುಖವಾದ ಒಂದು ಸಮಸ್ಯೆಯನ್ನು ನಿಯಂತ್ರಿಸುವುದರಲ್ಲಿ ಹೆಜ್ಜೆ ಮುಂದಿಟ್ಟಂತೆ ಆಗುವುದೆಂಬುದರಲ್ಲಿ ಯಾವ ಸಂಶಯವೂ ಇಲ್ಲ:

"ವಿವೇಕ ಬುದ್ಧಿಯುಳ್ಳ ಜನರು ಶಾಂತವಾಗಿ ಮತ್ತು ಸಂಯಮದಿಂದ ಜೀವಿಸುವರು. ಆಗಾಗ್ಗೆ ಅವರು ಮನರಂಜನೆಗಾಗಿ ಚಿಕ್ಕ ಪ್ರವಾಸವನ್ನು ಕೈಕೊಳ್ಳುವರು, ಸತ್ಕಾರ ಕೂಟಗಳನ್ನು ಏರ್ಪಡಿಸುವರು; ಸ್ನೇಹ ಸಮ್ಮೇಲನಗಳಲ್ಲಿ ಭಾಗವಹಿಸುವರು, ಮಿತ್ರರನ್ನು ಕಾಣುವರು ಮತ್ತು ಅವರನ್ನು ತಮ್ಮ ಮನೆಗೆ ಬರಮಾಡಿಕೊಳ್ಳುವರು. ಅವರು ತಮ್ಮ ಪ್ರಕೃತಿಯನ್ನು ಸದೃಢವಾಗಿಡಲು ಅವಶ್ಯವಾದಷ್ಟೇ ಆಹಾರವನ್ನು ಸೇವಿಸುವರು. ಆಗೊಮ್ಮೆ ಈಗೊಮ್ಮೆ ವಿಶೇಷ ಪಕ್ವಾನ್ನಗಳನ್ನು ಪಚನಕ್ಕೆ ಜಡವಾಗದಂತೆ ಮಿತವಾಗಿ ತಿನ್ನುವರು. ತಮ್ಮ ಕೆಲಸ, ವ್ಯಾಯಾಮ, ಅದರಂತೆ ಊಟ ಇವುಗಳನ್ನು ನಿಶ್ಚಿತ ವೇಳೆಯಲ್ಲಿ ಮಾಡುವರು. ಮನೋವಿಕಾರಗಳ ಮೇಲೆ, ಮನೋವ್ಯಾಪಾರಗಳ ಮೇಲೆ ನಿಯಂತ್ರಣವಿಟ್ಟಿರುವರು. ಯಾವುದರಲ್ಲಿಯೂ ಮಿತಿಯನ್ನು ಮೀರುವುದಿಲ್ಲ. ತಂಬಾಕನ್ನು ಸೇದುವುದೇ ಆದರೆ ಅತ್ಯಲ್ಪ ಪ್ರಮಾಣದಲ್ಲಿ ಸೇದುವರು.

"ಅವರು ವಿಪುಲ ಉತ್ಸಾಹಕ ಹವೆಯನ್ನೂ ವಿಸ್ತಾರವಾದ ಬಯಲು ಪ್ರದೇಶಗಳನ್ನೂ ಸ್ವಾಗತಿಸುವರು. ವ್ಯಾಯಾಮದಿಂದ ಹುಟ್ಟುವ ಚೈತನ್ಯದಿಂದ ಆನಂದಿಸುವರು. ಸೂರ್ಯನ ಬೆಚ್ಚಗಿನ ಕಿರಣಗಳು ತಮ್ಮ ದೇಹದ ತ್ವಗಿಂದ್ರಿಯದ ಮೇಲೆ ಆಡುವುದನ್ನೂ ಮತ್ತು ದಣಿವಿನಿಂದ ಬರುವ ಆರೋಗ್ಯಕರವಾದ ನಿದ್ರೆಯನ್ನೂ ಪ್ರೀತಿಸುವರು."

ಈ ಬಗೆಯ ನಿಯಂತ್ರಿತ ಜೀವನವನ್ನು ಔದ್ಯೋಗಿಕ ದೇಶಗಳಲ್ಲಿ ಬಹಳ ಸ್ವಲ್ಪ ಜನರು ಮಾತ್ರ ಸ್ವೀಕರಿಸುವರು; ಅದಕ್ಕೂ ಕಡಿಮೆ ಜನರು ಆಚರಣೆಯಲ್ಲಿ ತರುವರು. ಬೆಳೆಯುತ್ತಲಿರುವ ತೊಡಕಿನ ಜೀವನದ ಹೋರಾಟದಿಂದ ಆಗುವ ಮಾನಸಿಕ ಚಿಂತೆ ಮತ್ತು ಅಶಾಂತತೆ, ಶ್ರಮರಹಿತವಾದ ಮತ್ತು ಕುಳಿತಲ್ಲಿಯೇ ಕುಳಿತು ಮಾಡುವ ಉದ್ಯೋಗಗಳು, ಜಾರುತ್ತಿರುವ ವಯಸ್ಸು, ಕ್ಷೀಣವಾಗುತ್ತಲಿರುವ ಉತ್ಸಾಹ ಶಕ್ತಿ, ಇವೆಲ್ಲವೂ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಈ ನಿಯಮಗಳ ಪಾಲನೆಗೆ ಆತಂಕವನ್ನು ಉಂಟುಮಾಡುವವು. ದೇಹದಲ್ಲಿರುವ ರೋಗಗಳನ್ನು ನಿರೋಧಿಸುವ ಅದ್ಭುತ ಶಕ್ತಿಯ ಮೂಲಕ, ವಿವೇಕ ಜೀವನಕ್ಕೆ ಅವಶ್ಯವಾದ ಈ ನಿಯಮಗಳನ್ನು ಪಾಲಿಸದೆ ಇದ್ದಲ್ಲಿ ಆಗಬಹುದಾದ ಪರಿಣಾಮಗಳು ಕೂಡಲೇ ಪ್ರಕಾಶಕ್ಕೆ ಬರುವುದಿಲ್ಲ. ಹೀಗಾಗಿ ಅವುಗಳನ್ನು ಅಲಕ್ಷಿಸುವುದು ಅತಿ ಸುಲಭವಾಗಿದೆ. ಇಲ್ಲದಿದ್ದರೆ ಅವು ಹೆಚ್ಚಾಗಿ ಆಚರಣೆಗೆ ಬರುತ್ತಿದ್ದವು. ದೇಹಕ್ಕೆ ಹಿತವಾದ ಆಚರಣೆ, ಆಶಾವಾದಿ ತತ್ವಜ್ಞಾನ, ವಿಪುಲವಾದ ಬಿಡುವಿನ ಯೋಗ್ಯ ಉಪಯೋಗ, ಇವು ಪ್ರತಿದಿನದ ಜೀವನದ ಹೋರಾಟದಲ್ಲಿ ಅನುಭವಿಸಲಿರುವ ಆಘಾತ ಮತ್ತು ಪ್ರಯಾಸದಿಂದ ಹುಟ್ಟಿ ತೀವ್ರವಾಗಿ ಬೆಳೆಯುವ ರಕ್ತಕ್ರಿಯೆಗಳನ್ನು ಉಪಶಮಿಸಲು ಇಲ್ಲವೆ ತಡೆಯಲು ಶಕ್ತವಾಗಬಹುದು. *

ಪ್ರಧಾನಮಂತ್ರಿ ನೆಹರೂ ಹೇಳಿರುವ ಗಂಡಾಂತರ ಇವರಲ್ಲಿ ಇಲ್ಲದಿಲ್ಲ

# ಯುರೋಪಿನ ಸಾಮಾನ್ಯ ಪೇಟೆ ಅದರ ಪರಿಣಾಮ

ಎಂ. ಕೆ. ಲಕ್ಷ್ಮಣಾಚಾರ್ಯ

ಎರಡನೇ ಮಹಾಯುದ್ಧದ ಫಲವಾಗಿ ಯುರೋಪಿನ ಆರ್ಥಿಕ ವ್ಯವಸ್ಥೆಯೂ ರಾಜಕೀಯ ಸಮತೋಲವೂ ಸೇರಿಯೇ ಕೆಟ್ಟುಹೋದವು. ಸೋವಿಯಟ್ ರಶಿಯದ ಪ್ರಭಾವವು ಇಡೀ ಪೂರ್ವ ಯುರೋಪಿಗೆ ವಿಸ್ತರಿಸಿದ್ದನ್ನು ಕಂಡು, ದೀರ್ಘಕಾಲ ಜಗತ್ತಿನ ಆಗುಹೋಗುಗಳ ಮೇಲೆ ಪ್ರಭಾವ ಬೀರುತ್ತಿದ್ದ ಪಶ್ಚಿಮ ಯುರೋಪಿನ ರಾಷ್ಟ್ರಗಳಿಗೆ ತಮ್ಮ ಮೇಲೂ ರಶಿಯದ ಪ್ರಭಾವ ವಿಸ್ತರಿಸದಂತೆ ತಡೆಯಲು ಮತ್ತು ಸಾಧ್ಯವಾದರೆ ರಶಿಯವನ್ನು ಹಿಂದೂಡಲು ತಾವೇನಾದರೂ ಮಾಡಲೇಬೇಕೆಂದು ತೋರಿತು. ಇದಕ್ಕೆ ಪಶ್ಚಿಮ ಯುರೋಪಿನ ರಾಷ್ಟ್ರಗಳಲ್ಲಿ ರಾಜಕೀಯ ಮತ್ತು ಆರ್ಥಿಕ ಐಕ್ಯ ಸ್ಥಾಪನೆಯೊಂದೇ ಮಾರ್ಗವಾಗಿತ್ತು. ಅಮೇರಿಕದ ನೆರವಿನಿಂದ ಮಿಲಿಟರಿ ಕೂಟಗಳನ್ನು ರಚಿಸಿಕೊಂಡು ರಾಜಕೀಯ ಐಕ್ಯಕ್ಕೆ ಶ್ರೀಗಣ ಹಾಕಿದರೆ ಪಶ್ಚಿಮ ಯುರೋಪಿನ ಬಹುಕಾಲದ ಒಳಜಗಳಗಳಿಗೆ ಕಾರಣವಾದ ಆರ್ಥಿಕ ವೈಮನಸ್ಯಗಳ ನಿವಾರಣೆಗಾಗಿ ಆರ್ಥಿಕ ಸಂಧಿಗಳನ್ನು ರೂಪಿಸಿ ಆರ್ಥಿಕ ಐಕ್ಯಕ್ಕೆ ತಳಹದಿ ಹಾಕಲಾಯಿತು.

ಯುರೋಪಿಯನ್ ಆರ್ಥಿಕ ಸಹಕಾರಸಂಸ್ಥೆ (OEEC)ಯು ಯುರೋಪಿಯನ್ ಕಲ್ಲಿದ್ದಲಿ ಮತ್ತು ಉಕ್ಕಿನ ಸಂಸ್ಥೆ (ECSC) ಈ ಒಪ್ಪಂದಗಳು ಈ ದಿಶೆಯಲ್ಲಿ ಮೊದಲ ಹೆಜ್ಜೆಗಳಾಗಿದ್ದವು. ಬೆಲ್ಜಿಯಂ, ಹಾಲಂಡ್ ಮತ್ತು ಲಗ್ಸಂಬರ್ಗ್ ದೇಶಗಳು ಸೇರಿ ಸಂಯುಕ್ತ ಸುಂಕ ವ್ಯವಸ್ಥೆಯನ್ನು ಸ್ಥಾಪಿಸಿಕೊಂಡವು (Benlux).

ಈ ಬಗೆಯಾಗಿ ಪ್ರಾರಂಭವಾದ ಆರ್ಥಿಕ ಸಹಕಾರ ಯೋಜನೆಯೇ ಇಂದಿನ ಯುರೋಪಿನ ಸಾಮಾನ್ಯ ಪೇಟೆಯಲ್ಲಿ ಪರ್ಯವಸಾನ ಹೊಂದಿದೆ. ಇದರ ಮುಖ್ಯ ಶಿಲ್ಪಿ ಹೆನ್ರಿ ಸ್ಪಾಕರು. ಸಾರಿಗೆ ಸಂಪರ್ಕ ಮತ್ತು ಶಕ್ತಿ ಉತ್ಪಾದನೆಯ ವಿಷಯದಲ್ಲಿ ಎಲ್ಲ ಸದಸ್ಯ ರಾಷ್ಟ್ರಗಳು ಪರಸ್ಪರ ಸಹಕರಿಸಬೇಕೆಂಬ ಸೂಚನೆಯೊಡನೆ ಪ್ರಾರಂಭವಾದ ಮಾತುಕತೆಗಳನ್ನು ಪಶ್ಚಿಮ ಯುರೋಪಿನ ಸಾಮಾನ್ಯ ಪೇಟೆಯ ರೂಪಕ್ಕೆ ವಿಸ್ತರಿಸಿದ ಶ್ರೇಯಸ್ಸು ಅವರದೇ. ಪರಿಣಾಮವಾಗಿ ೧೯೫೭ ಮಾರ್ಚ್ ೨೫ ರಂದು ರೋಂನಲ್ಲಿ "ಯುರೋಪಿಯನ್ ಆರ್ಥಿಕ ಕೂಟ" (EEC)ವನ್ನು ಸ್ಥಾಪಿಸುವ ಒಪ್ಪಂದಕ್ಕೆ ಅಂಕಿತ ಬಿತ್ತು.

ಇದೊಂದು ಕ್ರಾಂತಿಕಾರಕ ಯೋಜನೆಯೆ ಆಗಿತ್ತು. ಇದರಲ್ಲಿ ಸೇರಿದ ಆರು ರಾಷ್ಟ್ರಗಳು— ಫ್ರಾನ್ಸ್, ಪಶ್ಚಿಮ ಜರ್ಮನಿ, ಇಟಲಿ, ಬೆಲ್ಜಿಯಂ, ಹಾಲಂಡ್ ಮತ್ತು ಲಗ್ಸಂಬರ್ಗ್— ವ್ಯಾಪಾರ ವಾಣಿಜ್ಯಗಳ ಮಟ್ಟಿಗೆ ತಮ್ಮ ರಾಷ್ಟ್ರೀಯ ಗಡಿಗಳನ್ನು ಕಿತ್ತು ಹಾಕಲು ಒಪ್ಪಿದಂತೆಯೆ ಆಯಿತು. ಒಪ್ಪಂದ ಆಚರಣೆಗೆ ಬಂದಾಗ ಈ ಆರೂ ರಾಷ್ಟ್ರಗಳಿಗೆ ಸಂಯುಕ್ತ ವಿದೇಶೀ

'ಕೌಟಲ್ಯ'ದಿಂದ

ಸುಂಕದ ಏರ್ಪಾಡಾಗಲಿತ್ತು; ಸದಸ್ಯ ರಾಷ್ಟ್ರಗಳು ಪರಸ್ಪರರ ಸರಕುಗಳಿಗೆ ಟ್ಯಾರೀಫ್ ಸುಂಕ ಹೊರಿಸುವಂತಿರಲಿಲ್ಲ; ಮತ್ತು ಸದಸ್ಯರಲ್ಲದ ರಾಷ್ಟ್ರಗಳ ಸರಕುಗಳಿಗೆ ಟ್ಯಾರೀಫ್ ಸುಂಕಗಳನ್ನು ಹೇರಿ ಅವುಗಳ ವಿರುದ್ಧ ಪಕ್ಷಪಾತಮಾಡುವ ವ್ಯವಸ್ಥೆಯಿತ್ತು. ಇದಲ್ಲದೆ ಸದಸ್ಯ ರಾಷ್ಟ್ರಗಳು ಏಕರೂಪವಾದ ಹಣಕಾಸಿನ ಮತ್ತು ಸಾಮಾಜಿಕ ನೀತಿಯನ್ನು ರೂಪಿಸುವ ಧ್ಯೇಯವನ್ನಿಟ್ಟುಕೊಂಡಿದ್ದವು.

ಯುರೋಪ್ ಖಂಡದಲ್ಲಿ ನಡೆಯುತ್ತಿದ್ದ ಈ ಆರ್ಥಿಕ ಸಂಯೋಜನೆಯಲ್ಲಿ ಮೊದಲಿಂದಲೂ ಬ್ರಿಟನ್ ಕೈ ಸಿಕ್ಕಿಸಿಕೊಂಡಿರಲಿಲ್ಲ. ಅದು ಸೇರಬೇಕೆಂಬ ಒತ್ತಾಯ ಇದ್ದೇ ಇತ್ತು. ಆದರೆ ಮೂರು ವರ್ಷ ಕಾಲ ಅದು ಅರೆ ಮನಸ್ಸಿನಲ್ಲೇ ಕಳೆಯಿತು. ಕೊನೆಗೆ ೧೯೬೧ ಜುಲೈ ೩೧ರಂದು ಪ್ರಧಾನ ಮಂತ್ರಿ ಹೆರಾಲ್ಡ್ ಮ್ಯಾಕ್ಮಿಲನ್ನರು ಬ್ರಿಟನ್ ಕೂಡ ಸಾಮಾನ್ಯ ಪೇಟೆಯ ಸದಸ್ಯತ್ವಕ್ಕೆ ಅರ್ಜಿ ಹಾಕುವುದಾಗಿ ಸಾರಿದರು.

ಬ್ರಿಟನ್ನಿನ ಅರೆಮನಸು ಮತ್ತು ಕೊನೆಗೆ ಅದರ ನಿರ್ಧಾರ ಇವೆರಡಕ್ಕೂ ಕಾರಣಗಳಿವೆ. ಬಹುಕಾಲ ಅಧಿಕಾರದಲ್ಲಿಯೂ ವ್ಯಾಪಾರದಲ್ಲಿಯೂ ಜಗತ್ತಿನ ಪ್ರಪ್ರಥಮ ರಾಷ್ಟ್ರವಾಗಿದ್ದ ಅದು ತನ್ನ ದ್ವೀಪದ ಭದ್ರಸ್ಥಾನದಿಂದ ಯುರೋಪಿನ ಆಗುಹೋಗುಗಳನ್ನು ಹತೋಟಿಯಲ್ಲಿಟ್ಟುಕೊಂಡಿದ್ದರೂ ಯುರೋಪಿನ ದೈನಂದಿನ ಜಂಜಾಟಗಳಿಂದ ದೂರವಿರುವುದು ಅದರ ಪರಂಪರಾಗತ ರಾಜಕೀಯ ನೀತಿಯಾಗಿತ್ತು. ಎರಡನೆಯದಾಗಿ, ತನ್ನ ವಿಶಾಲವಾದ ಸಾಮ್ರಾಜ್ಯದೊಡನೆ "ಸಾಮ್ರಾಜ್ಯ ಪ್ರಾಶಸ್ತ್ಯ" ಪದ್ಧತಿಯಿಂದ ಅದು ವ್ಯಾಪಾರವನ್ನು ಬೆಳೆಸಿಕೊಂಡು ಬಂದಿದ್ದು ಯುರೋಪಿನ ರಾಷ್ಟ್ರಗಳೊಡನೆ ಅದರ ವ್ಯಾಪಾರಕ್ಕೆ ಅಂಥ ಮಹತ್ವವಿರಲಿಲ್ಲ. ಇವು ಯುರೋಪಿಯನ್ ಸಾಮಾನ್ಯ ಪೇಟೆ ಸೇರುವ ವಿಷಯದಲ್ಲಿ ಅದರ ಅರೆಮನಸಿನ ಕಾರಣಗಳು.

ಆದರೆ ಎರಡನೆ ಮಹಾಯುದ್ಧ ಇಡೀ ಚಿತ್ರವನ್ನು ಬದಲಾಯಿಸಿದೆ. ಇಂದು ಬ್ರಿಟನ್ ಜಗತ್ತಿನ ಪ್ರಬಲತಮ ರಾಷ್ಟ್ರವಾಗಿ ಉಳಿದಿಲ್ಲ. ಒಂದೆಡೆಯಿಂದ ಅಮೇರಿಕ ಇನ್ನೊಂದೆಡೆಯಿಂದ ರಶಿಯ ಆ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ಈಗ ಯುರೋಪಿಯನ್ ಆರ್ಥಿಕ ಕೂಟದಿಂದ ಬ್ರಿಟನ್ನಿನ ಸ್ಥಾನಮಾನಕ್ಕೆ ಇನ್ನೊಂದು ಅಪಾಯ ಉದ್ಭವಿಸಿದೆ. ಜರ್ಮನಿಗೂ ಫ್ರಾನ್ಸಿಗೂ ಇದ್ದ ವೈಮನಸ್ಯವೇ ಈ ವರೆಗೆ ಯುರೋಪಿನ ವ್ಯವಹಾರಗಳಲ್ಲಿ ಬ್ರಿಟನ್ನಿನ ಬೇಳೆ ಬೇಯಲು ಕಾರಣವಾಗಿತ್ತು. ಈಗ ಅವೆರಡೂ ಒಂದೇ ಆರ್ಥಿಕ ಸಂಘಟನೆಯಲ್ಲಿ ಸೇರಿಕೊಂಡಿರುವುದರಿಂದ ಅವುಗಳ ಸಂಯುಕ್ತ ಬಲ ಬ್ರಿಟನನ್ನು ಮೂಲೆಗುಂಪಾಗಿಸಬಹುದು. ವಿಶೇಷವಾಗಿ ಪಶ್ಚಿಮ ಜರ್ಮನಿಯು ಯುದ್ಧೋತ್ತರದಲ್ಲಿ ಸಾಧಿಸಿದ ಆರ್ಥಿಕ ಉತ್ಕರ್ಷವು ಬ್ರಿಟನ್ನನ್ನು ಅಂಜಿಸುವಂತಿದ್ದು ಅದನ್ನು ಸರಿದೂಗಿಸಲು ಅದು ಬಹಳ ಸಾಹಸ ಮಾಡಬೇಕಾಗಿದೆ. ಯುರೋಪಿಯನ್ ಆರ್ಥಿಕ ಕೂಟವನ್ನು ತಡೆಯಲಂತೂ ಸಾಧ್ಯವಿಲ್ಲ. ಅಂದಮೇಲೆ ಅದರಲ್ಲಿ ಸೇರಿಕೊಂಡು ಅದರ ಧೋರಣೆಗಳ ಮೇಲೆ ಪ್ರಭಾವ ಬೀರುವ ಮೂಲಕವಾದರೂ ಫ್ರಾನ್ಸ್ ಮತ್ತು ಅದಕ್ಕೂ ಹೆಚ್ಚಾಗಿ ಪಶ್ಚಿಮ ಜರ್ಮನಿಯ ಬಲ ಬೆಳೆಯುವುದಕ್ಕೆ ತಡೆಯೊಡ್ಡುವ ಯತ್ನ ಮಾಡುವುದೀಗ ಬ್ರಿಟನ್ನಿಗಿರುವ ಉಪಾಯ.

ಆರ್ಥಿಕ ಕ್ಷೇತ್ರದಲ್ಲಿಯೂ ಅಷ್ಟೆ. ಈಚೆಗಿನ ವರೆಗೆ ಜಗತ್ತಿನ ಪೇಟೆಗಳ ಮೇಲೆ ಬ್ರಿಟನ್ನಿಗಿದ್ದ ಪ್ರಭುತ್ವ ಸಾವಕಾಶವಾಗಿ ಮಾಯವಾಗುತ್ತಿದೆ. ಬ್ರಿಟಿಶ್ ಸಾಮ್ರಾಜ್ಯವು ಕಾಮನ್‌ವೆಲ್ತ್ ಆಗಿ ಪರಿಣಮಿಸಿದೆ. ಈ ದೇಶಗಳೊಡನೆ ಬ್ರಿಟನ್ನಿನ ವ್ಯಾಪಾರಕ್ಕೆ ಸವಲತ್ತುಗಳಿದ್ದರೂ ಅವುಗಳೊಡನೆ ಕೂಡ ಬ್ರಿಟನ್ನಿನ ವ್ಯಾಪಾರ ಕುಗ್ಗುತ್ತಲೇ ನಡೆದಿದೆ. ೧೯೫೪-೫೫ ರಿಂದ ೧೯೫೯-೬೦ ರ ನಡುವೆ ಸ್ಟರ್ಲಿಂಗ್ ಪ್ರದೇಶಕ್ಕೆ ಬ್ರಿಟನ್ನಿನ ನಿರ್ಯಾತ (ರಫ್ತು) ಕೇವಲ ಸೇಕಡಾ ೫.೩ ರಷ್ಟು ಏರಿತು; ಆದರೆ ಅದೇ ಅವಧಿಯಲ್ಲಿ ಎಂಟು

ಯುರೋಪಿಯನ್ ರಾಷ್ಟ್ರಗಳೂ ಜಪಾನೂ ಅದೇ ಪ್ರದೇಶಕ್ಕೆ ತಮ್ಮ ರಫ್ತನ್ನು ಸೇಕಡಾ ೬೧.೩ ರಷ್ಟು ಹೆಚ್ಚಿಸಿಕೊಂಡವು. ವಾಸ್ತವಿಕವಾಗಿ ಯಾವ ಸವಲತ್ತೂ ಇಲ್ಲದೇನೇ ಯುರೋಪಿಯನ್ ಸಾಮಾನ್ಯ ಪೇಟಿ ರಾಷ್ಟ್ರಗಳು ಸ್ಟರ್ಲಿಂಗ್ ಪ್ರದೇಶಕ್ಕೆ ತಮ್ಮ ರಫ್ತನ್ನು ಬ್ರಿಟನ್ನಿಗಿಂತಲೂ ಸ್ವಲ್ಪ ಹೆಚ್ಚಾಗಿ ಹೆಚ್ಚಿಸಿಕೊಂಡವು. ಹೀಗಿರುವಾಗ ಬ್ರಿಟಿಶ್ ಪ್ರಧಾನ ಮಂತ್ರಿ ಹೆರಾಲ್ಡ್ ಮ್ಯಾಕ್ಮಿಲನ್ನರು ಹೇಳಿದಂತೆ ಬ್ರಿಟನ್ನು ಯುರೋಪಿಯನ್ ಸಾಮಾನ್ಯ ಪೇಟಿಯನ್ನು ಸೇರಿ ಮೂವತ್ತು ಕೋಟಿ ಜನರುಳ್ಳ ಪಶ್ಚಿಮ ಯುರೋಪಿನ ವಿಸ್ತರಣಶೀಲ ಪೇಟೆಗೆ ಸರಕು ಸರಬರಾಯಿ ಮಾಡುವುದರಲ್ಲಿ ಭಾಗವಹಿಸುವ ಮೂಲಕ ಪ್ರಯೋಜನ ಹೊಂದಬಹುದು.

ಬ್ರಿಟನ್ ಯುರೋಪಿಯನ್ ಸಾಮಾನ್ಯ ಪೇಟಿಯನ್ನು ಸೇರಿದರೆ ಸಾಮಾನ್ಯ ಪೇಟಿ ರಾಷ್ಟ್ರಗಳಿಗೂ ಅನುಕೂಲವೇ. ಬ್ರಿಟನ್ ಇಲ್ಲದ ಪಾಶ್ಚಾತ್ಯ ರಾಜಕೀಯ ಕೂಟವಾವುದೂ ಅಂತಾರಾಷ್ಟ್ರೀಯ ರಾಜಕಾರಣದಲ್ಲಿ ವಿಶೇಷ ಪ್ರಭಾವಶಾಲಿಯಾಗಲಾರದು. ಬ್ರಿಟನ್ ಸೇರಿದರೆ ಅದರೊಡನೆ ಸಂಬಂಧಿಸಿದ ಆಸ್ಟ್ರಿಯ, ಸ್ವಿತ್ಸರ್ಲಂಡ್, ಡೆನ್ಮಾರ್ಕ್, ನಾರ್ವೆ, ಸ್ವೀಡನ್ ಮತ್ತು ಪೋರ್ತುಗಾಲ್ ಕೂಡ ಈ ಕೂಟದಲ್ಲಿ ಸಹಜವಾಗಿಯೆ ಸೇರುವವು. ವ್ಯಾಪಾರ ದೃಷ್ಟಿಯಿಂದಲೂ ಫ್ರೆಂಚ್ ಮಾಂಸ ಮತ್ತು ಮದ್ಯ, ಜರ್ಮನ್ ಕಲ್ಲಿದ್ದಲಿ ಮತ್ತು ಯಂತ್ರಗಳು ಹಾಗು ಬೆಲ್ಜಿಯನ್ ತರಕಾರಿಗಳಿಗೆ ಬ್ರಿಟಿಶ್ ಪೇಟೆ ಲಭ್ಯವಾಗುವುದು.

ಆದರೆ ಬ್ರಿಟನ್ ಸಾಮಾನ್ಯ ಪೇಟೆ ಸೇರುವ ವಾರ್ತೆ ಪ್ರಕಟವಾದೊಡನೆಯೆ ಬ್ರಿಟಿಶ್ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಹೆಚ್ಚುಕಡಿಮೆ ಕೋಲಾಹಲವೇ ಎದ್ದಿತು. ಅವುಗಳ ಗಾಬರಿ ಸ್ವಾಭಾವಿಕವಾಗಿಯೆ ಇದೆ. ಸಾಮ್ರಾಜ್ಯ ಪ್ರಾಶಸ್ತ್ಯ ಪದ್ಧತಿಯಿಂದ ಈ ರಾಷ್ಟ್ರಗಳ ವಾಣಿಜ್ಯ ಹುಟ್ಟಿಗೆ ಬ್ರಿಟನ್ನಿನ ಸಂಗಡ ಬೆಳೆದು ಬಂದಿದೆ. ಬ್ರಿಟನ್ ತರಿಸಿಕೊಳ್ಳುವ ಆಹಾರ ಮತ್ತು ಕಚ್ಚಾ ಸರಕುಗಳಲ್ಲಿ ಬಹುಭಾಗ ಕಾಮನ್‌ವೆಲ್ತಿನಿಂದಲೇ. ಇವೆಲ್ಲವುಗಳಿಗೆ ಬ್ರಿಟನ್ನಿನಲ್ಲಿ ವಿದೇಶಿ ಸುಂಕದಿಂದ ವಿಮುಕ್ತಿಯಿತ್ತು. ಈಗ ಬ್ರಿಟನ್ ಸಾಮಾನ್ಯ ಪೇಟಿ ಸೇರುವುದಾದರೆ ಸಾಮಾನ್ಯ ಪೇಟೆಯು ಹೊರಗಿನ ರಾಷ್ಟ್ರಗಳ ಸರಕುಗಳ ಮೇಲೆ ಹೊರಿಸುವ ಸುಮಾರು ಸೇಕಡಾ ೧೮ ರ ಟ್ಯಾರೀಫ್ ಸುಂಕವನ್ನು ಕಾಮನ್‌ವೆಲ್ತ್ ರಾಷ್ಟ್ರಗಳು ಎದುರಿಸಬೇಕಾಗುತ್ತದೆ.

ಪ್ರತಿಯೊಂದು ಕಾಮನ್‌ವೆಲ್ತ್ ರಾಷ್ಟ್ರದ ಮೇಲೂ ಇದರ ದುಷ್ಪರಿಣಾಮವಾದರೂ ಅದರ ಪ್ರಮಾಣ ಬೇರೆ ಬೇರೆಯಾಗಿದೆ. ಕೆನಡಾ, ಆಸ್ಟ್ರೇಲಿಯ ಮತ್ತು ನ್ಯೂಜಿಲಂಡಗಳು ಎಲ್ಲಕ್ಕೂ ಹೆಚ್ಚು ಪೆಟ್ಟು ತಿನ್ನಬೇಕಾಗುವದು. ಕೆನಡಾ ತನ್ನ ಉತ್ಪಾದಿತ ಸರಕುಗಳಲ್ಲಿ ಸೇಕಡಾ ೪೦ ರಷ್ಟನ್ನು ಬ್ರಿಟನ್ನಿಗೆ ಕಳಿಸುತ್ತದೆ. ಅಲ್ಲದೆ ಬ್ರಿಟನ್ನು ಕೆನಡಾದ ಗೋದಿ ತಂಬಾಕುಗಳಿಗೆ ಬಲು ದೊಡ್ಡ ಗಿರಾಕಿ. ಆಸ್ಟ್ರೇಲಿಯವು ತನ್ನ ಮಾಂಸದಲ್ಲಿ ಮೂರರಲ್ಲೊಂದಂಶವನ್ನೂ ಸಕ್ಕರೆಯಲ್ಲಿ ಅರ್ಧಾಂಶವನ್ನೂ ಫಲ, ಹೈನದ ಉತ್ಪಾದನೆ ಮತ್ತು ಗೋದಿಯನ್ನೂ ಬ್ರಿಟನ್ನಿಗೆ ಕಳಿಸುತ್ತದೆ. ನ್ಯೂಜಿಲಂಡ್ ತನ್ನ ಬೆಣ್ಣೆಯಲ್ಲಿ ಸೇಕಡಾ ೮೯ ನ್ನು, ಗಿಣ್ಣದಲ್ಲಿ ಸೇಕಡಾ ೯೪ ನ್ನು ಮತ್ತು ಮಾಂಸದಲ್ಲಿ ಸೇಕಡಾ ೯೪ ನ್ನು ಬ್ರಿಟನ್ನಿಗೆ ರಫ್ತು ಮಾಡುತ್ತದೆ.

ಬ್ರಿಟನ್ ಸಾಮಾನ್ಯ ಪೇಟಿ ಸೇರಿದರೆ ಈ ದೇಶಗಳೆಲ್ಲವೂ ಸಾಮಾನ್ಯ ಪೇಟಿ ಕ್ಷೇತ್ರದವರ ಟ್ಯಾರೀಫ್ ಸುಂಕಕ್ಕೊಳಗಾಗುವವು. ಅಂದರೆ ಅವು ಅಮೇರಿಕ ಮತ್ತು ಜಪಾನಿನ ಸ್ಪರ್ಧೆಯನ್ನು ಎದುರಿಸಬೇಕಾಗುವುದು. ಕಾಮನ್‌ವೆಲ್ತ್ ಸುಂಕ ವಿಮುಕ್ತಿಯಲ್ಲದಿದ್ದರೆ ಈ ಎರಡು ದೇಶಗಳು ಎಂದೋ ಈ ವ್ಯಾಪಾರವನ್ನೆಲ್ಲ ಕಸಿದುಕೊಂಡು ಬಿಡುತ್ತಿದ್ದವು. ಅಷ್ಟು ತೀವ್ರವಾಗಿದೆ ಅವುಗಳ ಸ್ಪರ್ಧೆ.

ಕಾಮನ್‌ವೆಲ್ತ್ ದೇಶಗಳೊಡನೆ ಬ್ರಿಟನ್ನಿನ

ವ್ಯಾಪಾರ ಸಂಬಂಧದ ಮಹತ್ವವನ್ನು ಎರಡೇ ಅಂಕಿಗಳಿಂದ ಸೂಚಿಸಬಹುದು. ಬ್ರಿಟನ್ನಿನ ರಫ್ತಿನಲ್ಲಿ ಸೇಕಡಾ ೪೩.೫ ರಷ್ಟು ಕಾಮನವೆಲ್ತ್ ರಾಷ್ಟ್ರಗಳಿಂದ ಮತ್ತು ಆಮದುಗಳಲ್ಲಿ ಸೇಕಡಾ ೪೧.೩ ರಷ್ಟು ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ಆಗುತ್ತದೆ. ಒಂದು ವೇಳೆ ಯುರೋಪಿಯನ್ ಸಾಮಾನ್ಯ ಪೇಟೆಯಲ್ಲಿ ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ಸ್ವಲ್ಪಮಟ್ಟಿಗೆ ಸುಂಕ ರಿಯಾಯತಿ ಸಿಕ್ಕಿದರೂ ಅವುಗಳಿಗೆ ಬೀಳುವ ಪೆಟ್ಟು ಚಿಕ್ಕದಾಗದೆಂದು ಇದು ತೋರಿಸುತ್ತದೆ.

ಭಾರತವೂ ಬ್ರಿಟನ್ನಿನ ಸಾಮಾನ್ಯ ಪೇಟೆ ಸೇರುವಿಕೆಯಿಂದ ಸಾಕಷ್ಟು ಕಳೆದುಕೊಳ್ಳುವದು. ಭಾರತದ ಒಟ್ಟು ರಫ್ತಿನಲ್ಲಿ ಸೇಕಡಾ ೨೭.೫ ಬ್ರಿಟನ್ನಿಗೇ ಹೋಗುತ್ತದೆ. ಚಹಾ, ಸಣಬಿನ ಸರಕುಗಳು, ಚರ್ಮ, ತಂಬಾಕು ಇವು ನಮ್ಮ ಮುಖ್ಯ ರಫ್ತುಗಳು. ಇದರ ನಂತರ ಜವಳಿ ಮತ್ತು ವನಸ್ಪತಿ ತೈಲಗಳು. ಬ್ರಿಟನ್ನು ನಮ್ಮ ಚಹಾ ರಫ್ತಿನಲ್ಲಿ ಸೇಕಡಾ ೪೪ ರಷ್ಟನ್ನು ತೆಗೆದುಕೊಳ್ಳುತ್ತದೆ. ೧೯೬೦ ರಲ್ಲಿ ನಾವು ಗಳಿಸಿದ ಒಟ್ಟು ರೂ. ೧೨೦.೦೪ ಕೋಟಿ ವಿದೇಶ ವಿನಿಮಯದಲ್ಲಿ ಬ್ರಿಟನ್ನಿನಿಂದಲೇ ನಮಗೆ ರೂ. ೮೫.೨ ಕೋಟಿ ದೊರೆಯಿತು. ನಮ್ಮ ಜವಳಿಯ ರಫ್ತಿನಲ್ಲಿ ಸೇಕಡಾ ೫೦ ಬ್ರಿಟನ್ನಿಗೆ ಹೋಗುತ್ತದೆ. ೧೯೬೦ ರಲ್ಲಿ ತನ್ನ ಕೋರಾ



ಬಟ್ಟೆ ಉತ್ಪಾದನೆಯಲ್ಲಿ ಸೇಕಡ ೩೭.೪ ರಷ್ಟನ್ನು ಭಾರತ ಬ್ರಿಟನ್ನಿಗೆ ಕಳಿಸಿದೆ.

ಈಗಲೇ ಭಾರತಕ್ಕೆ ವಿದೇಶಿವಿನಿಮಯದ ತೊಂದರೆಗಳು ಸಾಕಷ್ಟಿವೆ. ಬ್ರಿಟನ್ ಸಾಮಾನ್ಯ ಪೇಟೆ ಸೇರಿದರೆ ಅವು ಇನ್ನೂ ಹೆಚ್ಚಾಗುವುದು ಖಂಡಿತ. ನಮ್ಮ ಜವಳಿ ಮತ್ತು ಚಹಾ ಎರಡರ ರಫ್ತಿಗೂ ಜಪಾನಿನ ಸ್ಪರ್ಧೆಯಿಂದ ಧಕ್ಕೆ ಬರಲಿದೆ. ಸಣಬಿನ ಬದಲಿಗೆ ಇತರ ನಾರುಗಳು ಉಪಯೋಗಕ್ಕೆ ಬರುತ್ತಿರುವುದರಿಂದ ನಮಗೆ ಈಗಾಗಲೇ ನಮ್ಮ ಸಣಬಿನ ಪೇಟೆಯನ್ನುಳಿಸಿಕೊಳ್ಳಲು ಕಷ್ಟವಾಗುತ್ತಿದೆ. ಬ್ರಿಟನ್ ಸಾಮಾನ್ಯ ಪೇಟೆ ಸೇರಿದ ಮೇಲೆ ಸಾಮಾನ್ಯ ಪೇಟೆಯ ಬಲವಾದ ಟ್ಯಾರೀಫ್ ಸುಂಕವನ್ನು ಎದುರಿಸಿ ನಮ್ಮ ರಫ್ತನ್ನು ಕಾಯ್ದುಕೊಳ್ಳುವುದು ತೀರ ಕಷ್ಟ. ಮೂರನೇ ಯೋಜನೆಯ ಅವಧಿಯಲ್ಲಿ ರೂ. ೩,೭೦೦ ಕೋಟಿಯಷ್ಟು ರಫ್ತಿನ ಗುರಿಯಿಟ್ಟುಕೊಂಡ ಭಾರತಕ್ಕೆ ಬ್ರಿಟನ್ನಿನ ಪೇಟೆ ಬಲುಮಟ್ಟಿಗೆ ಕೈತಪ್ಪಿದರೆ ನಮ್ಮ ಕಷ್ಟಗಳು ಬಹಳ ಹೆಚ್ಚುವವು.

ಹಾಗೆಯೆ ಭಾರತದಂಥ ಆರ್ಥಿಕ ದೃಷ್ಟಿಯಿಂದ ಅನಭಿವೃದ್ಧ ರಾಷ್ಟ್ರಗಳಿಗೆ ಈ ವರೆಗೆ ಮಾಡಿದಷ್ಟು ಸಹಾಯವನ್ನು ಬ್ರಿಟನ್ನು ಸಾಮಾನ್ಯ ಪೇಟೆ ಸೇರಿದ ಮೇಲೆ ಮಾಡಲಾವುದೋ ಎಂಬುದೂ ಸಂದಿಗ್ಧವಾಗಿದೆ. ಕಾಮನ್‌ವೆಲ್ತ್ ಸದಸ್ಯನೆಂಬುದಕ್ಕಾಗಿ ಭಾರತಕ್ಕೆ ನೆರವು ನೀಡಲು ಅದು ಬದ್ಧವಾಗಿದ್ದರೂ ಯುರೋಪಿಯನ್ ಸಾಮಾನ್ಯ ಪೇಟೆ ಸೇರುವ ಹಿಂದುಳಿದ ಯುರೋಪಿಯನ್ ರಾಷ್ಟ್ರಗಳಿಗೂ ಅದು ನೆರವು ನೀಡಬೇಕಾದೀತು. ಎರಡನ್ನೂ ಅದು ತೂಗಿಸಿಕೊಂಡು ಹೋಗಬಹುದೆ?

ಡಾಲರ್ ಕೊರತೆಯು ಭಾರತದಂಥ ಕೆಲ ಕಾಮನ್‌ವೆಲ್ತ್ ದೇಶಗಳ ಬಲುಗಾಲದ ದುಃಖವಾಗಿದೆ. ಯುದ್ಧೋತ್ತರ ಕಾಲದಲ್ಲಿ ತನ್ನ ಡಾಲರ್ ಕೊರತೆಯನ್ನು ನೀಗಿಸಲು ಬ್ರಿಟನ್ನು ಪ್ರಾರಂಭಿಸಿದ ಕಾಮನ್‌ವೆಲ್ತ್ ಡಾಲರ್

ಸಂಯುಕ್ತ ನಿಧಿಯು ಇದಕ್ಕೊಂದು ತಾರಕವಾಗಿತ್ತು. ಕಾಮನ್‌ವೆಲ್ತಿನಲ್ಲಿ ಸಿಂಹಳ, ಮಲಯ ಮತ್ತು ದಕ್ಷಿಣ ಆಫ್ರಿಕಗಳು ಡಾಲರ್ ಉಳಿಕೆ ರಾಷ್ಟ್ರಗಳಾಗಿದ್ದು ಅವುಗಳ ಉಳಿಕೆ ಸಂಗ್ರಹದಿಂದ ಕೊರತೆ ರಾಷ್ಟ್ರಗಳು ತಮ್ಮ ತೊಂದರೆ ನೀಗಿಸಿಕೊಳ್ಳುತ್ತಿದ್ದವು. ಬ್ರಿಟನ್ ಸಾಮಾನ್ಯಪೇಟಿ ಸೇರಿದರೆ ಡಾಲರ್ ಸಂಯುಕ್ತ ನಿಧಿಯ ಸ್ವರೂಪವೇ ಬದಲಾಗಿ ಹೋಗದಿರದು. ಅದು ಪೂರ್ತಿ ಅಳಿಸಿ ಹೋದೀತು. ಆಗ ಭಾರತದಂಥ ದೇಶಗಳ ಡಾಲರ್ ಕೊರತೆ ಭೀಕರ ರೂಪ ತಾಳಬಹುದಾಗಿದೆ. ಏಕೆಂದರೆ ಭಾರತವಿರಲಿ ಮತ್ತಾವ ದೇಶವಿರಲಿ ಇಂದು ಅಮೇರಿಕದಿಂದ ಸರಕುಗಳನ್ನು ತರಿಸಿಕೊಳ್ಳದೆ ಅಭಿವೃದ್ಧಿ ಸಾಧಿಸಿಕೊಳ್ಳುವುದು ಅಸಾಧ್ಯಪ್ರಾಯವಾಗಿದೆ.

ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ಸವಲತ್ತುಗಳನ್ನು ಸಾಮಾನ್ಯ ಪೇಟಿಯಲ್ಲಿ ಕೊಡಿಸುವುದಾಗಿ ಬ್ರಿಟನ್ನು ಹೇಳುತ್ತಿದೆ. ಇದು ಹೇಳಿದಷ್ಟು ಸುಲಭವಾಗಿಲ್ಲ. ಫ್ರಾನ್ಸ್ ಆಗಲೇ ಇದನ್ನು ವಿರೋಧಿಸಿದೆ, ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ಸಾಕಷ್ಟು ಸವಲತ್ತು ಕೊಡಿಸದೆ ಅದು ಸಾಮಾನ್ಯ ಪೇಟಿ ಸೇರಿದ್ದಾದರೆ ಅದು ಕಾಮನ್‌ವೆಲ್ತನ್ನು ಛಿನ್ನವಿಚ್ಛಿನ್ನಗೊಳಿಸಬಹುದು. ಯುರೋಪಿನಲ್ಲಿ ಐಕ್ಯ ಸ್ಥಾಪಿಸಹೋಗಿ ಇತರತ್ರ ಅನೈಕ್ಯ ಸ್ಥಾಪಿಸುವುದು ಯಾವ ಜಾಣತನ?

ಕಾಮನ್‌ವೆಲ್ತ್ ರಾಷ್ಟ್ರಗಳನ್ನು ಯುರೋಪಿಯನ್ ಸಾಮಾನ್ಯಪೇಟಿಯ ಉಪ ಸದಸ್ಯರಾಗಿ ಸೇರಿಸಿಕೊಳ್ಳಬಹುದೆಂಬೊಂದು ಸೂಚನೆ ಬಂದಿದೆ. ಇದನ್ನು ಯಾವ ಕಾಮನ್‌ವೆಲ್ತ್ ಸರಕಾರವೂ ಸುಲಭವಾಗಿ ಸ್ವೀಕರಿಸಲಾರದು. ಬ್ರಿಟನ್ ಸಾಮಾನ್ಯಪೇಟಿ ಸೇರಿದಾಗ ಅದರಲ್ಲಿ ಯುರೋಪಿನ ಅತಿ ದೊಡ್ಡ ಸಾಮ್ರಾಜ್ಯ ಕಟ್ಟಿದ ರಾಷ್ಟ್ರಗಳೂ ಅತಿ ಘೋರ ಯುದ್ಧಗಳನ್ನು ಪ್ರೇರಿಸಿದ ರಾಷ್ಟ್ರಗಳೂ ಕೂಡಿದಂತಾಗುತ್ತವೆ. ಅದು ಔದ್ಯೋಗಿಕವಾಗಿ ಅತಿ ಪ್ರಬಲ ಮತ್ತು ಮಾನಸಿಕವಾಗಿ ಸಾಮ್ರಾಜ್ಯ ವೈಭವವನ್ನು ಇನ್ನೂ ಮರೆಯದ ರಾಷ್ಟ್ರಗಳ ಕೂಟವಾಗುತ್ತದೆ. ಇಂಥ ರಾಷ್ಟ್ರಗಳ ಪ್ರಾಬಲ್ಯವುಳ್ಳ ಕೂಟದ ಕೈಯ್ಯಲ್ಲಿ ಇದೇ ಈಗ ಬಲು ಕಷ್ಟದಿಂದ ಸ್ವಾತಂತ್ರ್ಯ ಪಡೆದ ರಾಷ್ಟ್ರಗಳು ತಮ್ಮ ಆರ್ಥಿಕ ಅಭಿವೃದ್ಧಿಯನ್ನು ಕಟ್ಟಿಕೊಡಲೊಪ್ಪಲಾರವು ಅವುಗಳ ಕೈಯಲ್ಲಿ ಸಿಕ್ಕಿಕೊಂಡರೆ ಡಾ. ಥಾಮಸ್ ಬಲೋಫರು ಹೇಳಿದಂತೆ "ಬಲಿಷ್ಠರು ಶ್ರೀಮಂತರಾಗುವರು. ದುರ್ಬಲರು ಬಡವರಾಗುವರು."

ಸಾಮಾನ್ಯ ಪೇಟಿಯ ಇನ್ನೊಂದು ಅಂಶವನ್ನೂ ನಾವು ಕಡೆಗಣಿಸುವಂತಿಲ್ಲ. ಅದರ ರಾಜಕೀಯ ಧ್ಯೇಯ ಅಪಾಯಕರವಾಗಿ ಪರ್ಯವಸಾನ ಹೊಂದಬಹುದು. ಏಕೆಂದರೆ ಸಾಮಾನ್ಯ ಪೇಟಿಯಿಂದ ರಾಜಕೀಯ ಸಂಯುಕ್ತ ರಾಜ್ಯ ನಿರ್ಮಾಣ ಅದರ ಉದ್ದೇಶವಾಗಿದೆ. ರಶಿಯದ ಬೆಳೆಯುತ್ತಿರುವ ಪ್ರಭಾವವನ್ನು ತಡೆಗಟ್ಟಲು ಹೀಗೆ ಪಶ್ಚಿಮ ಯುರೋಪು ಒಂದೇ ಪ್ರಬಲ ರಾಜ್ಯವಾದರೆ ಚೆನ್ನು ಎಂದುಕೊಂಡು ಅಮೇರಿಕವಾದರೂ ಸಾಮಾನ್ಯ ಪೇಟಿಯಿಂದ ತನಗೆ ಅಷ್ಟಿಷ್ಟು ಹಾನಿಯಿದ್ದರೂ ಇದಕ್ಕೆ ಪ್ರೋತ್ಸಾಹ ಕೊಡುತ್ತಿದೆ.

ಆದರೆ ರಶಿಯದ ವಿಸ್ತರಣವನ್ನು ಎದುರಿಸುವ ಜತೆಗೆ ಕೆಲ ರಾಷ್ಟ್ರಗಳ ಖಾಸಗಿ ಸ್ವಾರ್ಥಗಳೂ ಇದರಲ್ಲಿ ಅಡಕವಾಗಿವೆ. ಫ್ರಾನ್ಸ್ ಮತ್ತು ಪಶ್ಚಿಮ ಜರ್ಮನಿ ಇಡೀ ಯುರೋಪನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳಲು ಇದು ಸಂಧಿ ಒದಗಿಸುತ್ತದೆಂದು ಲೆಕ್ಕ ಹಾಕಿವೆ ಪಶ್ಚಿಮ ಜರ್ಮನಿಗೆ ಬಲಾತ್ಕಾರದಿಂದ ಪೂರ್ವಜರ್ಮನಿಯನ್ನು ಸೆಳೆದುಕೊಳ್ಳಲು ಇದೊಂದು ಅವಕಾಶವೊದಗಿಸಬಹುದು. ಇದರ ಅರ್ಥ ಯುದ್ಧವೇ ಆದೀತು. ಈ ಕಾರಣದಿಂದಲೇ ಪ್ರಧಾನ ಮಂತ್ರಿ ನೆಹರು ಅವರು ಸಾಮಾನ್ಯಪೇಟಿಯ ರಾಜಕೀಯ ಪರಿಣಾಮ ಭಯಾವಹವಾಗಬಹುದೆಂದು ಹೇಳಿದ್ದು. *

ಇನ್ನೊಂದು ಹತ್ತುವರ್ಷಗಳಲ್ಲಿ ಈ ಅದ್ಭುತ ಸಾಧ್ಯವಾದೀತು

# ವಾಯುವೇಗದಲ್ಲಿ ಅಂಚೆ ಸಾಗಾಟ

ಜಲಜ ಪಾಟೀಲ್

ಫ್ರಾನ್ಸಿನಲ್ಲಿ ಪ್ರತಿದಿನ ಐದುನೂರು ರೈಲು ಗಾಡಿಗಳು, ಹಗಲು ರಾತ್ರಿ ಎನ್ನದೆ ಓಲೆಗಳನ್ನು ಹೊತ್ತು ತಿರುಗುತ್ತವೆ. ವಿಪರೀತ ಶಾಖದಿಂದ ಕೂಡಿರುವ ಇಂತಹ ರೈಲುಗಳಲ್ಲಿರುವ ಅಂಚೆಯಾಳುಗಳು, ದೊಡ್ಡ ದೊಡ್ಡ ಅಂಚೆ ಚೀಲಗಳಿಂದ ಓಲೆಗಳನ್ನು ರಾಶಿರಾಶಿಯಾಗಿ ಸುರಿದು, ಮಾಯಕದಿಂದೆಂಬಂತೆ ಕೆಲವೇ ಕ್ಷಣಗಳಲ್ಲಿ ಅವುಗಳನ್ನೆಲ್ಲಾ ವಿಂಗಡಿಸಿ ಕುಪ್ಪೆ ಕುಪ್ಪೆಗಳಾಗಿ ಮಾಡುತ್ತಾರೆ.

ಇಪ್ಪತ್ತು ಸಾವಿರ ಅಂಚೆಯಾಳುಗಳು ಇದೇ ರೀತಿ, ಕಿಟಕಿಗಳಿಲ್ಲದ, ಸರಿಯಾಗಿ ವಾಯು ಸಂಚಾರಕ್ಕೂ ಅವಕಾಶವಿಲ್ಲದ, ಈ ರೈಲು ಡಬ್ಬಿಗಳಲ್ಲಿ ಕೆಲಸ ಮಾಡುತ್ತಾರೆ. ಫ್ರಾನ್ಸಿನ ಮೂಲೆ ಮೂಲೆಗಳಲ್ಲಿರುವ ಹಳ್ಳಿಗಳನ್ನೂ ಯಾರೂ ಅರಿಯದಂತಹ ಬಡ ಹಳ್ಳಿಗನ ಹೆಸರನ್ನೂ ಕಂಠಪಾಠ ಮಾಡಬೇಕಾದುದು ಅವರ ಕರ್ತವ್ಯ. ಪ್ರತಿದಿನ ಬರುವ ೧೧,೪,೦೦,೦೦೦ ಓಲೆಗಳನ್ನು ಸರಿಯಾದ ಸಮಯಕ್ಕೆ, ನಿರ್ದಿಷ್ಟವಾದ ಸ್ಥಳಕ್ಕೆ ತಲುಪಿಸುವಂತಹ ಗಡುತರ ಹೊಣೆ ಅವರದಾಗಿದೆ.

ಆದರೆ ಇನ್ನು ಹತ್ತು ವರ್ಷಗಳಲ್ಲಿ, ನಿಮ್ಮ ಸ್ವಂತ ಅಕ್ಷರದಿಂದ ಕೂಡಿರುವ ಕಾಗದವು ಕೆಲವೇ ಸೆಕೆಂಡುಗಳಲ್ಲಿ ಅದು ತಲುಪಬೇಕಾದವರಿಗೆ ತಲುಪುವಂತಾಗುವುದು. ನಿಮ್ಮ ಪತ್ರದಲ್ಲಿನ ಒಂದು ಕಲೆಯಾಗಲಿ, ಒಂದು ಅರ್ಧ ವಿರಾಮವಾಗಲಿ, ಆ ಕಾಗದಿಂದ ಅಳಿಸಿ ಹೋಗಿರುವುದಿಲ್ಲ.

ಇದನ್ನೇನು ವಿಜ್ಞಾನದ ಕಲ್ಪನೆಯ ಭ್ರಾಂತಿಯೆನ್ನುವಿರಾ ? ಎಂದಿಗೂ ಇಲ್ಲ. ಇಸ್ಸಿ-ಲೆಸ್-ಮೌಲಿನ್ಯೂಕ್ಸ್ ( Issy-Les-Moulineax ) ನಲ್ಲಿರುವ ಟೆಲಿಕಮ್ಯುನಿಕೇಶನ್ಸ್ ಕೇಂದ್ರಕ್ಕೆ ಒಂದು ಬಾರಿ ಭೇಟಿ ಕೊಟ್ಟಲ್ಲಿ ಇದೇನು ಕಲ್ಪನೆಯ ಭ್ರಾಂತಿಯೊ ಅಥವಾ ಮಾನವನ ಅದ್ಭುತ ಸಂಶೋಧನೆಯ ಫಲವೋ ಎಂಬುದು ತಿಳಿಯುತ್ತದೆ.

ಈ ಆಶ್ಚರ್ಯಕರವಾದ ಕಾರ್ಯವನ್ನು ರೋಬೋಟ್ ( Robot ) ಎಂಬ ಒಂದು ಸಾಧಾರಣ ಯಂತ್ರವು ನಿರ್ವಹಿಸುತ್ತದೆ. ರೋಬೋಟ್ ಎಂಬುದೊಂದು ಬುದ್ಧಿವಂತ, ವಿಧೇಯ, ವ್ಯಕ್ತಿ ಭೇದವಿಲ್ಲದ ಯಂತ್ರ ಅಥವಾ ಯಂತ್ರದಂತಿರುವ ಮನುಷ್ಯ. ನಿಮ್ಮ ಪತ್ರವನ್ನು ಈ ಯಂತ್ರದಲ್ಲಿ ಹಾಕಿದ ತಕ್ಷಣ, ಒಂದು ಯಾಂತ್ರಿಕ ಕಾಗದ ಕತ್ತರಿಸುವ ಚೂರಿಯಿಂದ ಆ ಲಕೋಟೆಯು ಒಡೆಯಲ್ಪಡುವುದು. ಆಗ ಲಕೋಟೆ ಒಂದು ಕಡೆ, ಪತ್ರವೊಂದು ಕಡೆ ಹೋಗುತ್ತವೆ. ಅಲ್ಲಿ ಯಾವ ಮನುಷ್ಯನ ಮಧ್ಯಸ್ಥಿಕೆಯಾಗಲಿ, ಯಾವುದೇ ರೀತಿಯ ಅಜಾಗರೂಕತೆಯಾಗಲಿ ಇಲ್ಲದ ಆಧಾರದಿಂದ

ಕಾರಣ ನಿಮ್ಮ ಪತ್ರದಲ್ಲಿರುವ ವಿಷಯದ ಬಗ್ಗೆ ಏನೂ ಚಿಂತಿಸಬೇಕಾಗಿಲ್ಲ. ಆ ಯಂತ್ರವು ಬೇರೆಯವರ ವಿಷಯದಲ್ಲಿ ಆಸಕ್ತಿಯುಳ್ಳದಲ್ಲ. ಎಷ್ಟಾದರೂ ಯಂತ್ರವಲ್ಲವೇ ?

ಈಗ ಯಂತ್ರವು ಎಲೆಕ್ಟ್ರೋನಿಕ್ಸ್ ಟೆಲಿವಿಜನ್ ಸೂತ್ರದ ಪ್ರಕಾರ ಕಾರ್ಯವನ್ನಾರಂಭಿಸುತ್ತದೆ. ಕಾಗದದಲ್ಲಿರುವ ಪ್ರತಿ ಪದವನ್ನೂ ವಾಕ್ಯವನ್ನೂ ಫೋಟೋ ಎಲೆಕ್ಟ್ರಿಕ್ ಕಣ್ಣಿನಿಂದ, ಆ ಪತ್ರವನ್ನು ಎಡದಿಂದ ಬಲಕ್ಕೂ ಮೇಲಿನಿಂದ ಕೆಳಗಿನವರೆಗೂ ಓದಿ, ನಂತರ ಕಾಗದದ ವಿಷಯವೆಲ್ಲವನ್ನೂ ಕೇವಲ ೧/೧೦ ಸೆಂಟಿಮೀಟರಿನಷ್ಟು ಎತ್ತರವುಳ್ಳ, ನೇರವಾದ ಒಂದು ತುಂಡು ಕಾಗದದಲ್ಲಿ ಸಂಗ್ರಹಿಸುತ್ತದೆ. ಈ ಅತಿ ಚಿಕ್ಕ ಕಾಗದದ ಮೇಲೆ ಅಕ್ಷರಗಳು ಮತ್ತು ವಾಕ್ಯಗಳು ಸಣ್ಣ ಚುಕ್ಕೆಗಳಂತೆ ಕಾಣುತ್ತವೆ.

ಈಗ ರೋಬೋಟ್ ಯಂತ್ರದಲ್ಲಿರುವ ಫೋಟೋ ಎಲೆಕ್ಟ್ರಿಕ್ ಸೆಲ್ ಬಹಳ ಸಣ್ಣ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಹೊರಡಿಸುತ್ತದೆ. ಈ ವಿದ್ಯುಚ್ಛಕ್ತಿಯನ್ನು ಎಲಿಮೆಂಟರಿ ಸಿಗ್ನಲ್ ಎಂದು ಕರೆಯುತ್ತಾರೆ. ಈ ವಿದ್ಯುಚ್ಛಕ್ತಿಯು ಆ ಚಿಕ್ಕ ಕಾಗದದ ಮೇಲಿರುವ ಪ್ರತಿ ಚುಕ್ಕಿಯ ಮೇಲೆ ಹರಿದುಹೋದ ಹಾಗೆಲ್ಲಾ, ಮೇಲೆ ಹೇಳಿದ ಎಲಿಮೆಂಟರಿ ಸಿಗ್ನಲ್ ಕೊಡುತ್ತದೆ. ಆಗ ಮನುಷ್ಯನ ಕೈಬರಹವು ವಿದ್ಯುತ್ ಪ್ರಚೋದನೆಯಾಗಿ ಮಾರ್ಪಡುತ್ತದೆ. "ನಾನು ಕ್ಷೇಮ" ಮುಂತಾದ ಬರಹವೆಲ್ಲವೂ ಬಹಳ ಚಿಕ್ಕ ಚುಕ್ಕೆಗಳಾಗಿ ಮತ್ತು ವಿದ್ಯುತ್‌ಸಂಕೇತಗಳಾಗಿ ಮಾರ್ಪಾಡಾಗುವವು.

ಈ ಕಾಗದದಲ್ಲಿದ್ದ ವಿಷಯವೆಲ್ಲವೂ ಕೇಬಲ್ (Cable = ಕಡಲತಂತಿ) ಅಥವಾ ರೇಡಿಯೋ ಮೂಲಕ ಅದು ತಲುಪಬೇಕಾಗಿದ್ದ ಸ್ಥಳಕ್ಕೆ ಕಳುಹಿಸಲ್ಪಡುವುದು. ಈ ಸಂಕೇತಗಳ ಮಾಲೆಯು ಬೆಳಕಿನ ವೇಗದಲ್ಲಿ ಚಲಿಸುತ್ತದೆ. ಅದು ತಲುಪಬೇಕಾದ ಸ್ಥಳದಲ್ಲಿಯೂ ಸಹ ಈ ರೀತಿ ಬರುವ ಸಂಕೇತಗಳನ್ನು ಸ್ವೀಕರಿಸುವ ರೋಬೋಟ್ ಯಂತ್ರವಿರುತ್ತದೆ. ಈ ಎರಡನೇ ರೋಬೋಟ್ ಯಂತ್ರವು ಬರುವ ವಾಕ್ಯಗಳ ಸಾಲುಗಳನ್ನು ಫೋಟೊ ಎಲೆಕ್ಟ್ರಿಕ್ ಕಣ್ಣಿನಿಂದ ಓದಿ ಅವುಗಳನ್ನು ತಿರುಗಿ ಪದ ಮತ್ತು ವಾಕ್ಯಗಳಾಗಿ ಮಾರ್ಪಡಿಸುತ್ತದೆ, ಈಗ ಆ ಕಾಗದವು ಮನುಷ್ಯ ರಚಿತವಾದಂತೆ ಕಾಣುವುದು ಮತ್ತು ಓದಲೂ ಸಹ ಸಾಧ್ಯವಾಗುತ್ತದೆ.

ಈ ಎರಡನೆ ರೋಬೋಟ್ ಯಂತ್ರದ ಕಾರ್ಯವೂ ಸಾಕಷ್ಟು ಸುಲಭ. ಎರಡನೆ ರೋಬೋಟ್ ಬರುವ ಸಂಕೇತಗಳ ಮಾಲೆಗಳನ್ನೆಲ್ಲಾ ಸ್ವೀಕರಿಸುವಾಗ ಪ್ರತಿ ಒಂದು ಸಂಕೇತವೂ ಒಂದೊಂದು ರೀತಿಯ ವಿದ್ಯುತ್ ಪ್ರಚೋದನೆಯನ್ನು ಹೊರಡಿಸುತ್ತದೆ. ಈ ವಿದ್ಯುತ್‌ಪ್ರಚೋದನೆಯು ರಸಾಯನಿಕಗಳಲ್ಲಿ ಅದ್ದಿದ ಒಂದು ಹಾಳೆಯ ಮೇಲೆ ಸಮತೋಲನವಾದ ತಲ್ಲಣವನ್ನುಂಟು ಮಾಡುತ್ತದೆ. ಈ ತಲ್ಲಣವು ರೋಬೋಟ್ ಯಂತ್ರದ ಲೇಖನಿಗೆ ಆ ರಸಾಯನಿಕ ಕಾಗದದ ಮೇಲೆ ಅಕ್ಷರಗಳಂತೆ ಬರೆಯಲು ಸಹಾಯವಾಗುವುದು. ಈ ರೀತಿಯಾಗಿ ಕಾಗದವು ಮೊದಲಿನ ರೂಪಕ್ಕೆ ಬರುತ್ತದೆ.

ಈ ಕಾರ್ಯವೆಲ್ಲ ಮುಗಿದ ಮೇಲೆ ಬೇರೊಂದು ಯಂತ್ರವು ಈ ಪ್ರತಿ ನಕಲನ್ನು ಲಕೋಟೆಯಲ್ಲಿ ಹಾಕಿ ಸೀಲ್ ಮಾಡುತ್ತದೆ. ಕೊನೆಗೆ ಅಂಚೆಯಾಳಿನ ಮೂಲಕ ಅದು ತಲುಪಬೇಕಾದವರಿಗೆ ಕಳುಹಿಸಲ್ಪಡುವುದು.

ಈಗ ಒಂದು ಪತ್ರವು ಪ್ಯಾರಿಸ್‌ದಿಂದ ಲಾಸ್ ಏಂಜಲೀಸ್‌ಗೆ ಹೋಗಲು ಆರು ದಿನಗಳು ಬೇಕು. ಆದರೆ ೧೯೭೦ ರ ವೇಳೆಗೆ ಇದೇ ಪತ್ರವು ಇದೇ ೧೦,೦೦೦ ಮೈಲಿ ಪ್ರಯಾಣ ಮಾಡಲು ಆ ಪತ್ರವನ್ನು ಬರೆಯಲು ತೆಗೆದುಕೊಂಡ ವೇಳೆಗಿಂತ ಕಡಿಮೆ ವೇಳೆ ತೆಗೆದುಕೊಳ್ಳುವುದು. ನೀವು ಬರೆದ ಹಾಳೆಯೇ ಇಲ್ಲದೆ ಹೋದರೂ ಕೈಬರಹ ಮಾತ್ರ ನಿಮ್ಮದರಂತೆಯೇ ಇರುತ್ತದೆ.

ಈಗ, ಆ ಯಂತ್ರಕ್ಕೆ ಯಾವ ಊರಿಗೆ ಕಳುಹಿಸಬೇಕೆಂದು ಹೇಗೆ ತಿಳಿಯುತ್ತದೆ?

ವಿಜ್ಞಾನಿಗಳ ಪ್ರಕಾರ ಯಾವ ರೋಬೋಟ್ ಯಂತ್ರಕ್ಕೂ ಅಷ್ಟು ಬುದ್ಧಿವಂತಿಕೆಯಿಲ್ಲ. ಎಷ್ಟೇ ಸುಧಾರಿಸಿದ ಯಂತ್ರಕ್ಕೂ ಇದು ವರೆಗೆ, ಫ್ರಾನ್ಸ್‌ನಲ್ಲಿರುವ ವಿಯನ್ನಾ ಮತ್ತು ಆಸ್ಟ್ರೇಲಿಯಾದಲ್ಲಿರುವ ವಿಯನ್ನಾಕ್ಕೂ ವ್ಯತ್ಯಾಸ ಕಂಡು ಹಿಡಿಯಲು ಸಾಧ್ಯವಾಗಿಲ್ಲ. ಅದನ್ನು ಕಲಿಸುವುದು ಸಹ ಅಸಾಧ್ಯ. ಆದರೆ ಈ ಸಮಸ್ಯೆಯನ್ನು ಬಹು ಸುಲಭವಾಗಿ ಪರಿಹರಿಸಲಾಗುವುದು.

ನಮಗೆ, ೧೯೭೦ ರಲ್ಲಿ ಕಾಗದ ಕಳುಹಿಸಬೇಕಾದಾಗ, ಒಂದು ಹೊಸ ನಮೂನೆಯ, ಬೇರೆ ಬೇರೆ ವಿಧವಾದ ಗುರುತುಗಳುಳ್ಳ ಲಕೋಟೆಗಳನ್ನು ಕೊಳ್ಳಬೇಕು. ಈ ಗುರುತುಗಳು ಬೇರೆ ಬೇರೆ ದೇಶಗಳಿಗೆ ಅಥವಾ ಜಿಲ್ಲೆಗಳಿಗೆ ಬೇರೆ ಬೇರೆ ವಿಧವಿರುತ್ತವೆ. ಈ ಗುರುತಿನ ಸಹಾಯದಿಂದ ರೋಬೋಟ್ ಯಂತ್ರಕ್ಕೆ, ಆ ಕಾಗದವನ್ನು ಯಾವ ತಂತಿಯ ಮೂಲಕ ಅಥವಾ ಎಷ್ಟನೇ ಮೀಟರಿನಲ್ಲಿ, ಎಷ್ಟು ದೂರ ಕಳುಹಿಸಬೇಕೆಂಬುದು ತಿಳಿಯುತ್ತದೆ.

ಇನ್ನೊಂದು ಸಂಶಯವೇನೆಂದರೆ, ರೋಬೋಟ್ ಯಂತ್ರ, ಕಳಿಸುವ ತಂತಿಯಲ್ಲಿ, ಸಂದೇಶಗಳು ತುಂಬಾ ಹೆಚ್ಚಾದರೆ ಹೇಗೆ ಕೆಲಸ ಮಾಡುವುದು?

ಇದನ್ನು ಸಹ ಸುಲಭವಾಗಿ ಪರಿಹರಿಸಬಹುದು. ಆ ತಂತಿ-ಸಲ್ಲಿ ಸಹ ಬಂದ ಸಂದೇಶಗಳನ್ನೆಲ್ಲಾ ರೆಕಾರ್ಡ್ ಮಾಡಿಕೊಂಡು ಒಂದು ಲೈನ್ ಖಾಲಿಯಾದ ತಕ್ಷಣ ಇನ್ನೊಂದನ್ನು ಕಳುಹಿಸುವಂತಹ ಏರ್ಪಾಡಿರುತ್ತದೆ. ಈ ಎಲ್ಲ ಕಾರ್ಯವೂ ಕೆಲವೇ ಕ್ಷಣಗಳಲ್ಲಿ ಆಗುವುವು.

ಇದರಿಂದಾಗಿ ಎಷ್ಟು ಕೆಲಸ ಮತ್ತು ಸಮಯ ಕಡಿಮೆಯಾಗುವುದೆಂದು ತೋರಿಸಲು ಕೆಳಗಿನ ಉದಾಹರಣೆ ನೋಡಿ. ಈಗ ಪ್ಯಾರಿಸ್ ಮತ್ತು ಲೈಯೋನ್ಸ್ (Lyons) ಮಧ್ಯ ೩೫೦ ಟೆಲಿಫೋನ್ ಸಂಪರ್ಕಗಳಿವೆ. ಇದರಿಂದ ಪ್ರತಿದಿನ ೬೦೦,೦೦೦ ಕಾಗದಗಳನ್ನು ಮೇಲೆ ವಿವರಿಸಿದ ರೀತಿಯಲ್ಲಿ ಪಡೆಯಬಹುದು. ಆದರೆ ಈಗ ಸದ್ಯದಲ್ಲಿ, ಈ ಎರಡು ಪ್ರದೇಶಗಳ ನಡುವೆ ಕೇವಲ ೧೦೦,೦೦೦ ಕಾಗದಗಳು ಮಾತ್ರ ಬರುತ್ತವೆ. ಇದರ ಮೇಲೆ ಯೋಚನೆಮಾಡಿ, ಎಷ್ಟು ಕೆಲಸ ಮತ್ತು ಸಮಯ ಕಡಿಮೆಯಾಗುವುದೆಂದು.

"ಒಂದೇ ಒಂದು ವಿಷಾದದ ಸಂಗತಿ ಎಂದರೆ ಅಂಚೆ ಚೀಟಿಗಳನ್ನು ಕೂಡಿಡುವ ಹವ್ಯಾಸ ಕೊನೆಗೊಳ್ಳಬೇಕಾಗುತ್ತದೆ." ಎಂದರು ವಿಜ್ಞಾನಿಯೊಬ್ಬರು.

ಈ ಸೌಕರ್ಯವು ನಮ್ಮ ದೇಶಕ್ಕೆ, ನಮ್ಮ ಮೊಮ್ಮಕ್ಕಳ ಕಾಲಕ್ಕಾದರೂ ಬರಲೆಂದು ಹಾರೈಸೋಣವೇ?

"ನೊನ್ನೆ ಸತ್ತೇ ಹೋಗುತ್ತಿದ್ದೆ. ಸ್ವಲ್ಪದರಲ್ಲಿ ಉಳಿದುಕೊಂಡೆ."

"ಹೌದೇ. ಏನಾಯಿತು?"

"ಎಂದಿನಂತೆ ಈ ಸಲ ಹೋದವನು ಈದಿನ ಕೆರೆಯ ಆಚೆಯ ದಂಡೆಯವರೆಗೂ ಈಸಿ ಹೋಗಬೇಕೆಂದು ನಿಶ್ಚಯಿಸಿದೆ. ಆದರೆ ಕೆರೆಯ ಮಧ್ಯಕ್ಕೆ ಬಂದಾಗ ನನ್ನಿಂದ ಸಾಧ್ಯವಿಲ್ಲ ಎಂದು ಅನಿಸಿ ಹೌಹಾರಿಬಿಟ್ಟೆ."

"ಆಗ-ಆಗ ಏನು ಮಾಡಿದಿ?"

"ಮತ್ತೇನು ಮಾಡುವುದು ಹೇಳಿ, ತಿರುಗಿ ಹೊರಟು ಈಚೆ ದಂಡೆಯವರೆಗೂ ಈಸಿಕೊಂಡು ಬಂದುಬಿಟ್ಟೆ."



# ಗುಪ್ತದಾನದ ನಿಧಿ

ಜಯಂತಕುಮಾರ ಪಾಠಕ

ಜಪಾನಿನ ರಾಜಧಾನಿ ಟೋಕಿಯೋದ ಉಪನಗರದ ಅತ್ಯಂತ ಜನದಟ್ಟಣೆಯ ಸಾರ್ವಜನಿಕ ರಸ್ತೆಯಲ್ಲಿರುವ ಒಂದು ಕಂಬಕ್ಕೆ ಸುಂದರವಾದ ಚಿಕ್ಕ ಪೆಟ್ಟಿಗೆಯೊಂದು ತೂಗುಹಾಕಲ್ಪಟ್ಟಿದೆ. ಸುಂದರವಾದೊಂದು ಹಳ್ಳಿಯ ಮನೆಯಂತೆ ಕಾಣುವ ಈ ಪೆಟ್ಟಿಗೆಗೆ ಇಳಿಜಾರಾದ ಮುಚ್ಚಳವಿದೆ. ಪೆಟ್ಟಿಗೆಯನ್ನು ಅತ್ತಿತ್ತ ಅಲುಗಿಸಲು ಬರುವಂತೆ ಒಂದು ಹಲಗೆಯ ಮೇಲೆ ಅದನ್ನಿಟ್ಟಿದ್ದಾರೆ. ಪೆಟ್ಟಿಗೆಯ ಬಲಬದಿಯ ಕೆಳತುದಿಯಲ್ಲಿ ಪುಟ್ಟದೊಂದು ಬಾಗಿಲಿದೆ. ಹಗಲಿರಲಿ, ರಾತ್ರಿಯಿರಲಿ ಜನರು ಈ ಪುಟ್ಟ ಬಾಗಿಲನ್ನು ತೆರೆದು ಒಳಗಿರುವ ಹಣದಲ್ಲಿ ಒಂದಿಷ್ಟು ತೆಗೆದುಕೊಂಡು ಅತ್ತಿತ್ತ ನೋಡದೆ ನಿಶ್ಶಂಕೆಯಿಂದ ಹೋಗಿಬಿಡುತ್ತಾರೆ.

ಆಯಿತೇ ಇದು, ಇನ್ನೊಂದು ದೃಶ್ಯವನ್ನು ನೋಡಿ ಈಗ. ಉತ್ತಮವಾದ ಉಡುಪು ಧರಿಸಿದ ಜಪಾನೀ ಗೃಹಸ್ಥನೊಬ್ಬ ಪ್ರತಿನಿತ್ಯ ಕನಿಷ್ಠ ಒಂದು ಸಲವಾದರೂ ಈ ಪೆಟ್ಟಿಗೆಯ ಮುಚ್ಚಳ ತೆರೆದು ಒಂದಿಷ್ಟು ನೋಟುಗಳನ್ನೂ ಚಿಲ್ಲರೆ ಹಣವನ್ನೂ ತಪ್ಪದೆ ಇಟ್ಟು ಹೋಗುತ್ತಾನೆ. ಆತ ಕೂಡ ಅತ್ತಿತ್ತ ನೋಡದೆ ಹಣ ಇಟ್ಟವನೇ ನೆಟ್ಟಗೆ ಹೋಗಿಬಿಡುತ್ತಾನೆ.

ಏನಿದು ವಿಚಿತ್ರ! ಇದೊಂದು ವಿನೂತನ ಬಗೆಯ ಗುಪ್ತದಾನವಾಗಿದ್ದು ಈ ಯೋಜನೆ ಜಪಾನಿನ ಸರ್ವ ಜನರ ಲಕ್ಷ್ಯವನ್ನು ತನ್ನತ್ತ ಸೆಳೆದಿದೆ. ಈ ಗುಪ್ತದಾನ ಚಳವಳಿಗೆ "ಸಾಲ್ವ

"ನವನೀತ" ದಿಂದ

ಆಫ್ ದಿ ಅರ್ಥ್" ಎಂಬ ಹೆಸರನ್ನಿಟ್ಟಿದ್ದಾರೆ.

ಜಪಾನನಲ್ಲೀಗ ಅನೇಕ ಕಡೆ ಇಂಥ ಗುಪ್ತ ದಾನ ಪೆಟ್ಟಿಗೆಗಳಿವೆಯಾದರೂ ೧೯೫೬, ಸಪ್ಟೆಂಬರ ೧೦ ರಂದು ೪೬ ವರ್ಷ ವಯಸ್ಸಿನ ಶಿನೋಚಿ ಈಗುಚಿ ಎಂಬ ಕವಿ ಟೋಕಿಯೋದ ಶಿಬಾಸಿಟಿ ಉಪನಗರದ ಹಾಗೋರಾಮೊ ಪೂಲಿನ ಹತ್ತರ ಒಂದು ಕಂಬಕ್ಕೆ ಮೊಟ್ಟಮೊದಲಿನ ಗುಪ್ತದಾನ ಪೆಟ್ಟಿಗೆಯನ್ನು ಇಟ್ಟಿದ್ದ.

ಮನಸ್ಸಿಗೆ ಬಂದಿದ್ದನ್ನೆಲ್ಲ ಮಾಡಿಬಿಡುವ ಈ ಉಲ್ಲಾಸ ವೃತ್ತಿಯ ಕವಿ ಶಿನೋಚಿ ಈಗುಚಿ ತನ್ನ ದೃಷ್ಟಿಯಲ್ಲಿ ಸರ್ವೋತ್ಕೃಷ್ಟವೆನಿಸಿದ ಕೆಲ ಕಾವ್ಯಪಂಕ್ತಿಗಳನ್ನು ತುಂಬ ಆತ್ಮವಿಶ್ವಾಸದಿಂದ ಈ ಮೊದಲನೆಯ ಪೆಟ್ಟಿಗೆಯ ಮೇಲೆ ಬರೆದಿಟ್ಟಿದ್ದಾನೆ. ಆ ಕಾವ್ಯಪಂಕ್ತಿಯ ಅರ್ಥ, "ನಿಜವಾಗಿಯೂ ಅಗತ್ಯವಿರುವವನು ಯಾವ ಬಗೆಯ ಸಂಕೋಚವನ್ನೂ ತಾಳದೆ ಈ ಪೆಟ್ಟಿಗೆಯೊಳಗಿಂದ ಹಣ ಒಯ್ಯಬೇಕು."

ಆದರೆ ಈ ಗುಪ್ತದಾನ ಮಹಾಕಾರ್ಯದ ಸಕಲ ಶ್ರೇಯಸ್ಸು ಒಬ್ಬ ನಿರ್ಧನನಾದ ಮನುಷ್ಯನಿಗೆ ಸಲ್ಲಬೇಕು. ಬಡತನಕ್ಕೆ ಬೇಸತ್ತು ಆತ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ್ದ. ಅವನ ಶೋಚನೀಯ ಪರಿಸ್ಥಿತಿಯು ಕವಿ ಶಿನೋಚಿಯ ಗಮನಕ್ಕೆ ಅದು ಹೇಗೋ ಬಂತು. ಅದೇ ಈ ಗುಪ್ತದಾನ ಪೆಟ್ಟಿಗೆಯ ಕಲ್ಪನೆಯನ್ನು ಮೂಡಿಸಿತು. ಆ ದರಿದ್ರ ಮನುಷ್ಯ ತನ್ನ ಕಥೆಯನ್ನು ಕವಿಯೆದುರು ತೋಡಿಕೊಳ್ಳುವಾಗ "ನನ್ನ ಮತ್ತು ನನ್ನ ಐದು ಜನ ಮಕ್ಕಳ ಜೀವನವನ್ನು ಕೊನೆಗೊಳಿಸುವುದನ್ನು ಬಿಟ್ಟರೆ ನನ್ನೆದುರು ಬೇರೆ ಮಾರ್ಗವೇ ಇಲ್ಲ" ಎಂದು ಹೇಳಿದ್ದ.

ಕವಿಯ ಹೃದಯ ಕರಗಿತು. ಆತ ಆ ಬಡ ಮನುಷ್ಯನಿಗೆ ನೌಕರಿ ಕೊಡಿಸಿದ. ಅವನ ಮನೆಯವರಿಗೆ ತನ್ನ ಮನೆಯಲ್ಲಿ ಆಶ್ರಯವಿತ್ತ. ಆದರೆ ಆ ಮನುಷ್ಯ ಹಗಲೆಲ್ಲ ದುಡಿದದ್ದು ಅವನ ಮನೆಯವರಿಗೆ ಊಟಕ್ಕೂ ಸಾಲುತ್ತಿರಲಿಲ್ಲ. ಅದರಿಂದ ಅವನ ೧೫ ವರ್ಷದ ಮಗಳು ವೇಶ್ಯಾ ವೃತ್ತಿಯನ್ನು ಕೈಕೊಳ್ಳಬೇಕಾಗಿ ಬಂತು.

ಈ ವಿಷಯ ತಿಳಿದಾಗ ಕವಿ ಶಿನೋಚಿಯ ಹೃದಯಕ್ಕೆ ಇನ್ನಿಷ್ಟು ವ್ಯಥೆಯಾಯಿತು. ಹದಿನೈದು ವರ್ಷದ ಹಸುಳೆ ಕೂಡ ಹೊಟ್ಟೆಗಾಗಿ ಇಂಥ ಹೀನವಾದ ಅನೈತಿಕ ಮಾರ್ಗವನ್ನು ಸ್ವೀಕರಿಸಬೇಕಾಯಿತೇ? ಇದಕ್ಕೆಲ್ಲ ತಾನೇ ಕಾರಣೀಭೂತ, ತಾನು ಅಪರಾಧಿ ಎಂಬ ಭಾವನೆ ಕವಿಯ ಮನದಲ್ಲಿ ಬೇರೂರಿತು. ಸನ್ಮಾರ್ಗದಿಂದ ನಡೆದು ಬಾಳುವೆ ಸಾಗಿಸಲು ಬೇಕಾದಷ್ಟು ಸಹಾಯವನ್ನು ತಾನು ಈ ಕುಟುಂಬಕ್ಕೆ ಮಾಡಲಿಲ್ಲವಲ್ಲ, ಯಾಕೆ ಮಾಡಲಿಲ್ಲ ಎಂದು ಅವನ ಮನ ಅವನನ್ನು ತಿನ್ನತೊಡಗಿತು. ಆತ ತನ್ನ ಮನೋವ್ಯಥೆಯನ್ನು ವ್ಯಕ್ತಪಡಿಸುತ್ತ "ದಾರಿದ್ರ್ಯವು ಒಂದು ಮಹಾ ಪಾಪ, ಪ್ರತಿಯೊಬ್ಬನೂ ಅದಕ್ಕೆ ಹೊಣೆಗಾರನಾಗಿದ್ದಾನೆ" ಎಂದು ಹೇಳಿದ.

ಅಂದೇ ಈಗುಚಿ ದೇವರ ಸಾಕ್ಷಿಯಿಟ್ಟು ಪ್ರತಿಜ್ಞೆ ಮಾಡಿದ: "ನಾನು ಜೀವದಿಂದ ಇರುವವರೆಗೂ ಪ್ರತಿನಿತ್ಯ ೧೦೦೦ ಯೆನ್ (ಸುಮಾರು ೧೨ ರೂಪಾಯಿಗಳು) ದಾನ ಮಾಡುತ್ತೇನೆ." ಗುಪ್ತದಾನ ಪೆಟ್ಟಿಗೆ ಹೀಗೆ ಜನ್ಮಿಸಿತು.

ಆ ಪೆಟ್ಟಿಗೆಯಲ್ಲೊಂದು ದಿನ ಈಗುಚಿಗೆ ಒಬ್ಬ ನಿರುದ್ಯೋಗಿ ಕೂಲಿಕಾರನ ಪತ್ರ ಸಿಕ್ಕಿತು. "ಕಷ್ಟಗಳಿಗೆ ಬೇಸತ್ತು ನಾನು ಆತ್ಮಹತ್ಯೆಗೆ ಪ್ರವೃತ್ತನಾಗಿದ್ದೆ. ಆದರೆ ನಿಮ್ಮ ಪೆಟ್ಟಿಗೆ ನನ್ನಲ್ಲಿ ಹೊಸ ಚೈತನ್ಯವನ್ನೂ ಧೈರ್ಯವನ್ನೂ ತುಂಬಿದ್ದರಿಂದ ನಾನು ನನ್ನ ವಿಚಾರವನ್ನು ಬದಲಿಸಿದೆ," ಎಂದಾತ ಬರೆದಿದ್ದ.

ದಿನಗಳೆದಂತೆ ಇಂಥ ಎಷ್ಟೋ ಪತ್ರಗಳು ಪೆಟ್ಟಿಗೆಯಲ್ಲಿ ಕಾಣಿಸತೊಡಗಿದವು. ಒಮ್ಮೆ ಬಡ ಹೆಂಗಸೊಬ್ಬಳು "ಪೆಟ್ಟಿಗೆಯಲ್ಲಿದ್ದ ಒಂದಿಷ್ಟು ಹಣ ತೆಗೆದುಕೊಂಡು ಉಪವಾಸದಿಂದ ಸಾಯತೊಡಗಿದ್ದ ನನ್ನ ಮಗನ ಪ್ರಾಣವನ್ನುಳಿಸಿಕೊಂಡೆ" ಎಂದು ಬರೆದಿದ್ದಳು. ಕಳ್ಳನೊಬ್ಬ ಬರೆದಿಟ್ಟಿದ್ದ, "ಕನ್ನಹಾಕಲೆಂದು ಹೊರಟಿದ್ದೆ. ಪೆಟ್ಟಿಗೆಯಿಂದ

ಹಣ ತೆಗೆದುಕೊಳ್ಳುವ ದುರಾಶೆಯಿಂದ ಅದರೊಳಗೆ ಕೈಹಾಕಿದಾಗ ನನ್ನ ಅಂತರಾತ್ಮ ಆರ್ತಸ್ವರದಲ್ಲಿ ಕೂಗಿಕೊಳ್ಳಲು ನಾನು ನನ್ನ ಬರಿಗೈಯನ್ನು ತಟ್ಟನೆ ಹೊರಗೆಳೆದುಕೊಂಡೆ. ಅಂದಿನಿಂದ ನಾನು ಸಭ್ಯ ಜೀವನವನ್ನು ಸಾಗಹಾಕಲು ನಿಶ್ಚಯಿಸಿದ್ದೇನೆ. ನನ್ನ ಮಿತ್ರನೊಬ್ಬ ನನಗೆ ನೌಕರಿ ಕೊಡಿಸಿದ್ದಾನೆ. ನನ್ನ ಈ ಭಾಗ್ಯಕ್ಕೆಲ್ಲ ಈ ಪೆಟ್ಟಿಗೆಯೆ ಕಾರಣೀಭೂತವಾಗಿದ್ದು ಅದಕ್ಕೆ ನನ್ನ ಅನಂತ ಕೃತಜ್ಞತೆಗಳನ್ನರ್ಪಿಸುತ್ತೇನೆ."

ಈಗುಚಿಯ ಪೆಟ್ಟಿಗೆಯನ್ನು ನೋಡಿದ ಶ್ರೀಮಂತ ವ್ಯಾಪಾರಿಯೊಬ್ಬ ತಾನೂ ಅಂಥದೇ ಪೆಟ್ಟಿಗೆಯೊಂದನ್ನಿಡಲು ನಿರ್ಧರಿಸಿದ. ಪೆಟ್ಟಿಗೆ ಇಡಲು, ಅದರ ಶಾಶ್ವತ ವ್ಯವಸ್ಥೆ ಮಾಡಲು ನೇಮನಿಯಮಗಳೇನಾದರೂ ಇವೆಯೆ ಎಂದಾತ ವಿಚಾರಿಸಿದಾಗ ಪೆಟ್ಟಿಗೆ ಇಡುವಾತ ಅಥವಾ ಅವನ ಜನರಲ್ಲೊಬ್ಬರು ಪ್ರತಿನಿತ್ಯ ಪೆಟ್ಟಿಗೆಯಲ್ಲಿ ಹಣ ಹಾಕಬೇಕು ಎಂಬ ನಿಯಮವನ್ನು ಬಿಟ್ಟರೆ ಮತ್ತಾವ ನಿಯಮವೂ ಇಲ್ಲವೆಂದು ವ್ಯಾಪಾರಿಗೆ ತಿಳಿಯಿತು. ವ್ಯಾಪಾರಿ ಈ ನಿಯಮವನ್ನೊಪ್ಪಿ ಪೆಟ್ಟಿಗೆಯನ್ನಿಟ್ಟ.

ಹೋದ ವರ್ಷ ಟೋಕಿಯೋದಲ್ಲಿ ಭಯಂಕರ ಬಿರುಗಾಳಿ ಬೀಸಿದಾಗ ಮನೆಯ ಹೊರಗೆ ಕಾಲಿಡಲು ಬಹುಶಃ ಯಾರೂ ಧೈರ್ಯಮಾಡಿರಲಾರರು. ಆದರೆ ಆ ಪ್ರತಿಜ್ಞಾಬದ್ಧ ವ್ಯಾಪಾರಿ ಮಾತ್ರ ನಿಯಮಪಾಲನೆ ಮಾಡಲೆಂದು ಜೀವವನ್ನು ಅಂಗೈಲಿ ಹಿಡಿದುಕೊಂಡು ಹೊರಟ. ಮನೆಯಿಂದ ಹೊರಬಿದ್ದ ಅಪರಾಧಕ್ಕಾಗಿ ಪೋಲೀಸನೊಬ್ಬ ಅವನನ್ನು ಬಂಧಿಸಿದ. ಆದರೆ ವ್ಯಾಪಾರಿ ಇಂಥ ಭೀಕರ ಸಮಯದಲ್ಲಿ ಮನೆಯಿಂದ ಹೊರಬಿದ್ದಿದ್ದ ಕಾರಣವನ್ನು ಕೇಳಿಕೊಂಡಾಗ ಆ ಪೋಲೀಸನ ಅಂತಃಕರಣ ತುಂಬಿ ಬಂತು. ಆತ ಕೂಡ ನಗರದ ಇನ್ನೊಂದು ಭಾಗದಲ್ಲಿ ಗುಪ್ತದಾನದ ಪೆಟ್ಟಿಗೆಯನ್ನಿಡಲು ನಿರ್ಧರಿಸಿದ.

ಹೀಗೆ ಈ ಗುಪ್ತದಾನ ಯೋಜನೆ ತನ್ನಷ್ಟಕ್ಕೆ ವಿಸ್ತರಿಸುತ್ತಿದ್ದಾಗ ಈಗುಚಿ ವೃತ್ತಪತ್ರಿಕೆಯೊಂದನ್ನು ಹೊರಡಿಸಲು ನಿರ್ಧರಿಸಿದ. ಲೇಖಗಳು, ಕವಿತೆಗಳು, ನೀತಿವಚನಗಳು, ಸ್ಫೂರ್ತಿದಾಯಕ ಸಾಹಿತ್ಯವಿರುತ್ತಿದ್ದ ಈ ಪತ್ರಿಕೆಯ ಪ್ರತಿಗಳನ್ನು ಪ್ರತಿಯೊಂದು ಪೆಟ್ಟಿಗೆಯ ಬುಡದಲ್ಲಿ ಇಡುತ್ತಿದ್ದರು. ಸದ್ಯಕ್ಕೆ ಕವಿ ಈಗುಚಿ ಹೇಗೋ ಹಣ ಸಂಪಾದಿಸಿ ಈ ಪತ್ರಿಕೆಯ ೧೪ ಸಾವಿರ ಪ್ರತಿಗಳನ್ನು ಮುದ್ರಿಸಿ ಹಂಚುತ್ತಾನೆ. ಇದರಲ್ಲಿ ೬,೦೦೦ ಪ್ರತಿಗಳು ಗುಪ್ತದಾನ ಪೆಟ್ಟಿಗೆಯ ಬುಡದಲ್ಲಿ ಇಡಲ್ಪಡುತ್ತಿವೆ.

ವೃತ್ತಪತ್ರಿಕೆಯನ್ನು ಕಾಲಕ್ಕೆ ಸರಿಯಾಗಿ ಪ್ರಕಟಿಸುವುದು, ಮತ್ತು ಗುಪ್ತದಾನ ಪೆಟ್ಟಿಗೆಗಳ ಪರಂಪರೆಯನ್ನು ನಡೆಸಿಕೊಂಡು ಹೋಗುವುದಕ್ಕಾಗಿ ಈಗುಚಿ ತನ್ನ ಪ್ರಾಪ್ತಿಯಲ್ಲಿ ಎಷ್ಟೊಂದು ದೊಡ್ಡ ಪಾಲನ್ನು ಖರ್ಚು ಮಾಡಬೇಕಾಗಿ ಬರುತ್ತದೆಂದರೆ ಆತ ತನ್ನ ಮನೆಯ ಸಾಮಾನುಗಳನ್ನು ಒತ್ತೆ ಇಡುವ ಪ್ರಸಂಗ ಕೂಡ ಎಷ್ಟೋ ಸಲ ಬರುತ್ತದೆ. ಆತನ ಹೆಂಡತಿ ಮತ್ತು ೧೯ ಹಾಗೂ ೧೩ ವರ್ಷದ ಇಬ್ಬರು ಮಕ್ಕಳು ಅವನಿಗೆ ಈ ಕಾರ್ಯದಲ್ಲಿ ಹೃತ್ಪೂರ್ವಕ ಸಹಾಯ ಸಹಕಾರಗಳನ್ನು ನೀಡುತ್ತಿದ್ದಾರೆ. ಜಪಾನಿನಲ್ಲಿಂದು ೪೦೦ ಗುಪ್ತದಾನ ಪೆಟ್ಟಿಗೆಗಳಿವೆ. ಅಮೇರಿಕದಲ್ಲಿ ಕೂಡ ಈ ಯೋಜನೆ ಇರುವುದಾದರೂ ಅಲ್ಲಿರುವ ಪೆಟ್ಟಿಗೆಗಳ ಸಂಖ್ಯೆ ತೀರ ಕಡಿಮೆ.

ಸರಿ, ಈ ಬಗೆಯ ಗುಪ್ತದಾನದಿಂದ ದಾನಿಗೆ ಆಗುವ ಲಾಭವೇನು, ಹೆಸರಿಲ್ಲ, ಕೀರ್ತಿಯಿಲ್ಲ ಎಂದು ಕೆಲವರು ಯೋಚಿಸಬಹುದು. ಆ ವಿಷಯದಲ್ಲಿ ಕವಿ ಶಿನೋಚಿ ಈಗುಚಿ ಅನ್ನುತ್ತಾನೆ: "ಈ ಗುಪ್ತದಾನ ಚಳವಳಿಯಲ್ಲಿ ಭಾಗವಹಿಸಿದಾಗ ಒಂದು ಅಜ್ಞಾತವಾದ ಬಂಧು ಭಾವದಿಂದ ನೀವು ಬಂಧಿಸಲ್ಪಡುತ್ತೀರಿ. ಇಂಥ ಪೆಟ್ಟಿಗೆಯನ್ನಿಟ್ಟು ಸತತವಾಗಿ ನಡೆಸುವವನಲ್ಲಿ ಅಮೂಲಾಗ್ರವಾದ ಬದಲಾವಣೆಯಾಗುತ್ತದೆ. ಮನುಷ್ಯರಲ್ಲಿ ನಂಬಿಕೆಯನ್ನು ಕಳೆದುಕೊಂಡವನಿಗೆ ಪುನಃ ಆ ನಂಬಿಕೆ ಹುಟ್ಟುವುದು. ಅಹಂಕಾರ


ಸರ್ವಾಧಿಕಾರಗಳ ಭಾವನೆಯಿರುವಲ್ಲಿ ವಿವೇಕ ಮತ್ತು ವಿನಯಗಳ ಝರಿಯೊಡೆಯುವುದು. ಈ ಪೆಟ್ಟಿಗೆಯಿಂದಾಗುವ ಅತಿ ಹೆಚ್ಚಿನ ಲಾಭವೆಂದರೆ ದಾನ ಮಾಡುವವರಿಗೂ ಸ್ವೀಕರಿಸುವವರಿಗೂ ಜೀವನದಲ್ಲಿ ಒಂದು ಹೊಸ ರೂಪ ಲಭಿಸುತ್ತದೆ."

ಈ ಚಳವಳಿಯಲ್ಲಿ ಹೃದಯ ಪರಿವರ್ತನೆ ಮಾಡುವ ಅದ್ಭುತವಾದೊಂದು ಯೋಗ್ಯತೆಯಿದೆ. ಜಪಾನಿ ಮನುಷ್ಯನೊಬ್ಬ ಈ ಪೆಟ್ಟಿಗೆ ಕಣ್ಣಿಗೆ ಬಿದ್ದ ಪ್ರತಿ ಸಲವೂ ಅದರ ಮೇಲೆ ಉಗುಳುತ್ತಿದ್ದ. ಆದರೆ ಪೆಟ್ಟಿಗೆ ಇಡುವ ಪ್ರತಿಜ್ಞೆ ಮಾಡಿದವನೊಬ್ಬ ಅತ್ಯಂತ ನಿಷ್ಠೆಯಿಂದ ಪ್ರತಿಜ್ಞೆಯನ್ನು ಪಾಲಿಸುತ್ತಿದ್ದುದನ್ನು ಕಂಡು ಆತನ ಹೃದಯಪರಿವರ್ತನೆಯಾಗಿ ಆತ ಕೂಡ ಒಂದು ಪೆಟ್ಟಿಗೆ ಇಡುವ ಪ್ರತಿಜ್ಞೆ ಮಾಡಿದ.

ತನ್ನಿಂದ ಸಾಧ್ಯವಿರುವಷ್ಟು ಪರೋಪಕಾರವನ್ನು ಮನುಷ್ಯ ಮಾಡಲೇಬೇಕು ಎಂದು ಈಗುಚಿ ಹೇಳುತ್ತಾನೆ. "ಕೊನೆಗೆ ಪರಿಣಾಮವೇನಾಗುವುದೋ ಯಾರು ಹೇಳಬಲ್ಲರು? ಆದ್ದರಿಂದ ಕುಡುಕನೊಬ್ಬ ಪೆಟ್ಟಿಗೆಯಿಂದ ಹಣ ಒಯ್ದು ಹೆಂಡಕ್ಕಾಗಿ ಹಾಳು ಮಾಡುತ್ತಿದ್ದಾನೆಂದು ತಿಳಿದರೂ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬಾರದು. ಕುಡುಕನೊಬ್ಬ ದಿನನಿತ್ಯವೂ ಪೆಟ್ಟಿಗೆಯಿಂದ ಹಣ ಒಯ್ಯುತ್ತಲಿದ್ದ. ಒಂದು ಬೆಳಿಗ್ಗೆ ಅವನ ಆತ್ಮಕ್ಕೆ ಅತ್ಯಂತ ಕಳವಳವೆನಿಸಲು ಆತ ತಟ್ಟನೆ ಎದ್ದು ಹೋಗಿ ತನ್ನಲ್ಲಿದ್ದ ಹಣವನ್ನೆಲ್ಲ ಪೆಟ್ಟಿಗೆಯಲ್ಲಿ ಹಾಕಿ ಬಂದ. ಹೀಗೆ ಪಶ್ಚಾತ್ತಾಪದಿಂದ ಪರಿಶುದ್ಧನಾದ ಆತ ಹೆಂಡ ಕುಡಿಯುವುದನ್ನೇ ಬಿಟ್ಟುಕೊಟ್ಟ," ಎಂದು ಈಗುಚಿ ತನ್ನ ಪತ್ರಿಕೆಯಲ್ಲಿ ಬರೆದಿದ್ದಾನೆ.

"ಜಪಾನ್ ಅಡ್ವೆಂಚರ್ ಪ್ರೊಜೆಕ್ಟ್" ಎಂಬ ಸಂಸ್ಥೆಯ ಮೂಲಕ ತರುಣ ಸ್ತ್ರೀ-ಪುರುಷರ ಸಂಪರ್ಕ ಈ ಚಳವಳಿಗೆ ಬರುತ್ತದೆ. "ಸಾಲ್ಟ್ ಆಫ್ ದಿ ಅರ್ಥ್ ಅಲಾಯನ್ಸ್" ಎಂಬ ಸಂಸ್ಥೆ ವಿದ್ಯಾರ್ಥಿಗಳ ಕಾರ್ಯಕ್ರಮವೊಂದನ್ನು ಯೋಜಿಸಿದೆ. ಇದು ಶ್ರೀಮಂತರ ಸಂಸ್ಥೆಯಾಗಿದ್ದು ಇದರ ಪ್ರತಿಯೊಬ್ಬ ಸದಸ್ಯನೂ ಪೆಟ್ಟಿಗೆ ಇಡುವವನೇ ಆಗಿದ್ದಾನೆ. ಜಗತ್ತಿನ ಸತ್ಪುರುಷರು-ಮಹಾತ್ಮರನ್ನು ಭೆಟ್ಟಿಯಾಗಲೆಂದು ಈ ಸಂಸ್ಥೆ ವಿದ್ಯಾರ್ಥಿಗಳನ್ನು ವಿದೇಶಗಳಿಗೆ ಕಳಿಸಿಕೊಡುತ್ತದೆ. ಈ ಯೋಜನೆಯನ್ವಯವೇ ಚಿಕ್ಕ ಬಾಲಿಕೆಯೊಬ್ಬಳು ಆಫ್ರಿಕದಲ್ಲಿರುವ ಡಾ. ಆಲ್ಬರ್ಟ್ ಶ್ವೈಟ್ಜರರನ್ನು ಭೆಟ್ಟಿಯಾಗಿ ಬಂದಳು.

ಗುಪ್ತದಾನ ಚಳವಳಿಯನ್ನು ನಿಯಮಗಳು, ಉಪ ನಿಯಮಗಳು ಮುಂತಾದವುಗಳಿಂದ ಕಟ್ಟಿಹಾಕಿಬಿಟ್ಟಲ್ಲಿ ಅದರಲ್ಲಡಕವಾಗಿರುವ ಪರೋಪಕಾರ ಭಾವನೆಯೆ ನಷ್ಟವಾದೀತು ಎಂದು ಈಗುಚಿಯ ಅಭಿಪ್ರಾಯವಿದೆ. ಇದುವರೆಗೂ ಈ ಸಂಸ್ಥೆಗೆ ಅಧ್ಯಕ್ಷ, ಕಾರ್ಯದರ್ಶಿ, ಪ್ರಚಾರಕ ಯಾರೂ ಇಲ್ಲ. "ಜಪಾನಿನ ಪ್ರತಿಯೊಂದು ನಗರದಲ್ಲಿ, ಹಳ್ಳಿಯಲ್ಲಿ ಇಂಥ ಪೆಟ್ಟಿಗೆಗಳು ಅಸ್ತಿತ್ವದಲ್ಲಿ ಬರಬೇಕು ಎಂದು ನಮ್ಮ ಪ್ರಯತ್ನವಿದೆ. ನಮ್ಮಲ್ಲಿ ಈ ಕಾರ್ಯ ಮುಗಿದ ಮೇಲೆ ಈ ಚಳವಳಿಯನ್ನು ಅಂಗೀಕರಿಸಲು ನಾವು ಅನ್ಯ ದೇಶದವರಿಗೂ ಬಿನ್ನವಿಸಿಕೊಳ್ಳುವೆವು. ಪ್ರತಿಯೊಂದು ದೇಶದಲ್ಲೂ ನಿಃಸ್ವಾರ್ಥ ಪ್ರೇಮ ಮತ್ತು ಸೇವಾಭಾವಗಳ ಪ್ರಸಾರವಾದಾಗ ಮಾತ್ರ ನನ್ನ ಈ ಚಳವಳಿಯ ಉದ್ದೇಶ ಸಫಲವಾಗುವುದು. ಈ ಚಳವಳಿಯ ಉದ್ದೇಶ ದಾನ ಕೊಟ್ಟು ಮುಕ್ತನಾಗುವುದಕ್ಕಾಗಿ ಇರದೆ ಬದುಕನ್ನು ಬಾಳುವ ಉತ್ತಮ ಸೂತ್ರವಾಗಿದೆ" ಎಂದು ಈಗುಚಿ ಹೇಳುತ್ತಾನೆ. *



# ಇದುವೆ ಜೀವ ಇದು ಜೀವನ

ನೊನ್ನೆ ನಾನು ನನ್ನ ಗೆಳೆಯನ ಅಂಗಡಿಯಲ್ಲಿ ಕುಳಿತಿದ್ದಾಗ ಹಳ್ಳಿಯ ಹಣ್ಣು ಮುದುಕನೊಬ್ಬ ಬ್ಯಾಟ್ರಿ ಸೆಲ್ ಕೊಳ್ಳಲು ಬಂದ. ಬಹಳ ಪುರಾತನ ಕಾಲದವನಿರಬೇಕು. ಸ್ವಲ್ಪ ಮಾತೂ ಜಾಸ್ತಿಯೆ. ಮಾತಿಗೆ ಮಾತು ಹೊರಟು ಇಂದಿನ ಬೆಲೆಗಳ ಪ್ರಸ್ತಾಪ ಬಂತು. ಮುದುಕ ಹೇಳಿದ: "ನೋಡ್ರಿಯಪ್ಪಾs, ಈಗ ನಮ್ಮ ಕಾಲದಕಿಂತ ಎಷ್ಟೋ ಪಾಡಾ (ಅನುಕೂಲ) ಗೇತ್ರಿ. ಧಾರಣೆ ಇಳದೈತಿ ನೋಡ್ರಿ."

ಎಲ್ಲರೂ ಬೆಲೆಯೇರಿಕೆಯ ಬಗ್ಗೆ ಗೋಳಾಡುತ್ತಿರುವಾಗ ಇವನು ಬೆಲೆಯಿಳಿದಿದೆ ಎನ್ನುತ್ತಿರುವುದನ್ನು ಕಂಡು ನಮಗೆ ಆಶ್ಚರ್ಯವಾಯಿತು. ವಿಚಾರಿಸಿದಾಗ ಮುದುಕ ಹೇಳಿದ್ದಿದು:

ಆಗ ಅಂದರೆ ಅವನಿಗೆ ೧೪-೧೫ ವರ್ಷವಿದ್ದಾಗ (ಅವನು ಹೇಳುವುದರ ಮೇಲಿಂದ ಅದು ೧೮೭೫ ಇರಬೇಕು), "ಒಂದು ಚಕಡಿ ತುಂಬ ಜೋಳ ಪ್ಯಾಟ್ಯಾಗ ತಂದು ಮಾರಿದರೆ ಎರಡು ತೊಲಿ ಬಂಗಾರ ಸಿಗಬೇಕಾದರೆ ಕುರಿಕೋಣ ಜೀಳುತಿದ್ದವ್ರಿ. ಈಗ ನೋಡ್ರಿ, ನಮ್ಮ ಹುಡುಗರs ಚಕಡಿ ಜೋಳ ಮಾರಿ ಮೂರುವರಿ ತೊಲಿ ಬಂಗಾರ ತರತಾರ್ರಿ."  —ವೆಂಕಟೇಶ

ನಾನು ಅಂದು ಬೇಲೂರು ದೇವಸ್ಥಾನವನ್ನು ನೋಡಲು ಅದರ ಆವರಣವನ್ನು ಪ್ರವೇಶಿಸಿದಾಗ ನಾನಲ್ಲದೇ ಕೆಲವು ಯುವಕ ಯುವತಿಯರು, ಒಂದೆರಡು ನವವಧೂವರರ ಜೊತೆ, ಸೇರಿ ಸುಮಾರು ೨೦-೨೫ ಜನರಿದ್ದೆವು.

ಅಲ್ಲಿದ್ದ ಸುಮಾರು ೫೦ ವರ್ಷ ಪ್ರಾಯದ ಮುದುಕರೊಬ್ಬರು ನಮ್ಮನ್ನು ವಿಚಾರಿಸಿ ತಾವು ದೇವಸ್ಥಾನಕ್ಕೆ ಸಂಬಂಧಪಟ್ಟ ಮಾರ್ಗದರ್ಶಿ (ಗೈಡ್) ಎಂದು ಪರಿಚಯ ಮಾಡಿಕೊಟ್ಟು ಅಲ್ಲಿಯ ಹೆಬ್ಬಾಗಿಲಿನಿಂದ ಪ್ರಾರಂಭಿಸಿ ಕೆತ್ತನೆಗಳನ್ನು ವಿವರಿಸುತ್ತಾ ಹೊರಟರು. ಅಲ್ಲಿಂದ ದೇವಸ್ಥಾನದ ಎಡ ಪಾರ್ಶ್ವದಲ್ಲಿ ಕೆತ್ತನೆಗಳನ್ನು ತೋರಿಸುತ್ತಿದ್ದ ಮುದುಕರು ಏಕಾಏಕಿಯಾಗಿ ನಮ್ಮಲ್ಲಿ ಕೆಲವರ ಅಂಗಿಯ ಕೊರಳು ಪಟ್ಟಿ (ಕಾಲರ್) ಯನ್ನು ತೋರಿಸುತ್ತಾ "ಈ ಫ್ಯಾಶನ್‌ಗಳನ್ನೆಲ್ಲಾ ನಿಮಗೆ ಯಾರು ಹೇಳಿಕೊಟ್ಟರು? ನಿಮ್ಮ ಅಂಗಿ ಹೊಲಿದ ಆ ದರ್ಜಿಗೆ ಯಾರು ಇವನ್ನೆಲ್ಲಾ ಕಲಿಸಿದರು?" ಎಂದು ಗದರಿಸಿದರು. ನಾವು ಯಾವ ತರಹದ ಅಂಗಿ ತೊಟ್ಟರೆ ಈ ಮುದುಕನಿಗೆ ಬಂದ ಕಷ್ಟವೇನು ಎನಿಸಿತು ನಮಗೆ.

ಆಮೇಲೆ ಯುವತಿಯರ ಕಡೆ ತಿರುಗಿ ನಿಮ್ಮಲ್ಲಿ ಯಾರಾದರೂ ಕುದುರೆ ಬಾಲದ (Pony tail) ನಮೂನೆಯ ಜಡೆ ಹಾಕುತ್ತೀರೋ? ಎಂದು ಎಲ್ಲರ ಜಡೆಗಳನ್ನು ಪರೀಕ್ಷಿಸಿದರು. ಆದರೆ ಅಂತಹವರು ಯಾರೂ ಇರಲಿಲ್ಲ. ನಂತರ ಒಬ್ಬ ಯುವತಿಯ ಕಡೆ ನೋಡಿ (ನವವಧು ಇರಬೇಕು) "ಅಮ್ಮಾ, ನಿಮ್ಮ ಯಜಮಾನರು ಎಂದಾದರೂ ನಿಮ್ಮನ್ನು ತೊಡೆಯ ಮೇಲೆ ಕೂರಿಸಿಕೊಂಡದ್ದು ಇದೆಯೋ?" ಎಂದು ವಿಚಾರಿಸಲು ಪ್ರಾರಂಭಿಸಿದರು.

ನಮಗೇಕೋ ಅವರ ವರ್ತನೆ ಆಶ್ಚರ್ಯವೆನಿಸಿತು. ಊರಿಗೆ ಹೋದ ಬಳಿಕ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ವಿಷಯವನ್ನು ತಿಳಿಸಬೇಕೆಂದೆನಿಸಿತು.

ಅಷ್ಟರಲ್ಲಿ ಮುದುಕರು ನಗುಮುಖದಿಂದ “ದಯವಿಟ್ಟು ನನ್ನನ್ನು ಯಾರೂ ತಪ್ಪು ತಿಳಿಯಬೇಡಿ. ಇತ್ತಕಡೆ ಬನ್ನಿ,” ಎಂದು ನಮ್ಮನ್ನು ಒಂದು ಬದಿಗೆ ಕರೆದುಕೊಂಡು ಹೋಗಿ ಅಲ್ಲಿ ಕೊರಳುಪಟ್ಟಿ ಉಳ್ಳ ಅಂಗಿ; ಲಾಂಗ್ ಕೋಟು; ಗಮ್-ಬೂಟ್; ಇವನ್ನೆಲ್ಲಾ ಧರಿಸಿದ್ದ ಕೆಲವು ಕೆತ್ತನೆಗಳನ್ನೂ ಇನ್ನೊಂದು ಕಡೆ ಪೋನಿಟೈಲ್ ತರಹೆಯ ಜಡೆಯನ್ನು ಧರಿಸಿ ವಯ್ಯಾರ ಭಂಗಿಯಲ್ಲಿ ನಿಂತಿರುವ ಒಬ್ಬ ಶಿಲಾಬಾಲಿಕೆಯನ್ನೂ ತೋರಿಸಿ “ಈಗಿನ ಯುವಕ, ಯುವತಿಯರು ಮಾಡುತ್ತಿರುವ ಫ್ಯಾಶನ್‌ಗಳು ಪಾಶ್ಚಾತ್ಯರಿಂದ ನಾವು ಕಲಿತುದಲ್ಲ; ನಮ್ಮ ದೇಶದಲ್ಲಿ ನೂರಾರು ವರ್ಷಗಳ ಹಿಂದೆಯೇ ಇದ್ದುವೆಂಬುದಕ್ಕೆ ಈ ಕೆತ್ತನೆಗಳೇ ಸಾಕ್ಷಿ” ಎಂದು ವಿವರಿಸಿದರು.

ಬಳಿಕ ಒಂದು ಕಡೆ ಸಾಕ್ಷಾತ್ ವಿಷ್ಣು ಮತ್ತು ಪರಮೇಶ್ವರರು ತಮ್ಮ ತಮ್ಮ ಪತ್ನಿಯರಾದ ಲಕ್ಷ್ಮಿ ಪಾರ್ವತಿಯರನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡ ಕೆತ್ತನೆಗಳನ್ನು ತೋರಿಸಿ, “ನೋಡಿ, ಸಾಕ್ಷಾತ್ ಪರಮಾತ್ಮನೇ ಈ ರೀತಿ ತನ್ನ ಹೆಂಡತಿಯನ್ನು ಕುಳ್ಳಿರಿಸಿರುವಾಗ ನೀವು ಕೂರಿಸಿಕೊಳ್ಳುವುದು ವಿಶೇಷವೇನಲ್ಲ” ಎಂದು ನಮ್ಮ ಮುಖಗಳನ್ನು ನೋಡಿ ಮುಗುಳ್ನಗೆ ನಕ್ಕರು.

ನಮ್ಮ ಮುಖದ ಮೇಲೂ ಪ್ರತಿಯಾಗಿ ಮುಗುಳ್ನಗೆ ಮೂಡಿತು.

—ಕೆ. ಮದನಮೋಹನ

ನಾನು ಕಾಲೇಜಿನಲ್ಲಿ ಓದುತ್ತಿದ್ದ ಸಮಯದಲ್ಲಿ ಹೊಸದಾಗಿ ಕೈಗಡಿಯಾರವೊಂದನ್ನು ಕೊಂಡಿದ್ದೆ. ವೇಳೆಯನ್ನು ಸರಿಪಡಿಸಿಕೊಳ್ಳಲೆಂದು ಆಗಾಗ ರೈಲ್ವೇ ನಿಲ್ದಾಣಕ್ಕೆ ಹೋಗುತ್ತಿದ್ದೆ. ಹೀಗೇ ಒಂದು ಸಲ ನಿಲ್ದಾಣಕ್ಕೆ ಹೋದಾಗ ಪೆಸೆಂಜರ್ ಗಾಡಿಯೊಂದು ಬಂದುಬಿಟ್ಟಿತು. ಸರಿ! ಗದ್ದಲದಲ್ಲಿ ಹೇಗೋ ನುಸುಳಿಕೊಂಡು ಬರುವಷ್ಟರಲ್ಲಿ 'ತಿಕೀಟು ತಪಾಸಿಗ' ಹಿಡಿದುಬಿಟ್ಟ! ನಾನೆಷ್ಟೇ ವಿನಂತಿಸಿಕೊಂಡರೂ ಆತ ಬಿಡಲೊಪ್ಪಲಿಲ್ಲ. ಸಾಯಂಕಾಲ ೫ ಗಂಟೆಯಿಂದ ೯ ಗಂಟೆಯ ವರೆಗೂ ಆತ ನನ್ನನ್ನು ತನ್ನ ಆಫೀಸಿನಲ್ಲೇ ಕೂಡ್ರಿಸಿ ದಂಡ ತೆತ್ತ ಹೊರತೂ ಬಿಡುಗಡೆ ಇಲ್ಲವೆಂದ. ಕೊನೆಗೆ ನನ್ನ ಎಲ್ಲ ವಿಳಾಸ ತಿಳಿಸಿ “ನಾಳೆ ತಪ್ಪದೆ ನಿಮ್ಮ ಹೇಳಿಕೆಯಂತೆ ದಂಡ ತಂದುಕೊಡುವೆ. ಈಗ ದಯವಿಟ್ಟು ಬಿಟ್ಟುಬಿಡಿ,” ಎಂದೆ. 'ಸರಿ' ಎಂದು ಒಪ್ಪಿದ. ಮಾರನೇ ದಿನ ಬೆಳಿಗ್ಗೆ ವಿಹಾರಕ್ಕೆ ಹೊರಡುವ ಬದಲು ನಿಲ್ದಾಣಕ್ಕೆ ಹೋಗಿ ಭೇಟಿಯಾಗಿ ಹಣ ಕೊಡಹೋದೆ. ಆ ತಿಕೀಟು ತಪಾಸಿಗ ಒಮ್ಮೆಲೆ ನನ್ನ ಕೈಹಿಡಿದು ಒಳಗೆ ಕರೆದೊಯ್ದು ಕಂಬನಿದುಂಬಿದ ಕಂಗಳಿಂದ ನನ್ನ ಬೆನ್ನು ನೇವರಿಸಿ, “ಕ್ಷಮಿಸಿ-ನಿಮ್ಮದೇ ಆದ ಹೋಲಿಕೆಯ ತಮ್ಮನೊಬ್ಬ ನನಗಿದ್ದಾನೆ ಬಹು ದೂರದಲ್ಲಿ. ನಿಮ್ಮನ್ನು ಕಂಡು ನನಗೆ ಅವನ ಜ್ಞಾಪಕ ಬಂತು ಈ ಹಾಳು ನೌಕರಿಗಾಗಿ ನಾವು ದಿನಾಲು ಒಬ್ಬರನ್ನಾದರೂ ಹಿಡಿದು ಲೆಕ್ಕ ತೋರಿಸಬೇಕಾಗುತ್ತದೆ. ಇಲ್ಲದಿದ್ದರೆ ವರಿಷ್ಠರ ಕೋಪ ನಮ್ಮ ಮೇಲೆ. ನೀವಿನ್ನು ಹೋಗಬಹುದು” ಎಂದು ಕಣ್ಣೊರಸಿಕೊಂಡ. ಅದೇ ಹಣದಿಂದ ಚಹ ಕುಡಿದು ಗೆಳೆಯರಾಗಿ ಹೊರಬಿದ್ದೆವು.

ಎಸ್. ಜಿ. ಕರ್ಜಗಿ

ಬಿಳಿಯರು ಭಾರತದಿಂದಲೇ
ಸ್ನಾನಕ್ರಮುವನ್ನು ಕಲಿತರು

# ಸ್ನಾನವೂ ಅಪರಾಧವಾಗಿತ್ತು!

ಬಳ್ಳೂರು ಸುಬ್ರಾಯ ಅಡಿಗ

ದಿನವಿಡಿಯ ಕಠಿನ ಪರಿಶ್ರಮದಿಂದ ದಣಿದ ದೇಹಕ್ಕೆ ಸ್ಫೂರ್ತಿ ಸಿಗಬೇಕಾದರೆ ಸ್ನಾನವಲ್ಲದೆ ಬೇರಾವ ಮಾರ್ಗವೂ ಇಲ್ಲ. ಯಾರಾದರೂ ದಿನಾಲೂ ಸ್ನಾನ ಮಾಡುವ ಅಭ್ಯಾಸ ಇಟ್ಟುಕೊಂಡಿದ್ದರೆ ಅದೊಂದು ದುಷ್ಕರ್ಮವೆಂದಾಗಲೀ ಆಶ್ಚರ್ಯಕರ ವಿಷಯವೆಂದಾಗಲೀ ಈಗ ಯಾರೂ ಭಾವಿಸುವುದಿಲ್ಲ.

ನಿಜವಾಗಿ ಸ್ನಾನಪರಂಪರೆ ಬಹು ಪ್ರಾಚೀನವಾದದ್ದು. ಕ್ರಿಸ್ತಶಕಕ್ಕೆ ಹಿಂದಿನ ಪಾಂಪೆಯ ಭಗ್ನಾವಶೇಷಗಳಲ್ಲಿ ಸ್ನಾನದ ಟಬ್ಬುಗಳು ದೊರೆತಿವೆ. ಅದಕ್ಕೂ ಪೂರ್ವದ ಭಗ್ನಾವಶೇಷಗಳಲ್ಲೂ ಸಮ್ರಾಟ್ ಮಿಡಾಸನ ಸಿಂಹಾಸನದ ಕೋಣೆಯಲ್ಲೂ ಒಂದು ಸ್ನಾನಗೃಹಗಳು ಸಿಕ್ಕಿವೆ. ಹೀಗೆ ಪ್ರಾಚೀನ ರೋಮ್ ಹಾಗೂ ಗ್ರೀಸ್ ನಿವಾಸಿಗಳಲ್ಲಿ ಸ್ನಾನ ಪದ್ಧತಿ ಬಳಕೆಯಲ್ಲಿತ್ತೆಂದು ಅರ್ಥವಾಗುತ್ತದೆ. ರೋಮಿನಲ್ಲಿ ಸ್ನಾನ ಗೃಹಗಳು 'ಥರಮಾಯಿ' ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದವು. ಇದು ಬಹು ದೊಡ್ಡ ಕಟ್ಟಡವಾಗಿತ್ತು. ಇದರ ಪ್ರತಿಯೊಂದು ಭಾಗದಲ್ಲೂ ದೊಡ್ಡ ದೊಡ್ಡ ಬಿಷ್ಟೋ ಕೋಣೆಗಳು ಕ್ರಮವಾಗಿ ಇರುತ್ತಿದ್ದವು ಅವನ್ನು ಜನರ ಸೌಕರ್ಯಕ್ಕನುಗುಣವಾಗಿ ವಿಭಿನ್ನ ತಾಪಕ್ರಮದಲ್ಲಿ ವ್ಯವಸ್ಥೆಗೊಳಿಸಿಡಲಾಗುತ್ತಿತ್ತು; ಅಲ್ಲದೆ ಅವು ಆಕರ್ಷಕವೂ ಆಗಿರುತ್ತಿದ್ದವು. ಸ್ನಾನಗೃಹದಲ್ಲಿ ಹಲವು ವಸ್ತ್ರಕಾಲಯಗಳೂ ಇರುತ್ತಿದ್ದವು.

ಆದರೆ ಕ್ರಿ. ಪೂ. ೫೭೭ ರಲ್ಲಿ ನಿಷ್ಕರುಣ ಸೆಕ್ಸನನು ಯಾವ ವಿಧದ ಸ್ನಾನಗೃಹವನ್ನೂ ಇರಗೊಡಲಿಲ್ಲ. ಎಲ್ಲಾ ಕಟ್ಟಡಗಳನ್ನೂ ಕೆಡೆದುರುಳಿಸಲಾಯಿತು; ಮತ್ತು ಮೆಲ್ಲಮೆಲ್ಲನೆ ಸ್ನಾನಾಗಾರಗಳು ಮಾಯವಾದವು. ರೋಮ್ ಸಭ್ಯತೆಯ ವಿರೋಧದಿಂದಾಗಿ ಯುರೋಪಿನಿಂದಲೇ ಸ್ನಾನಕ್ರಮ ಹೊರಟುಹೋಯಿತು.

ಸುಮಾರು ೧೩ ನೇ ಶತಮಾನದ ವೇಳೆ ಈ ಪ್ರದೇಶದ ಹೆಚ್ಚಿನ ಜನರು ಕುಷ್ಠರೋಗಕ್ಕೆ ತುತ್ತಾದರು. ಆಗ ಈ ಭಯಂಕರ ರೋಗವನ್ನು ದುರಿಸುವುದಕ್ಕಾಗಿ ಅಸ್ತ್ರರೂಪದಲ್ಲಿ ಸ್ನಾನಕ್ರಮ ಪುನಃ ರೋಮಿನಲ್ಲಿ ಬಳಕೆಗೆ ಬಂತು. ೧೪ ನೇ ಶತಮಾನದಲ್ಲಿ ಮರಳಿ ಸ್ನಾನಕ್ರಮವನ್ನು ವಿರೋಧಿಸಲಾಯಿತು. ೧೫೪೯ ರಲ್ಲಿ ಸ್ನಾನದ ಬಗ್ಗೆ ಕಾಯದೆಗಳೂ ರೂಪುಗೊಂಡವು.

'ಫೆಮಿಶ್ ಟಿಪಸ್ಟ್ರೀ' ಯ ಹೇಳಿಕೆಯಂತೆ ೧೯ ನೇ ಶತಮಾನದ ಉತ್ತರಾರ್ಧದ ವರೆಗೂ ಇಂಗ್ಲಂಡಿನಲ್ಲಿ ಕೇವಲ ಕಾಲು ತೊಳೆಯುವ ಪದ್ಧತಿಯಿತ್ತಲ್ಲದೆ ಇಂದಿನಂತೆ ಮೀಯುವ ಕ್ರಮವಿದ್ದಿಲ್ಲ. ಎಲಿಜಬೆಥ್ ಯುಗದ ನಿವಾಸಿಗಳು ಸ್ನಾನವನ್ನು ಅಪವಿತ್ರವೆಂದು ಭಾವಿಸುತ್ತಿದ್ದರು. ವಿಕ್ಟೋರಿಯಳ ಕಾಲದ ಸಂತರಂತೂ ಸ್ನಾನದ ಬದಲು ಆತ್ಮಹತ್ಯೆಯನ್ನೇ ಹೆಚ್ಚು ಮೆಚ್ಚುತ್ತಿದ್ದರು.

ಮೊತ್ತಮೊದಲು ಸ್ನಾನದ ಪದ್ಧತಿ ಭಾರತವರ್ಷದಲ್ಲಿ ಆರಂಭವಾಗಿ ಈಸ್ಟ್ ಇಂಡಿಯಾ ಕಂಪನಿಯ ಮೂಲಕ ಇಂಗ್ಲಂಡಿನಲ್ಲಿ ಬಳಕೆಯಾಯಿತೆಂದೂ ನಂಬಲಾಗುತ್ತದೆ. ಭಾರತದಲ್ಲಿ ದಲ್ಲಿ ನಾಲ್ಕು ಸಾವಿರ ವರ್ಷ ಹಿಂದಿನ ಮೊಹೆಂಜೋದಾರೋ ಅವಶೇಷಗಳಲ್ಲಿ ಸ್ನಾನದ ಕೊಳಗಳು ಕಂಡುಬಂದಿವೆ. ಇಂಗ್ಲೀಷರು ಭಾರತದ ಹೆಚ್ಚಿನ ಸುಲಿಗೆ ವಸ್ತುಗಳೊಟ್ಟಿಗೆ ಭಾರತೀಯ ಸ್ನಾನಕ್ರಮವನ್ನೂ ಒಯ್ದರು. ಇಂದು ಒಬ್ಬ ಆಂಗ್ಲನು ಬೆಳಗಿನ ಉಪಹಾರವನ್ನಾದರೂ ಬಿಟ್ಟಾನು, ಆದರೆ ಸ್ನಾನವನ್ನು ಬಿಡಲಾರನೆಂಬುದು ಗಾದೆಯ ಮಾತಾಗಿದೆ.

ಇದೇ ರೀತಿ ಕೆಲವು ಪ್ರಾಚೀನ ಐತಿಹಾಸಿಕ ಲೇಖಗಳಿಂದ ಸ್ನಾನದ ಕುರಿತು ಅನೇಕ ಮನೋರಂಜಕ ಪ್ರಸಂಗಗಳು ತಿಳಿದುಬಂದಿವೆ. 'ಸ್ಕಿಪಿ-ವೋ ಎಫಿಯೋನಸ್' ಎಂಬವನು ಕಾರ್ಥೇಜಿಯನ್ ನಿವಾಸಿಕರ ಪಾಲಿಗೆ 'ಬರ್ಬರ' ನಾಮ

ದಿಂದ ಪ್ರಖ್ಯಾತನಾಗಿದ್ದ. ಅವನು ಒಂದು ಸಣ್ಣ ಹಾಳು ಕೋಣೆಯಲ್ಲಿ ಗುಟ್ಟಾಗಿ ಸ್ನಾನ ಮಾಡುತ್ತಿದ್ದನೆಂದು ಅವನ ಮೇಲೆ ಸಂಶಯಪಡಲಾಗಿದೆ. ಅವನ ಆ ಅಭ್ಯಾಸವನ್ನು ಕಟುವಾಗಿ ಟೀಕಿಸಲಾಗಿದೆ.

ಸ್ಪೇನಿನ ರಾಣಿ 'ಇಸಾಬೇಲಾ' ಎಂಬವಳು ತನ್ನ ಜೀವಮಾನದಲ್ಲಿ ಕೇವಲ ಎರಡು ಬಾರಿ ಸ್ನಾನ ಮಾಡಿದ್ದಳೆಂದು ಹೇಳಲಾಗುತ್ತದೆ. ಒಮ್ಮೆ ಅವಳು ಹುಟ್ಟಿದಾಗ, ಇನ್ನೊಮ್ಮೆ ವಿವಾಹವಾದಾಗ.

ಫ್ರಾನ್ಸಿನ ೧೩ ನೇ ಲುಯಿ ತನ್ನ ಜೀವನದಲ್ಲಿ ಒಮ್ಮೆ ಮಾತ್ರ ಸ್ನಾನ ಮಾಡಿದ್ದ. ಆದರೆ ಆ ಸ್ನಾನವು ಅವನ ದೇಹದ ಮೇಲೆ ಬಹು ಕೆಟ್ಟ ಪ್ರಭಾವ ಬೀರಿದುದರಿಂದ ಮುಂದೆಂದೂ ತಾನು ಮೀಯುವುದಿಲ್ಲವೆಂದು ಅವನು ದೃಢಪ್ರತಿಜ್ಞೆ ಮಾಡಿದ!

೧೮೪೫ ರಲ್ಲಿ ಅಮೇರಿಕೆಯ ಮೆಸಾಚುಸೆಟ್ಸ್ ರಾಜ್ಯದಲ್ಲಿ ಡಾಕ್ಟರರಿಂದ ಅನುಮತಿ ಪಡೆದ ಮನುಷ್ಯ ಮಾತ್ರ ಸ್ನಾನ ಮಾಡಬಹುದಿತ್ತು.

ದೇಶದೇಶಗಳಲ್ಲಿ ಸ್ನಾನದ ಕ್ರಮ ಭಿನ್ನಭಿನ್ನವಾಗಿದೆ. ರೋಮ್ ನಿವಾಸಿಗಳು ಸ್ನಾನದ ಬದಲು ಒಂದು ವಿಧವಾದ ತಂಪು ನೊರೆಯುನ್ನು ದೇಹದ ಮೇಲೆ ಉಜ್ಜಿಕೊಳ್ಳುತ್ತಾರೆ. ಆಂಗ್ಲರು ಟಬ್ಬಿನಲ್ಲಿ ಬಹು ಹೊತ್ತಿನ ತನಕ ಕುಳಿತೋ ಒರಗಿಯೋ ಮೀಯುತ್ತಾರೆ. ಅಮೇರಿಕದ ಜನರು ಸಾಬೂನಿನಿಂದ ತಿಕ್ಕಿಕೊಂಡ ಬಳಿಕ ನೀರಿನ ಕಾರಂಜಿಗಳಿಂದ ಸ್ನಾನಗೈದು ಟಬ್ಬಿನಲ್ಲಿ ಕುಳಿತುಕೊಳ್ಳುತ್ತಾರೆ.

ಜಪಾನಿನ ಒಂದು ಹೋಟೆಲಿನಲ್ಲಿ ಅಧಿಕಾರಿಯು ತನ್ನಲ್ಲಿ ಬಂದು ತಂಗುವ ಪ್ರವಾಸಿಕರಿಗಾಗಿ ಪಾಂಪೆಯ ಕೆರೆಗಳಿಂದಾರಂಭಿಸಿ ಆಧುನಿಕ ಕ್ರಮದ ಅನೇಕ ಸ್ನಾನಗೃಹಗಳ ವರೆಗಿನ ಎಲ್ಲಾ ಸ್ನಾನಕ್ರಮಗಳನ್ನೂ ಏರ್ಪಡಿಸಿ ಅವರನ್ನು ಆಕರ್ಷಿಸಿದ್ದಾನೆ. ಬಡವರು ಸಾರ್ವಜನಿಕ ಸ್ನಾನಗೃಹಗಳನ್ನು ಉಪಯೋಗಿಸಿಕೊಳ್ಳುತ್ತಾರೆ. ಇದಕ್ಕಿಂತಲೂ ಉಚ್ಚಮಟ್ಟದ ಜನರು ೧೨೦° ಫೆರನ್ಹಾಯಿಟ್ ಉಷ್ಣತೆಯಿರುವ ನೀರಿನಿಂದ ಸ್ನಾನ ಮಾಡುತ್ತಾರೆ. ಪರಿವಾರದಲ್ಲಿ ಅತಿಥಿಗಳಿಗೆ ಮೊತ್ತಮೊದಲು ಸ್ನಾನ ಮಾಡುವ ಸಂದರ್ಭ ಕೊಡಲಾಗುತ್ತಿದೆ. ಆ ಬಳಿಕ ಕ್ರಮವಾ ತಂದೆ-ಮಗ, ಹೆಂಡತಿ-ಮಕ್ಕಳು ಹಾಗೂ ಸೇ ಕರ ಸರದಿ ಬರುತ್ತದೆ.

ಸಾಧಾರಣ ಹೋಟೆಲಿನಲ್ಲಿ ಸಾಮೂಹಿ ಸ್ನಾನದ ವ್ಯವಸ್ಥೆಯಿರುತ್ತದೆ. ಒಂದು ಕೋ ಯಲ್ಲಿ ಸ್ನಾನದ ಎಲ್ಲಾ ಟಬ್ಬುಗಳೂ ಇರುತ್ತ ಅವು ನೆಲದೊಳಗೆ ಹೊಂದಿಸಿಟ್ಟಿರುವ ಉಗಿ ನಲ್ಲಿಗಳಿಂದ ಯಾವಾಗಲೂ ಬಿಸಿಯಾಗಿಯೆ ಇ ತ್ತವೆ. ಇಲ್ಲಿ ಎಲ್ಲಾ ಜಾತಿಯ ಜನರೂ ಸ್ನಾ ಮಾಡಲು ಬರುತ್ತಾರೆ.

ರಷ್ಯಾದಲ್ಲಿ ದೊಡ್ಡ ಹೋಟೆಲುಗಳಲ್ಲಿ ಮಾ ಬಿಸಿನೀರಿನ ಏರ್ಪಾಡಿದೆ. ಸ್ಕೇಂಡಿನೇವಿಯ ದಲ್ಲಂತೂ ಸ್ನಾನಗೃಹವು ವಿಭಿನ್ನ ಮನೋ ರಂಜಕಸ್ಥಾನಗಳ ಕೇಂದ್ರವಾಗಿದೆ. ಅಲ್ಲಿ ಜ ಸಿಗರೇಟು, ಚದುರಂಗ ಹಾಗೂ ಇನ್ನಿತ ಮನೋರಂಜಕ ಆಟಗಳ ಆನಂದವನ್ನನುಭ ಸುತ್ತಾರೆ.

ಉಗಿ (ಬಾಷ್ಪ) ಯಿಂದ ಸ್ನಾನಮಾಡು ಕ್ರಮ ರೋಮ್ ಶಾಸನದ ವೇಳೆ ಆರಂಭವಾ ಮೆಲ್ಲಮೆಲ್ಲನೆ ಯುರೋಪಿನಲ್ಲೆಲ್ಲ ಬಳಕೆ ಬಂತು. ಈ ಕ್ರಮವೇ ವಿಕಾಸ ಹೊಂದಿ, ಸು ಗಲ್ಲುಗಳ ಮೇಲೆ ತಣ್ಣೀರೆರೆದು ಅದರಿಂದೇಳ ಉಗಿಯಿಂದ ಸ್ನಾನ ಮಾಡುವ ಪದ್ಧತಿಯ ಬಳಕೆಗೆ ಬಂತು.

ಫಿನ್ಲೆಂಡ್ ಮತ್ತು ಸ್ಕೇಂಡಿನೇವಿಯದ ಸ್ನಾನಮಾಡುವವರು ಮೊದಲು ಒಂದು ವಿಧ ಮರದ ಕೋಮಲ ಟೊಂಗೆಗಳಿಂದ ಹೊಡೆ ಕೊಂಡು ತಮ್ಮ ಚರ್ಮವನ್ನು ಸ್ವಚ್ಛಗೊಳಿ ತ್ತಾರೆ; ಮತ್ತು ಆ ಉಗಿಯಲ್ಲಿ ಸ್ನಾನ ಮಾ ಬಳಿಕವೇ ಸರೋವರದ ತಣ್ಣೀರಿಗೆ ಹಾರುತ್ತಾ ಅಥವಾ ಹಿಮದಿಂದ ಉಜ್ಜಿ ಉಜ್ಜಿ ಸ್ನಾ ಮುಗಿಸುತ್ತಾರೆ. ಟರ್ಕಿಶ್ ಸ್ನಾನವೂ ಇ ರೀತಿಯ ಇನ್ನೊಂದು ಬಾಷ್ಪಸ್ನಾನವಾಗಿವೆ.

ಅರೇಬಿಯಾ ಹಾಗೂ ತುರ್ಕಸ್ಥಾನದ ಮ ಭೂಮಿಯಲ್ಲಿ ಜನರು ತಮ್ಮ ದೇಹವನ್ನು ಮ ನಿಂದ ಉಜ್ಜಿ ಉಜ್ಜಿ ಸ್ವಚ್ಛಗೊಳಿಸುತ್ತಾರೆ. ರಿಗೆ ನೀರಿನ ಅಗತ್ಯವೇ ಇಲ್ಲ.

# ಕರೆವ್ವನ ಗುಡ್ಡ

ವೆಂಕಟೇಶ ಗಣೇಶ ಚಿಂಚಣೀಕರ

ಇಂದು ನಾನು ಸುಮಾರು ೧೦ ವರ್ಷಗಳ ಗಳ ನಂತರ ನನ್ನ ಹುಟ್ಟೂರಿಗೆ ಹೊರಟಿದ್ದೇನೆ. ಊರಿನಿಂದ ಸುಮಾರು ೩ ಮೈಲು ದೂರದಲ್ಲಿದ್ದ ದೊಡ್ಡ ಊರಲ್ಲಿ ಬಸ್ಸಿನಿಂದ ಇಳಿದು ಕಾಲ್ನಡಿಗೆಯಿಂದ ಊರತ್ತ ಹೋಗುತ್ತಿದ್ದೇನೆ. ಬೇಸಿಗೆ ಮುಗಿದು ಮಳೆಗಾಲ ಪ್ರಾರಂಭವಾಗುವ ಲಕ್ಷಣಗಳು ಕಾಣುತ್ತಿವೆ. ಬಾನಂಚಿನ ಒಂದು ತುದಿಯಿಂದ ಮೋಡವೊಂದು ಐರಾವತದಂತೆ ಓಡಿ ಬರುತ್ತಿದೆ. ಗಾಳಿಯಲ್ಲಿ ತಂಪು ಬೆರೆತಿದೆ, ಮಳೆಗಾಲದ ಮುಂಚೆ ಹರಗಿಟ್ಟ ಹೊಲ ಗದ್ದೆಗಳು ತಮ್ಮ ನೀರಡಿಕೆಯನ್ನು ತೃಪ್ತಗೊಳಿಸಲು ಆಕಾಶದತ್ತ ಆಶಾಪೂರ್ಣ ದೃಷ್ಟಿಯಿಂದ ನೋಡುತ್ತಿರುವವು. ವರುಣರಾಜನ ಸ್ವಾಗತದ ಸಿದ್ಧತೆಯ ಕೋಲಾಹಲದ ಶಬ್ದ ಗಿಡಮರಗಳ ಬಾಯಿಂದ ಹೊರಬೀಳುತ್ತಿದೆ.

ದಾರಿಗುಂಟ ಸಾಗಿದ್ದೇನೆ. ಅನಂತ ವಿಚಾರಗಳ, ಸ್ಮೃತಿಗಳ ಕೋಲಾಹಲದಿಂದ ಮನಸ್ಸು ಕೊಂಚ ಕದಡಿಹೋಗಿದೆ. ಚಿಕ್ಕಂದಿನಲ್ಲಿ ಪರಿಚಿತವಾದ ಇದೇ ಹಾದಿ ಇನ್ನೂ ಹಳೆಯ ನೆನಪನ್ನು ಮರೆತಿಲ್ಲವೆಂಬಂತೆ ತೋರುತ್ತಿದೆ. ಒಬ್ಬ ಮುದುಕ "ಎಷ್ಟು ದೊಡ್ಡವನಾದೆ ಮಗೂ! ಹಳೆಯ ಮಂದಿಯ ಗುರ್ತು ಇದೆಯೆ?" ಎಂದು ಕೇಳುವಂತೆ ದಾರಿಯ ಬದಿಯ ಪ್ರತಿಯೊಂದು ಪುರಾತನ ವೃಕ್ಷವೂ ಕೇಳುತ್ತಿದೆಯೋ ಎಂದೆನಿಸುತ್ತಿದೆ. ಹೊಲಗದ್ದೆಗಳ ನಡುವಿಂದ ಹೋದ ಅದೇ ದಾರಿ, ಅವೇ ಗಿಡಮರಗಳು. ಏನೊ ಈ ಎಂಟು ಹತ್ತು ವರ್ಷಗಳಲ್ಲಿ ಸರಕಾರದವರ ಕೃಪೆಯಿಂದ ಕಾಲುಹಾದಿಯ ಅಗಲಳತೆ ಹೆಚ್ಚಾಗಿ ಚಕ್ಕಡಿ ಹೋಗುವಂತಾಗಿದೆ. ತನ್ನ



ಸಂಸಾರ ಬೆಳೆದರೂ ಗೆಳೆಯನನ್ನು ಮರೆಯದಿದ್ದ ಸಹೃದಯನಂತೆ ದಾರಿ ನನ್ನೊಡನೆ ಸಲಿಗೆ ಮಾಡುತ್ತಿದೆ. ಮಮತೆಯ ಝರಿ ಇನ್ನೂ ಇಂಗಿಲ್ಲ. ಒಬ್ಬ ನುರಿತ ಜ್ಯೋತಿಷಿ ಆಕಾಶದ ಕಡೆಗೆ ಬೆರಳು ಮಾಡಿ "ಇದು ಮೃಗ, ಅದು ವ್ಯಾಧ, ಇದು ಕೃತ್ತಿಕಾ" ಎಂದು, ಅನಂತಕಾಲ ದಿಂದ ಬ್ರಹ್ಮಾಂಡಸಾಗರದಲ್ಲಿ ಹೊಳೆಯುತ್ತಿರುವ ದೀಪಸ್ತಂಭಗಳನ್ನು ತೋರಿಸುವಂತೆ, ನಾನು ನನ್ನ ಮನಸ್ಸಿಗೇ "ಇದು ಬಸವೇಶ್ವರನ ಗುಡ್ಡ, ಅದು ಮಲ್ಲೇಶ್ವರನ ಗುಡ್ಡ, ಅತ್ತಕಡೆಯದು ಪೀರಮಹಮ್ಮದನ ದರ್ಗಾ, ಅದರ ಎಡಗಡೆ ಕಾಣುವುದು ಸಾಹುಕಾರರ ಮಾವಿನ ತೋಪು" ಎಂದು, ಊರಿನ ಸುತ್ತಲಿನ ಮುಖ್ಯಸ್ಥಳಗಳನ್ನು ಮತ್ತೆ ಮತ್ತೆ ತೋರಿಸುತ್ತಿರುವೆನು.

ದಾರಿ ಸಾಗುತ್ತಿದೆ. ನನ್ನ ಹೃದಯ ಮಾರ್ಗ ದಲ್ಲಿಯ ಕಣಕಣದೊಂದಿಗೂ ಸರಸವಾಡು ತ್ತಿದೆ. ಬರಬರುತ್ತ "ಕರೆವ್ವನ ದಿನ್ನೆ"ಯು ಕಾಣ ಹತ್ತಿದೆ.

ಕರೆವ್ವನ ದಿನ್ನೆ !

ಹೌದು. ಒಂದು ಸಣ್ಣ ದಿನ್ನೆಯ ಮೇಲೆ ಬೆಳೆದ ಒಂದು ವಿಶಾಲ ಆಲದ ಮರದಡಿಯಲ್ಲಿ ಕಲ್ಲಿ ನಿಂದ ಸಣ್ಣ ಗುಡಿಯ ಆಕಾರವನ್ನು ಮಾಡಿ, ಅದರಲ್ಲಿ ನುಣುಪಾದ ಕಪ್ಪು ಕಲ್ಲೊಂದನ್ನಿಟ್ಟು, ಅದಕ್ಕೆ "ಕರೆವ್ವ" ನೆಂದು ಪೂಜಿಸುತ್ತಿದ್ದರು. ಈ ಗುಡಿಯನ್ನು ಯಾವ ಜಕಣಾಚಾರಿಯೂ ಕಟ್ಟಿರ ಲಿಲ್ಲ. ಯಾವ ಅಜ್ಞಾತ ಶಿಲ್ಪಿಯೂ ಇಲ್ಲಿ ತನ್ನ ಕಲೆಯ ಬಲೆಯನ್ನು ಹರಡಿರಲಿಲ್ಲ. ಹೆಚ್ಚೇನು, ಗ್ರಾಮದೇವತೆಗಳ ಭಾಗ್ಯದಲ್ಲಿರುವ ಸುಣ್ಣಬಣ್ಣ, ನಿತ್ಯ ಪೂಜೆ, ಇವೂ ಸಹ ಈ ದೇವತೆಯ ಪಾಲಿ ಗಿರಲಿಲ್ಲ. ದಾರಿಯಿಂದ ಹೋಗುವ ಕೆಲ ಶ್ರದ್ಧಾ ವಂತ ಪ್ರವಾಸಿಕರ ಸಹಜ ಪ್ರಣಾಮಗಳಷ್ಟೇ ಆಕೆಗೆ ಸಲ್ಲುತ್ತಿದ್ದವು. ಹಿಂದಿನ ಕಾಲದಲ್ಲಿ, ದಾರಿಗಳ್ಳರ ಕಾಟದಿಂದ ಸಂರಕ್ಷಣೆಯಾಗುವ ವಿಶ್ವಾಸದಿಂದ, ಒಬ್ಬೊಂಟಿಗರಾದ ಪ್ರಯಾಣಿ ಕರ, ತನ್ನ ನವಜಾತ ಕೂಸಿಗೆ ದಾರಿಯಲ್ಲಿ ಯಾವ ಪಾಪಿಯ ಕಣ್ಣೂ ಹತ್ತಬಾರದೆಂದು ಬೇಡಿಕೊಳ್ಳುವ ತಾಯಂದಿರ, ಅಖಂಡ ಶ್ರದ್ಧಾ ಸ್ಥಾನವಾಗಿದ್ದಳು ಈ ದೇವತೆ. ಈ ದೇವತೆ ಯಿಂದ ದಿನ್ನೆಗೂ "ಕರೆವ್ವನ ದಿನ್ನೆ" ಎಂದು ಹೆಸರು ಬಂದಿತ್ತು.

ದಿನ್ನೆಯ ಮೇಲಿಂದ ಕಾಣುವ ಸೃಷ್ಟಿಸೌಂದ ರ್ಯವೂ ರಮಣೀಯವಾಗಿದೆ. ಸುತ್ತುಮುತ್ತ ಲಿನ ನಾಲ್ಕೈದು ಹಳ್ಳಿಗಳ ಸೀಮೆಯಲ್ಲಿದ್ದ, ಋತುಮಾನದಂತೆ ಬಣ್ಣ ಬದಲಾಯಿಸುವ ಹೊಲಗದ್ದೆಗಳು, ಕ್ಷಿತಿಜ ರೇಖೆಗೆ ವಕ್ರತೆಯನ್ನೀ ಯುವ ಗುಡ್ಡಗಳ ಸಾಲುಗಳು, ಮಾವಿನ ತೋಪು ಗಳ ನಡುವಿಂದ ಹಣಿಕಿಹಾಕುವಂತಹ ಒಂದೆ ರಡು ಊರಿನ ಗ್ರಾಮದೇವತೆಗಳ ಗುಡಿಯ ಶುಭ್ರಶಿಖರಗಳು, ಆ ಕ್ಷೇತ್ರದ ಕೇಂದ್ರದಂತಿದ್ದ ಒಂದು ಎತ್ತರವಾದ ದಿನ್ನೆಯ ಮೇಲಿರುವ ಪೀರ ಮಹಮ್ಮದನ ದರ್ಗಾ, ಇಷ್ಟು ಭೂಪ್ರದೇಶ ಮತ್ತು ಮೇಲೆ ಮನೋಹರ ಆಕಾಶ ಇವೆಲ್ಲ ದೃಷ್ಟಿಪಥದಲ್ಲಿ ಬಂದು ಮನಸ್ಸು ಉಲ್ಲಾಸ ಪೂರಿತವಾಗುತ್ತದೆ. ಜೋರಾದ ಗಾಳಿ ಬೀಸು ವಾಗ ದಿನ್ನೆಯ ಮೇಲೆ ನಿಂತರೆ ಅಪೂರ್ವ ಉತ್ಸಾಹ ಮೈದುಂಬುವುದು.

ಆದರೆ, ಈ ಸ್ಥಾನ ಎಷ್ಟು ರಮಣೀಯವಾಗಿ ದ್ದರೂ ಎಷ್ಟೋ ಭಾವಿಕರ ಶ್ರದ್ಧಾಸ್ಥಾನವಾಗಿ ದ್ದರೂ ನನ್ನ ಮನಸಿನ ಮೇಲೆ ಇದು ತನ್ನ ಅಮರಸ್ಮೃತಿಯನ್ನು ಬಿಂಬಿಸಿದ್ದುದರ ಕಾರಣ ಬೇರೆಯೇ ಇದೆ. ಅದೆಂದರೆ 'ಅರುಣಾ' ಇವಳ ಭೆಟ್ಟಿ.

ಅರುಣಾ! ಹೌದು. ಅವಳ ಹೆಸರು ಅರುಣಾ. ಅವಳನ್ನು ನಾನು ಮೊದಲ ಹಾಗೂ ಕೊನೆಯ ಸಲ ಕಂಡದ್ದು ನನ್ನ ಚಿಕ್ಕ ಅಬಚಿಯ ಮದು ವೆಯ ಕಾಲಕ್ಕೆ. ಮದುವೆಗೆಂದು ಅವಳು ನಮ್ಮ ಒಬ್ಬ ಬಳಗದವರ ಸಂಗಡ ಬಂದಿದ್ದಳು.

ಮೊದಲ ಸಲ ಅವಳ ಹೆಸರನ್ನು ನಾನು ಕೇಳಿದಾಗ ಸ್ವಲ್ಪ ವಿಚಿತ್ರವೆನಿಸಿತು. ಏಕೆಂದರೆ, ನಮ್ಮ ಸಂಪ್ರದಾಯಸ್ಥರ ಮನೆಯಲ್ಲಿ ಪ್ರಸಿದ್ಧ

ದೇವರ ನಾಮಗಳನ್ನು ಗಂಡು ಹುಡುಗರಿಗೆ ಮತ್ತು ದೇವತೆಯರ ಹಾಗೂ ಪವಿತ್ರ ನದಿಗಳ ಹೆಸರುಗಳನ್ನು ಹುಡುಗಿಯರಿಗೆ ಇಡುವುದೊಂದು ಅಲಿಖಿತ ನಿಯಮವಾಗಿತ್ತು. ಅಂತೆಯೇ ಹುಡುಗ ಹುಟ್ಟಿದರೆ ಅವನು, 'ರಾಮ, ಕೃಷ್ಣ, ವಿಷ್ಣು, ನರಸಿಂಹ, ನಾರಾಯಣ, ಅನಂತ, ಶಂಕರ ಇವುಗಳಲ್ಲಿ ಒಂದು ಹೆಸರನ್ನೂ ಹುಡುಗಿಯಾಗಿದ್ದರೆ 'ಲಕ್ಷ್ಮೀ, ಪಾರ್ವತಿ, ಗಂಗಾ, ಸಿಂಧೂ, ಯಮುನಾ, ಕಾವೇರಿ, ಕೃಷ್ಣಾ' ಇವುಗಳಲ್ಲಿ ಯಾವುದೇ ಒಂದು ಹೆಸರನ್ನೂ ಪಡೆಯುವುದು ನಿಶ್ಚಿತ. ಅಪವಾದ ಸಾವಿರಕ್ಕೆ ಒಂದು. ಯಾರೊ ಒಬ್ಬರು ತಮ್ಮ ಮಗನಿಗೆ 'ಕಿರಣ' ಎಂದು ಹೆಸರಿಟ್ಟದ್ದನ್ನು ಕೇಳಿ ನಮ್ಮಲ್ಲಿಯ ವೃದ್ಧ ಸ್ತ್ರೀಪುರುಷರು "ಎಂಥಾ ಧರ್ಮಭ್ರಷ್ಟ ಕಲಿಯುಗ ಬಂತಪ್ಪಾ. ಬಂಗಾರದಂಥಾ ದೇವರ ಹೆಸರು ಬಿಟ್ಟು 'ಕಿರಣ, ಹೂರಣ' ಅಂತ ಹೆಸರಿಡ್ತಾರ" ಎಂದು ಅವರ ತಿಳಿಗೇಡಿತನಕ್ಕೆ ನಕ್ಕಿದ್ದರು.

ಇಂಥ ವಾತಾವರಣದಲ್ಲಿ 'ಅರುಣಾ' ಎಂಬ ಹೆಸರಿನ ಹುಡುಗಿ ಸಾಕಷ್ಟು ಕುತೂಹಲವನ್ನು ಕೆರಳಿಸಿದ್ದುದರಲ್ಲಿ ಆಶ್ಚರ್ಯವಿಲ್ಲ. ಅದಕ್ಕಾಗಿ ಇಂಥ 'ವಿಚಿತ್ರ ಪ್ರಾಣಿ'ಯನ್ನು ನೋಡುವ ಲವಲವಿಕೆ ಹೆಚ್ಚಾಯಿತು.

ಆಗ ನನಗೆ ಸುಮಾರು ೧೭-೧೮ ವರ್ಷ ವಯಸ್ಸು. ಕುಮಾರಾವಸ್ಥೆ ಮತ್ತು ತರುಣಾವಸ್ಥೆ ಇವುಗಳ ಸೀಮಾರೇಷೆಯಲ್ಲಿ ಕಟ್ಟಿದ ತಂತಿಯ ಮೇಲೆ 'ಸರ್ಕಸ್' ಮಾಡುತ್ತಿದ್ದೆ. ಸಣ್ಣ ಹುಡುಗರಲ್ಲಿ ಹಿರಿಯನೂ ದೊಡ್ಡವರಲ್ಲಿ ಕಿರಿಯನೂ ಆಗಿದ್ದೆ. ಜೀವನದ ಎಲ್ಲ ಹೊಸ ಹೊಸತನದ ಬಗ್ಗೆ ಕುತೂಹಲ ಉಂಟಾಗುತ್ತಿತ್ತು. ಮೊದಲೆಂದೂ ಅನುಭವಿಸದ, ಪ್ರಥಮ ದರ್ಶನಕ್ಕೆ ವಿಚಿತ್ರವಾಗಿ ಕಾಣುವ ಅನುಭವಗಳ ಆಕಸ್ಮಿಕ ದರ್ಶನದಿಂದ ಮೊದಲು ಮನಸ್ಸು ಸ್ತಿಮಿತವಾಗುತ್ತಿದ್ದರೂ ಹೊಸತನದ ಹುಚ್ಚು ದಿನದಿನಕ್ಕೆ ಬೆಳೆಯುತ್ತಿತ್ತು.

ಮದುವೆಯ ಮನೆಯ ಚಿಕ್ಕ ಪುಟ್ಟ ಕೆಲಸಗಳಲ್ಲಿ ನೆರವಾಗುತ್ತ ನಾನೇ ಎಲ್ಲರಿಗಿಂತ ಹೆಚ್ಚು ಮೆರೆದಾಡುತ್ತಿದ್ದೆ. ನಮ್ಮ ನೆಂಟರೊಬ್ಬರ ಸಂಗಡ ಅರುಣಾ ಮನೆ ಸೇರಿದಾಗ ನಾನು ಹಿತ್ತಲಲ್ಲಿ ನೀರು ತುಂಬುವ ಕೆಲಸದಲ್ಲಿದ್ದೆ. ಒಳಗಿಂದ ಒಬ್ಬ ಚಿಕ್ಕ ಹುಡುಗ ಓಡುತ್ತ ಬಂದು "ಕಿಟ್ಟೂ ಮಾಮಾ ಮತ್ತು ಅರುಣಕ್ಕಾ ಬಂದಾರ" ಎಂದು ಹೇಳಿದ. ನನಗೆ ಕಿಟ್ಟೂ ಮಾಮಾನ ಗುರುತಿತ್ತು. ಅರುಣಾ ಬಂದದ್ದು ಅದೇ ಮೊದಲ ಸಾರಿ. ಮೇಲಿಂದ ಮೇಲೆ ಬರುವುದಕ್ಕೆ ಅವಳೇನೂ ನಮ್ಮ ಹತ್ತಿರದ ಸಂಬಂಧದವಳಿದ್ದಿಲ್ಲ. ಹಾಗೆ ನೆಂಟಸ್ತಿಕೆಯ ಗಂಟನ್ನು ಬಿಚ್ಚುತ್ತ ಹೋದರೆ ಅವಳೇನೋ ನನ್ನ ತಾಯಿಗೆ ದೂರದ ತಂಗಿ ಆಗಬೇಕಂತೆ. ಆದರೆ ನಮ್ಮ ಕಡೆಗೆ ಅವಳು ಅಪರಿಚಿತಳಂತೆಯೇ ಬಂದಿದ್ದಳು.

ಈ ಅಪರಿಚಿತತನದ ಬಂಧನ ದೂರವಾಗಲು ಅರ್ಧ ಗಂಟೆಗಿಂತ ಹೆಚ್ಚು ವೇಳೆ ಹಿಡಿಯಲಿಲ್ಲ. ಸುಮಾರು ೨೦-೨೫ ನಿಮಿಷಗಳಲ್ಲಿಯೇ ನಾವು ಮೂರು ನಾಲ್ಕು ಹುಡುಗರು ನೀರು ತುಂಬುವ ಕೆಲಸ ನಡೆಸಿದಲ್ಲಿಗೆ ಬಂದು "ನಾ ಮದತ ಮಾಡಲೇನೋ ರಾಮೂ ?" ಎಂದು ನನ್ನನ್ನು ಕೇಳಿದಳು.

ನಾನು ದಿಗಿಲುಬಿದ್ದೆ. ಬಂದು ಇಷ್ಟು ಹೊತ್ತಿನಲ್ಲಿಯೇ ಇಷ್ಟು ಸಲಿಗೆ !

ಆಗ ನಾನು "ಇದೆಲ್ಲಾ ಹುಡುಗಿಯರ ಕೆಲಸ ಅಲ್ಲವ್ವಾ" ಎಂದು ಹೆಮ್ಮೆಯಿಂದ ನನ್ನ ಸಂಗಡಿಗರ ಕಡೆಗೆ ನೋಡಿದೆ. ಅವರೂ ನನ್ನ ಮಾತನ್ನು ಅನುಮೋದಿಸಿ ಮುಗುಳ್ನಗೆ ಬೀರಿದರು.

ಅವಳು "ಇಲ್ಲದಿದ್ರS ಬಿಡು. ಅಷ್ಟS ತ್ರಾಸ ತಪ್ಪಿತು. ಆದ್ರ ಹುಡುಗೀರ ಕೈಯಿಂದ ಕೆಲಸ ಆಗೂದಿಲ್ಲಾ ಅಂತ ತಿಳಕೋಬ್ಯಾಡ ಹಾಂ?" ಎಂದು ನಕ್ಕಳು. ನಾನೂ "ಗೊತ್ತಿದೆ" ಎನ್ನುವಂತೆ [illegible]

ನಾನು ಕೈಯಿಂದ ಎಲ್ಲ ಕೆಲಸ ಮಾಡುತ್ತಿದ್ದರೂ ಮನಸ್ಸು ಮಾತ್ರ, ಬಂದ ಹದಿನೈದು-

ಇಪ್ಪತ್ತು ನಿಮಿಷಗಳಲ್ಲಿಯೇ ಪೂರ್ವಪರಿಚಯವಿಲ್ಲದ ಹುಡುಗರ ಸಂಗಡ ಸಲಿಗೆಯಿಂದ ಮಾತನಾಡುವ ಅವಳ ಧೈರ್ಯಕ್ಕೆ ಬೆಚ್ಚಿಬೀಳುತ್ತಿತ್ತು. ಹುಡುಗಿಯರ ಬಗ್ಗೆ ನನಗಿದ್ದ ಕಲ್ಪನೆಗೆ ಇದು ಹೊಸತಾಗಿತ್ತು, ಹೊರತಾಗಿತ್ತು. ಅದಕ್ಕೂ ಮೊದಲು ನಾನು ಎಷ್ಟೋ ಹುಡುಗಿಯರನ್ನು ನೋಡಿದ್ದೆ. ಅವರೆಲ್ಲರದೂ ಹೆಚ್ಚು-ಕಡಿಮೆ ಒಂದೇ ರೀತಿ. ಸಾಧಾರಣ ಹದಿನಾರು ಹದಿನೇಳು ವರ್ಷದ. ಹುಡುಗಿ ತನ್ನ ಅಣ್ಣನ ಸಂಗಡ ಸಹ ಸಲಿಗೆಯಿಂದ ಮನಬಿಚ್ಚಿ ಮಾತನಾಡುತ್ತಿದ್ದಿಲ್ಲ. ಅಪರಿಚಿತರಂತೂ ದೂರ ಉಳಿದರು. ಯಾವಾಗಾದರೊಮ್ಮೆ ಅಪರಿಚಿತ ತರುಣರ ಸಂಗಡ ಮಾತಾಡುವ ಪ್ರಸಂಗ ಬಂದಾಗ ಜೋರಾಗಿ ಬೆವೆತುಹೋಗುತ್ತಿದ್ದರು. ಮದುವೆಯಾದ ಮೇಲೆಯೇ ಅವರು ಅಲ್ಪ ಸ್ವಲ್ಪ ಧೈರ್ಯಸ್ಥೆಯರಾಗುತ್ತಿದ್ದರು. ಈ ಕಾರಣದಿಂದ ಮದುವೆಯ ವಯಸ್ಸಿಗೆ ಬಂದ ಹುಡುಗಿ ಅಂದರೆ 'ಗುರುತಿಲ್ಲದ (ಕೆಲವು ವೇಳೆ ಗುರುತಿದ್ದ ಸಹ) ತರುಣರೆಂದರೆ ತಮ್ಮನ್ನು ಅಪಹರಿಸಲು ಬಂದ ರಾಕ್ಷಸರು' ಎಂಬ ದೃಢನಂಬಿಕೆಯಿದ್ದ ಒಂದು ಮುಗ್ಧಪ್ರಾಣಿ ಎಂದು ಒಂದು ಸಿದ್ಧಾಂತವನ್ನು ನಾನು ಮನಸ್ಸಿನಲ್ಲಿ ಕಟ್ಟಿಟ್ಟಿದ್ದೆ.

ನನ್ನ ಈ ಸಿದ್ಧಾಂತದ ಅರಮನೆಗೆ ಪ್ರಥಮ ಸಲ 'ಸುರಂಗ' ಹಚ್ಚಿದವಳು ಅರುಣಾ. ಅವಳ ಹೆಸರು ನಮಗೆಲ್ಲರಿಗೂ ಹೊಸತಿದ್ದಂತೆ ಅವಳ ಸ್ವಭಾವ ಮಾತುಕತೆಗಳೂ ಹೊಸವಾಗಿದ್ದವು. ಯಾರೊಡನೆಯೂ ಮಾತಾಡುವಾಗ ಅವಳು ಸಂಕೋಚಪಡುತ್ತಿದ್ದಿಲ್ಲ. ಎಷ್ಟೋ ಜನರ ದೃಷ್ಟಿಯಲ್ಲಿ ಅವಳೊಬ್ಬ 'ಗಂಡುಬೀರಿ!' ಅವಳ ಮನೆಯವರು ಅವಳ ಈ ವೃತ್ತಿಯ ಬಗ್ಗೆ ಅವಳಿಗೆ ಬುದ್ಧಿ ಹೇಳಿರಬಹುದು. ಆದರೆ ನಿಃಸಂಕೋಚತನವೇ ಅವಳ ಸ್ವಭಾವಧರ್ಮವಾಗಿತ್ತು.

ಎರಡನೆಯ ದಿನ ಕೆಲಸದಿಂದ ಸ್ವಲ್ಪ ಬಿಡುವು ಸಿಕ್ಕಾಗ ನಾನು ಮತ್ತು ಮತ್ತಿಬ್ಬರು ಹುಡುಗರು ಹರಟೆ ಹೊಡೆಯುತ್ತ ಕುಳಿತಾಗ ಅರುಣಾ ಬಂದು "ಎಂಥಾ ಮಾತು ನಡೆದಾವೋ ರಾಮೂ?" ಎಂದು ಕೇಳಿದಳು.

ಅವಳನ್ನು ಕೆಣಕುವ ಸಲುವಾಗಿ ನಾನು "ನಿನ್ನ ಮದುವೆಯ ಮಾತು ನಡೆದಾವ" ಎಂದು ಹೇಳಿದೆ.

"ಕನ್ನಡ್ಯಾಗ ಮುಖಾ ನೋಡಿಕೋ ನನ್ನ ಮದುವಿ ಮಾಡಾವ" ಅವಳು ಚಟ್ಟನೆ ಸಿಡಿದೆಂದಳು.

"ನಿನ್ನ ಮದವಿ ನಾವ್ಯಾಕ ಮಾಡಬಾರದು?" ನಾನೂ ಜೋರಿನಿಂದ ಕೇಳಿದೆ.

"ಹಂಗಾದ್ರs ನನ್ನ ಮದವ್ಯಾಗ ಏನೇನು ಮಾಡತೀ ಹೇಳು" ಅರುಣಾ ಅಂದಳು.

"ಅದರಾಗ ಏನ? ಒಬ್ಬ ಫರ್ಸ್ಟ್‌ಕ್ಲಾಸ್ ಗಂಡನ್ನ ಎಳದು ತಂದು ಅವನ ಕೈಯಾಗ ನಿನ್ನ ಕೈ ಕೊಡ್ತೇನೆ. ಅವಾ ನಿನ್ನ ಮ್ಯಾಲ ಕವಿತಾ ಕಟ್ಟಿ ನಿನ್ನ ಚಂದ್ರಲೋಕ, ಇಂದ್ರಲೋಕದಾಗ ತಿರುಗಾಡಿಸಿಕೊಂಡು ಬರ್‍ತಾನ" ನಾನೆಂದೆ

"ಹಾಗಿದ್ರs ಇಲ್ಲಿ ಕೂತಾವರೊಳಗ ನನ್ನ ಜೋಡಿ ಯಾರು ಮದುವ್ಯಾಗ್ತೀರಿ ಹೇಳ್ರಿ?" ಅರುಣಾ ಒಮ್ಮೆಲೇ ಕೇಳಿದಳು.

ಇಲ್ಲಿ...ಕೂತವರೊಳಗ...ಯಾರು... ನನ್ನ ...ಮದುವಿ...ಆಗ್ತೀರಿ?

ದೇವರೇ! ಭಗವಂತಾ!! ನಾರಾಯಣಾ!!! ಒಂದು ಹುಡುಗಿ ಇಷ್ಟು ಸಹಜತನದಿಂದ ಕೇಳತಾಳ!

ನಮ್ಮೆಲ್ಲರ ಮುಖ ನಾಚಿಕೆಯಿಂದ ಕೆಳಗಾದವು. ಅವಳು ನಗುತ್ತ ನಮ್ಮ ಕಡೆಗೇ ನೋಡುತ್ತಿದ್ದಳು. ನನ್ನ ಇತರ ಸಂಗಡಿಗರಿಗಂತೂ ಮಾತೇ ಬರದಾಪವು. ನಾನು ಮುಖವೆತ್ತಿ ನೋಡಿದಾಗ ಅವಳು ತುಂಟನಗೆ ಬೀರುತ್ತಲೇ ಕೇಳಿದಳು. "ನೀ ಆಗ್ತಿಯೇನೋ ರಾಮೂ, ನನ್ನ ಜೋಡಿ ಲಗ್ನ?"

ಇಷ್ಟು ಹೊತ್ತಿಗೆ ನನ್ನ ಪೌರುಷದ ಅಹಂಕಾರ ಕೊಂಚ ಜಾಗ್ರತವಾಗಿತ್ತು. ನಾನು ಯೋಚಿಸಿದೆ— ಈ ಹುಡುಗಿ ಇಷ್ಟು ನಿಃಸಂ-

ಕೋಚಳಿದ್ದಾಳೆಂದ ಮೇಲೆ ನಾನು ಏಕೆ ಹಿಂಜರಿಯಬೇಕು? ಅದೂ ಗಂಡಸಾಗಿ.

"Oh yes" ನಾನೆಂದೆ.

"ನೀ ನನ್ನ ಮ್ಯಾಲ ಎಂಥಾ ಕವಿತಾ ಕಟ್ತೀ ಹೇಳು" ಅವಳ ಆಹ್ವಾನ ಬಂತು.

ನಾನು ಸ್ವಲ್ಪ ವಿಚಾರ ಮಾಡಿದೆ. ನಂತರ ಕೃಷ್ಣನ್‌ರಂತೆ ಅವಳೆದುರಿಗೆ ಮೊಣಕಾಲೂರಿ ಎಡಗೈಯನ್ನು ಎದೆಯ ಮೇಲಿಟ್ಟು. ಬಲಗೈಯನ್ನು ಅವಳ ಮುಂದೆ ಕುಣಿಸುತ್ತ:

"ಹೇ ಹೃದಯೇಶ್ವರೀ ಸುಂದರೀ<br>
ಅರುಣಾ!<br>
ನಾನೊಬ್ಬ ಪ್ರಣಯೋತ್ಸುಕ ತರುಣಾ,<br>
ನನ್ನ ಹರಣಾ,<br>
ನಿನಗೆ ಶರಣಾ,<br>
ತೋರಿಸು ನನ್ನ ಮೇಲೆ ಕರುಣಾ"

ಎಂದೆ. ಇದನ್ನು ಕೇಳಿದೊಡನೆಯೇ ನನ್ನ ಸಂಗಡಿಗರಿಬ್ಬರೂ ಬಿದ್ದುಬಿದ್ದು ನಗತೊಡಗಿದರು. ಅರುಣಾ ಜೋರಿನಿಂದ ನಗುತ್ತಿದ್ದಳು. ನಾನೂ ನಗೆ ತಡೆಯದೇ ಹೋದೆ. ಅವಳು "ಕರೆಕ್ಟ್, ಕರೆಕ್ಟ್, ಇದ್ದರs ಹಿಂಗ ಇರಬೇಕು" ಎಂದು ಜೋರಾಗಿ ನಗುತ್ತಲೇ ಹೊರಗೆ ಹೋದಳು. ಆ ಮೇಲೆ ನನ್ನ ಗೆಳೆಯರು "ಶಭಾಶ್ ರಾಮುಡು, ಎಷ್ಟು ಚಂದ ಆಕ್ಟಿಂಗ್ ಮಾಡಿದ್ಯೋ" ಎಂದು ಬೆನ್ನು ಚಪ್ಪರಿಸಿದರು.

ಅದೇ ದಿನ ಸಂಜೆಗೆ ಮದುಮಗನ ಊರಿಂದ ನಿಬ್ಬಣ ಬಂತು. ರಾತ್ರಿ ಊಟದ ಪಂಕ್ತಿ ಕೂಡುವ ಮುಂಚೆ ನಾನು ಧೋತರ ಉಡುವ ಪ್ರಯತ್ನದಲ್ಲಿದ್ದೆ. ನನಗೆ ಚೆನ್ನಾಗಿ ಧೋತರ ಉಡಲು ಬರುತ್ತಿದ್ದಿಲ್ಲ. ಆದರೆ ಉಡುವ ಹವ್ಯಾಸ ಬಹಳ. ಅದರಲ್ಲೂ ನಾನು ಕೆಲ ದಿನಗಳ ಹಿಂದೆ ನೋಡಿದ "ಮೇಲಾ" ಸಿನೇಮಾದಲ್ಲಿ ದಿಲೀಪಕುಮಾರ ಧೋತರ ಉಟ್ಟಂತೆ ನಾನೂ ಉಡಬೇಕೆಂಬ ಸುಪ್ತ ಆಕಾಂಕ್ಷೆ ಎಚ್ಚರಾಗಿತ್ತು. ಅರ್ಧಗಂಟೆಯ ವರೆಗೆ ಹೆಣಗಾಡಿ ಕೊನೆಗೆ ಹೇಗಾದರೂ ಉಟ್ಟೆ. ಆಗ ಒಳಗಿಂದ ಹೊರಗೆ ಹೋಗುತ್ತಿದ್ದ ಅರುಣಾ ನನ್ನನ್ನು ನೋಡಿ "ಇದೇನೋ ರಾಮೂ? ಭಟ್ಟರ ಧೋತರ ಬಿರುಗಾಳಿಗೆ ಸಿಕ್ಕಹಾಂಗ ಆಗ್ಯದs ನೋಡು" ಅಂದಳು.

ನನ್ನ ಅಭಿಮಾನವೂ ಸಿಡಿದೆದ್ದಿತು. ಅವಳನ್ನು ಕೆಣಕುವ ಈ ಸಂಧಿಯನ್ನು ಬಿಡುವಂತಿರಲಿಲ್ಲ. ನಾನೆಂದೆ: "ಹೋಗs, ನಾಳೆ ಮದುವೆ ಆದ ಮ್ಯಾಲ ನಿನ್ನ ಗಂಡ ಸಹಿತ ಹಿಂಗs ಧೋತರ ಉಡತಾನ. ನೀ ಏನಾದ್ರೂ ಮಾತಾಡಿದರ ಕೈಯಾಗ ಬಾರುಕೋಲು ತಗೊಂಡು ಫಟಾ ಫಟಾ ನಿನ್ನ ಹೊಡೀತಾನ ನೋಡು."

"ಇಷ್ಟಾಗೋ ತನಕಾ ನಾ ಸುಮ್ಮನೆ ಕೂಡತೇನಂತ ತಿಳಿದೀ ಏನು?" ಅವಳು ಕೇಳಿದಳು.

"ಏನು ಪರಾಕ್ರಮ ಮಾಡ್ತೀ ಹಂಗಾದ್ರs ?" ನಾನು ತಿರುಗಿ ಕೇಳಿದೆ.

"ಸ್ಟೇಶನ್ ತನಕಾ ಓಡತಾ ಹೋಗಿ, ರೈಲು ಹತ್ತಿ ಮುಂಬಯಿಗೆ ಹೋಗ್ತೀನಿ. ಅಲ್ಲಿಂದ ವಿಮಾನದಾಗ ಕೂತು ದಿಲ್ಲೀಗೆ ಹೋಗಿ ಜವಾಹರಲಾಲ ನೆಹರೂ ಅವರಿಗೆ ಭೆಟ್ಟಿಯಾಗಿ ಗಂಡನ ವಿರುದ್ಧ ಫಿರ್ಯಾದ ಕೊಡ್ತೀನಿ" ಅವಳೆಂದಳು. ಅವಳ ಅದ್ಭುತ ಹಾಗೂ ವಿಚಿತ್ರ ಕಲ್ಪನಾಶಕ್ತಿಗೆ ನಾನು ದಂಗುಬಡಿದು ನಿಂತೆ. ಅಷ್ಟರಲ್ಲಿ ಊಟದ ಕರೆ ಬಂದದ್ದರಿಂದ ನಾವಿಬ್ಬರೂ ಹೊರಗೆ ಹೋದೆವು.

ಮದುವೆಯ ಕೋಲಾಹಲದಲ್ಲಿ ಅವಳೊಡನೆ ಭೆಟ್ಟಿಯಾದಾಗ ಹೆಚ್ಚು ಮಾತನಾಡಲು ಸಮಯ ಸಿಗಲಿಲ್ಲ ನಡುನಡುವೆ ಭೆಟ್ಟಿಯಾದಾಗ ಅವೇ ನಗೆತುಂಬಿದ ಕಣ್ಣುಗಳು, ಅದೇ ವಿನೋದಪೂರ್ಣ ಹಾಸ್ಯ ಕಂಗೊಳಿಸುತ್ತಿದ್ದವು.

ಮದುವೆ ಯಥಾಸಾಂಗ ಮುಗಿಯಿತು. ಅದರ ಮರುದಿನ ಒಂದು ದಿನವಿದ್ದು ಮೂರನೆಯ ದಿನ ಎಲ್ಲ ಆಪ್ತೇಷ್ಟರು ತಂತಮ್ಮ ಊರಿಗೆ ಹೋಗುವವರಿದ್ದರು. ಅರುಣಾ ಕೂಡ ಹೋಗುವವಳಿದ್ದಳು. ಅವಳು ಹೋಗುವ ಹಿಂದಿನ ದಿವಸ

ಸಂಜೆಗೆ, ಮನೆಯಲ್ಲಿ ಕುಳಿತು ಬೇಸರ ಬಂದದ್ದರಿಂದ ನಾನು ನನ್ನ ಚಿಕ್ಕ ತಮ್ಮನೊಡನೆ ತಿರುಗಾಡಲು ಹೊರಟಾಗ ಅರುಣಾ ಬಂದು "ನಾನೂ ತಿರುಗಾಡಲಿಕ್ಕೆ ಬರ್ತೀನೆ"ಂದಳು. ನಾವು ಮೂ-ವರೂ ಕರೆವ್ವನ ದಿನ್ನೆಯತ್ತ ತಿರುಗಾಡುತ್ತ ಹೋದೆವು.

ದಾರಿಗುಂಟ ಅವಳ ಮಾತೇ ನಡೆದಿದ್ದವು. ನೆಹರೂರವರ ಅಂತಾರಾಷ್ಟ್ರೀಯ ಕೀರ್ತಿಯಿಂದ ಹಿಡಿದು ಅಂದು ಮಧ್ಯಾಹ್ನ ಸಾರಿಗೆ ಹಾಕಿದ ಮಸಾಲೆಯ ವರೆಗೆ ಎಲ್ಲ ವಿಷಯುಗಳ ಮೇಲೆ ಅವಳ ವಿನೋದ ವ್ಯಂಗ್ಯಪೂರ್ಣ ಟೀಕೆ ನಡೆದಿತ್ತು. ಸಾಧ್ಯವಾದಷ್ಟು ನಾನೂ ಮಾತಾಡುತ್ತಿದ್ದೆ. ನಾವು ಕರೆವ್ವನ ದಿನ್ನೆಯ ಮೇಲೆ ಹೋಗಿ ಗುಡಿಯ ಎದುರಿನ ಶಿಲಾಸನದ ಮೇಲೆ ಕುಳಿತೆವು. ಅಲ್ಲಿ ಒಂದು ಇಣಚಿ ಕಾಣಿಸಿದ್ದರಿಂದ ನನ್ನ ತಮ್ಮ ಅದರ ಹಿಂದೆ ಓಡಿದ. ಅರುಣಾ ಒಮ್ಮೆಲೇ ಮೌನವಾಗಿದ್ದಳು. ಏನೋ ಗಂಭೀರ ವಿಚಾರ ನಡೆದಂತೆ ಕಾಣಿಸಿತು. ಅವಳ ಮಾತಿನ ಪ್ರವಾಹ ಒಮ್ಮೆಲೇ ಗಡ್ಡೆಗಟ್ಟಿ ಬರ್ಫದಂತೆ ಆದದ್ದು ಅವಳ ಸ್ವಭಾವದ ವಿರುದ್ಧವಾಗಿತ್ತು. ಈ ಅಸ್ವಾಭಾವಿಕ ಮೌನ ನನಗೆ ಅಸಹ್ಯವಾಯಿತು.

"ಏನು ವಿಚಾರ ನಡದದ?" ನಾನು ಕೇಳಿದೆ.

"ರಾಮೂ, ನಿನಗ ಒಂದು ಮಾತು ನಾ ಹೇಳಬೇಕಂತೀನಿ," ಗಂಭೀರ ಸ್ವರದಲ್ಲಿ ಅವಳ ಉತ್ತರ ಬಂತು.

"ಏನು ?"

"ನಾ ಇಲ್ಲಿ ಬಂದಾಗಿಂದ ನನಗೊಂದು ಹೊಸ ಅನುಭವ ಸಿಕ್ಕsದ. ಇಷ್ಟರ ವರೆಗೆ ನಾನು ಅನೇಕ ಹುಡುಗರನ್ನು ನೋಡಿದ್ದೇನೆ. ಅವರು ಎರಡು ಪ್ರಕಾರದವರಿರುತ್ತಾರೆ. ಒಂದನೇ ಪ್ರಕಾರದವರು ಬಹಳ ಸಂಕೋಚಶೀಲರು. ಹುಡುಗಿಯರೆಂದರೆ ಮಹಾ ಭಯಂಕರ ಪ್ರಾಣಿಗಳೆಂಬ ತಪ್ಪು ತಿಳುವಳಿಕೆ ಅವರಿಗಿರುತ್ತದೆ. ಅವರೊಂ-ದಿಗೆ ಮಾತಾಡಿದರೆ, ನೋಡಿದ ನಕ್ಕರೆ, ತಮ್ಮ ಚಾರಿತ್ರ್ಯ ಕಲಂಕಿತವಾಗುವುದೆಂದು ಅವರು ತಿಳೀತಾರ. ಯಾವಾಗಲೂ ಹುಡುಗಿಯರಿಂದ ದೂರ ದೂರ ಇರತಾರ. ಇನ್ನು ಎರಡನೇ ಪ್ರಕಾರದವರು ಹುಡುಗಿಯರೆಂದರೆ ಕೇವಲ 'ಕಾಮದಾಟದ ಸಾಧನ' ಅಂತ ತಿಳೀತಾರ. ಅವರು ಹುಡುಗಿಯರೊಂದಿಗೆ ನಿರ್ಭಯತನದಿಂದ ಮಾತಾಡ್ತಾರೆ. ಆದ್ರs ಅವರ ದೃಷ್ಟಿ ಯಾವಾಗಲೂ ಕಾಮುಕವಾಗಿರುತ್ತದೆ. ನಮ್ಮಂಥ ಹುಡುಗಿಯರ ಸ್ನೇಹ ಕಾಮದಾಟದಲ್ಲಿ ಪರಿಣತವಾಗಬೇಕೆಂದು ಅವರ ಸತತ ಪ್ರಯತ್ನ ನಡೆದಿರುತ್ತದೆ—"

"ಇದರಲ್ಲಿ ನಿನ್ನ ಇಲ್ಲಿಯ ಅನುಭವ ಎಲ್ಲಿದೆ?" ನಾನು ಕೇಳಿದೆ.

"ಮುಂದೆ ಕೇಳು, ಎಷ್ಟೋ ದಿವಸದಿಂದ ನನಗೆ ಅನಿಸುತ್ತಿತ್ತು: 'ಎಲ್ಲಿಯಾದರೂ ಯಾವನಾದರೂ ಒಬ್ಬ ಹುಡುಗ ಇರಬಹುದು. ಅವ ತನ್ನ ಜೀವದ ಗೆಳೆಯನೊಂದಿಗೆ ಯಾವ ರೀತಿ ನಿಃಸಂಕೋಚತನದಿಂದ, ಶಾರೀರಿಕ ಆಕರ್ಷಣೆಯಿಂದ ವಿರಹಿತವಾಗಿ, ನಿರ್ಮಲ ಹೃದಯದಿಂದ ವರ್ತಿಸುವನೋ ಅದೇ ರೀತಿ ಹುಡುಗಿಯರ ಸಂಗಡ ವರ್ತಿಸುತ್ತಿರಬಹುದು ಎಂದು. ಇನ್ನೂತನಕ ಅಂಥವರು ಯಾರೂ ನನಗೆ ದೊರಕಿದ್ದಿಲ್ಲ. ಇಲ್ಲಿ ಬಂದಾಗ ನಿನ್ನ ಭೆಟ್ಟಿಯಾಯಿತು. ನೀನು ನನ್ನೊಂದಿಗೆ ನನ್ನ ಕಲ್ಪನೆಯಲ್ಲಿಯ ಹುಡುಗನಂತೆ ವರ್ತಿಸಿದೆ. ನನಗೊಬ್ಬ ನಿಜವಾದ 'ಗೆಳೆಯ' ದೊರೆತನೆಂಬ ಸಮಾಧಾನ ಸಿಕ್ಕಿದೆ. ಆದರೆ......" ಕೊನೆಯ ಶಬ್ದದೊಂದಿಗೆ ಅವಳ ಗಂಟಲು ತುಂಬಿ ಬಂದಿತ್ತು. ಕಣ್ಣುಗಳೂ ಒದ್ದೆಯಾಗಿದ್ದವು.

"ಆದರೆ ಏನು?" ನಾನು ಕೇಳುವಾಗ ನನ್ನ ದನಿಯೂ ಕಂಪಿಸುತ್ತಿತ್ತು.

"ಆದರೆ ನಿನ್ನ ಸಹವಾಸ ಹೆಚ್ಚು ಕಾಲ ದೊರಕಲಿಲ್ಲ. ನಾಳೆಯೇ ನಾನಿಲ್ಲಿಂದ ಹೋಗಬೇಕು. ಇನ್ನು ಮುಂದೆ ನನ್ನ ನಿನ್ನ ಭೆಟ್ಟಿ ಆಗ್ತದೋ ಇಲ್ಲಪೋ ಹೇಳಲಾರೆ. ಪತ್ರಗಳನ್ನು ಬರೆದು ಪೋಸ್ಟಿನ ಮಧ್ಯಸ್ತಿಕೆಯಿಂದ ಗೆಳೆತನ ಕಾಯ್ದು

ಡುವ ರೀತಿ ನನಗೆ ಸರಿ ಕಾಣುವುದಿಲ್ಲ. ಸೀ-ಮಾತ್ರ ನನ್ನ—ನಿನ್ನ ಈ ಗೆಳತೀನ್ನ— ಎಂದೂ ಮರೆಯಬೇಡ" ಎಂದಳು. ಹೀಗೆನ್ನುವಾಗ ಅವಳ ಕಣ್ಣಿಂದ ಜಾರಿದ ಒಂದೆರಡು ಹನಿಗಳು ನನ್ನ ಮುಂಗಾಲ ಮೇಲೆ ಬಿದ್ದವು.

"ಮತ್ತೊಂದು ಮಾತು ಏನಂದ್ರs" ಅವಳು ಮುಂದೆ ಹೇಳತೊಡಗಿದಳು. "ನನ್ನ ಮನಸ್ಸಿನಲ್ಲಿ ಹೊಸ ಆಶಾಂಕುರ ಒಂದು ಒಡೆದಿದೆ. ನನಗ ಗಂಡ ಸಿಕ್ಕರೆ ನಿನ್ನಂಥ ಸ್ವಭಾವದವನೇ ಸಿಗಬೇಕು. ಏಕೆಂದರೆ ಯಾರು ನಿಃಸಂಕೋಚ ಮಿತ್ರರಾಗಬಲ್ಲರೋ ಅವರೇ ಸಂಪೂರ್ಣ ಹೃದಯದಿಂದ ಪ್ರೀತಿಸಬಲ್ಲರು. ಇನ್ನು ಗಂಡ ಅಂಥವ ಸಿಗೋದು ಯೋಗಾಯೋಗದ ಮಾತು. ಆದರೆ ನನ್ನ ಮನಸಿನ ಹಂಬಲ ನಿನಗೆ ಹೇಳಿದೆ," ಎಂದಳು.

ನನಗೆ ಮತ್ತೊಮ್ಮೆ ಅನಪೇಕ್ಷಿತ ಧಕ್ಕೆ ತಗುಲಿತು. ಯೋಚಿಸಿದೆ: ಎಷ್ಟು ವೈಚಿತ್ರ್ಯಪೂರ್ಣವಾಗಿ ಈ ಹುಡುಗಿಯ ಮನಸ್ಸು ಬೆಳೆದಿದೆ! ತನ್ನ ಎಲ್ಲ ಭಾವನೆಗಳನ್ನು, ವೇದನೆಗಳನ್ನು ಎಷ್ಟು ಸಹಜವಾಗಿ ಹೇಳುತ್ತಾಳೆ! ಅವಳ ಸರಳ ಭಾವದ ನುಡಿಗಳು ನನ್ನ ಅಂತಃಕರಣವನ್ನು ಕರಗಿಸಿದವು.

ನಾನವಳ ಕಡೆಗೆ ನೋಡಿದೆ. ಇನ್ನೂ ಕಣ್ಣೀರು ತಡೆದಿರಲಿಲ್ಲ.

"ನಿನ್ನ ಮನಸ್ಸಿನಂತೆಯೇ ಆಗಲಿ ಎಂದು ನಾನು ಯಾವಾಗಲೂ ಪ್ರಾರ್ಥಿಸುವೆ" ನಾನೆಂದೆ. ಹೀಗೆ ಹೇಳುವಾಗ ನನ್ನ ಆತ್ಮಸಂಯಮದ ಕಟ್ಟೆ ಒಡೆದು ನನ್ನ ಕಣ್ಣಿಂದ ಹೊರಬಿದ್ದ ಹನಿಗಳು ನನ್ನ ಮುಂಗಾಲ ಮೇಲೆ— ಅವಳ ಕಣ್ಣೀರು ಉದುರಿದ ಸ್ಥಳದಲ್ಲಿಯೇ—ಉದುರಿದವು.

* *

ಅನಂತರ ಈ ಎಂಟುಹತ್ತು ವರ್ಷಗಳಲ್ಲಿ ಅವಳ ಬಗ್ಗೆ ವಿಶೇಷವೇನೂ ತಿಳಿದಿಲ್ಲ. ಐದಾರು ವರ್ಷಗಳ ಹಿಂದೆ ಅವಳ ಮದುವೆಯಾದ ಸುದ್ದಿ ನನಗೆ ತಿಳಿಯಿತು. ಆಗ ನನ್ನ ಮನಸ್ಸಿನಲ್ಲಿ "ಅವಳಿಗೆ ಬೇಕಾದಂಥ ಬಾಳ ಜೊತೆಗಾರ ಸಿಕ್ಕಿರಬಹುದೇ?" ಎಂಬ ಪ್ರಶ್ನೆ ಸಿಡಿದೆದ್ದಿತ್ತು. ಇಂದೂ ಅದೇ ಪ್ರಶ್ನೆ ಇಲ್ಲಿ— ಕರೆವ್ವನ ದಿನ್ನೆಯ ಮೇಲೆ, ದೇವಿಯ ಎದುರಿಗೆ— ನಿಂತಾಗ ವಿಲಕ್ಷಣ ಶಕ್ತಿಯಿಂದ ಮಿಡಿಯುತ್ತ ನನ್ನ ಮನಸ್ಸನ್ನು ಕದಡಿದೆ ಮತ್ತು ನನಗೆ ತಿಳಿಯದಂತೆಯೇ ನನ್ನ ಕಣ್ಣುಗಳು ನೀರೂರಿವೆ. *

## ಅಂತರಾಳದಿಂದ

**ಭಕ್ತಿ-ಮುಕ್ತಿ:** ಭಕ್ತಿಯು ಮನೆ ಬಾಗಿಲಿಗೆ ಮುಕ್ತಿ ಬೇಡಲು ಬರುವಳಂತೆ.

**ವಂಚಕ-ಸಾಹಸಿ:** ಆಸೆಯೂ ಅಂಜಿಕೆಯೂ ಇದ್ದವ ವಂಚಕ. ಆಸೆ ಇದ್ದು ಅಂಜಿಕೆ ಇಲ್ಲದವ ಸಾಹಸಿ.

**ಸ್ವರ್ಗ:** ಸ್ವರ್ಗಕ್ಕೆ ಹೋಗಲು ಒಂದರೊಳಗೊಂದರಂತೆ ಹಲವಾರು ಬಾಗಿಲುಗಳು. ಮೊದಲನೆಯದು ಬಲು ಎತ್ತರ. ಮನುಷ್ಯ ಸರಾಗವಾಗಿ ಹೋಗಿಬಿಡುತ್ತಾನೆ. ಮುಂದೆ ಕ್ರಮವಾಗಿ ಒಂದಕ್ಕಿಂತ ಒಂದು ಕಿರಿದಾಗುತ್ತಾ ಹೋಗುತ್ತದೆ. ಕೊನೆ ಬಾಗಿಲನ್ನು ಮುಟ್ಟುವಾಗ ಅವನು ಅಂಬೆಗಾಲಿಡುತ್ತಾ ದೇವರ ಪಾದ ಸೇರುತ್ತಾನೆ. ಮುಂದಿನ ಬಾಗಿಲನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಂಸಾಗುವವನ ಪಯಣ ಸುಲಭವೂ ಸುಖಮಯವೂ ಆಗುತ್ತದೆ. ಇಲ್ಲವಾದರೆ, ತಾಗಿ ತಾಗಿ, ಬಾಗಿ ಬಾಗಿ ಕಡೆಗೊಂದು ದಿನ ಘಾಸಿಗೊಂಡು ಪಾದದ ಮೇಲೆ ಬೀಳಬೇಕಾಗುತ್ತದೆ.

—"ಶಾರದಾ"


ಈ ಕೆಂಪು ಗ್ರಹ ಕೆಲ ನಿಗೂಢ
ಸಮಸ್ಯೆಗಳನ್ನು ಮುಂದೊಡ್ಡಿದೆ

# ಮಂಗಳ ಗ್ರಹದಲ್ಲೇನಿದೆ?

**ಕೆ. ಎಸ್. ರಮಾನಂದ**

ಕ್ರಿ. ಶ. ೧೬೦೦ ಫೆಬ್ರವರಿ ೧೭ ನೇ ದಿನದಂದು ಗಿಯೋರ್ಡಾನೋ ಬ್ರೂನೋನನ್ನು (೧೫೪೮-೧೬೦೦) ರೋಮ್ ನಗರದಲ್ಲಿ ಜೀವಂತವಾಗಿ ಸುಡಲಾಯಿತು. ಕ್ರೈಸ್ತ ಧಾರ್ಮಿಕ ನ್ಯಾಯಾಲಯವು ಖಗೋಲಶಾಸ್ತ್ರದ ಈ ಉತ್ತುಂಗ ವಿಜ್ಞಾನಿಯನ್ನು ಈ ಶಿಕ್ಷೆಗೆ ಗುರಿಪಡಿಸಿತ್ತು. ಆತನು ಮಾಡಿದ ಅಪರಾಧ: "ಅಸಂಖ್ಯ ಗ್ರಹಗಳ ಮೇಲೆ ಜೀವನದ ಅಸ್ತಿತ್ವವಿದೆ. ವಿಶ್ವದ ಜೀವನ ಅನಂತ, ಅಪಾರ. ಈ ಅನಂತ ವಿಶ್ವದಲ್ಲಿ ಕೇವಲ ಧೂಳಿನ ಕಣದಷ್ಟು ದೊಡ್ಡದಿರುವ ಭೂಮಿಯನ್ನು ಮಾತ್ರ ವಿಚಾರ ಪರ ಪ್ರಾಣಿಗಳ ವಾಸಸ್ಥಳವೆಂದು ನಂಬುವುದು ಹಾಸ್ಯಾಸ್ಪದವಷ್ಟೇ ಅಲ್ಲ, ಮೂರ್ಖತನದ ಪರಮಾವಧಿ—" ಹೀಗೆಂದು ಸಾರಿದ್ದು. ಇದಕ್ಕಾಗಿ ಧರ್ಮವು ಎಂಟು ವರುಷಗಳ ಸರಕಯಾತನೆ ಮತ್ತು ಬೆಂಕಿಯಲ್ಲಿ ಬೆಂದು ಸಾಯುವ ಶಿಕ್ಷೆ ವಿಧಿಸಿತ್ತು! ಆದರೆ ಬ್ರೂನೋನ ಘೋಷಣೆ ಸುಳ್ಳಾಗಲಿಲ್ಲ. ನಮಗೆ ತಿಳಿದಿರುವಷ್ಟು ಮಟ್ಟಿಗೆ ಭೂಮಿಯ ಸೆರೆಯ ಶುಕ್ರ ಹಾಗೂ ಮಂಗಳ ಗ್ರಹಗಳಲ್ಲಿ ಜೀವನದ ಲಕ್ಷಣಗಳನ್ನು ಸಿದ್ಧಪಡಿಸಲು ಸಾಕಷ್ಟು ಆಧಾರಗಳಿವೆ. ಶುಕ್ರನ ಬಗ್ಗೆ ನಮ್ಮ ಜ್ಞಾನ ಇನ್ನೂ ಅಲ್ಪವಾದರೂ ಮಂಗಳಗ್ರಹದ ಮೇಲಿನ ಜೀವನದ ಬಗ್ಗೆ ಸತತ ಅಧ್ಯಯನ ವಿಚಾರಮಂಥನ ಹಾಗೂ ವಾದಗಳು ಹುಟ್ಟಿಕೊಂಡಿವೆ.

ಸೂರ್ಯನಿಂದ ಮಂಗಳನ ದೂರ ಭೂಮಿಯ ದೂರದ ಒಂದೂವರೆಯಷ್ಟು ಅಂದರೆ ೨೨.೮ ಕೋಟಿ ಕಿಲೋಮೀಟರುಗಳು. ವ್ಯಾಸ ೬,೭೦೦ ಕಿಲೋಮೀಟರುಗಳು.— ಚಂದ್ರನ ವ್ಯಾಸದ ಎರಡರಷ್ಟು. ಸೂರ್ಯನ ಸುತ್ತ ಸುತ್ತಲು ಭೂಮಿಗೆ ೩೬೫ ೧|೪ ದಿನಗಳು ಬೇಕಾದರೆ ಮಂಗಳಕ್ಕೆ ೬೮೭ ದಿನಗಳು ಬೇಕು. ಪ್ರತಿ ಹದಿನೈದು ವರುಷಗಳಿಗೊಮ್ಮೆ ಭೂ-ಮಂಗಳಗಳು ಅತ್ಯಂತ ಸಮೀಪಕ್ಕೆ ಬರುತ್ತವೆ. ಆಗ ಮಂಗಳ ಗ್ರಹ ಅತ್ಯ




ಭೂಮಿ ಮಂಗಳ ಚಂದ್ರರ ತುಲನಾತ್ಮಕ ಗಾತ್ರ

ಧಿಕ ಹೊಳಪಿನಿಂದ ಹೊಳೆಯುತ್ತದೆ ಮತ್ತು ಭೂಮಿಯಿಂದ ಕೇವಲ ೫·೫ ಕೋಟಿ ಕಿಲೋಮೀಟರುಗಳ ದೂರದಲ್ಲಿರುತ್ತದೆ. ಇದನ್ನು ಅತಿ ಅನುಕೂಲ ವಿರೋಧ (Most favourable opposition) ಎನ್ನುತ್ತಾರೆ. ಇತ್ತೀಚೆಗೆ ೧೯೫೬ ರಲ್ಲಿ ಇಂತಹ ಸಾಮೀಪ್ಯ ದೊರೆತಿತ್ತು. ಮಂಗಳಗ್ರಹದ ಗಾತ್ರ ಭೂಮಿಯ ಗಾತ್ರದ ೧।೨ ಕ್ಕಿಂತ ಸ್ವಲ್ಪ ಹೆಚ್ಚು. ಭೂಮಿಯಂತೆ ಈ ಗ್ರಹವೂ ತನ್ನ ಅಕ್ಷದ ಮೇಲೆ ಸುತ್ತುತ್ತದೆ. ಅಂದರೆ ಮಂಗಳ ಗ್ರಹದಲ್ಲೂ ರಾತ್ರಿ ದಿನಗಳು ಮತ್ತು ಋತುಮಾನಗಳಿವೆಯೆಂದಾಯಿತು. ಮಂಗಳ ಮತ್ತು ಭೂಮಿಯ ದಿನಗಳ ಮಾಪ ಹೆಚ್ಚು ಕಡಿಮೆ ಒಂದೇ ಎನ್ನಬಹುದು. (ಮಂಗಳ: ೨೪ ಗಂಟೆ ೩೭ ನಿಮಿಷ.) ಮಂಗಳನ ಅಕ್ಷವೂ ಹೆಚ್ಚುಕಡಿಮೆ ಭೂಮಿಯ ಅಕ್ಷದಷ್ಟೇ ವಾಲಿದೆ ಎಂಬುದೊಂದು ಆಶ್ಚರ್ಯಕರ ತಥ್ಯ.




ಮಂಗಳನ ಅತ್ಯನುಕೂಲ ವಿರೋಧಗಳು

ಆದರೆ ಮಂಗಳ ಗ್ರಹವಾಸಿಗಳು ತಾಪಮಾನದ ವೈಪರೀತ್ಯವನ್ನು ನಿತ್ಯವೂ ಅನುಭವಿಸುತ್ತಾರೆ. ಮಂಗಳ ಮಧ್ಯರೇಖೆಯ ಹತ್ತಿರ ಹಗಲಲ್ಲಿ ಅತ್ಯಧಿಕ ಉಷ್ಣಾಂಶ +೨೦°c, ರಾತ್ರಿಯಲ್ಲಿ ಶೂನ್ಯ, ಹಾಗೂ ಸೂರ್ಯೋದಯದ ಹೊತ್ತಿಗೆ —೫೦°c ದಷ್ಟಿರುತ್ತದೆ. ಸಮಶೀತೋಷ್ಣ ವಲಯದಲ್ಲಿ ಈ ತಾಪಮಾನ —೭೦°c ರಿಂದ —೮೦°c ವರೆಗೆ ಹೋದರೆ ಶೀತವಲಯದಲ್ಲಿ —೧೦೦°c ಯಷ್ಟಿರುತ್ತದೆ! ಭೂಮಿಗಿಂತ ಸೂರ್ಯನಿಗೆ ದೂರಕ್ಕಿರುವುದರಿಂದ ಮಂಗಳ ಗ್ರಹಕ್ಕೆ ದೊರಕುವ ಶಾಖ, ಭೂಮಿಯ ಸೇಕಡಾ ೪೩·೫ ರಷ್ಟು ಮಾತ್ರ.

ಮಂಗಳನ ವಾತಾವರಣದಲ್ಲಿ ಪ್ರಾಣವಾಯುವಿದೆ; ಇಂಗಾಲಾಮ್ಲವಿದೆ; ನೈಟ್ರೋಜನ್ ಅನಿಲವಿದೆ ಹಾಗೂ ನೀರು ಕೂಡ ಇದೆ. ಆದರೆ ಇವುಗಳ ಪರಿಮಾಣ ಮಾತ್ರ ಬಹಳ ಕಮ್ಮಿ. ಬೇಸಿಗೆಯ ಅತ್ಯಧಿಕ ಸೆಕೆಯ ದಿನದಂದು ತೇವಾಂಶ ಕೇವಲ ಅಲ್ಪ. ಮಂಗಳ ಗ್ರಹದಲ್ಲಿರುವ ಪ್ರಾಣವಾಯು ಭೂಮಿಯ ಮೇಲಿರುವ ಪ್ರಾಣವಾಯುವಿನ ಸಹಸ್ರಾಂಶದಷ್ಟಿರಬಹುದು. ತೇವದ ಅಂಶ ಮಾತ್ರ ಶತಾಂಶಕ್ಕಿಂತ ಕಮ್ಮಿಯೇ ಎನ್ನಬಹುದು. ವಾತಾವರಣ ಬಹಳ ವೈಪರೀತ್ಯದಿಂದ ಕೂಡಿದ್ದು ಯಾವಾಗಲೂ ಕ್ಷುಬ್ಧ ಸ್ಥಿತಿಯಲ್ಲಿರುತ್ತದೆ. ಧೂಳಿನ ಬಿರುಗಾಳಿಗಳು, ಮರಳು ಕಣಗಳ ಸುಂಟರ

ಗಾಳಿಗಳು, ಮಂಗಳಗ್ರಹದ ಸಾಮಾನ್ಯ ಲಕ್ಷಣ. ಭೂಮಿಯ ವಾತಾವರಣದ ಒತ್ತಡದ ೧/೧೦ರಷ್ಟು ಮಾತ್ರ ಮಂಗಳಗ್ರಹದ ಮೇಲೆ ದೊರಕುತ್ತದೆ. ಮಂಗಳನ ಗುರುತ್ವಾಕರ್ಷಣ ಶಕ್ತಿ ಭೂಮಿಯದಕ್ಕಿಂತ ಎರಡೂವರೆಪಟ್ಟು ಕಮ್ಮಿ. ಕೆಂಪು ಬಣ್ಣದ ವಣ್ಣಿನ ಗ್ರಹ ಮಂಗಳದ ಬಣ್ಣ ಕೆಂಪಾಗಿ ಕಾಣುವುದು ಸಹಜವೇ.

ಗ್ರಹಗಳಲ್ಲೆಲ್ಲಾ ಮಂಗಳ ಗ್ರಹವು ರಹಸ್ಯಪೂರ್ಣ ಹಾಗೂ ರೋಮಾಂಚಕ ಗ್ರಹವಾಗಿದೆ. ಇದರ ರಹಸ್ಯಗಳನ್ನು ಕುರಿತು ಭೂಮಿಯ ವಿಜ್ಞಾನಿಗಳು ಅನೇಕ ಶೋಧ, ವಾದಗಳನ್ನು ಮಾಡಿದ್ದಾರೆ-ಮಾಡುತ್ತಿದ್ದಾರೆ.

ಇಟಲಿಯ ಖಗೋಲ ಶಾಸ್ತ್ರಜ್ಞ ಗಿಯೋವಾನಿ ಸ್ಕಿಯಪರೇಲಿ (Giovanni Schiaparelli 1835-1918) ೧೮೭೭ರಲ್ಲಿ ಮಂಗಳ ಗ್ರಹದ ಸತತ ವೀಕ್ಷಣೆ ಮಾಡಿ ಪಟವೊಂದನ್ನು ತಯಾರಿಸಿದ. ಸ್ಕಿಯಪರೇಲಿಯು ಮೊದಲು ನೋಡಿದ್ದು ಮಂಗಳ ಗ್ರಹದ ಮೇಲಿನ ಕಪ್ಪು ಮಚ್ಚೆಗಳನ್ನು. ದೂರದಿಂದ ನೋಡಿದರೆ ನೀರು ನೆಲಕ್ಕಿಂತ ಕಪ್ಪಗೆ ಕಾಣುವುದರಿಂದ ಅವನು ಇದನ್ನು ಮಂಗಳ 'ಸಮುದ್ರ'ಗಳು ಎಂದು ಕರೆದನು. ಈ 'ಸಮುದ್ರ'ಗಳ ಮಧ್ಯೆ ಕಪ್ಪು ಗೆರೆಗಳಿರುವುದನ್ನು ಕಂಡ ಅವನು ಇವನ್ನು 'ನಾಲೆ'ಗಳೆಂದು ಕರೆದನು.

ಮಂಗಳ ಗ್ರಹದ ಯಾವ ಒಂದು ಭಾಗವೂ ಈ ನಾಲೆಗಳ ಜಾಲದಿಂದ ೩೦೦ ಕಿಲೋಮೀಟರುಗಳಿಗಿಂತ ದೂರವಿಲ್ಲದಿರುವುದು ಇದರ ವೈಶಿಷ್ಟ್ಯ. ಈ ನಾಲೆಗಳ ಅಗಲ ೨೦೦-೩೦೦ ಕಿಲೋಮೀಟರುಗಳಿಂದ ಹಿಡಿದು ಕೇವಲ ಕೆಲವೇ ಕಿಲೋಮೀಟರುಗಳಷ್ಟು ಇರುವುದು ಕಂಡಿತು. ಸ್ಕಿಯಾಪರೇಲಿಯು ಈ ನಾಲೆಗಳನ್ನು ನೀರಾವರಿ ಯೋಜನೆಗಾಗಿ ಮಂಗಳಗ್ರಹದ ಬುದ್ಧಿಶಾಲಿ ವಾಸಿಗಳು ನಿಯೋಜಿಸಿದ ನಾಲೆಗಳೆಂದು ಹೇಳಿದನು.

ಪ್ರಪಂಚಕ್ಕೆ ಈ ಸುದ್ದಿ ಕುತೂಹಲಕಾರಿಯಾಯಿತು. ವೃತ್ತಪತ್ರಿಕೆಗಳು ಮತ್ತು ಲೇಖಕರಿಗೆ ಕಲ್ಪನೆಗೆ ಹೊಸ ಹುರುಪೊಂದು ದೊರಕಿ ಅನೇಕ ಬಗೆಯ ಲೇಖನಗಳು ಬರೆಯಲ್ಪಟ್ಟವು. ಮಂಗಳ ಗ್ರಹ ವಾಸಿಗಳೊಂದಿಗೆ ಸಂಪರ್ಕ ಕಲ್ಪಿಸಲು ಬೆಳಕು, ರೇಡಿಯೋ ಮುಂತಾದ ಸಂಕೇತಗಳನ್ನುಪಯೋಗಿಸಬೇಕೆಂದು ಸಲಹೆಯಾಯಿತು. ಸೈಬೀರಿಯದ ವಿಶಾಲ ಮೈದಾನದಲ್ಲಿ ಗೋಧಿಯಿಂದ ಜಾಮಿತೀಯ ಆಕಾರಗಳನ್ನು ಮಾಡಿ ತೋರಿಸಿ ಭೂ-ಗ್ರಹದಲ್ಲೂ ಬುದ್ಧಿವಂತ ನಿವಾಸಿಗಳಿದ್ದಾರೆಂದು ಮಂಗಳಗ್ರಹ ವಾಸಿಗಳಿಗೆ ಸೂಚಿಸಬೇಕೆಂದೂ ಸಲಹೆಯಾಯಿತು!

೧೯೦೯ ರಲ್ಲಿ ಅಮೇರಿಕದ ವಿಜ್ಞಾನಿ ಲೋವೆಲ್ಲನು ಅರಿಜೋನ ಮರಳುಗಾಡಿನ ಪ್ರಸ್ಥ ಭೂಮಿಯ ಮೇಲಿಂದ ಮಂಗಳ ಗ್ರಹವನ್ನು ವೀಕ್ಷಿಸಿ ಈ ನಾಲೆಗಳ ಇರುವಿಕೆಯನ್ನು ಒಪ್ಪಿಕೊಂಡದ್ದೇ ಅಲ್ಲದೆ ಮತ್ತೂ ಆಶ್ಚರ್ಯಕರ ಸುದ್ದಿಯೊಂದನ್ನು ಕೊಟ್ಟನು.

ಕರಗುತ್ತಿರುವ ತೆಳುವಾದ ಹಿಮಶಿಖರಗಳು ಮಂಗಳಧ್ರುವದ ವೈಶಿಷ್ಟ್ಯ. ಚಳಿಗಾಲದಲ್ಲಿ ಇವು ೩,೦೦೦-೪,೦೦೦ ಕಿಲೋಮೀಟರುಗಳ ವ್ಯಾಸವನ್ನು ಹೊಂದಿದ್ದು ಬೇಸಿಗೆಯಲ್ಲಿ ಅತ್ಯಂತ ಕಿರಿದಾಗಿ ಕಾಣುತ್ತವೆ. ಶರತ್ಕಾಲದಲ್ಲಿ ಕೇವಲ ಶ್ವೇತಪದರಗಳಾಗಿ ಕಾಣುತ್ತವೆ. ಕೆಲವು ಸಲವಂತೂ ಮಾಯವಾಗಿಬಿಡುತ್ತವೆ. ಈ ಕರಗುತ್ತಿರುವ ತೆಳುವಾದ ಹಿಮವಲಯದಿಂದ ನೀರು ನಾಲೆಗಳ ಮೂಲಕ ಹರಿದು 'ಸಮುದ್ರ'ಕ್ಕೆ ಜಲದಾನ ಮಾಡುತ್ತದೆ. ಭೂ-ಗ್ರಹದ ಮೇಲಿನ ಹಿಮವಲಯ ಸಾಕಷ್ಟು ದಟ್ಟವಾಗಿದ್ದು, ಸಾವಿರಾರು ವರುಷಗಳಿಂದ ಕರಗದೇ ಉಳಿದಿದೆ. ಮಂಗಳಗ್ರಹದ ಅಧಿಕಭಾಗ ಜಲಹೀನ ಮರಳುಗಾಡು. ಪ್ರತಿ ವರ್ಷವೂ ಅದರ ಜಲಾಂಶ ಕಮ್ಮಿಯಾಗುತ್ತಿದೆ. ಇಂತಹ ಈ ಗ್ರಹದಲ್ಲಿ ಹರಿಯುತ್ತಿರುವ ನೀರನ್ನು ಊಹಿಸಿದ ಲೋವೆಲ್ಲನು ಆಶ್ಚರ್ಯಪೂರಿತ ತರ್ಕವೊಂದನ್ನು ಮಂಡಿಸಿದನು. ನೀರು ಗುರುತ್ವಾಕರ್ಷಣೆಯಿಂದ

ಒಂದು ದಿಕ್ಕಿನಲ್ಲೂ ಪುನಃ ಅದರ ವಿರುದ್ಧ ದಿಕ್ಕಿನಲ್ಲೂ ಹರಿಯಲಾರದು. ಆದುದರಿಂದ ಈ ಹರಿಯುತ್ತಿರುವ ನೀರು ಶಕ್ತಿಯುತ ಯಂತ್ರಗಳ ಮೂಲಕ ನಾಲೆಗಳಲ್ಲಿ ಹರಿಸಲ್ಪಡುತ್ತಿರಬೇಕು, ಮತ್ತು ಇದನ್ನು ಸಾಧಿಸಬೇಕಾದರೆ ಮಂಗಳ ಗ್ರಹವಾಸಿಗಳ ತಾಂತ್ರಿಕಜ್ಞಾನ ಹಾಗೂ ಶಿಲ್ಪ ಚಾತುರ್ಯವು ಭೂಗ್ರಹವಾಸಿಗಳದಕ್ಕಿಂತ ಎಷ್ಟೋ ಪಾಲು ಮೇಲಿರಬೇಕು!

ರಶಿಯದಲ್ಲಿ ಟಿಕೋಪ್ ಮತ್ತು ಕಾಲಿಟಿನ್ ಎಂಬ ಪ್ರತಿಭಾವಂತ ವಿಜ್ಞಾನಿಗಳು ಮಂಗಳ ಗ್ರಹದ ಛಾಯಾಗ್ರಹಣ ಮಾಡಿ, ನಾಲೆಗಳ ಇರುವನ್ನು ದೃಢಪಡಿಸಿದರು. ಈ ನಾಲೆಗಳ ಬಗ್ಗೆ ಅನೇಕ ಕಲ್ಪನೆಗಳು ಹುಟ್ಟಿಕೊಂಡವು. ಕೆಲವರು ಅವನ್ನು ಒಣಗಿದ ನದಿಗಳ ಒಡಲುಗಳೆಂದರು. ಕೆಲವರು ಅವನ್ನು ಒಣಗಿದ ನೆಲದ ಬಿರಿದ ಬಾಯಿಗಳೆಂದರು. ಮತ್ತೆ ಕೆಲವರು ಅವನ್ನು ದಟ್ಟವಾದ ಸಸ್ಯಗಳಿಂದ ಕೂಡಿದ ತೇವ ನೆಲಗಳೆಂದರು. ಈ ಮೂರನೆಯವರ ವಿಚಾರದಲ್ಲಿ ಸ್ವಲ್ಪ ಹುರುಳಿದೆ. ಏಕೆಂದರೆ ಸಸ್ಯಪ್ರದೇಶ ಸುತ್ತಮುತ್ತಲಿನ ಪ್ರದೇಶಗಳಿಗಿಂತ ಕಪ್ಪಗೆ ಕಾಣುತ್ತದೆ. ಅದಲ್ಲದೆ ಈ ಸಮುದ್ರ ಮತ್ತು ನಾಲೆಗಳು ಋತುಮಾನದೊಡನೆ ಬಣ್ಣ ಬದಲಾಯಿಸುತ್ತವೆ! ಮಂಗಳದ ಬೇಸಿಗೆಯಲ್ಲಿ ಕಡು ಹಸುರಾಗಿಯೂ ಶರತ್ಕಾಲದಲ್ಲಿ ತಿಳಿ ರಂಗುಗಳಿಂದಲೂ ಕೂಡಿ ಈ 'ಸಮುದ್ರಗಳು' ಮತ್ತು 'ನಾಲೆ'ಗಳು ಕಾಣಬರುತ್ತವೆ. ಸೋವಿಯಟ್ ವಿಜ್ಞಾನಿ ಟಿಕೋಪ್‌ರವರು ತಮ್ಮ ಪ್ರಕಾಶ ವಿಶ್ಲೇಷಣ ವಿಧಿಗಳಿಂದ ಹಾಗೂ ಸತತ ಪರಿಶೋಧನೆಗಳಿಂದ ಮಂಗಳಗ್ರಹದಲ್ಲಿ ಸಸ್ಯಗಳ ಅಸ್ತಿತ್ವವನ್ನು ಸಾಧಿಸಿದ್ದಾರೆ. ಜೀವನವು ಸರ್ವತೋಮುಖಿಯೆಂದು ಸಾರುವ ಇವರು ಮಂಗಳ ಗ್ರಹದಲ್ಲಿರುವ ಸಸ್ಯ ಹಾಗೂ ಪ್ರಾಣಿಗಳು ಅಲ್ಲಿಯ ವಾತಾವರಣಕ್ಕೆ ಹೊಂದಿಕೊಂಡು ಜೀವಿಸುತ್ತಿವೆಯೆನ್ನುತ್ತಾರೆ.

ಆದರೆ ಅವರ ವಾದವನ್ನು ಒಪ್ಪದಿರುವವರು ಇನ್ನೂ ಅನೇಕರಿದ್ದಾರೆ. ಮಂಗಳವು ನಶಿಸಿ ಹೋಗುತ್ತಿರುವ ಗ್ರಹ. ವಾತಾವರಣದಲ್ಲಿ ಪ್ರಾಣವಾಯುವಿನ ಕೊರತೆ, ಪ್ರಾಣಹಾರಕ ಅಲ್ಟ್ರಾವೈಯೋಲೆಟ್ ಕಿರಣಗಳನ್ನು ನಿವಾರಿಸುವ ಓಜೋನಿನ ಅಭಾವ, ತೇವದ ಅಭಾವ, ಒರಬರುತ್ತಾ ವಾತಾವರಣವು ಹಗುರ ಸ್ಥಿತಿಯನ್ನಪ್ಪುತ್ತಿರುವುದು (ಮಂಗಳ ಗ್ರಹದ ಮೇಲಿನ ಅನಿಲ ಕಣಗಳು ಶೂನ್ಯದತ್ತ ಹಾರಿಹೋಗುತ್ತಿವೆ. ಏಕೆಂದರೆ ಅವುಗಳನ್ನು ಆಕರ್ಷಿಸಿ ಹಿಡಿದಿರಲು ಸಾಕಾದಷ್ಟು ಗುರುತ್ವಾಕರ್ಷಣ ಶಕ್ತಿ ಮಂಗಳಗ್ರಹಕ್ಕಿಲ್ಲ!)—ಇವು ಮಂಗಳ ಗ್ರಹವನ್ನು ಭಗ್ನಾವಶೇಷದ ಗ್ರಹವೋ ಎಂಬ ಅನುಮಾನ ಬರುವಂತೆ ಮಾಡುತ್ತವೆ. ಇವೆಲ್ಲಾ ಇದ್ದರೂ ಈ ಗ್ರಹದಲ್ಲಿ ಪ್ರಾಣಿಗಳಿಲ್ಲದಿದ್ದರೂ ಸಸ್ಯ ಸಂಪತ್ತಿದೆಯೆಂಬುದನ್ನು ಅನೇಕರು ಒಪ್ಪುತ್ತಾರೆ. ಏಕೆಂದರೆ ಭೂಗ್ರಹದ ಮೇಲೆ ಜೀವನಕ್ಕೆ ಎಡೆಯಿತ್ತ ಸ್ಥಿತಿಗಳೆಲ್ಲಾ ಮಂಗಳ ಗ್ರಹದಲ್ಲಿವೆ. ಮಂಗಳ ಗ್ರಹದಲ್ಲಿ ನಮ್ಮಂತೆ ಜನಗಳಿರುವರೋ ಇಲ್ಲವೋ ಎಂಬುದು ತಿಳಿಯುವುದು ಆ ಗ್ರಹಕ್ಕೆ ಹೋದಾಗಲೇ!

ಸೋವಿಯಟ್ ಖಗೋಲ ಶಾಸ್ತ್ರಜ್ಞ ಪ್ರೊಫೆಸರ್ ಜಿಗೆಲ್ಲರು ಮಂಗಳ ಗ್ರಹದಲ್ಲಿ ಬುದ್ಧಿಶಾಲಿ ಪ್ರಾಣಿಗಳ ಬಾಹುಳ್ಯವಿದೆಯೆಂದು ನಂಬುತ್ತಾರೆ. ನಾಲೆಗಳ ಪ್ರತಿಭಾಪೂರ್ಣ ರಚನೆಯಂತೂ ಅಮಿತ; ಆದರೆ ಇವರ ಅಸ್ತಿತ್ವದ ಬಗ್ಗೆ ಇನ್ನೂ ಅಕಾಟ್ಯ ಪ್ರಮಾಣ ಈ ಗ್ರಹದ ಸುತ್ತಲೂ ತಿರುಗುತ್ತಿರುವ ಉಪಗ್ರಹಗಳಿಂದ ದೊರಕಿದೆ. ಈ ಉಪಗ್ರಹಗಳ ಸಂಖ್ಯೆ ಎರಡು; ಹೆಸರು ಫೋಬೋಸ್ (ಅರ್ಥ = ಭಯ) ಮತ್ತು ಡೈಮೋಸ್ (ಅರ್ಥ = ಸಂಕಟ)! ಪ್ರೊಫೆಸರ್ ಜಿಗೆಲ್ಲರ ಪ್ರಕಾರ ಇವು ಕೃತಕ ಉಪಗ್ರಹಗಳು.

ಮಂಗಳಗ್ರಹಕ್ಕೆ ಎರಡು ಉಪಗ್ರಹಗಳಿರಬೇಕೆಂದು ಊಹಿಸಿದವರಲ್ಲಿ ಮೊದಲಿಗ ಕೆಪ್ಲರ್. ಎರಡು ಶತಮಾನಗಳ ವರೆಗೆ ಖಗೋಲ ಶಾಸ್ತ್ರಜ್ಞರು ಅವುಗಳ ಶೋಧ ಮಾಡಿದರು. ತಮ

ರಾಕ್ಷಸ ದೂರದರ್ಶಕ ಯಂತ್ರಗಳ ಮೂಲಕ, ಕ್ಷೀಣ ಪ್ರಕಾಶವನ್ನು ಚೆಲ್ಲುವ ವರುಣಗ್ರಹವನ್ನು ಕಂಡುಹಿಡಿದ ಹರ್ಷೆಲ್ ಮತ್ತು ಲಾಸೆಲ್ಲರು ಕೂಡ ಫೋಬೋಸ್ ಮತ್ತು ಡೈಮೋಸ್‌ಗಳನ್ನು ಕಾಣಲು ಅಸಮರ್ಥರಾಗಿದ್ದರು. ೧೮೬೨ ರ ಹೊತ್ತಿಗೆ ಮಂಗಳಕ್ಕೆ ಉಪಗ್ರಹಗಳಿಲ್ಲವೆಂಬುದು ಖಚಿತವಾಗಿತ್ತು. ಆದರೆ ೧೮೭೭ ರ ಅತ್ಯನುಕೂಲ ವಿರೋಧದ ವರ್ಷ ಅನೇಕ ಖಗೋಲ ಶಾಸ್ತ್ರಜ್ಞರು ಏಕಕಾಲದಲ್ಲಿ ಈ ಉಪಗ್ರಹಗಳನ್ನು ಹಟಾತ್ತನೆ ಗುರುತಿಸಿದರು. ಅಂದಿನಿಂದ ಈ ಗ್ರಹಗಳು ಹರ್ಷೆಲ್ ಮತ್ತು ಲಾಸೆಲ್ಲರ ದೂರದರ್ಶಕ ಯಂತ್ರಕ್ಕಿಂತ ಬಹಳ ಕಡಿಮೆ ಶಕ್ತಿಯ ದೂರದರ್ಶಕ ಯಂತ್ರಗಳಿಂದಲೂ ಗುರುತಿಸಲ್ಪಡುತ್ತಿವೆ. ಜಿಗೆಲ್ಲರು ಹೇಳುತ್ತಾರೆ— ಈ ಉಪಗ್ರಹಗಳನ್ನು ೧೮೬೨ ಮತ್ತು ೧೮೭೭ ರ ಮಧ್ಯೆ ಮಂಗಳ ವಾಸಿಗಳು ತೇಲಿಬಿಟ್ಟಿದ್ದಾರೆಂದು! ಈ ವಿಷಯದಲ್ಲಿ ಮಾನವರಿಗಿಂತ ಮಂಗಳಗ್ರಹವಾಸಿಗಳು ನೂರು ವರುಷ ಮುಂದಿದ್ದಾರೆಂದಾಯಿತು!


ಈ ಉಪಗ್ರಹಗಳು ವಿಶ್ವವಿಜ್ಞಾನ (Cosmology)ದ ಬಿಡಿಸಲಾರದ ಒಗಟುಗಳಾಗಿವೆ. ಅವು ಬಲು ಚಿಕ್ಕವಾಗಿವೆ. ಹೆಚ್ಚು ಕಮ್ಮಿ ವೃತ್ತಾಕಾರವನ್ನನುಸರಿಸಿ, ಮಂಗಳ ಮಧ್ಯರೇಖೆಯ ಸಮ ಕ್ಷೇತ್ರದಲ್ಲಿ (Equatorial plane) ಇವುಗಳ ಪಥವಿದೆ. ಇವುಗಳು ಚಂದ್ರನು ಭೂಮಿಯಿಂದ ಬೇರ್ಪಟ್ಟಂತೆ, ಮಂಗಳನಿಂದ ಬೇರ್ಪಟ್ಟಿಲ್ಲವೆಂಬುದನ್ನು ವಿಶ್ವವಿಜ್ಞಾನಿಗಳು ಒಪ್ಪುತ್ತಾರೆ. ಹಾಗಾಗಿದ್ದರೆ ಅವುಗಳ ತೂಕ ಹಾಗೂ ಗಾತ್ರ ಇನ್ನೂ ಹೆಚ್ಚಿರಬೇಕಿತ್ತು. ಮತ್ತು ಫೋಬೋಸಿಗೆ ಈಗಿರುವ ವೇಗ ಇರುತ್ತಿರಲಿಲ್ಲ. ಫೋಬೋಸಿನ ವೇಗ ಮಂಗಳ ಗ್ರಹದ ವೇಗಕ್ಕಿಂತ ಹೆಚ್ಚಾದುದೆಂಬುದು ಗಮನಾರ್ಹ. ಬಾಹ್ಯಗಗನದಿಂದೇನಾದರೂ ಇವುಗಳು ಸೆರೆಹಿಡಿಯಲ್ಪಟ್ಟವಾದುದಾದರೆ ಇವುಗಳ ಪಥವು ಇನ್ನೂ ಉದ್ದವಾಗಿರುತ್ತಿತ್ತು. ಮತ್ತು ಭಿನ್ನ ಸಮಕ್ಷೇತ್ರದಲ್ಲಿರುತ್ತಿತ್ತು. ಗಗನದಲ್ಲಿ ಹರಡಿದ್ದ ಚಿಕ್ಕಚಿಕ್ಕ ಕಣಗಳು ಕೂಡಿ ಆದವು ಎನ್ನು



ರಶಿಯದ ವಿಜ್ಞಾನಿ ಟಿಕೋವರು ೧೯೦೯ರಲ್ಲಿ ತೆಗೆದ ಮಂಗಳನ ಛಾಯಾಚಿತ್ರದ ಪ್ರತಿಕೃತಿ

ವರೋ? ಹಾಗಾಗಿದ್ದಲ್ಲಿ ಈ ವೃತ್ತಾಕಾರದ ಪಥವೇ ಇರುತ್ತಿರಲಿಲ್ಲ.

ಮಂಗಳ ನಿವಾಸಿಗಳಿಂದ ತೇಲಿಸಲ್ಪಟ್ಟ ಕೃತಕ ಉಪಗ್ರಹಗಳೇ ಇವಾದ್ದರಿಂದಲೇ ಈ ವೈಪರೀತ್ಯಗಳಿವೆಯೆಂದು ಜಿಗೆಲ್ಲರ ವಾದ. ಈ ವಾದದ ಜನ್ಮ ಅಮೇರಿಕದ ಗೆರ್ಡ್ ಎಂಬ ವಿಜ್ಞಾನಿಯಿಂದ ೧೯೫೧ ರಲ್ಲಾಯಿತು. ಪ್ರೊಫೆಸರ್ ಷ್ಲೊಕವೋಸ್ಕಿಯವರು ೧೯೫೮ ರಲ್ಲಿ ಇದನ್ನು ಪುಷ್ಟೀಕರಿಸಿದರು. ಪ್ರೊಫೆಸರ್ ಜಿಗೆಲ್ಲರು ತಮ್ಮ ಸಮಾಧಾನಕ್ಕೆ ಎರಡು ತತ್ವಗಳನ್ನು ತೆಗೆದುಕೊಂಡರು. ಉಪಗ್ರಹಗಳನ್ನು ಒಂದು ಗ್ರಹದ ಮಧ್ಯರೇಖೆಯ ಸಮಕ್ಷೇತ್ರವನ್ನೇ ಹೊಂದುವಂತೆ ಹಾರಿಸಿದರೆ ಅವುಗಳನ್ನು ಹಾರಿಸಲು ಕಡಿಮೆ ಒತ್ತಡ ಸಾಲುತ್ತದೆ ಎಂಬುದು ಎಲ್ಲ ಭೂಗತಿ ಶಾಸ್ತ್ರಜ್ಞರಿಗೆ ಗೊತ್ತಿದೆ. ಫೋಬೋಸ್ ಮತ್ತು ಡೈಮೋಸ್ ಉಪಗ್ರಹಗಳ ಪಥವನ್ನು ಪರಿಶೀಲಿಸಿದಲ್ಲಿ, ಅಲ್ಲಿ ಈ ಸುಲಭ ತತ್ವದ ಉದ್ದೇಶಪೂರ್ಣ ಪಾಲನೆಯಾಗಿರಬೇಕೆಂಬ ಸಂಶಯ ಎಲ್ಲರಿಗೂ ಬರುತ್ತದೆ. ಎರಡನೆಯದಾಗಿ, ಮೊದಲೇ ಹೇಳಿದಂತೆ ಫೋಬೋಸ್ ಉಪಗ್ರಹ ಸುತ್ತುತ್ತಾ ಸುತ್ತುತ್ತಾ ವೇಗವನ್ನು ಹೆಚ್ಚಿಸಿಕೊಳ್ಳುತ್ತಿದೆ. ಇದು ಉಪಗ್ರಹವು ಟೊಳ್ಳಾಗಿದ್ದಲ್ಲಿ ಮಾತ್ರ



ಮಂಗಳಗ್ರಹದ 'ನಾಲೆ'ಗಳು (ಲೋವೆಲ್)

ಸಾಧ್ಯ. ಈ ಗ್ರಹದ ಹುಟ್ಟು ಸ್ವಾಭಾವಿಕವಾಗಿದ್ದಲ್ಲಿ, ಇದು ಸಾಧ್ಯವಾಗುತ್ತಿರಲಿಲ್ಲ. ಪಾಲಿಷ್ ಹಾಕಲ್ಪಟ್ಟ ಕನ್ನಡಿಯಂತಿರುವ ಮೇಲ್ಮೈ ಇದ್ದಿದ್ದರೆ ಇವುಗಳ ವ್ಯಾಸ ಒಂದು ಅಥವಾ ಎರಡು ಕಿಲೋಮೀಟರುಗಳಿಗಿಂತ ಹೆಚ್ಚಿರಲಾರದು. ತಾಂತ್ರಿಕ ಜ್ಞಾನ ಪರಿಣತರಿಗೆ ಇಂತಹ ದೊಡ್ಡ ಉಪಗ್ರಹಗಳನ್ನು ಹಾರಿಸುವುದು ಕಷ್ಟತರವಲ್ಲ.

ಮಂಗಳ ಗ್ರಹದ ನಾಲೆಗಳು ಒಂದನ್ನೊಂದು ಸಂಧಿಸುವ ಸ್ಥಳದಲ್ಲಿ ಚಿಕ್ಕ ಕಪ್ಪು ಪ್ರದೇಶಗಳು ಕಂಡುಬರುತ್ತವೆ. ವಿಜ್ಞಾನಿಗಳು ಇವನ್ನು ಓಯಸಿಸ್‌ಗಳಾಗಿರಬಹುದೆಂದೂ ಮತ್ತು ಅಲ್ಲಿಯೇ ಮಂಗಳಗ್ರಹ ವಾಸಿಗಳ ನಗರಗಳಿರಬಹುದೆಂದೂ ಊಹಿಸುತ್ತಾರೆ. ಏಕೆಂದರೆ ಈ ಓಯಸಿಸ್‌ಗಳು ಅಳಿಸಿ ಹೋದ ಮೇಲೂ ಕಪ್ಪು ಗುರುತಿನ ಮಚ್ಚೆಗಳು ಕಾಣಬರುತ್ತವೆ. ನೀರಿನ ಸರಬರಾಜು ಮತ್ತು ನೀರಾವರಿಯ ವ್ಯವಸ್ಥೆಯನ್ನು ದೃಢಪಡಿಸಲೋ ಏನೋ, ಸುಗ್ಗಿಯ ಕಾಲದಲ್ಲಿ ನಾಲೆಗಳು ಜೋಡಿಜೋಡಿಯಾ ಕಾಣುತ್ತವೆ. ಇಂತಹ ವೈಜ್ಞಾನಿಕ ವಿಧಾನಗಳಿಂದ ಕೂಡಿದ ಈ ನಾಲೆಗಳು ಬುದ್ಧಿವಂತ ಪ್ರತಿಭಾವಂತ ಮಂಗಳವಾಸಿಗಳ ನಿರ್ಮಾಣವ ಎನ್ನುವುದರಲ್ಲಿ ತಪ್ಪೇನಿದೆ?

ಇದಕ್ಕಿಂತ ಆಶ್ಚರ್ಯಕಾರಕ ಸುದ್ದಿ ಇನ್ನೊಂ ದಿದೆ. ಮಂಗಳ ಗ್ರಹದ ಮೇಲೆ ಆಗಾಗ ಕಣ ಕೋರೈಸುವ ಬೆಳಕೂ ಅನಂತರ ಮೋಡ ರೂಪೂ ಕಾಣಬರುತ್ತದೆ. ಇದು ನಮ್ಮ ಪರಮಾಣ ವಿಸ್ಫೋಟಗಳ ಗತಿವಿಧಿಗಳನ್ನು ಹೋಲುತ್ತದ ೧೯೩೭ ರಿಂದ ಈ ಲಕ್ಷಣಗಳು ಆಗಾಗ್ಗೆ ಕಂಡ ಬರುತ್ತಿವೆ. ಹಾಗಾದರೆ ಮಂಗಳವಾಸಿಗಳೂ ಪ ಮಾಣು ವಿಜ್ಞಾನದಲ್ಲಿ ನಮಗಿಂತ ಮುಂದುವರಿ ದಿದ್ದಾರೆಂದು ಸಂಶೋಧಣವೇ? ಇದನ್ನು ಭವಿ ಮಾತ್ರ ಹೇಳಬಲ್ಲದು. ಆದರೆ ಈ 'ಭವಿಷ 'ವರ್ತಮಾನ'ವಾಗುವ ಸಮಯ ಹತ್ತಿರ ಬರು ತ್ತಿದೆಯೆಂದು ಬಿಗಿಲ್ಲರು ಹೇಳುತ್ತಾರೆ.

ಈ ಕಲ್ಪನೆಗಳು, ಊಹೆಗಳು, ವಾದಗಳ ಮತ್ತು ಸಿದ್ಧಾಂತಗಳನ್ನು ಓದಿ ಯೋಚಿಸುತ್ತಾ ಹೋತಲ್ಲಿ ಮಾನವನು ಭೂಮಿಯನ್ನು ಬಿಟ್ಟು ಹಾ ಮಂಗಳ ಗ್ರಹವನ್ನು ಸೇರುವುದಕ್ಕಿಂತಲು ಮಂಗಳಗ್ರಹವಾಸಿಯು ತನ್ನ ಗ್ರಹವನ್ನು ಬಿಟ ಹಾರಿ ಈ ಗ್ರಹಕ್ಕೆ ಸಂದರ್ಶನವೀಯುವುದ ತೀರ ಸ್ವಾಭಾವಿಕವೆಂದೆನಿಸುವುದಿಲ್ಲವೇ? ಅವ ಒಬ್ಬರೋ ಇಬ್ಬರೋ ಬಂದು ಸ್ನೇಹಸಂದೇ ವನ್ನು ಕೊಟ್ಟರೆ ಸರಿ. ಅದುಬಿಟ್ಟು ಹನುಮಂ ಅಥವಾ ಅಂಗದನಂತೆ ಸಮರ ಸಂದೇಶವನ ಕೊಟ್ಟರೆ, ಈ ಯುದ್ಧದೇವತೆಯನ್ನು ಎದುರಿ ಸುವ ಶಕ್ತಿ ಭೂಗ್ರಹವಾಸಿಗಿದೆಯೆ?

---

"ರೈತನಿಗೂ ರೈತನ ಎತ್ತಿಗೂ ಪೆನ್‌ಶನ್ ಕೊಡುವವನು ಯಮರಾಜ ಮಾತ್ರ."

"ಸಾಲವೆಂದರೆ— ಒಮ್ಮೆ ಬಂದ ಮೇಲೆ ಪುನಃ ಹೊರಟು ಹೋಗುವ ಸುದ್ದಿ ಕೂಡ ತೆಗೆಯದ ಅತಿಥಿಯಂತೆ."

—ಪ್ರೇಮಚಂದ

(ಕಳಿಸಿದವರು: ಗೋ. ರಾ. ನೆಂಟೇಕರ)



ನಿಮ್ಮ ಟಾರ್ಚ್‌ನಲ್ಲಿ
ಎಸ್ಟ್ರೆಲಾ
ರಾತ್ರಿಯನ್ನು ದಿನವಾಗಿ ಮಾರ್ಪಡಿಸುತ್ತದೆ
112
ESTRELA
YOUR GUIDE
IN DARKNESS
ESTRELA
ಎಸ್ಟ್ರೆಲಾ
ಮತ್ತು ಬ್ಯಾಟರಿಗಳು
ಟಾರ್ಚ್ ಮತ್ತು ಬಲ್ಬುಗಳು


EB.G.17

# ಹೊಲಿಗೆಯಂತ್ರದ ಜನಕ

ಕೋಟ್ಯಂತರ ಮಹಿಳೆಯರ ಶ್ರಮವನ್ನಾತ ಉಳಿಸಿದ ;
ಆದರೆ ಅವನ ಹೆಂಡತಿಗೆ ಅದರ ಸೌಲಭ್ಯ ದೊರಕಲಿಲ್ಲ.

ಆನಂದ ವರ್ಟಿ

ಬೋಸ್ಟನ್ ನಗರದ ಡೆವಿಸ್ ಎಂಬಾತನ ಆಫೀಸಿನಲ್ಲಿ ಆ ದಿನ ಏನೋ ಚರ್ಚೆ ನಡೆದಿತ್ತು. ಇಬ್ಬರು ಸಂಶೋಧಕರೊಡನೆ ಡೆವಿಸ್ ಏನೇನೋ ವಾದ ಹಾಕುತ್ತಿದ್ದ. ಅವರು ತಾವು ತಂದ ಯಂತ್ರದ ಚಿತ್ರಗಳನ್ನು ತೋರಿಸಿ ಅವನ ಸಲಹೆಯನ್ನು ಕೇಳುತ್ತಿದ್ದರು.

"ಇದು ನೋಡಿರಿ, ಡೆವಿಸ್. ಇದರಿಂದ ಮೀನುಗಾರರಿಗೆ ಅದೆಷ್ಟು ಸಹಾಯವಾಗಬಹುದು. ಜಾಳಿಗೆಗಳನ್ನು ಹೆಣೆಯುತ್ತ ಅವರು ಕೂತುಕೊಳ್ಳಬೇಕಾಗಿಲ್ಲ. ಇದರಿಂದ ಅವರ ಕೆಲಸ ಅರ್ಧದಷ್ಟು ಹಗುರಾಗಬಹುದು."

"ಹಂ; ಅದು ನಿಜ," ಡೆವಿಸ್ ಅಂದ. "ಆದರೆ ಮೀನುಗಾರರೆಷ್ಟು ಜನ? ನಾನೊಂದು ಹೇಳಲೇ?"

"ಏನು ?"

"ಅರಿವೆಗಳನ್ನು ಸುಲಭವಾಗಿ ಹೊಲಿಯಲು ಬರುವಂತಹ ಯಂತ್ರವನ್ನು ಯಾರಾದರೂ ಶೋಧಿಸಿದರೆ ಅದೆಷ್ಟು ಚೆನ್ನಾಗಬಹುದು ! ವಸ್ತ್ರಗಳ ಗಿರಣಿಗಳಂತೂ ಪ್ರತಿ ದಿನ ಹೆಚ್ಚುತ್ತಲಿವೆ. ಜನರಲ್ಲಿಯೂ ಹೊಸ ಹೊಸ ತರತರದ ಅರಿವೆಗಳನ್ನು ಧರಿಸುವ ಹುಚ್ಚು ಬೆಳೆಯುತ್ತಲಿದೆ. ಅಂತಹ ಯಂತ್ರವನ್ನು ಯಾರಾದರೂ ತಯಾರಿಸಿದರೆ ಕ್ರಾಂತಿಯಾಗಿಬಿಡುವುದು ನೋಡಿರಿ."

ಡೆವಿಸ್‌ನ ಆಫೀಸಿನ ಕದವು ಅರ್ಧ ತೆರೆದಿತ್ತು. ನಿಗುರಿದ ಎರಡು ಕಿವಿಗಳು ಆ ಸಂಭಾಷಣೆಯನ್ನು ಆತುರದಿಂದ ಆಲಿಸುತ್ತಿದ್ದವು. ಡೆವಿಸ್‌ನ ಆ ಶಬ್ದಗಳು ಆ ಕಿವಿಗಳ ಮೇಲೆ ಬಿದ್ದದ್ದೇ ತಡ, ನೇರವಾಗಿ ಅವು ತಲೆಯನ್ನು ಹೊಕ್ಕವು. ಎಲಿಯಾಸ್ ಹೋವ್‌ನ ಮೈ ಜುಮ್ಮೆಂದಿತು. ಎಂತಹ ಸ್ಫೂರ್ತಿದಾಯಕವಾದ ಕಲ್ಪನೆ ಇದು ! ಅವನ ಸಂಶೋಧಕ ಬುದ್ಧಿಗೆ ಅದೊಂದು ಆಹ್ವಾನವಾಗಿತ್ತು. ಎಲಿಯಾಸ್‌ನ ಕಣ್ಣಿಗೆ ಕಣ್ಣು ತಾಗದಾಯಿತು. ಹಸಿವೆಯೂ ಹಿಂಗಿದಂತಾಯಿತು.

ಎಲಿಯಾಸ್ ಹೋವ್ ಡೆವಿಸ್‌ನ ಸಹಾಯಕ. ಸ್ಪೆನ್ಸರ್ ಎಂಬ ಊರಿನಲ್ಲಿಯ ಒಬ್ಬ ಬಡ ಒಕ್ಕಲಿಗನ ಮಗ. ಶಾಲೆ ಕಲಿಯಲು ಕೈಯಲ್ಲಿ ಹಣವಿಲ್ಲದ್ದರಿಂದ ಚಿಕ್ಕವನಿದ್ದಾಗಲೇ ಶಿಕ್ಷಣವನ್ನು ಬಿಟ್ಟುಕೊಡಬೇಕಾಯಿತು ಅವನಿಗೆ. ಹೊಟ್ಟೆಹೊರಕೊಳ್ಳುವುದೇ ಕಠಿಣ ಪ್ರಶ್ನೆಯಾಗಿದ್ದಾಗ ಶಿಕ್ಷಣವೆಲ್ಲಿಂದ ಬಂತು? ಆರು ವರ್ಷ ಪ್ರಾಯದವನಿದ್ದಾಗಲೇ ತಂದೆಯ ಜೊತೆ ಹೊಲದಲ್ಲಿ ಕೆಲಸ ಮಾಡಬೇಕಾಯಿತು. ಆದರೆ ಅಲ್ಲಿಯೂ ಹೆಚ್ಚು ಉತ್ಪನ್ನವಿದ್ದಿಲ್ಲ. ಅದಕ್ಕಾಗಿಯೇ ಬೋಸ್ಟನ್ ನಗರದಲ್ಲಿ ಡೆವಿಸ್‌ನ ಕಾರ

ಖಾನೆಗೆ ಬಂದು ಸೇರಿದ್ದ. ತನ್ನ ಒಳ್ಳೆಯ ಗುಣಗಳಿಂದಲೂ ಕೆಲಸ ಮಾಡುವ ಹುಮ್ಮಸ್ಸಿನಿಂದಲೂ ಮೇಲೆ ಏರುತ್ತ ಅವನ ಸಹಾಯಕನ ಸ್ಥಾನಕ್ಕೆ ಏರಿದ್ದ. ಆದರೆ ಅವನ ಇಪ್ಪತ್ತೆರಡು ವರ್ಷ ವಯಸ್ಸಿನ ತರುಣ ಮಿದುಳಿಗೆ ಹಿಡಿದ ಹುಚ್ಚು ಈ ಎಲ್ಲ ಸೌಲಭ್ಯವನ್ನೂ ಮರೆಯಿಸುವಂತೆ ಮಾಡಿತು.

ಡೆವಿಸ್ ನೌಕರಿ ಬಿಟ್ಟ. ತನ್ನ ಮನೆಯಲ್ಲಿಯೇ ಸಣ್ಣದೊಂದು ಪ್ರಯೋಗಶಾಲೆಯನ್ನು ನಿರ್ಮಿಸಿ ಯಂತ್ರದ ಜೋಡಣೆಗೆ ಸುರುಮಾಡಿದ. ದುರ್ದಮ್ಯವಾದ ಆಶೆಯು ಅವನನ್ನು ಹಾಗೆ ಕೆಲಸ ಮಾಡಲು ಪ್ರೇರೇಪಿಸಿತು. ಎಷ್ಟೋ ಸಾರೆ ಯಶಸ್ಸು ಕೈಯಲ್ಲಿ ಬಂದ ಹಾಗೆ ಇಡಿಯ ಯಂತ್ರವು ತಯಾರಾಗುತ್ತಿತ್ತು. ಆನಂದದಿಂದ ಎಲಿಯಾಸ್ ಅದನ್ನು ತಿರುಗಿಸಲು ಸುರು ಮಾಡಿದರೆ ಮಾತ್ರ, ಕಿಡಿಗೇಡಿ ಹುಡುಗನಂತೆ ಏನಾದರೂ ಹೂಟ ಹೂಡಿ ಅವನನ್ನು ದಣಿಸಿಬಿಡುತ್ತಿತ್ತು. ತಿಂಗಳುಗಳು ಉರುಳಿದವು. ಕೈಯಲ್ಲಿಯ ಕಾಸು ಕರಗುತ್ತ ನಡೆಯಿತು. ಹೆಂಡತಿ ಮಕ್ಕಳ ಹಸಿವೆಯು ಅವನನ್ನು ಕಾಡಲು ಪ್ರಾರಂಭಿಸಿತು.

ಒಂದು ದಿನ ಹೋವ್ ಹೀಗೆಯೇ ರಸ್ತೆಯ ಮೇಲಿಂದ ನಡೆದಿದ್ದ. ಒಂದು ಮನೆಯಿಂದ ಬರುವ 'ಖಟ್ ಖಡ್...ಖಟ್ ಖಡ್...' ಎಂಬ ಸದ್ದು ಅವನನ್ನು ಆಕರ್ಷಿಸಿತು. ತಿಳಿಯದೆಯೆ ಅವನ ಕಾಲುಗಳು ಆ ಮನೆಯತ್ತ ನಡೆದವು. ಕೆಲಸದಲ್ಲಿ: ಮಗ್ನನಾಗಿದ್ದ ಮುಗ್ಗದವನನ್ನು ನೋಡುತ್ತ ಅವನು ಅಲ್ಲಿ ನಿಂತುಬಿಟ್ಟ.

ಮುಗ್ಗದವನ ಒಂದೊಂದು ಎಳೆತಕ್ಕೆ ಲಾಡಿ ಮುಂದೆ ಹಾರುತ್ತಿತ್ತು. ಪುನಃ ಹಿಂದೆ ಜಿಗಿಯುತ್ತಿತ್ತು. ಹೋವ್ ಅಲ್ಲಿ ಎಷ್ಟು ಹೊತ್ತು ನಿಂತಿದ್ದನೋ! ಅವನ ಮನಸ್ಸಿನಲ್ಲಿ ಆಗ ತಾನು ತಯಾರಿಸುತ್ತಿದ್ದ ಯಂತ್ರದ ಒಗಟಿಗೆ ಲಾಡಿಯ ಆ ಕುಣಿತ ಪರಿಹಾರವನ್ನು ಸೂಚಿಸತೊಡಗಿತು. ನಿಂತಲ್ಲಿಯೇ ಹೋವ್ ಆನಂದದಿಂದ ನಕ್ಕ.

"ಯಾರವ ಅಲ್ಲಿ; ಯಾಕೆ! ನಗುತ್ತೀಯೋ?" ಮುಗ್ಗದವನು ಸಿಟ್ಟಾಗಿ ಕೇಳಿದ.

"ಏನಿಲ್ಲ, ಏನಿಲ್ಲ" ಎಂದು ಹೋವ್ ಅಲ್ಲಿಂದ ಓಡಿದ.

ಮುಗ್ಗದವನು ಸಿಟ್ಟಿನಿಂದೆದ್ದು ಧಡಾರನೇ ಕಿಟಕಿಯ ಕದ ಮುಚ್ಚಿಕೊಂಡ.

ಆ ದಿನ, ಆ ರಾತ್ರಿ ಹೋವ್ ತನ್ನನ್ನೇ ಮರೆತು ಕೆಲಸ ಮಾಡಿದ. ಹೊಸ ಯುಗದ ಒಬ್ಬ ರಕ್ಕಸ ಪುತ್ರ ಆ ದಿನ ಅವನ ಮನೆಯಲ್ಲಿ ಜನ್ಮ ತಾಳಿದ. ಮಿಂಚು ಸೆಳೆದಾಡಿದಂತೆ ಅದರ ಬೆರಳುಗಳಲ್ಲಿಯ ಸೂಜಿಗಳು ಕುಣಿಕುಣಿದು, ಮಣಿಮಣಿದು ಸುಂದರವಾಗಿ, ಶಿಸ್ತಾಗಿ, ಗಟ್ಟಿಯಾಗಿ ಹೊಲಿಗೆಯನ್ನು ಹಾಕುತ್ತಿದ್ದವು.

ಇದನ್ನು ನೋಡಿದ ಹೋವ್‌ನ ಗೆಳೆಯ ಫಿಶರ್‌ನೆಂಬುವನು ಬಹಳ ಸಂತುಷ್ಟನಾಗಿ ಅಂದ, "ಎಲಿಯಾಸ್, ನೀನು ಹೊಲಿದ ಈ ಅರಿವೆ ಹರಿಯಬಹುದು, ಆದರೆ ನಿನ್ನ ಹೊಲಿಗೆ ಮಾತ್ರ ಚಿರಂಜೀವಿ."

ಹೋವ್‌ನಿಗೆ ಸ್ವರ್ಗ ಎರಡೇ ಬೆರಳು ದೂರ ಇದ್ದಂತಾಯಿತು.

"ಎಲಿಯಾಸ್, ಹೀಗೆ ಮಾಡೋಣ. ಜಾಹಿರಾತಿನ ಈ ಯುಗದಲ್ಲಿ ನಮ್ಮ ವಸ್ತುವಿನ ಪ್ರದರ್ಶನ ಮಾಡಿದ ಹೊರತು ಅದಕ್ಕೆ ಯಾರೂ ಲಕ್ಷ್ಯಕೊಡುವುದಿಲ್ಲ. ನಾನೊಂದು ಒಳ್ಳೆಯ ಯುಕ್ತಿ ಯೋಜಿಸುತ್ತೇನೆ. ನಿನ್ನ ಈ ಯಂತ್ರದ ಬಗ್ಗೆ ನಗರದಲ್ಲಿಯ ಜನರೆಲ್ಲರೂ ಮಾತಾಡುವಂತೆ ಮಾಡುತ್ತೇನೆ."

ಕೆಲವೇ ದಿನಗಳಲ್ಲಿ ಬೋಸ್ಟನ್ ನಗರದಲ್ಲಿ ಹಂಚಲಾದ ಜಾಹಿರಾತುಗಳಿಂದ ಜನರ ಉತ್ಸುಕತೆ, ಕುತೂಹಲ ಕೆರಳಿತು. ದರ್ಜಿಗಳಿಗೂ ಯಂತ್ರಕ್ಕೂ ಸ್ಪರ್ಧೆ! ಅದೆಂತಹ ಯಂತ್ರವಿರಬಹುದು ಅದು? ಯಂತ್ರದಿಂದ ಹೊಲಿಯಬಹುದು ಎಂಬ ಕಲ್ಪನೆಯೇ ಇರದ ಆ ಜನರು ಅಚ್ಚರಿಗೊಂಡರು. ನಿಜವಾಗಿಯೂ ಯಂತ್ರದಿಂದ ಈ ಕೆಲಸ ಆಗುವುದಾದರೆ ಅದೆಷ್ಟೋ ಹಗುರಾಗಬಹುದಲ್ಲವೇ?

ಸ್ಪರ್ಧೆಯ ದಿನ ಜನರು ಕಿಕ್ಕಿರಿದು ತುಂಬಿದ್ದರು. ಬೋಸ್ಟನ್ ನಗರದಲ್ಲಿಯೇ ನಿಪುಣರಾದ ಐದು ಜನ ಹೊಲಿಗೆಗಾರ್ತಿಯರು ಈ ಯಂತ್ರದೊಡನೆ ಸ್ಪರ್ಧಿಸಲು ಮುಂದೆ ಬಂದರು. ಗಣ್ಯರಾದ ಐದು ಜನ ಗೃಹಸ್ಥರನ್ನು ನ್ಯಾಯಾಧೀಶರೆಂದು ನೇಮಿಸಲಾಯಿತು. ಹೋವ್ ಸ್ವತಃ ಯಂತ್ರದ ಮೇಲೆ ಕುಳಿತುಕೊಂಡ. ಎಲ್ಲರಿಗೂ ಒಂದೇ ಪ್ರಕಾರದ ಅರಿವೆಯನ್ನು ಕೊಟ್ಟರು.

ಸಿಳ್ಳು ಹೊಡೆಯಲಾಯಿತು. ಯಂತ್ರದ ಕಡೆ ಮಾತ್ಸರ್ಯದ ದೃಷ್ಟಿಗಳನ್ನು ಬೀರಿ ಆ ಹೊಲಿಗೆಗಾರ್ತಿಯರು ಹೊಲಿಯಲು ಸುರುವು ಮಾಡಿದರು. ಭರಭರನೆ ಅವರ ಬೆರಳುಗಳು ಕೆಲಸ ಮಾಡತೊಡಗಿದವು. ಇತ್ತ ಹೋವ್‌ನ ಯಂತ್ರ ಮೆಲ್ಲನೆ ಆರಂಭವಾಯಿತು. 'ಚಟ್‌ಪಟ್, ಚಟ್‌ಪಟ್' ಸದ್ದು ಏರುತ್ತೇರುತ್ತ ಹೋಗಿ ಶ್ರುತಿಯನ್ನು ಹಿಡಿಯಿತು. ಏಳು ಮಿನಿಟುಗಳಲ್ಲಿ ಹೋವ್ ಆ ಅರಿವೆಯ ತುಂಡನ್ನು ನ್ಯಾಯಾಧೀಶರಿಗೊಪ್ಪಿಸಿದ. ಹೊಲಿಗೆಗಾರ್ತಿಯರು ಮೂವತ್ತೈದು ನಿಮಿಷಗಳ ನಂತರ ಮುಗಿಸಿ ತೋರಿಸಿದ ಹೊಲಿಗೆ ಹೋವ್‌ನ ಹೊಲಿಗೆಯ ಮುಂದೆ ಏನೂ ಇರಲಿಲ್ಲ.

ಇನ್ನು ತನ್ನ ಭಾಗ್ಯ ತೆರೆಯಿತೆಂದು ಹೋವ್‌ನಿಗೆನಿಸಿತು. ಆದರೆ ಯಾರಿಗೂ ಕಾಣದ ಹಾಗೆ ದೈವವು ಅವನ ಹಿಂದೆ ನಗುತ್ತ ನಿಂತಿತ್ತು. ಜೀವನದ ಕಹಿಯನ್ನು ಅವನಿಗೆ ಚೆನ್ನಾಗಿ ಉಣಿಸಬೇಕೆಂದು ಅದು ಎಣಿಸಿತು.

ಬೋಸ್ಟನ್‌ನಲ್ಲಿಯ ಸ್ಪರ್ಧೆಯಿಂದ ಆ ಯಂತ್ರವು ಜನರ ಮನಸ್ಸನ್ನು ಸೆಳೆದುಕೊಂಡಿದ್ದರೂ ಅದಕ್ಕಿರುವ ಬಹಳಷ್ಟು ಬೆಲೆಯನ್ನು, ಕೊಂಡುಕೊಳ್ಳುವವರಿಂದ ಕೊಡಲಾಗುತ್ತಿದ್ದಿಲ್ಲ. ಹೋವ್‌ನ ಯಂತ್ರ ಪುನಃ ಪೆಟ್ಟಿಗೆಯಲ್ಲಿ ಹುದುಗಿಕೊಂಡಿತು. ಜನರ ನೆನಪೂ ಅಷ್ಟೇ. ಕೆಲವೇ ದಿನಗಳಲ್ಲಿ ಜನರು ಈ ಸಂಗತಿಯನ್ನು ಮರೆತುಬಿಟ್ಟರು.

ಹೋವ್‌ನ ತಮ್ಮನೇ ಒಂದು ದಿನ ಅವನನ್ನು ಕೇಳಿದ.

"ಅಣ್ಣಾ, ಕಂಪನಿಯ ವತಿಯಿಂದ ನಾನು ಇಂಗ್ಲಂಡಿಗೆ ಹೊರಟಿದ್ದೇನೆ. ನಿನ್ನ ಆ ಪೆಟ್ಟಿಗೆಯಲ್ಲಿ ಧೂಳು ತಿನ್ನುತ್ತಿರುವ ಯಂತ್ರವನ್ನೂ ಒಯ್ಯುವೆ. ನೋಡೋಣ, ಯಾರಾದರೂ ತಕ್ಕೊಳ್ಳುತ್ತಿದ್ದರೆ ಕೊಟ್ಟುಬಿಡಬಹುದು."

ಹೊಲಿಗೆಯ ಆ ಆಧುನಿಕ ಯಂತ್ರವು ಅಮೇರಿಕವ ದಂಡೆಯನ್ನು ದಾಟಿ ಇಂಗ್ಲಂಡಿಗೆ ಬಂದಿತು. ಗಿರಾಕಿಯನ್ನು ಹುಡುಕುತ್ತಿರುವಾಗ ಹೋವ್‌ನ ತಮ್ಮನಿಗೆ ಥಾಮಸ್‌ನೆಂಬ ವ್ಯಾಪಾರಿ ಗಂಟುಬಿದ್ದ. ಇವನೇ ಮುಂದೆ ಹೋವ್‌ನ ಜೀವನದಲ್ಲಿ ಖಲಪುರುಷನಾದ. ಹೊಲಿಗೆಯ ಆ ಯಂತ್ರವನ್ನು ಅವನು ಕೊಂಡುಕೊಂಡನಷ್ಟೇ ಅಲ್ಲ; ಅದನ್ನು ನಿರ್ಮಿಸುವ ಹಕ್ಕುಗಳನ್ನೂ ಕೆಲವೇ ಹಣದಲ್ಲಿ ಪಡಕೊಂಡ. ಆದರೆ ವಸ್ತುವನ್ನು ಕೊಂಡುಕೊಂಡ ಮಾತ್ರಕ್ಕೆ ಅದರಲ್ಲಿಯ ಎಲ್ಲ ರಹಸ್ಯ ತಿಳಿಯಬಹುದೆಂದಿದೆಯೇ? ಕೆಲವೇ ದಿನಗಳಲ್ಲಿ ಆ ಯಂತ್ರವನ್ನು ಸರಿಪಡಿಸಲಿಕ್ಕೆಂದು ಹೋವ್‌ನನ್ನು ಅವನು ಕರೆಕಳುಹಿಸಿದ.

ಹೋವ್ ಈಗ ಥಾಮಸ್‌ನ ಕೈಕೆಳಗಿನ ಆಳು. ಅವನು ಅಷ್ಟು ಶ್ರಮ ವಹಿಸಿ, ಬೆವರು ಸುರಿದು ತಯಾರಿಸಿದ ಆ ಯಂತ್ರದ ಒಡೆತನ ಥಾಮಸ್‌ನದಾಗಿತ್ತು. ಥಾಮಸ್‌ನೋ, ತನಗೆ ಇಷ್ಟವಿದ್ದಂತೆ ಬೇಕಾದಷ್ಟು ಯಂತ್ರಗಳನ್ನು ನಿರ್ಮಿಸಿ ಚೆನ್ನಾಗಿ ಲಾಭ ಹೊಂದುತ್ತಿದ್ದನು. ತನ್ನ ದೇಶ, ಮನೆ-ಮಾರನ್ನು ಬಿಟ್ಟು ಪರದೇಶದಲ್ಲಿ ಬಂದು ನೆಲಸಿದ ಹೋವ್‌ನಿಗೆ ಆ ಥಾಮಸ್ ಕ್ರಮೇಣ ಕಿರುಕುಳ ಕೊಡಲು ಪ್ರಾರಂಭಿಸಿದ. ಹೋವ್‌ನಿಗೆ ಮನಸ್ತಾಪ ಉಂಟಾಯಿತು. ಇಲ್ಲಿ ಬಂದು ತಾನು ಕೆಟ್ಟೆನಲ್ಲ ಎಂಬ ಎದೆಗುದಿಯಿಂದ ಅವನು ಬಳಲಹತ್ತಿದ. ಕೊನೆಗೆ ಒಂದು ದಿನ ಅಸಹ್ಯವಾಗಿ ಅಲ್ಲಿಯ ಕೆಲಸಕ್ಕೆ ರಾಜೀನಾಮೆ ಕೊಟ್ಟು ಅಲ್ಲಿಂದ ಕಂಬಿ ಕಿತ್ತು ಮನೆಗೆ ಮರಳುವಾಗ ಈ ಮಹಾನ್ ಸಂಶೋಧಕನ ಕಿಸೆಯಲ್ಲಿ ಅಮೇರಿಕದಲ್ಲಿ ಆ ಯಂತ್ರಗಳನ್ನು ನಿರ್ಮಿಸುವ ಹಕ್ಕು

ಪತ್ರವನ್ನು ಅಡವಿಟ್ಟು ತಂದ ಹಣ ಬರಿಯ ಅವನ ಹೆಂಡತಿ ಮತ್ತು ಮಗುವಿಗೆ ಟಿಕೇಟಿಗೆ ಸಾಕಾಗುವಷ್ಟಿತ್ತು! ಬೋಟಿನಲ್ಲಿ ಅವನು ತನಗಾಗಿ ಅಡಿಗೆ ಭಟ್ಟನ ಕೆಲಸವನ್ನು ಪಡೆದುಕೊಂಡ.

ಬೋಟು ನ್ಯೂಯಾರ್ಕಿಗೆ ಬಂತು. ಅಲ್ಲಿಂದವನು ತನ್ನ ಹೆಂಡತಿ ಮತ್ತು ಮಗುವನ್ನು ಬೋಸ್ಟನ್‌ಗೆ ಕಳುಹಿದ. ಅವನಿಗೆ ಹೋಗಲು ಹಣವೇ ಉಳಿದಿದ್ದಿಲ್ಲ. ಅದಕ್ಕಾಗಿ ಅಲ್ಲಿಯೇ ಒಂದು ಕಾರ-ಖಾನೆಯಲ್ಲಿ ಕೆಲಸಕ್ಕೆ ಉಳಿದುಕೊಂಡ ಆದರೆ ಪಾಪ! ಹಣವನ್ನು ಗಳಿಸಿ ಅವನು ಬೋಸ್ಟನ್ ಮುಟ್ಟಿದಾಗ ಹೆಂಡತಿ ಮರಣವನ್ನು ಸಮೀಪಿಸಿದ್ದಳು. ಇತ್ತ ಅವನ ಕೆಲ ಸಾಮಾನನ್ನು ತೆಗೆದುಕೊಂಡು ಬರುತ್ತಿದ್ದ ಹಡಗು ದಾರಿಯಲ್ಲಿಯೇ ಮುಳುಗಿದ ಸುದ್ದಿ ಬಂತು. ಅಮೇರಿಕದಲ್ಲಿಯೂ ಕೆಲ ಮೋಸಗಾರರು ಅವನ ಕಲ್ಪನೆಯನ್ನು ಕದ್ದು ಹೊಲಿಗೆಯ ಯಂತ್ರವನ್ನು ಕಟ್ಟಲು ಆರಂಭಿಸಿದ್ದರು. ಹೋವ್‌ನಿಗೆ ತನ್ನ ಎಲ್ಲ ಕನಸುಗಳು ಕುಸಿದುಹೋದ ಭಾಸವಾಯಿತು.

ಈ ಸಂಧಿಯಲ್ಲಿ ಹೋವ್ ಅನುಭವಿಸಿದ ಕಷ್ಟ ಸಾಕೆನಿಸಿದಂತೆ ಬ್ಲಿಸ್ ಎಂಬವನನ್ನು ದೇವರು ಅವನೆಡೆ ಕಳುಹಿದ. ಅವನು ಹೋವ್‌ನಿಗೆ ಧೈರ್ಯಕೊಟ್ಟು, ಹಣದ ಸಹಾಯಮಾಡುವೆನೆಂದು ವಚನಕೊಟ್ಟ. ಬೋಸ್ಟನ್ ನಗರದಲ್ಲಿ ಆದ ಸ್ಪರ್ಧೆಯಲ್ಲಿ ಅವನು ನ್ಯಾಯಾಧೀಶನಿದ್ದನಂತೆ. ಹೋವ್‌ನ ಕೆಲಸವನ್ನು ನೋಡಿ ಭಾರಿ ಮೆಚ್ಚಿದ್ದನಂತೆ.

ಅವನ ಸಹಾಯದಿಂದ ಹೋವ್ ಇಂಗ್ಲಂಡಿ
ನಲ್ಲಿ ಅಡವಿಟ್ಟ ತನ್ನ ಹಕ್ಕುಪತ್ರವನ್ನು ಪೂಽಲ
ಬಿಡಿಸಿಕೊಂಡ. ಆಮೇಲೆ ಇಲ್ಲಿಯ ಮೋಸಗಾ
ರನ್ನು ಕೋರ್ಟಿಗೆ ಎಳೆದ. ಅವರೂ ಹಣವಂ-
ತರು. ಮೊಕದ್ದಮೆ ಎಷ್ಟೋ ವರ್ಷಗಳ ವರೆಗೆ
ನಡೆಯಿತು. ಆದರೆ ಕೊನೆಗೆ ೧೮೫೪ ರಲ್ಲಿ
ಹೋವ್‌ನೇ ಆ ಯಂತ್ರದ ಆದ್ಯ ಜನಕ ಎಂದು
ನ್ಯಾಯಾಧೀಶರು ತೀರ್ಪನ್ನಿತ್ತರು.* ಮಾನವ
ಕುಲಕ್ಕೆ ಅವನು ಕೊಟ್ಟ ಇದೊಂದು ವರದಾನ
ವೆಂದು ಅವರು ಕೊಂಡಾಡಿದರು.

ಮುಂದಿನ ಹತ್ತು ವರುಷಗಳಲ್ಲಿ ಹೋವನ
ಕಡೆ ಹಣ ಧಾರೆಧಾರೆಯಾಗಿ ಸುರಿಯಹತ್ತಿತು
ಹೊಲಿಗೆಯ ಯಂತ್ರವನ್ನು ತಯಾರಿಸುವ
ಪ್ರತಿಯೊಬ್ಬನೂ ಅವನಿಗೆ ಹಕ್ಕಿನ ಫೀ ಎಂದು
ಹಣ ಕೊಡಬೇಕಾಗಿತ್ತು. ಯಂತ್ರವು ಲೋಕ
ಪ್ರಿಯವಾದಹಾಗೆ ಅವನ ಹಣ ಏರುತ್ತ ಹೋ-
ಯಿತು. ಲಕ್ಷಾವಧಿ ರೂಪಾಯಿಗಳು ಪ್ರತಿ
ವರುಷ ಅವನಿಗೆ ಸಲ್ಲತೊಡಗಿದವು. ಬಾಳಿನ
ಕಹಿಯನ್ನು ತಿಂದ ಬಾಯಿಯೇ ಅದರ ಸವಿ-
ಯನ್ನು ಉಣ್ಣಹತ್ತಿತು. ನಾಲ್ವತ್ತೆಂಟು ವರುಷ
ದವನಿದ್ದಾಗ ಆತ ಸತ್ತ; ಆದರೆ ಅತ್ಯಂತ
ಶ್ರೀಮಂತ ಮನುಷ್ಯನೆಂದು ಸತ್ತ.

---

* ಹೋವನಿಗೆ ಪೇಟೆಂಟ್ ಮುರಿದದ್ದಕ್ಕೆ
ಹಣ ತೆರಬೇಕಾದವರಲ್ಲಿ ಒಬ್ಬನು ಪ್ರಸಿದ್ಧ
ಸಿಂಗರ್ ಹೊಲಿಗೆ ಯಂತ್ರ [illegible]
ಐಸಾಕ್ ಸಿಂಗರ್.

## ಖಾರ

ಮಡದಿ ತಂದಿತ್ತ ಬೋಂಡಾ ಅರ್ಧ ಜಗಿದು, ಕಣ್ಣೀರು ಸುರಿಸುತ್ತಾ ಗಂಡನೆಂಬ ಪ್ರಾಣಿ ಹೇಳಿತು: "ಹಾ, ಹಾ! ಖಾರ, ಖಾರ!– ಬೋಂಡಅಲ್ಲ, ಮೆಣಸಿನಕಾಯಿ!!"

## ದಿವ್ಯ ಕಾಫಿ?

ರೂಢಿಯು ಹೋಟಲಿಗೆ ಹೋಗಿ ತಿಂಡಿ ತಿನ್ನಲು ಕುಳಿತಾಗ, ಪಕ್ಕದಲ್ಲಿದ್ದ ಮದ್ರಾಸಿ ಗಿರಾಕಿಯೊಬ್ಬ ಮಾಣಿಗೆ ಈ ರೀತಿ ಹೇಳುತ್ತಿದ್ದ: "ಕಾಫಿ ದಿವ್ಯವಾಗಿದೆ! ಕೊಂಚ ಡಿಕಾಕ್ಷನ್ ಕೊಡ್ತಿಯಾ?"

—ಜಿ. ಕೆ. ನಾಡಿಗ್




ಇತಿಹಾಸದಲ್ಲೇ ಅಪರೂಪವಾದ ಕಿಡಿಗೇಡಿತನ

# ಬುಂಗಾ-ಬುಂಗಾ ಮತ್ತು ಬ್ರಿಟಿಶ್ ನೌಕಾಪಡೆ

ಮುರಲೀಧರ

೧೯೧೦ ಫೆಬ್ರುವರಿಯ ನಂತರ ಕೆಲ ತಿಂಗಳು ಇಂಗ್ಲಂಡಿನಲ್ಲಿ ಎಲ್ಲರ ಬಾಯಲ್ಲೂ ಕೇಳಬರುತ್ತಿದ್ದ ಜೋಡು ಶಬ್ದಗಳೆಂದರೆ "ಬುಂಗಾ-ಬುಂಗಾ." ಶಾಲಾಮಕ್ಕಳು ಒಬ್ಬರನ್ನೊಬ್ಬರು ಕಂಡೊಡನೆ ಬುಂಗಾ-ಬುಂಗಾ ಎನ್ನುತ್ತಿದ್ದರು. ಭಿಕಾರಿ ಹುಡುಗರು ಒಬ್ಬರನ್ನೊಬ್ಬರು ಹೀಗಳೆಯಬೇಕಾಗಿದ್ದರೆ ಬುಂಗಾ-ಬುಂಗಾ ಎಂದು ಅರಚುತ್ತಿದ್ದರು. ನೌಕಾಪಡೆಯ ಹಿರಿಯ ಅಧಿಕಾರಿಗಳ ತಲೆ ಕಾಣಿಸಿದೊಡನೆ ಘಟಿಂಗರು ಬುಂಗಾ-ಬುಂಗಾ ಎಂದು ಕೂಗುತ್ತಿದ್ದರು. ಬಾರ್-ರೂಂ ಸಂಗೀತದಲ್ಲಿ ಕೂಡ ಬುಂಗಾ-ಬುಂಗಾ ಎಂಬ ತಮಾಷೆ ಹಾಡು ಕೇಳಬರುತ್ತಿತ್ತು. ಯಾರನ್ನಾದರೂ ಹೆಡ್ಡನೆಂದು ತೆಗಳಬೇಕಾದರೆ ಅವನ ಮಾತುಗಳನ್ನು ಬುಂಗಾ-ಬುಂಗಾ ಎಂದು ಸ್ವಾಗತಿಸಿದರೆ ಸಾಕಾಗಿತ್ತು.

ಬುಂಗಾ-ಬುಂಗಾ ಎಂದರೇನೆಂದು ಯಾರಿಗೂ

ಗೊತ್ತಿರಲಿಲ್ಲ. ಅದು ಸಹಜವೇ ಆಗಿತ್ತು; ಏಕೆಂದರೆ ಅದಕ್ಕೆ ಅರ್ಥವೇ ಇರಲಿಲ್ಲ. ಅದರ ನಿರ್ಮಾಪಕನ ಹೆಸರು ವಿಲಿಯಂ ಹೊರೇಸ್ ಡಿವಿಯರ್ ಕೋಲ್ ಎಂದು. ೨೯ ವರ್ಷದ ಈ ಶ್ರೀಮಂತ ತರುಣ ಇತಿಹಾಸದಲ್ಲೇ ಅಪ್ರತಿಮವಾದ ತಮಾಷೆಯೊಂದನ್ನು ಸಂಘಟಿಸಿ ಶ್ರೀಮದ್ಗಂಭೀರ ಬ್ರಿಟಿಶ್ ನೌಕಾಪಡೆಯ ಗೇಲಿಯೆಬ್ಬಿಸಿದ್ದ. ತನ್ನ ಮಿತ್ರನೊಬ್ಬನು ಅಬಿಸೀನಿಯದ ಚಕ್ರವರ್ತಿಯೆಂದೂ ತನ್ನ ಇತರ ಮಿತ್ರರು ಅವನ ಪರಿವಾರದವರೆಂದೂ ನಟಿಸಿ ಅವನು ವೈಮೌತ್‌ನಲ್ಲಿ ಬ್ರಿಟಿಶ್ ನೌಕಾಪಡೆಯಿಂದ ಈ ಠಕ್ಕು ಚಕ್ರವರ್ತಿಗೆ ಸೆಲ್ಯೂಟ್ ಕೊಡಿಸಿದ್ದ.

ಕೋಲನಿಗೆ ಇಂಥ ಆಟ ಹೂಡಲು ಬೇಕಾದ ಬುದ್ಧಿವಂತಿಗೆಯೂ ಧನಬಲವೂ ಇತ್ತು. ಅವನ ಗೆಳೆಯರ ಬಳಗದಲ್ಲಿ ತಮಾಷೆಗಾಗಿ ಏನೂ ಮಾಡಲು ಸಿದ್ಧರಾದ ಚಾಣಾಕ್ಷ ತರುಣ ತರುಣಿಯರಿದ್ದರು. ಶಾಲೆ ವಿಶ್ವವಿದ್ಯಾಲಯಗಳಲ್ಲಿರುವಾಗ ಇಂಥ ತಮಾಷೆಗಳನ್ನು ಯೋಜಿಸಿ ತರಬೇತು ಹೊಂದಿದ್ದ ಆತ, ತನ್ನೀ ಚರಿತ್ರಾರ್ಹ ಹಾಸ್ಯಕ್ಕಿಂತ ಐದು ವರ್ಷ ಮೊದಲು ಕೇಂಬ್ರಿಜ್ಜಿನ ನಗರ ಸಭಾಪತಿಯ ಮುಂದೆ ತಾನೂ ತನ್ನ ಮಿತ್ರರೂ ಜಂಜೀಬಾರಿನ ಸುಲ್ತಾನ ಮತ್ತು ಅವನ ಪರಿವಾರದವರೆಂದು ನಟಿಸಿ ಸಾರ್ವಜನಿಕ ಆತಿಥ್ಯ ಪಡೆದಿದ್ದ. ಈಗ ಅದಕ್ಕೂ ಹಿರಿದೇನನ್ನಾದರೂ ಮಾಡಲು ಅವನ ಮಿದುಳು ತುರಿಸುತ್ತಿತ್ತು.

೧೯೧೦ ಫೆಬ್ರುವರಿ ೭ ರಂದು ಈ ತರುಣ ಕೀಟಲೆಗಾರರು ಲಂಡನ್ನಿನಲ್ಲಿ ಆಡ್ರಿಯನ್ ಸ್ಟೀಫನ್ನನ ಮನೆಯಲ್ಲಿ ಗುಪ್ತ ಸಭೆ ಸೇರಿ ಯೋಜನೆಯನ್ನು ಪೂರ್ತಿಗೊಳಿಸಿದರು. ಅವರೆಲ್ಲರೂ ಮುಂದೆ ಪ್ರಸಿದ್ಧ ಪುರುಷರಾಗಲಿದ್ದವರೇ. ದಾಂಡಿಗ ಆಂಥನಿ ಬಾಕ್ಸ್‌ಟನ್ ಮುಂದೆ ನಿಸರ್ಗಜ್ಞ ಮತ್ತು ಕ್ರೀಡಾಪಟುವೆಂದು ಹೆಸರಾದ; ಈತನೇ ಅಬಿಸೀನಿಯದ ಚಕ್ರವರ್ತಿಯಾಗಬೇಕೆಂದು ನಿಶ್ಚಯವಾಯಿತು. ಇನ್ನಿಬ್ಬರು ಮುಂದೆ ಪ್ರಮುಖ ವಕೀಲನಾಗಲಿದ್ದ ಗೈ ರಿಡ್ಲಿ ಮತ್ತು ಕಲಾವಿದನಾಗಲಿದ್ದ ಡಂಕನ್ ಗ್ರ್ಯಾಂಟ್; ಇವರು ಚಕ್ರವರ್ತಿಯ ಸೇವಕರಾಗಬೇಕಿತ್ತು. ತಂಡದಲ್ಲಿದ್ದ ಏಕಮಾತ್ರ ತರುಣಿ ಸ್ಟೀಫನ್ನನ ತಂಗಿ—ಮುಂದೆ ಕಾದಂಬರಿಕಾರರಲ್ಲಿ ಅಗ್ರಣಿಯೆಂದು ಹೆಸರಾಂತ ವರ್ಜೀನಿಯಾ ವೂಲ್ಫ್; ಅವಳು ಪುರುಷ ವೇಷದಲ್ಲಿ ರಾಜಕುಮಾರನ ಪಾತ್ರ ವಹಿಸಬೇಕಿತ್ತು. ಆರೂವರೆ ಅಡಿ ಎತ್ತರದ ಸ್ಟೀಫನ್ ಚಕ್ರವರ್ತಿಯ ಇಂಗ್ಲಿಷ್ ದುಭಾಷಿಯಾಗಿ ನಟಿಸತಕ್ಕದ್ದು. ಕೋಲನು ಮಾತ್ರ ಆ ಕಾಲದ ಶುದ್ಧ ಇಂಗ್ಲಿಷ್ ಉಡುಗೆ ಹಾಕಿಕೊಂಡು ಬ್ರಿಟಿಶ್ ವಿದೇಶ ಶಾಖೆಯ ಪ್ರತಿನಿಧಿ ಹರ್ಬರ್ಟ್ ಚೊಮೊಂಡಲಿಯೆಂದು ಅವರೊಡನೆ ಹೋಗಬೇಕೆಂದು ಗೊತ್ತಾಯಿತು.

ವಿವರಗಳನ್ನೆಲ್ಲ ನಿರ್ಣಯಿಸಿಕೊಂಡು ಅವರು ವಿಲಿ ಕ್ಲಾರ್ಕ್‌ಸನ್ ಎಂಬ ನಾಟಕದ ಮೇಕಪ್ ಮನ್ನನನ್ನು ಕರೆಸಿದರು. ಕೋಲ್ ಹೊರತು ಉಳಿದವರ ಮುಖಗಳಿಗೆ ಕಪ್ಪು ಬಳಿದು, ಗಡ್ಡ ಮೀಸೆಗಳನ್ನು ಹಚ್ಚಿ ಬಿಳಿ ರುಮಾಲು ಸುತ್ತಿ, ಬೆಲೆಬಾಳುವ ಪೌರಸ್ತ್ಯ ಅಂಗಿಚಲ್ಲಣಗಳನ್ನು ತೊಡಿಸಿದ್ದಾಯಿತು.

ಬ್ರಿಟಿಶ್ ಗೃಹ ನೌಕಾಪಡೆ ಅದೇ ಆಗ ಒಂದು ಕವಾಯತ್ತು ಮುಗಿಸಿ ವೈಮೌತ್ ಬಂದರಿನಲ್ಲಿ ವಿಶ್ರಾಂತಿ ಪಡೆಯುತ್ತಿತ್ತು. ಅದರ ಅಧಿಕಾರಿ ಅಡ್ಮಿರಲ್ ಸರ್ ವಿಲಿಯಂ ಮೇ ಎಂಬವನಾಗಿದ್ದ. ಅವನಿಗೆ ಒಮ್ಮೆಲೆ ಒಂದು ತಂತಿ ಬಂತು: ಅಬಿಸೀನಿಯದ ಚಕ್ರವರ್ತಿ ಅಲ್ಲಿಗೆ ಭೆಟ್ಟಿ ಕೊಡುವವನಿದ್ದಾನೆ, ಅವನಿಗೆ ನೌಕಾದಲದ ರಾಜಮರ್ಯಾದೆ ಕೊಡಬೇಕು ಎಂದು. ತಂತಿಯ ಕೆಳಗೆ ಹಾರ್ಡಿಂಜ್ ಎಂದು ಹೆಸರಿತ್ತು. ಅಡ್ಮಿರಲ್ ಮೇ ಈ ಗಾಳವನ್ನು ನಿಶ್ಶಂಕೆಯಿಂದ ನುಂಗಿದ. ಆಗ ವಿದೇಶ ಶಾಖೆಯ ಉಪಕಾರ್ಯದರ್ಶಿ ಲಾರ್ಡ್ ಹಾರ್ಡಿಂಜರಾಗಿದ್ದುದರಿಂದ ಸಂದೇಹಪಡಲು ಕಾರಣವೂ ಇರಲಿಲ್ಲ.

ಈ 'ರಾಜಪರಿವಾರ'ವನ್ನು ರೇಲುಗಾಡಿ ವೈ-ಮೌತಿನಲ್ಲಿಳಿಸಿದಾಗ 'ಈ ಪೌರಸ್ತ್ಯ ಚಕ್ರವರ್ತಿ'ಯ ದರ್ಶನಕ್ಕಾಗಿ ಜನಸಂದಣಿಯೆ ನೆರೆದಿತ್ತು. ಪೋಲೀಸರೂ ಹಾಜರಿದ್ದರು. ನೌಕಾಪಡೆಯ ಹಿರಿ ಅಧಿಕಾರಿಯೊಬ್ಬ ಬಿರುದುಬಾವಲಿಗಳಿಂದ-ಲಂಕೃತನಾಗಿ ಅವರನ್ನೆದುರುಗೊಂಡು ಕ್ಯಾಬ್ ಗಾಡಿಗಳಲ್ಲಿ ಬಂದರಿಗೆ ಸಾಗಿಸಿ ಸ್ಟೀಂ-ಲಾಂಚಿನಲ್ಲಿ "ಡ್ರೆಡ್‌ನಾಟ್" ಎಂಬ ಹಡಗಿಗೆ ಕರೆದೊಯ್ದ. ಅಲ್ಲಿ ಆಡ್ಮಿರಲ್ ಮೇ ಸ್ವತಃ ಚಕ್ರವರ್ತಿಯನ್ನು ವಿನಯಪೂರ್ವಕವಾಗಿ ಬರಮಾಡಿಕೊಂಡ. ಡೆಕ್ಕಿನಲ್ಲಿ ಪೂರ್ಣ ವೇಷಭೂಷಿತರಾಗಿ ನೌಕಾ ಸೈನಿಕರೂ ನಾವಿಕರೂ ಠೀಕುಠಾಕಾಗಿ ಪಂಕ್ತೀಭೂತರಾಗಿ ನಿಂತಿದ್ದರು.

ಠಕ್ಕರ ತಂಡದಲ್ಲಿ ಪ್ರತಿಯೊಬ್ಬನೂ ತನ್ನ ಪಾತ್ರವನ್ನು ತಪ್ಪಿಲ್ಲದೆ ನಟಿಸಿ ತೋರಿಸಿದ. ಆದರೆ ಧೈರ್ಯ ಮತ್ತು ಸಮಯಸ್ಫೂರ್ತಿಯ ವಿಷಯದಲ್ಲಿ ಕೋಲ್ ಮತ್ತು ಸ್ಟೀಫನ್ನರು ಅಪ್ರತಿಮರಾಗಿದ್ದರು. ಕೋಲ್ "ವಿದೇಶ ಶಾಖೆಯ ಪ್ರತಿನಿಧಿ"ಯಾಗಿ ಅಡ್ಮಿರಲ್ ಮೇಯನ್ನು ತನಗೆ ಬೇಕಾದಂತೆ ಕುಣಿಸಿದ. "ಚಕ್ರವರ್ತಿಯ ದುಭಾಷಿ"ಯಾದ ಸ್ಟೀಫನ್ ಇಂಗ್ಲೀಷನ್ನೂ "ಅಬಿಸೀನಿ-ಯನ್" ಭಾಷೆಯನ್ನೂ ಅಷ್ಟೇ ಸಲೀಸಾಗಿ ಮಾತಾಡುತ್ತಿದ್ದ.

ಈ "ಭಾಷಾವೈದಿಗ್ಧ್ಯ"ವೇ ಇಡೀ ನಾಟಕದ ಸ್ವಾರಸ್ಯತಮ ಅಂಶವಾಗಿತ್ತು. ಮಿತ್ರನೊಬ್ಬನ ಮೂಲಕ ನೌಕಾಪಡೆಯ ಗುಟ್ಟುಗಳನ್ನೆಲ್ಲ ಮೊದಲೇ ಅರಿತುಕೊಂಡಿದ್ದ ಕೋಲ್ ಅಬಿಸೀನಿಯನ್ ಭಾಷೆಯ ಅಲ್ಪ ಪರಿಚಯವಾದರೂ ಇದ್ದ ಏಕಮಾತ್ರ ಅಧಿಕಾರಿ ರಜಾದ ಮೇಲಿದ್ದ ದಿನವನ್ನು ಈ ಮೋಜಿಗಾಗಿ ಆರಿಸಿಕೊಂಡಿದ್ದ.

ಈಗ ಅವರು ಮಾತಾಡಿದ್ದೇ ಅಬಿಸೀನಿಯನ್ ಆಗಿತ್ತು. ಅಡ್ಮಿರಲ್ ಮೇಯವರು ಚಕ್ರವರ್ತಿಗೆ ವಿವರಿಸಲೆಂದು ಬ್ರಿಟಿಶ್ ನಾವಿಕರ ವೇಷವಿಶೇಷಗಳನ್ನು ತಿಳಿಹೇಳಿದಾಗ ಸ್ಟೀಫನ್‌ನು ಚಕ್ರವರ್ತಿಯ ಕಡೆ ತಿರುಗಿ ತಾನು ಕಾಲೇಜಿನಲ್ಲಿ ಕಲಿತಿದ್ದ ಪ್ರಾಚೀನ ಗ್ರೀಕ್ ಮತ್ತು ಲ್ಯಾಟಿನ್ ಕಾವ್ಯಗಳಲ್ಲಿ ಈಗ ನೆನಪಿಗೆ ಬಂದ ಶಬ್ದಗಳನ್ನೆಲ್ಲ ಮಿಶ್ರಣಮಾಡಿ ಮೇಲೆ ಅದೇ ಅಂದು ರೈಲಿನಲ್ಲಿ ಬರುತ್ತಿದ್ದಾಗ ಯಾವುದೋ ವ್ಯಾಕರಣ ಪುಸ್ತಕದಿಂದ ಬಾಯಿಪಾಠಮಾಡಿದ ಸ್ವಾಹಿಲಿ ಭಾಷೆಯ ಪದಗಳ ಒಗ್ಗರಣೆ ಹಾಕಿ ಉಚ್ಚರಿಸಿದ. "ಚಕ್ರವರ್ತಿ" ಬಕ್‌ಸ್ಟನ್ನನಾದರೋ ದುಭಾಷಿಯ ಈ ಅರ್ಥರಹಿತ ವಾಕ್ಪ್ರವಾಹದಿಂದ ಕಂಗೆಡದೇ ಅದರಲ್ಲಿ ಬರುವ ಕೆಲ ಗ್ರೀಕ್ ಲ್ಯಾಟಿನ್ ಪದಗಳನ್ನು ನೆನಪಿಟ್ಟುಕೊಂಡು ತನ್ನ ಸಂವಾದದಲ್ಲಿ ಆ ಶಬ್ದಗಳು ಪುನರಾವೃತ್ತಿ ಹೊಂದುವಂತೆ ಅನರ್ಥ ಮಾಲೆಯನ್ನು ಹೆಣೆಯುತ್ತಿದ್ದ. ನಾವಿಕರೆಲ್ಲ ಈ ಸಂವಾದವನ್ನು ಆಶ್ಚರ್ಯಪೂರಿತರಾಗಿ ಕೇಳುತ್ತಿದ್ದರು. "ಬಲು ವಿಚಿತ್ರ ಭಾಷೆ" ಎನ್ನುತ್ತಿದ್ದರು.

ಈ ನಡುವೆಯೇ ಯಾರ ತಲೆಯಲ್ಲೋ ಅಂದಿನ ಮಂತ್ರಶಬ್ದ ಹೊಳೆದದ್ದು. ಅಡ್ಮಿರಲ್ ಮೇ ಹೇಳಿದ ಯಾವುದೋ ವಿಷಯದ ಬಗ್ಗೆ ಸಂತೋಷ ವ್ಯಕ್ತಗೊಳಿಸಲು ತಂಡದವರಲ್ಲೊಬ್ಬ, "ಅಬ್ದುಲ್ಲೆದೆ-ಬುಂಗಾ" ಎಂದ. ಈ ಶಬ್ದ ಉಳಿದವರಿಗೆಷ್ಟು ತಮಾಷೆಯೆನಿಸಿತೆಂದರೆ ಪ್ರತಿಯೊಬ್ಬನೂ ಚೆನ್ನಾಗಿದೆ ಚೆನ್ನಾಗಿದೆ ಎಂದು ಹೇಳಬೇಕಾದ ಪ್ರಸಂಗದಲ್ಲೆಲ್ಲ "ಬುಂಗಾ-ಬುಂಗಾ" ಎಂದು ಉಚ್ಚರಿಸಲಾರಂಭಿಸಿದ. ಮುಂದೆ ಇಡೀ ನೌಕಾಪಡೆ ಈ ಜೋಡುಶಬ್ದಗಳಿಗೆ ಹೆದರುವ ಪರಿಸ್ಥಿತಿ ಒದಗಿತು.

ಇಡೀ ಆಟ ಯಶಸ್ವಿಯಾಗಲು ಕೋಲನ ಚಾತುರ್ಯ ಮತ್ತು ಸ್ವಲ್ಪ ಮಟ್ಟಿಗೆ ಅವನ ಸುದೈವ ಹಾಗು ಎಲ್ಲಕ್ಕೂ ಹೆಚ್ಚು ನೌಕಾಪಡೆಯ ಅಜ್ಞಾನ ಸಹಾಯ ಮಾಡಿದವೆನ್ನಬೇಕು. ಕೋಲನನ್ನು ಹೊರತು ಉಳಿದವರೆಲ್ಲರೂ ಅಂದು ಉಪವಾಸವಿರಬೇಕಾಯಿತು. ಏನನ್ನಾದರೂ ತಿಂದರೆ ಅವರ ವೇಷಕ್ಕೆ ಧಕ್ಕೆಯಾಗುವ ಭಯ



ವಿತ್ತು. ಆದ್ದರಿಂದ ನೌಕಾಪಡೆಯು ಅವರಿಗೆ ಭೋಜನ ಪಾನೀಯಗಳನ್ನು ಕೊಡಬಂದಾಗ ಧಾರ್ಮಿಕ ನಿಯಮಗಳ ನೆವ ಮುಂದೊಡ್ಡಿ ಅದನ್ನು ನಿರಾಕರಿಸಲಾಯಿತು. ನೌಕಾಪಡೆಯ ಕೂಚು ನಡೆದಾಗ ಸ್ವಲ್ಪ ಮಳೆ ಬಿತ್ತು. ಅದು ಹೆಚ್ಚಾಗಿದ್ದರೆ ಇವರ ವೇಷವೆಲ್ಲ ತೊಳೆದು ಹೋಗಿ ಬಣ್ಣ ಬೆಳಕಿಗೆ ಬರಬಹುದಿತ್ತು. ಹಾಗಾಗಲಿಲ್ಲ. ಡಂಕನ್ ಗ್ರಾಂಟನ ಮೀಸೆಗೆ ಮಾತ್ರ ಸುಧಾರಿಸಲಾರದ ಧಕ್ಕೆಯಾಗುವಂತೆ ಕಂಡಿತು. ಆದರೆ ಸುದೈವದಿಂದ ಅದನ್ನಾರೂ ಗಮನಿಸಲಿಲ್ಲ.

ತನ್ನ ಯಶಸ್ಸಿನಿಂದ ಉತ್ಸಾಹಿತನಾಗಿ ಕೋಲನು ತನ್ನ ಆಟವನ್ನು ಸುರಕ್ಷಿತತೆಯ ಮಿತಿ ಮೀರಿಯೆ ಮುಂದುವರಿಸಿದನು. ಸೂರ್ಯಾಸ್ತದ ಸಮಯಕ್ಕೆ ಆತ ಅಡ್ಮಿರಲ್ ಮೇಗೆ ಈಗ ಚಕ್ರವರ್ತಿ ಪರಿವಾರದವರು ಮಕ್ಕಾದ ದಿಕ್ಕಿಗೆ ಮುಖ ಮಾಡಿ ಅಡ್ಡ ಬಿದ್ದು ಪ್ರಾರ್ಥಿಸುವರು ಎಂದು ಹೇಳಿದನು. ನಾಕಾಪಡೆಯಲ್ಲಿ ಯಾರಾದರೂ ಅಬಿಸೀನಿಯಾದ ಬಗ್ಗೆ ನಸುವಾದರೂ ಜ್ಞಾನವಿದ್ದವರಿದ್ದರೆ ಈ ನಿಟ್ಟಿನಲ್ಲಿ ಕೋಲನ ಯೋಜನೆಯೆಲ್ಲ ಬುಡಮೇಲಾಗಬಹುದಿತ್ತು. ಏಕೆಂದರೆ ಅಬಿಸೀನಿಯದ ಚಕ್ರವರ್ತಿ ಕ್ರೈಸ್ತ, ಮುಸ್ಲಿಮನಲ್ಲ.

ಅಂತೂ ಸುದೀರ್ಘ ಕಾರ್ಯಕ್ರಮದ ನಂತರ ಚಕ್ರವರ್ತಿ ಹೊರಡುವ ವೇಳೆಯಾಯಿತು. ಅಬಿಸೀನಿಯದ ರಾಷ್ಟ್ರಗೀತೆಯ ಸ್ವರಪ್ರಸ್ತಾರ ಗೊತ್ತಿಲ್ಲದ್ದರಿಂದ ಜಂಜೀಬಾರಿನ ರಾಷ್ಟ್ರಗೀತೆಯನ್ನು ಕ್ಷಮಾಪಣಾಪೂರ್ವಕವಾಗಿ ನಾವಿಕ ಬ್ಯಾಂಡಿನವರು ಬಾರಿಸಿದರು. ಕೋಲನು ಚಕ್ರವರ್ತಿಯ ಪರವಾಗಿ ನೌಕಾಧಿಕಾರಿಗೆ ಒಂದು ಬಿರುದಿನ ರಿಬ್ಬನ್ ತೊಡಿಸಲು ಹೋದ. ಆತ ಬ್ರಿಟಿಶ್ ನೌಕಾ ಪಡೆಯ ಪರಂಪರೆಗನುಸರಿಸಿ ಅದನ್ನು ಸವಿನಯವಾಗಿ ನಿರಾಕರಿಸಿದ. ಅನಂತರ ರಾಜರೀತಿಗೆ ಅನುಗುಣವಾಗಿ ಕಲಾಸಿಗಳಿಗೆ ದಕ್ಷಿಣಾವಿತರಣೆಯಾಯಿತು.

ಅತ್ಯಂತ ಯಶಸ್ವಿಯಾದ ಕಿಡಿಗೇಡಿತನವನ್ನು ಮುಗಿಸಿ "ಅಬಿಸೀನಿಯದ ಚಕ್ರವರ್ತಿ"ಯ ಪರಿ

ವಾರ ರೇಲು ಹತ್ತಿತು. ಸಮೀಚೀನ ಭೋಜನವನ್ನು ರೇಲಿನಲ್ಲಿ ಬರುವಾಗಲೂ ನೌಕಾ ಭೋಜನ ಮಂದಿರದಲ್ಲಿಯೂ ಹೊಡೆದಿದ್ದ ಕೋಲನೊಬ್ಬನನ್ನು ಬಿಟ್ಟರೆ ಮತ್ತೆಲ್ಲರೂ ಹಸಿದು ತೋಳಗಳಂತಾಗಿದ್ದರು. ರೇಲು ಗಾಡಿಯ ಉಪಾಹಾರ ಮಂದಿರದಲ್ಲಿ ಅವರು ನುಗ್ಗಿದರು. ಆದರೆ ಅಲ್ಲಿಯೂ ಕೋಲ್ ಒಂದು ಆಟ ಹೂಡಿದ. ಅಬಿಸೀನಿಯದ ಚಕ್ರವರ್ತಿ ಪರಿವಾರಕ್ಕೆ ಬಡಿಸುವವರೆಲ್ಲರೂ ಕೈಗೆ ಬಿಳಿ ಕೈಚೀಲ ತೊಟ್ಟುಕೊಂಡೇ ಬಡಿಸಬೇಕೆಂಬುದು ಧಾರ್ಮಿಕ ಸಂಪ್ರದಾಯ ಎಂದಾತ ಉಪಾಹಾರ ಮಂದಿರದ ಅಧಿಕಾರಿಗಳಿಗೆ ಹೇಳಿದ. ಅವರು ಪಾಪ, ನಡುವಿನ ಸ್ಟೇಶನ್ನಿನಲ್ಲಿ ಗಾಡಿ ನಿಲ್ಲಿಸಿ, ಪೇಟೆಗೆ ಧಾವಿಸಿ ಬಿಳಿ ಕೈಚೀಲಗಳನ್ನು ಕೊಂಡುತಂದು "ಚಕ್ರವರ್ತಿ"ಗೆ ಸತ್ಕಾರ ಮಾಡಿದರು.

ಇಷ್ಟೆಲ್ಲಾ ಆದ ಮೇಲೂ ಕೋಲ್ ಬಾಯಿ ಮುಚ್ಚಿಕೊಂಡೇ ಇದ್ದರೆ ಜಗತ್ತಿಗೆ ಈ ಭಾರೀ ತಮಾಷೆಯ ಸುದ್ದಿ ತಿಳಿಯುತ್ತಲೇ ಇರಲಿಲ್ಲವೇನೊ. ಆದರೆ ಕೋಲನಿಗೆ ಇಷ್ಟು ದೊಡ್ಡ ನಗೆಯನ್ನು ತಾನೂ ತನ್ನ ಮಿತ್ರರೂ ಮಾತ್ರ ಬಚ್ಚಿಟ್ಟುಕೊಳ್ಳುವುದು ಸ್ವಾರ್ಥವಾಗಿ ಕಂಡಿತು. ಆತ ಪತ್ರಿಕಾ ಪ್ರತಿನಿಧಿಗಳ ಮುಂದೆ ಈ ಗುಟ್ಟನ್ನು ಹೊರಬಿಟ್ಟ.

ಸೈ! ಕೇಳುವುದೇನು! ಇಡೀ ಇಂಗ್ಲಂಡಿಗೇ ಬ್ರಿಟಿಶ್ ನೌಕಾಪಡೆ ಮೋಸಹೋದ ಮೋಜಿನ ಕಥೆ ತಿಳಿದು ದೇಶಕ್ಕೆ ದೇಶವೇ ನಗೆಗಡಲಲ್ಲಿ ತೇಲಿತು. ಲೇಖಗಳೇನು, ವ್ಯಂಗ್ಯ ಚಿತ್ರಗಳೇನು, ಫೋಟೋಗಳೇನು, ಧಾರಾಕಾರವಾಗಿ ಬಂದವು. ಒಂದೇ ದಿನದಲ್ಲಿ ಕೋಲ್ ಮತ್ತು ಅವನ ಸಹಕಾರಿಗಳಷ್ಟೇ ಏಕೆ, ಅವರಿಗೆ ಬಣ್ಣ ಹಾಕಿದವನು ಕೂಡ ಪ್ರಸಿದ್ಧರಾದರು. ಅದರ ನಡುವೆ ಅನಿವಾರ್ಯವಾಗಿ "ಬುಂಗಾ—ಬುಂಗಾ" ಕೂಡ ಪ್ರಸಿದ್ಧಿ ಪಡೆಯಿತು. ಪಾರ್ಲಿಮೆಂಟಿನಲ್ಲಿ ಪ್ರಶ್ನೆಗಳೆದ್ದವು. ನೌಕಾಪಡೆ ಇಂಗು ತಿಂದ ಮಂಗನಂತಾಯಿತು. ಆಡ್ಮಿರಲ್ ಮೇ ತನ್ನ ಹಡಗಿನಿಂದ ಇಳಿದೊಡನೆ ಬುಂಗಾ-ಬುಂಗಾ ಕೂಗನ್ನೆದುರಿಸಬೇಕಾಯಿತು.

ಈ ಮೋಸಗಾರರಿಗೆ ಏನು ಶಿಕ್ಷೆ ಕೊಡಬೇಕೆಂದೇ ಅಧಿಕಾರಿಗಳಿಗೆ ತಿಳಿಯಲಿಲ್ಲ. ಹಾಗೆ ಕೇಳಿದರೆ ಸುಳ್ಳು ಹೆಸರಿಂದ ತಂತಿ ಕಳಿಸಿದ್ದೊಂದು ಬಿಟ್ಟರೆ ಇವರ ಮೇಲೆ ಯಾವ ಅಪರಾಧವನ್ನೂ ಹೊರಿಸಲು ಸಾಧ್ಯವಿಲ್ಲೆಂಬುದು ಕಾಯದೆ ತಜ್ಞರ ಅಭಿಮತವಾಗಿತ್ತು.

ಈ ನಡುವೆ ಇಷ್ಟೆಲ್ಲದರ ಮೂಲ ಪುರುಷನಾದ ಕೋಲ್ ಕೆಲ ಕಾಲದಿಂದ ಕಾಣೆಯಾಗಿಬಿಟ್ಟಿದ್ದ. ಅಡ್ಮಿರಲ್ ಮೇಯನ್ನು ಕರೆದು ನೌಕಾ ವರಿಷ್ಠಾಧಿಕಾರಿಗಳು ಛೀಮಾರಿ ಹಾಕಿದರು. ಈ ವರದಿಯಿಂದ ತ್ರಸ್ತರಾದ ಸ್ಟೀಫನ್ ಮತ್ತು ಗ್ರಾಂಟರು ನೌಕಾ ಶಾಖೆಯ ಕಚೇರಿಗೆ ಹೋಗಿ ಕ್ಷಮಾಯಾಚನೆ ಮಾಡಿದರು. ನೌಕಾಶಾಖೆ ಅವಮಾನಿತ ಸ್ತ್ರೀಯಂತೆ ಈ ಕ್ಷಮಾಯಾಚನೆಯನ್ನು ತಿರಸ್ಕರಿಸಿತು.

ಯಾರಿಗೂ ಏನೂ ಶಿಕ್ಷೆಯಾಗಲಿಲ್ಲ. ಇಡೀ ಗಲಾಟೆ ನಿಂತ ಮೇಲೆ ಇದೊಂದು ಒಳ್ಳೇ ನಿರುಪದ್ರವಿ ತಮಾಷೆಯೆಂದೇ ಎಲ್ಲರಿಗೂ ಅನಿಸಿತು. ಕೋಲ್ ಇದಕ್ಕಾಗಿ ೪,೦೦೦ ಪೌಂಡ್— ಸುಮಾರು ೬೦,೦೦೦ ರೂಪಾಯಿ— ವೆಚ್ಚ ಮಾಡಿದ್ದ. ಆದರೆ ಇಡೀ ಇಂಗ್ಲಂಡನ್ನು ನಗಿಸಿದ್ದಕ್ಕೆ ಇದೇನೂ ದೊಡ್ಡ ವೆಚ್ಚವೆಂದವನಿಗೆ ಅನಿಸಲಿಲ್ಲ. *

ವಿವಾಹವು ಹೇಡಿತನವನ್ನು ಓಡಿಸುವ ಒಂದು ಸಾಹಸವಾಗಿದೆ.

—ಹೆಬ್ಬೂಸ್



ವ್ಯಕ್ತಿ ಹಳಬನಾದಷ್ಟು ಅವನಿಗೆ
ಮಾನ್ಯತೆ ಹೆಚ್ಚು

# ವಯೋವೇಧೆಯಿಂದ ಪಾರಾಗಬಲ್ಲೆವು

ಸಿ. ಎಸ್. ಶರ್ಮ

ಯಾರಾದರೂ "ನಿಮಗೆ ವಯಸ್ಸೆಷ್ಟು?" ಎಂದು ಕೇಳುವರೆನ್ನಿ; ಆಗ ನೀವು ಭಾರವಾದ ಧ್ವನಿಯಿಂದ 'ನಾಲ್ವತ್ತು' ಎಂದೀರಿ. ನಿಮ್ಮ ಗೆಳೆಯರು 'ಹಾಂ!ನಾಲ್ವತ್ತೆ? ನಾನು ನಿಮಗಿನ್ನೂ ಇಪ್ಪತ್ತೆಂಟು-ಮೂವತ್ತು ಇರಬಹುದು ಎಂದುಕೊಂಡಿದ್ದೆ!' ಎಂದರೆ ನಿಮ್ಮ ಮುಖದ ಮೇಲೆ ಆಗ ನಿಜಕ್ಕೂ ಎಳೆತನದ ಮುಗ್ಧ ಕಳೆ ತುಂಬಿ ನಿಮ್ಮ ವದನಾರವಿಂದ ರಂಗೇರಿಬಿಡುತ್ತದೆ. ನರನಾಡಿಗಳು ಗತಯೌವನದ ಶಕ್ತಿ ಸಾಮರ್ಥ್ಯದ ನೆನಹಿನೊಂದಿಗೆ ಸಚೇತನವಾಗಿಬಿಡುತ್ತವೆ. ಅದೇ ಅವರು ಕಿಡಿಗೇಡಿತನದಿಂದ 'ಅಷ್ಟೇನೇ... ಯಾಕೆ ನೀವು ಹೈಸ್ಕೂಲಿಗೆ ಹೋಗುತ್ತಿದ್ದಾಗ ನಾನಿನ್ನೂ ಶಾಲೆಗೇ ಸೇರಿರಲಿಲ್ಲ. ನನಗೇ ಈಗ ಇಪ್ಪತ್ತೆಂಟು' ಎಂದು ತಣ್ಣೀರೆರೆಚಿದರೆ ಆಗ ನೀವು ಮೃತಪ್ರಾಯರಾಗಿಬಿಡುತ್ತೀರಿ. ನಿಮ್ಮ ಕಳೆಗುಂದಿದ ಮುಖದಲ್ಲಿ ಮುಪ್ಪಿನ ಆಳವಾದ ಗೆರೆಗಳು ಮೂಡಿಯಾವು. ಇದು ನಮ್ಮ-ನಿಮ್ಮ ಮಾತಲ್ಲ. ಇಡೀ ಮಾನವ ಕೋಟಿಯೇ ಹೀಗೆ ವಯೋವೇಧೆಯಿಂದ ಪರಿತಪಿಸುತ್ತಿದೆ. ಭೂಮಿ-ಸೂರ್ಯ-ಚಂದ್ರ ಗ್ರಹತಾರೆಗಳಿಗೆ-ಸ್ವಯಂ-ಬ್ರಹ್ಮನಿಗೇ ಈ ವಯೋವೇಧೆ ತಪ್ಪಿದ್ದಲ್ಲ.

ನಿಸರ್ಗ ಹಾಗೂ ಜಗತ್ತಿನ ಜೀವರಾಶಿಗಳೆಲ್ಲವುಗಳ ವಯಸ್ಸನ್ನು ನಿಮಿಷ ದಿನ ವಾರ-ಮಾಸ ಸಂವತ್ಸರ-ಯುಗ-ಕಲ್ಪಗಳೆಂದು ಅಳೆಯುವ ಚಾತುರ್ಯವಾದರೂ ಮನುಷ್ಯನಿಗೇ ಸಾಧಿಸಿದೆ. ತನ್ನ ಉಪಯೋಗಕ್ಕಾಗಿ ವಸ್ತುಗಳನ್ನು ಆಯ್ದುಕೊಳ್ಳುವಾಗ ಎಳೆಯದು-ಬಲಿತದ್ದು, ಮೊಗ್ಗು-ಹೂ, ಹೀಚು-ಹಣ್ಣು ಎಂದು ಗುಣ ವಿಭಜನೆ ಮಾಡುವಾಗಲೂ ಈ ದಿನಮಾನದ ಆಧಾರದಿಂದಲೆ ಯೋಗ್ಯತೆಯನ್ನು ನಿರ್ಧರಿಸಲಾಗುತ್ತದೆ. ಆದರೆ ಇದೇ ಅಳತೆಗೋಲನ್ನು ತನ್ನ ವಿಷಯಕ್ಕೆ ಹಚ್ಚಿದಾಗ 'ವಯಸ್ಸು ಸಂದಿದೆ' ಎಂದು ತಿಳಿದಾಗ ಮನುಷ್ಯ ತುಂಬ ದುಃಖಿತನಾಗುತ್ತಾನೆ. ತನ್ನ ನಿಜವಾದ ವಯಸ್ಸನ್ನು ನೆನೆದು ಭೀತನಾಗುತ್ತಾನೆ ಹೇಳಿಕೊಳ್ಳಲು ನಾಚುತ್ತಾನೆ.

ಬಿತ್ತಲು ಬಲಿತ ಬೀಜ, ಆಸರೆಗೆ ಬೆಳೆದ ಹೆಮ್ಮರ, ಮುಡಿಯಲು ಅರಳಿದ ಹೂವು, ಸವಿಯಲು ರಸ ತುಂಬಿ ಮಾಗಿದ ಹಣ್ಣು ಯೋಗ್ಯ

ವಾಗುವಂತೆ ಸಾರ್ಥಕತೆಗೆ ಪ್ರೌಢ ವಯಸ್ಕರೂ ಯೋಗ್ಯವೆಂದೇಕೆ ಅನಿಸಬಾರದು? ಹಗಲಿನ ಹಲವು ಬೇಗೆಗಳನ್ನು ನಂದಿಸುವ ಶಾಂತ ಸುಮನೋಹರ ಸಂಧ್ಯೆಯನ್ನು ಅಂಜಲಿಬದ್ಧರಾಗಿ ವಂದಿಸುತ್ತೇವೆ. ದಣಿದ ದೇಹ ಮನಸ್ಸುಗಳು ನಿಶ್ಶಬ್ದ ನಿರಾಪದ ನಿಶೀಥೆ ಬಂದೀತೆ ಎಂದು ತಪಿಸುವ ದಿನಗಳೂ ಉಂಟು. ಆದರೂ ಸ್ವತಃ ನಮಗಾಗುವ ವಯಸ್ಸಿನ ಬಗೆಗೆ ಭೀತರಾಗುತ್ತೇವೆ. ವಿಚಾರ ಮಾಡಿದಲ್ಲಿ ಇದು ಭೀತಿಯಲ್ಲ. ವಯೋಮಾನಕ್ಕನುಗುಣವಾಗಿ ಬುದ್ಧಿ ವಿಕಾಸಗೊಳ್ಳದೆ ಪ್ರಾಪಂಚಿಕತೆಯ ಪ್ರಲೋಭನೆಗೊಳಗಾದ ಅಪ್ರಬುದ್ಧ ಜೀವಿಗಳ ಮೇಲೆ ಹಾಯುವ ಭೀತಿಯ ನೆರಳು ಮಾತ್ರ. ದಿನಗಳೆದಂತೆಲ್ಲ ಅನುಭವದ ಬೆಳಕು ನಮ್ಮ ಬಾಳನ್ನು ಬೆಳಗಿದಲ್ಲಿ ಈ ಭೀತಿಯ ಛಾಯೆ ದೂರ ಸರಿಯಬಲ್ಲದು. ಮೇಲೇರಿ ನೋಡಿದಂತೆಲ್ಲ ಕೆಳಗಿನ ವಸ್ತು ಚಿಕ್ಕದಾಗಿ ಕಾಣುವಂತೆ ವಯಸ್ಸು ಬಂದಂತೆಲ್ಲ ಜಗತ್ತಿನ ಆಮಿಷಗಳು ಕಿರಿದಾಗಬೇಕು. ವ್ಯಕ್ತಿ ತನ್ನದೇ ಆದ ಉಚ್ಚ ಸಂಸ್ಕೃತಿಯ ಬಾಂದಳದಲ್ಲಿ ತಲೆ ಎತ್ತಬೇಕು. ಆಗ ಮಾತ್ರ ತನಗೆ ಬಂದ ವಯಸ್ಸಿನ ಪಾವಿತ್ರ್ಯದ ಅರಿವಾದೀತು.

ಆದರೆ ನಮ್ಮ ಸಾಮಾಜಿಕ ಹಾಗೂ ಔದ್ಯೋಗಿಕ ಕ್ಷೇತ್ರದಲ್ಲಿ ವಯೋಮಾನಕ್ಕೆ ಆಗುತ್ತಿರುವ ಅಪಚಾರದಿಂದಾಗಿ ನಮಗೆ ಬರುವ ದಿನಗಳು ಒಂದು ಅಭಿಶಾಪವೇ ಆಗಿ ಕುಳಿತು ಬಿಡುತ್ತವೆ. ಈಗ ಮದುವೆಯ ಮಾತನ್ನೇ ತೆಗೆದುಕೊಳ್ಳಿ. ಮುಖ್ಯವಾಗಿ ಹೆಣ್ಣು ಮಕ್ಕಳಿಗೆ ಸ್ವಲ್ಪ ವಯಸ್ಸಾದರೆ ತೀರಿತು, ಮದುವೆ ಮಾಡುವ ಹೊಣೆಗಾರರಿಗಿಂತ ಹೆಚ್ಚಾಗಿ ದೂರುವ ಹೊಣೆಗಾರರೇ ಚಡಪಡಿಸುತ್ತಾರೆ. ನೀವು ನೋಡಿರಬಹುದು- ಇಬ್ಬರು ತಾಯಂದಿರು ತಮ್ಮ ಅವಿವಾಹಿತ ಕನ್ಯೆಯರ ವಯಸ್ಸಿನ ವಿಷಯದಲ್ಲಿ ಚರ್ಚಿಸುವಾಗ 'ತನ್ನ ಮಗಳು ಮತ್ತೊಬ್ಬಾಕೆಯ ಮಗಳಿಗಿಂತ ಕಿರಿಯವಳು' ಎಂದು ಸಾಧಿಸಲು ತಮ್ಮದೇ ಜಗತ್ತಿನ ಹಲವಾರು ಪುರಾವೆಗಳನ್ನು ಮುಂದಿಟ್ಟು ವಾದ ಮಾಡುತ್ತಿರುತ್ತಾರೆ. ಈ ವಿತಂಡವಾದದಲ್ಲಿ ಸೋತ ಮಹಿಳೆ ತುಂಬ ನೊಂದುಕೊಂಡು ತನ್ನ ಮತ್ತೊಬ್ಬ ಆಪ್ತಗೆಳತಿಯೆದಿರು ಈ ವಿಷಯ ಪ್ರಸ್ತಾಪಿಸಿ ತನ್ನ ಮಗಳೇ ಕಿರಿಯವಳೆಂದು ಸಮರ್ಥಿಸಿಕೊಂಡ ಹೊರತು ಸಮಾಧಾನವಿರುವುದಿಲ್ಲ. ಆಗ ಆ ಬಿನ್ನಾಣಗಿತ್ತಿ "ಎಲ್ಲಿಯಾದರೂ ಉಂಟೆ! ಅವರ ವಾಸಂತಿಯ ವರುಷದ ಹೆಚ್ಚಿನಲ್ಲಿ ನೀವಿನ್ನೂ ಏಳರಲ್ಲಿ ಇದ್ದೀರಿ. ಅವರದ್ದೆಲ್ಲಾ ಹಸೀ ಸುಳ್ಳು ಬಿಡ್ರಿ!" ಎಂದು ಬಿಟ್ಟರೆ ಈ ಸೀತಾಬಾಯಿಗೆ ಅಭಿಮಾನದ ವಾತ ತುಂಬಿ ಹಿರಿಹಿರಿ ಹಿಗ್ಗಿಬಿಡುತ್ತಾರೆ. "ಮನೇ ಕಡೆ ಬರ್‍ರೀ, ಹಿತ್ತಿಲದಾಗ ಪಡವಲಕಾಯಿ ಆಗ್ಯಾವೆ, ನೀವೊಂದೆರಡು ತಗೊಂಡು ಹೋಗೀರಂತೆ" ಎಂದು ಆ ಮನೋರಮೆಯನ್ನು ಆಮಂತ್ರಿಸುತ್ತಾರೆ. ಹೀಗೆ ಲಂಚ ಕೊಟ್ಟಾದರೂ ತಮ್ಮ ಮಗಳು ಕಿರಿಯವಳೆನಿಸಿಕೊಳ್ಳುವುದು ಬೆಳೆವಣಿಗೆಯೇ ಕುಂದೆನಿಸಿರುವ ನಮ್ಮ ಸಮಾಜದಲ್ಲಿ ಹೆಣ್ಣು ಮಕ್ಕಳಿಗೆ ಅನಿವಾರ್ಯವಾಗಿಬಿಡುತ್ತದೆ.

ಇನ್ನು ನವುಕರಿ ವಿಷಯ ತೆಗೆದುಕೊಂಡರೆ ಕೂದಲಿಗಿದ್ದ ಬೆಲೆ ಮುದುಳಿಗಿರುವುದಿಲ್ಲ. ವ್ಯಕ್ತಿ ಎಷ್ಟೇ ಅನುಭವಿ ಇರಲಿ ಬುದ್ಧಿವಂತನಿರಲಿ ಅವನಿಗೆ ವಯಸ್ಸಾಯಿತೆಂದರೆ ಅವನು ಉದ್ಯೋಗಕ್ಕೆ ಅನರ್ಹನೆನಿಸಿಬಿಡುತ್ತಾನೆ. ಔದ್ಯೋಗಿಕ ಕ್ಷೇತ್ರದ ಈ ದೋಷವೇ ಅನೇಕರನ್ನು ನಿರುದ್ಯೋಗಿಗಳನ್ನಾಗಿಸಿದೆ. ಅಷ್ಟೇ ಅಲ್ಲ, ವಯೋಮಾನದ ಕಾಳ ಸಂತೆಯನ್ನಾಶ್ರಯಿಸಲೂ ಇಂಬುಗೊಡುತ್ತದೆ. ಮುಂದೆ ಬರಬಹುದಾದ ವಯಸ್ಸಿನ ಕುತ್ತನ್ನು ಪರಿಹರಿಸಲೆಂದೇ ಶಾಲೆಗೆ ಮಕ್ಕಳನ್ನು ಸೇರಿಸುವಾಗಲೇ ಅವರ ವಯಸ್ಸನ್ನು ಕತ್ತರಿಸಿ ಮೊಟಕು ಮಾಡಿ ಹುಗಿಯಲಾಗುತ್ತದೆ. ಕೆಲವು ನತದೃಷ್ಟರು ದಿನಗಳೆದ ಬಳಿಕ ತಮ್ಮ ಹುಟ್ಟಿದ ತಾರೀಖನ್ನು ಬದಲಿಸ ಹೋಗಿ ಸಿಕ್ಕಿ ಬೀಳುತ್ತಾರೆ. ಈ ಅವಾಂತರವೆಲ್ಲ ವಯೋ

ವೇಧೆಯ ಪರಿಣಾಮವೇ ಹೊರತು ಬೇರೆಯಲ್ಲ.

ಇಂತಹ ಸಮಸ್ಯಾತ್ಮಕ ಪ್ರಸಂಗಗಳಲ್ಲಿ ವಯಸ್ಸು ಹೆಚ್ಚಾಯಿತೆಂದು ಸಂಕಟಪಡುವುದು ಕ್ಷಮ್ಯವಾದರೂ ಈ ಜಗತ್ತಿನ ವಿಲಾಸ ಜೀವನಕ್ಕೆ ಎರವಾಗುವೆನಲ್ಲಾ ಎಂದು ಪರಿತಪಿಸುವುದು ಅತೃಪ್ತ ಕಾಮನೆಯ ಅವಿಚಾರದೊಂದಿಗೆ ಆವರಿಸುವ ಲುಬ್ಧತೆ.

ಹೆಚ್ಚಾಗಿ ಸ್ತ್ರೀಯರೇ ವಯಸ್ಸನ್ನು ಮರೆಮಾಚುತ್ತಾರೆಂಬ ಆಪಾದನೆ ಬಹಳವಿದೆ. ಅವರು ವಯಸ್ಸಿನ ಬಗೆಗೆ ವೃಥಾಭಿಮಾನ ತಾಳುವ ಈ ಮರುಳುತನವನ್ನು ಕಲಿಸಿದವರಾದರೂ ಪುರುಷರೇ. ತಮ್ಮ ಮಸಳಿಸಿದ ಯೌವನವನ್ನು ತಮ್ಮ ಸಹಭಾಗಿನಿಯರ ಎಳೆತನದ ಪ್ರಭಾವಳಿಯಲ್ಲಿ ರಾಗರಂಜಿತವಾಗಿರಿಸಲೆಂದು ಏನೆಲ್ಲ 'ಪ್ರಾಯಕಲ್ಪ'ದ ಪ್ರಯೋಗಗಳನ್ನು ನಡೆಸಲು ಎಲ್ಲ ಜಾಹಿರಾತುಗಳನ್ನೂ ಓದಿ ಸೌಂದರ್ಯ-ಸಾಧನಗಳ ಪರಿಚಯ ಮಾಡಿಸಿ ಕೊಡುವುದರಲ್ಲಿ ತಮ್ಮ ಬುದ್ಧಿಯನ್ನು ತೊಡಗಿಸುವ ಗಂಡಸರಿಗೇನು ಕಡಿಮೆ ಇಲ್ಲ. ಗಂಡನಾದವನು ತನ್ನ ಹೆಂಡತಿ ಎಂದಿಗೂ ತನಗಿಂತ ಚಿಕ್ಕವಳೇ ಇರುತ್ತಾಳೆಂಬ ಭರವಸೆ ಸಾಲದೆ ಎದುರು ಮನೆಯ ಯುವಕನೊಬ್ಬನ ನವ ವಧುವಿನಂತಾಗಲಿ ಎಂದಾಗಲೀ ಅಥವಾ ರಜತ ಪರದೆಯ ಮೇಲೆ ತಾನು ಕಂಡು ಮೆಚ್ಚಿದ ತಾರಾಮಣಿಯಂತಾಗಲಿ ಎಂದಾಗಲಿ ಹೆಣ್ಣಿನ 'ವರ್ಣೋಪಚಾರ'ಕ್ಕೆ ಉತ್ತೇಜನವಿತ್ತಲ್ಲಿ ನವಿಲನ್ನು ಕಂಡು ಪುಕ್ಕ ತರಿದುಕೊಂಡ ಕೆಂಬೂತನಂತಾಗುವುದರಲ್ಲಿ ಸಂಶಯವಿಲ್ಲ. ಇದೇ ರೀತಿ ಅನುಕರಣ ಮುಂದುವರಿದಲ್ಲಿ ಕ್ರಮೇಣ ಬದುಕಿನ ಉಗಮಸ್ಥಾನಗಳಾದ ನಮ್ಮ ಮನೆಗಳು ಥಳುಕಿನ ' ಗ್ರೀನ್‌ರೂಮು ' ಗಳಾಗಬೇಕಾದೀತು.

ದಾಂಪತ್ಯದ ಕೆಲವು ವಿಷಯಕ್ಕೆ ವಯಸ್ಸು ಪ್ರಧಾನ, ದಿಟ. ಆದರೆ ದಂಪತಿಗಳ ಹೊಣೆಗಾರಿಕೆ ಹಾಗೂ ಸಮರಸ ಭಾವನೆಗಳಿಂದ ಬಾಳು ಸತ್ಯಂ-ಶಿವಂ-ಸುಂದರಮ್' ಆಗಬೇಕಾದರೆ ಬಾಲ್ಯದ ಮುಗ್ಧತೆ-ಯೌವನದ ಮಾದಕತೆ ಮಾಯವಾಗಿ ಕರ್ತವ್ಯಪಥದಲ್ಲಿ ಹಲವು ಕಾಲ ದಾರಿ ಸವೆಯಿಸಬೇಕಾಗುವುದು ಲಾಭಕರ. ನಿಜವಾದ ಗಂಡ-ಹೆಂಡಿರಾಗುವುದು ಕಷ್ಟಸುಖಗಳಲ್ಲಿ ಪಾಲುಗೊಂಡು ಬಾಳಿನ ಕಹಿಸಿಹಿಗಳ ರುಚಿಯನ್ನರಿತ ಬಳಿಕವೇ. ಹೆಣ್ಣಿಗೆ ವಯಸ್ಸಾಯಿತು ಎನ್ನುವ ಗಂಡು—ಗಂಡಿನ ಮನವೊಲಿಸಲು ಎಳೆತನದ ಸೋಗಿಗೆಳೆಸುವ ಹೆಣ್ಣು ಇಬ್ಬರೂ ಒಂದು ವಿಧದಲ್ಲಿ ವಂಚಕರೇ. ಇದೇ ಭ್ರಮೆ ಬಲಿತಲ್ಲಿ ಒಬ್ಬರು ಮತ್ತೊಬ್ಬರಿಗಿಂತ ಮುದುಕರಾದರೆಂದು ಬಗೆದು ಎಡ ಬಲಗಳಿಗೆ ಕಣ್ಣು ಹಾಯಿಸುವ ಮನಃಶೈಥಿಲ್ಯಕ್ಕೆ ಗುರಿಯಾಗುತ್ತಾರೆ. ಹೀಗೆ ವಯಸ್ಸಿನ ಬಗ್ಗೆ ಗೌರವಹೀನ ಕಲ್ಪನೆಯುಳ್ಳವರು ಶಿಖರವನ್ನೇರುವ ಪರ್ವತಾರೋಹಿ ತಪ್ಪಲಿನಲ್ಲಿದ್ದೇನೆಂದು ಅಜಾಗರೂಕನಾದರೆ ಮುಗ್ಗರಿಸುವಂತೆ ಇವರೂ ಬಾಳಿನಲ್ಲಿ ಮುಗ್ಗರಿಸಿ ಬೀಳುತ್ತಾರೆ. ಪಾಶ್ಚಾತ್ಯರ ಬಹುಸಂಖ್ಯೆಯ ದಾಂಪತ್ಯ ವಿಚ್ಛೇದನಕ್ಕೆ ಈ ಭ್ರಮೆಯೇ ಬಹಳ ಸಂದರ್ಭಗಳಲ್ಲಿ ಕಾರಣವಾಗುತ್ತಿದೆ. ನಮ್ಮಲ್ಲಿ ಬಹಿರಂಗ ಘಟಸ್ಫೋಟವಾಗದಿದ್ದರೂ ಅಂತರಂಗ ಮನಃಸ್ಫೋಟಕ್ಕಂತೂ ಎಡೆಯಾದೀತು. ಪ್ರೌಢ ದಂಪತಿಗಳು ತಮ್ಮ ಪ್ರೌಢಿಮೆಯ ಸದುಪಯೋಗದಿಂದ ಕುಟುಂಬ ಸೌಖ್ಯವನ್ನು ಸಾಧಿಸಲು ಅಸಮರ್ಥರಾಗಿ ವಯಸ್ಸಿನ ಬಗೆಗೆ ಗೊಣಗುವುದೂ—ಮನೆಯ ಸೂರು ಚಿಗುರಲಿಲ್ಲೆಂದು ಕಿತ್ತು ಬಿಸುಡುವುದೂ ಎರಡೂ ಒಂದೇ.

ನಮ್ಮ ಸಂಪ್ರದಾಯದಲ್ಲಿ ವ್ಯಕ್ತಿಗಳು ಈ ಜಗತ್ತಿಗೆ ಹಳಬರಾದಷ್ಟು ಅವನಿಗೆ ಮಾನ್ಯತೆ ಹೆಚ್ಚಿ ಅವರು 'ಗುರು-ಹಿರಿಯರು' ಎನಿಸಿಕೊಳ್ಳುತ್ತಾರೆ. ಪೂರ್ವಜರು ವಯೋಮಾನಕ್ಕನುಸಾರವಾದ ಸಂಸ್ಕಾರ ಅವಶ್ಯಕವೆಂದೇ ಆಶ್ರಮಧರ್ಮವನ್ನು ವಿಧಿಸಿರುವರು. ವಯಸ್ಸಿನ ಹಂತ ಹಂತಕ್ಕೂ ಮನುಷ್ಯನ ಕರ್ತವ್ಯದ ಹೊಣೆಗಾರಿಕೆ ಹೆಚ್ಚುತ್ತದೆ. ಲೋಕೋಪಯೋಗಿಯಾಗುತ್ತದೆ ಅವನ ಜೀವಿತ. ವ್ಯಕ್ತಿ ಶ್ರೇಷ್ಠನಾಗುತ್ತಾನೆ, (ಜ್ಯೇಷ್ಠಃ ಶ್ರೇಷ್ಠಃ)

ಪೂಜ್ಯನಾಗುತ್ತಾನೆ. ಈ ಸಂಸ್ಕೃತಿಯ ಲೇಶಾಂಶವಾದರೂ ನಮಗೆ ನೆರವಾದಲ್ಲಿ ನಾವು ಈ ವಯೋವೇಧೆಯಿಂದ ಪಾರಾಗಬಲ್ಲೆವು.

ನಾವು ಎಳೆಯರಾಗಿರಲು ಆಶಿಸುವುದು ನಿಂದ್ಯವಲ್ಲ. ಆದರೆ ಬೊಟ್ಟು ಚೀಪುತ್ತಲೇ ಇರುತ್ತೇವೆಂದರೆ ತಪ್ಪಾಗುತ್ತದೆ. ನಮಗೆ ವಯಸ್ಸು ಬಂದಂತೆಲ್ಲ ನಮ್ಮ ಆಶೆ-ಆಕಾಂಕ್ಷೆಗಳು ಸಂಕುಚಿತ ಪ್ರಪಂಚಕ್ಕಷ್ಟೇ ಮುರುಟದೆ ಜಗದಗಲ ವಿಸ್ತಾರಗೊಳ್ಳುವಂತೆ ಪ್ರಬುದ್ಧವಾಗಬೇಕು. ನಮ್ಮ ಬಾಳಿಗೊಂದು ಹಿರಿದಾದ ಧ್ಯೇಯವಿದೆ. ಅದರ ಸಾಧನೆಗೆ ದಿನಗಳೆದಂತೆಲ್ಲಾ ಪ್ರಾಪಂಚಿಕದ ನಿಶೆಯನ್ನು ಕಳೆದು ನಮ್ಮನ್ನು ನಿತ್ಯನೂತನವಾಗಿಡಬಲ್ಲ ದೈವೀ ಪ್ರಭಾತದ ಮುಂಗಿರಣದಲ್ಲಿ ಮುಂದುವರಿಯುತ್ತ ಸಾಗುತ್ತಿರಬೇಕು. ನಮಗೆ ನಮ್ಮ ಎಷ್ಟನೇ ವಯಸ್ಸಿನಲ್ಲಿ ಅಂತಹ ಸುಪ್ರಭಾತನ ದರ್ಶನವಾಗುವುದೆಂದು ಹೇಳಲಾಸಲ್ಲ. ನಮಗೆ ಬರುವ ವಯಸ್ಸು ನಮ್ಮನ್ನು ಮೇಲೇರಿಸಬಲ್ಲ ನಿಚ್ಚಣಿಕೆಯ ಪಾವಟಿಗೆಗಳೆಂಬ ಭರವಸೆಯಿಂದ 'ನಮ್ಮೊಳಗಿನ ಒಳಗು' ಚಿರನೂತನವಾಗಿರಬಲ್ಲದು. ಈ ಅಂತಃಸತ್ವದ ಬಲುಮೆಯಲ್ಲಿ ನಾವು ತೇಜೋವಂತರಾಗಿ ಬಾಳಿಯೇವು. ಇಂತಹ ಸುಸಂದರ್ಭಕ್ಕಾಗಿ ತಮ್ಮ ಇಡೀ ಜೀವನದಲ್ಲೇ ಜಾಗ್ರತರಾಗಿ ಗುರಿ ಸಾಧಿಸಿದ 'ಧೀರರು' ಆಗಿಹೋಗಿದ್ದಾರೆ– ಈಗಲೂ ನಮ್ಮ ಕಣ್ಮುಂದೆ ವಯಸ್ಸಾದರೂ ತರುಣರಂತೆ ದುಡಿಯುತ್ತಿರುವ ಮಹಾಪುರುಷರಿದ್ದಾರೆ. ಅವರ ಆದರ್ಶದ ಬೆಳಕಿನಲ್ಲಿಯಾದರೂ ನಮ್ಮನ್ನು ಮುತ್ತಿಕಾಡುವ ಈ ವಯೋವೇಧೆ ನಿರ್ನಾಮವಾದೀತೆಂದು ಆಶಿಸುವ! *

# ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

## ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾಗಿ ಅರ್ಥಗಳನ್ನು ವಿವರಿಸಿದೆ.

೧. ಸಾಂಪ್ರತ
(ಅ) ಕ್ಷೇಮ (ಆ) ತುಂಬಿತುಳುಕುವ (ಇ) ಸದ್ಯಕ್ಕೆ (ಈ) ಒಟ್ಟಾಗಿ

೨. ಬೇಗುದಿ
(ಅ) ಸಂತಾಪ (ಆ) ವಿಚಾರಹೀನ (ಇ) ಮೂರ್ಛೆ (ಈ) ಬುದ್ಧಿವಂತ

೩. ಮಂಜರಿ
(ಅ) ಹೆಣ್ಣುಬೆಕ್ಕು (ಆ) ಹಿಮರಾಶಿ (ಇ) ಮಸುಕು (ಈ) ಗೊಂಚಲು

೪. ಪ್ರಸಕ್ತಿ
(ಅ) ಬಲ (ಆ) ಸಂಬಂಧ (ಇ) ಬೇಸರ (ಈ) ಮುತ್ತಿನ ಚಿಪ್ಪು

೫. ಪಾಂಡುರ
(ಅ) ಪುರೋಹಿತ (ಆ) ಬೆಳ್ಳಗಿನ (ಇ) ಪಾಂಡ್ಯದೇಶದವ (ಈ) ಹಂಡೆ

೬. ಜಪ್ಪಿಸು
(ಅ) ಗುದ್ದು (ಆ) ಜಾಗ್ರತೆ ವಹಿಸು (ಇ) ಹಲುಬು (ಈ) ಬಹಳ ಮಾತಾಡು

೭. ಗೋಷ್ಠಿ
(ಅ) ಸೆರೆಮನೆ (ಆ) ಅವ್ಯವಸ್ಥೆ (ಇ) ಸಭೆ (ಈ) ಆಕಳ ಹಿಂಡು

೮. ಈಷತ್
(ಅ) ಸ್ವಲ್ಪ (ಆ) ಆಸೆ (ಇ) ಕಬ್ಬು (ಈ) ನೀರು

೯. ಸಮುಚ್ಚಯ
(ಅ) ಸಂಗ್ರಹ (ಆ) ಬಾಯಿ ಮುಚ್ಚುವಿಕೆ (ಇ) ಬಹಳ ಎತ್ತರ (ಈ) ಕುದುರೆಯ ಕೂಗು

೧೦. ಉತ್ಕೋಚ
(ಅ) ಕುಗ್ಗುವಿಕೆ (ಆ) ಮೇಲೆ ನೋಡುವುದು (ಇ) ಉಬ್ಬಿದ ಎದೆ (ಈ) ಅಡ್ಡದಾರಿ ಹಿಡಿಯುವಿಕೆ

೧೧. ಅನರ್ಘ್ಯ
(ಅ) ಕೈತೊಳೆಯುವಿಕೆ (ಆ) ಚಿಲುಕ ಹಾಕದ ಮನೆ (ಇ) ಬಲವಾದ (ಈ) ಅಮೂಲ್ಯ

೧೨. ದುರ್ಲಂಘ್ಯ
(ಅ) ಹಾರಲಾರದ (ಆ) (ಇ) (ಈ)

# ' ಶಬ್ದಭಾಂಡಾರ ' ದ ಸರಿಯಾದ ಅರ್ಥಗಳು

೧. **ಸಾಂಪ್ರತ** (ಇ) ಸದ್ಯಕ್ಕೆ, ಇದೀಗ; ಸದ್ಯದ, ಪ್ರಸ್ತುತ; ಯೋಗ್ಯ, ಸರಿಯಾದ ಉಚಿತವಾದ. ಉದಾ:— ಸಾಂಪ್ರತ ವಿಚಾರವನ್ನು ಮಾಡೋಣ. [ಸಂ. ಸಂಪ್ರತಿ = ಈಗ—ದಿಂದ]

೨. **ಬೇಗುದಿ** (ಅ) ಸಂತಾಪ, ಸುಡುವ ಸೆಕೆ, ತ್ರಾಸ, ಕಷ್ಟ, ದುಃಖ. ಉದಾ:— ನನ್ನ ಮನದ ಬೇಗುದಿ ನನಗೇ ಗೊತ್ತು. [ಕನ್ನಡ—ಬೇಯ್ + ಕುದಿ]

೩. **ಮಂಜರಿ** (ಈ) ಗೊಂಚಲು, ಹೂಗೊಂಚಲು, ಕವಲೊಡೆದ ಹೂದಂಟು. [ಸಂ.]

೪. **ಪ್ರಸಕ್ತಿ** (ಆ) ಸಂಬಂಧ, ಯಾವುದರಲ್ಲಾದರೂ ತೊಡಗಿರುವುದು, ತತ್ಪರತೆ, ಪ್ರಸಂಗ, ಮಾತಿನ ವಿಷಯ, ಪ್ರಸ್ತಾಪ. [ಸಂ.]

೫. **ಪಾಂಡುರ** (ಆ) ನಸುಹಳದಿ ಬೆಳ್ಳಗಿನ, ಬೆಳ್ಳಗಾದ, ಬಿಳುಪೇರಿದ, ಬಿಳಿಚಿದ. [ಸಂ. ಪಾಂಡು = ಬೆಳ್ಳನ್ನ.]

೬. **ಜಪ್ಪಿಸು** (ಆ) ಜಾಗ್ರತೆವಹಿಸು, ಸೈರಣೆಯಿಂದ ನೋಡಿಕೊಂಡಿರು, ಅಡಗಿಕೊಂಡು ನೋಡುತ್ತಿರು. ಉದಾ:— ಹೆಂಡತಿಯನ್ನು ಬಹಳ ಜಪ್ಪಿಸಬೇಕಾಗುತ್ತಿತ್ತು. [ಮರಾಠಿ—ಜಪಣೇಂ].

೭. **ಗೋಷ್ಠಿ** (ಇ) ಸಭೆ, ಸಮ್ಮೇಳನ, ಕೂಟ; ಸಂಭಾಷಣೆ, ಉಪನ್ಯಾಸ; ಸಹವಾಸ, ಗೊಡವೆ. ಉದಾ:— ಯಾರ ಗೋಷ್ಠಿಯೂ ಇಲ್ಲದೆ ಜೀವನ ಮಾಡುತ್ತಾನೆ ಅಂದರೆ ಯಾರ ಗೊಡವೆಯೂ ಇಲ್ಲದೆ ಬಾಳುತ್ತಾನೆ. [ಸಂ. ಗೋಷ್ಠ = ಕೊಟ್ಟಿಗೆ.]

೮. **ಈಷತ್** (ಅ) ಸ್ವಲ್ಪ, ಅಲ್ಪ, ತುಸು, ಬಲು ಕಡಿಮೆ. ಉದಾ:— ಈಷದ್ದುಃಖದಿಂದಲೇ ಹೀಗೆ ಸೋತರೆ ಹೇಗೆ [ಸಂ.]

೯. **ಸಮುಚ್ಚಯ** (ಅ) ಸಂಗ್ರಹ, ಶೇಖರಣೆ; ಶಬ್ದಗಳ ಜೋಡಣೆ; ಸ್ವತಂತ್ರವಾಗಿದ್ದರೂ ಸಮಾನ ಉದ್ದೇಶಕ್ಕಾಗಿ ಒಂದುಗೂಡಿದ ಸಂಗತಿಗಳು. [ಸಂ. ಸಂ+ ಉತ್ = ಚಯ.]

೧೦. **ಉತ್ಕೋಚ** (ಈ) ಅಡ್ಡದಾರಿಹಿಡಿಯುವಿಕೆ, ಸರಿ ದಾರಿಯನ್ನು ಬಿಟ್ಟು ವರ್ತಿಸುವುದು; ಲಂಚ. [ಸಂ.]

೧೧. **ಅನರ್ಘ್ಯ** (ಈ) ಅಮೂಲ್ಯ, ಅತ್ಯಂತ ಬೆಲೆ ಬಾಳುವ, ಎಷ್ಟು ಬೆಲೆ ಕೊಟ್ಟರೂ ಸಿಗದ. ಉದಾ:— ಅನರ್ಘ್ಯವಾದ ರತ್ನಗಳನ್ನು ಕಾಣಿಕೆ ಕೊಟ್ಟನು. [ಸಂ. ಅನ್ = ಇಲ್ಲ, ಅರ್ಘ್ಯ = ಬೆಲೆ.]

೧೨. **ದುರ್ಲಂಘ್ಯ** (ಅ) ಹಾರಲಾರದ, ಕಣಿ ಇತ್ಯಾದಿ ದಾಟಲಾರದ, ಕಷ್ಟದಿಂದ ದಾಟಬಹುದಾದ ಅಥವಾ ಹಾರಬಹುದಾದ. ಉದಾ:— ಅರಸನ ಅಪ್ಪಣೆ ದುರ್ಲಂಘ್ಯವಾಗಿದೆ ಆದರೆ ಅದನ್ನು ಪಾಲಿಸದಿರುವುದು ಕಷ್ಟ. [ಸಂ.]

---

## ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

| | | |
|---|---|---|
| ೭—೮ | ಸರಿಯಿದ್ದರೆ | ... ಸಾಧಾರಣ |
| ೯—೧೦ | " | ... ಉತ್ತಮ |
| ೧೧—೧೨ | " | ... ಅತ್ಯುತ್ತಮ |

# ನಗೆಮಲ್ಲಿಗೆ

ಓರ್ವ ಪೋಲೀಸ್ ಹೇಗೂ ಮಾಡಿ ಒಬ್ಬ ಕಳ್ಳನನ್ನು ಹಿಡಿದಿದ್ದ. ತನ್ನ ಈ ವಿಜಯಕ್ಕಾಗಿ ಭಾರೀ ಹೆಮ್ಮೆ ಅವನಿಗೆ. ಆದರೆ ಆ ಕಳ್ಳ ಬಲು ಚತುರ. ಆತ ಪೋಲೀಸನೊಡನೆ ಬರಲೊಪ್ಪಲಿಲ್ಲ. "ನಾನು ಆ ಹೋಟಲ್ಲಿಗೆ ಹೋಗಿ ನನ್ನ ವಕೀಲರಿಗೆ ಸ್ಟೇಶನ್ನಿಗೆ ಬರುವಂತೆ ಫೋನ್ ಮಾಡಿ ಬರುತ್ತೇನೆ" ಎಂದ. ಆಗಬಹುದೆಂದು ಆ ಪೋಲೀಸ್ ಆತನನ್ನು ಹೋಗಗೊಟ್ಟ. ಆ ಕಳ್ಳ ಫರಾರಿಯಾದ.

ಆರು ತಿಂಗಳುಗಳ ತರುವಾಯ ಅದೇ ಕಳ್ಳ ವಜ್ರಗಳನ್ನು ಕದ್ದು ಓಡುತ್ತಿರುವಾಗ ಅದೇ ಪೋಲೀಸನ ಕೈಯಲ್ಲಿ ಸಿಕ್ಕು ಬಿದ್ದ. ಮೊದಲಿನ ಉಪಾಯವನ್ನೇ ಹೇಳಿ ಪಾರಾಗಲು ಆತ ಹವಣಿಸಿದಾಗ ಆ ಪೋಲೀಸ್ ನುಡಿದ:

"ಆಹಾ! ಈ ಸಲವೂ ನೀನು ನನ್ನನ್ನು ಮೋಸಗೊಳಿಸಲಾಗುವುದಿಲ್ಲ. ಕೊಂಚ ಹೊತ್ತು ಈ ವಜ್ರಗಳನ್ನು ಹಿಡಿದುಕೊಂಡು ಇಲ್ಲೇ ನಿಂತಿರು. ನಾನೇ ಹೋಗಿ 'ಫೋನ್' ಮಾಡಿ ಬರುತ್ತೇನೆ."

*

ಪೋಸ್ಟ್ ಆಫೀಸಿನಲ್ಲಿ ರಾಯರ ಕವರನ್ನು ತೂಕಮಾಡಿ ನೋಡಿದ ಕ್ಲಾರ್ಕ್ ಅದಕ್ಕೆ ಇನ್ನೂ ಒಂದು ಚೀಟು ಅಂಟಿಸಬೇಕೆಂದಾಗ ರಾಯರು ದಂಗಾದರು. "ಏನು, ಇನ್ನೊಂದು ಚೀಟು ಹಚ್ಚಿ ಅದನ್ನಿನ್ನೂ ಭಾರ ಮಾಡಲೇ?" ಎಂದು ಕೇಳಿಯೇ ಬಿಟ್ಟರು ಅವರು.

*

ತನ್ನ ಪಟ್ಟಣದ ಮ್ಯೂಸಿಯಂ ನೋಡಿ ಬಂದಾಕೆ ಹೀಗೆ ನುಡಿದಳು: "ನನಗೇನೂ ಅಲ್ಲಿ ವಿಶೇಷ ಸಂಗ್ರಹವಿದ್ದಂತೆ ತೋರಲಿಲ್ಲ. ಇಂಗ್ಲೆಂಡಿನ ಆಕ್ಸಫರ್ಡ್ ಮ್ಯೂಸಿಯಂನಲ್ಲಿರುವಂತೆ ಇಲ್ಲೂ ಕೂಡ ಕ್ರಾಮ್‌ವೆಲ್ಲನ ಒಂದು ತಲೆ ಬುರುಡೆ ಇದ್ದಿದ್ದರೆ ಚೆನ್ನಾಗಿರುತ್ತಿತ್ತು!" "ಕೀರ್ತಿ" ಕುಂದಾಪೂರ.

*

ತಮ್ಮ ರೂಮಿನಲ್ಲಿ ಇದ್ದ ತನ್ನ ಮಗ ಮಗಳನ್ನು ಕುರಿತು ತಂದೆ ಕೇಳಿದರು, "ಅಲ್ಲಿ ಏನು ಮಾಡುತ್ತಿದ್ದೀರೋ?"

ಮಗ:— ಅಪ್ಪ-ಅಮ್ಮ ಆಟವಾಡುತ್ತಿದ್ದೀವಪ್ಪಾ!

ತಂದೆ:— ಸರಿ! ಜಗಳವಾಡದೇ ಆಡಿಕೊಳ್ಳಿ.

*

ಫೋಟೋ ತೆಗೆಯುತ್ತಿದ್ದ ಗಂಡನನ್ನು ಕುರಿತು ಹೆಂಡತಿ ಹೇಳಿದಳು, "ನನ್ನನ್ನು ಆಗಾಗ್ಗೆ ಫೋಟೋ ತೆಗೆಯುತ್ತೀರಲ್ಲಾ? ನಾನು ನೋಡುವುದಕ್ಕೆ ಚೆನ್ನಾಗಿ ಇದ್ದೀನಿ ಅಂತಾ ತಾನೇ?

ಗಂಡ:— ಛೆ! ಛೆ! ಒಂದು ಫೋಟೋನಲ್ಲಾದರೂ ಚೆನ್ನಾಗಿ ಬೀಳುತ್ತೀಯಾಂತ ನೋಡೋಣಾಂತ ಅಷ್ಟೆ!

—ಎನ್. ವೈ. ಪ್ರೇಮಾ

*

ಶಿಕ್ಷಕ- ನೀರು ಬರ್ಫವಾದಾಗ ಆಗುವ ತೀರ ಹೆಚ್ಚಿನ ಬದಲಾವಣೆ ಯಾವುದು?

ವಿದ್ಯಾರ್ಥಿ- ಅದರ ಬೆಲೆ ತೀರ ಹೆಚ್ಚಾಗುವುದು ಸಾರ್. —ನಾಗೇಶರಾವ್

ಉದ್ಯೋಗಾಕಾಂಕ್ಷಿಗಳಿಗೊಂದು
ಕಿವಿಮಾತು

# ‘ಇಂಟರ್‌ವ್ಯೂ’ನಲ್ಲಿ ಹೇಗೆ ಗೆಲ್ಲಬೇಕು?

ಬಳ್ಕೂರು ಸುಬ್ರಾಯ ಅಡಿಗ

ಎರಡು-ಮೂರು ದಶಕಗಳ ಹಿಂದೆ ನಮ್ಮ ದೇಶದಲ್ಲಿ ನಿರುದ್ಯೋಗ ಸಮಸ್ಯೆಯು ಇಂದಿನಂತೆ ತಲೆಬೇನೆಯಾಗಿರಲಿಲ್ಲ. ಆದ್ದರಿಂದ ಆಗ ಈಗಿನಂತೆ ಪೇದೆಯ ಕೆಲಸಕ್ಕೂ ಸಾವಿರಾರು ಮಂದಿ ಉಮೇದ್ವಾರರು ಬೆಲ್ಲಕ್ಕೆ ಇರುವೆ ಮುತ್ತಿದಂತೆ ಮುಕುರುತ್ತಿರಲಿಲ್ಲ. ಆಗ ಶಿಕ್ಷಿತರ ಸಂಖ್ಯೆಯೂ ಕಡಿಮೆಯಿತ್ತು; ದೇಶದ ಆರ್ಥಿಕ ಸ್ಥಿತಿಯೂ ಇಂದಿನಷ್ಟು ಶೋಚನೀಯವಿರಲಿಲ್ಲ... ಯಾವ ಉದ್ಯೋಗಕ್ಕೂ ಇಂಟರ್‌ವ್ಯೂವಿನ ಜಂಜಡವಿರುತ್ತಿರಲಿಲ್ಲ. ಯೋಗ್ಯತೆಗೆ ಅನುಗುಣವಾದ ಉದ್ಯೋಗ ಏನೊಂದೂ ತೊಂದರೆಯಿಲ್ಲದೆ ದೊರೆಯುತ್ತಿತ್ತು.

ಆದರೆ ಇಂದಿನ ಸ್ಥಿತಿ ಹಾಗಿಲ್ಲ. ಎಲ್ಲೆಲ್ಲೂ ನಿರುದ್ಯೋಗವು ತಾಂಡವವಾಡುತ್ತಿದೆ. ಒಂದು ಸ್ಥಾನಕ್ಕೆ ನೂರಾರು ಅರ್ಜಿಗಳು ಬರುತ್ತವೆ... ಉಮೇದ್ವಾರರಲ್ಲಿ ಒಬ್ಬನನ್ನು ಆರಿಸುವುದಕ್ಕಾಗಿ ಸಾಮಾನ್ಯವಾಗಿ ಇಂಟರ್‌ವ್ಯೂ ತೆಗೆದುಕೊಳ್ಳಲಾಗುತ್ತದೆ. ಆ ಕುರಿತು ಸ್ವಲ್ಪ ಮಟ್ಟಿಗೆ ತಿಳಿವಳಿಕೆ ನೀಡುವುದೇ ಈ ಲೇಖನದ ಉದ್ದೇಶ.

ಈಗಿನ ಹೆಚ್ಚಿನ ಉದ್ಯೋಗಗಳು ಕೇವಲ ವಶೀಲಿಯ ಮೇಲೆಯೇ ದೊರೆಯುವುವಾದರೂ ಕೆಲವೊಮ್ಮೆ ನಿಜವಾದ ಯೋಗ್ಯತೆಯುಳ್ಳವನಿಗೂ ಬೆಲೆ ಬರುವುದುಂಟು. ಅಧಿಕಾರಿಗಳು ನಿಷ್ಪಕ್ಷಪಾತಿಗಳಾಗಿದ್ದರೆ ಸಂಸ್ಥೆಯ ಅಭಿವೃದ್ಧಿ ದೃಷ್ಟಿಯಿಂದ ಯೋಗ್ಯ ವ್ಯಕ್ತಿಯನ್ನೇ ಆರಿಸಿಯಾರು.. ಇತರ ಎಲ್ಲ ಯೋಗ್ಯತೆಗಳಿದ್ದರೂ ಇಂಟರ್‌ವ್ಯೂನಲ್ಲಿ ಅಸಫಲನಾದರೆಂದರೆ ಅವನಿಗೆ ನೌಕರಿ ದೊರೆಯುವುದು ಕಷ್ಟವೇ.

ಆದ್ದರಿಂದ ಇಂಟರ್‌ವ್ಯೂಗೆ ಹೋಗುವ ಮೊದಲು ಸಾಕಷ್ಟು ಸಿದ್ಧತೆ ಮಾಡಿಕೊಳ್ಳಬೇಕು; ಅಲ್ಲಿ ಕೇಳಲಾಗುವ ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ಕೊಡುವ ಅಭ್ಯಾಸ ಮಾಡಿಕೊಳ್ಳಬೇಕು; ಎದುರು ನಿಂತೊಡನೆಯೇ ಗಡಗಡ ನಡುಗುವ ವ್ಯಕ್ತಿ ಸರಿಯಾದ ಸಿದ್ಧತೆ ಮಾಡಿಕೊಂಡಿಲ್ಲವೆಂದರ್ಥ; ಪೂರ್ವಸಿದ್ಧತೆ ಮಾಡಿಕೊಂಡಿದ್ದರೆ ಆತ್ಮವಿಶ್ವಾಸ ತಾನಾಗಿಯೇ ಮೂಡುತ್ತದೆ.

ಇಂಟರ್‌ವ್ಯೂನಲ್ಲಿ ಕೇಳುವ ಪ್ರಶ್ನೆಗಳಿಗೆ ತಕ್ಕ ಉತ್ತರ ಕೊಟ್ಟ ಮಾತ್ರಕ್ಕೆ ನಿಮ್ಮ ಕರ್ತವ್ಯ ಮುಗಿದಂತಾಗುವುದಿಲ್ಲ; ಆ ಸಮಯದಲ್ಲಿ ಈ ಮುಖ್ಯ ಅಂಶಗಳ ಕಡೆ ನೀವು ಗಮನ ಕೊಡಬೇಕು: (೧) ನಿಮ್ಮ ವೇಷ ಭೂಷಣಗಳು (೨) ನಿಮ್ಮ ನಡೆನುಡಿ ಮತ್ತು (೩) ಪ್ರಶ್ನೆಗಳಿಗೆ ನೀವು ಕೊಡುವ ಉತ್ತರ.

## ೧. ವೇಷಭೂಷಣ

ನಿಮ್ಮ ಉಡಿಗೆ ತೊಡಿಗೆಗಳು ಸರಳವೂ ಸ್ವಚ್ಛವೂ ಆಕರ್ಷಕವೂ ಆಗಿರಬೇಕು; ಅವನ್ನು ಓರಣವಾಗಿ ಧರಿಸಿರಿ. ಅಸ್ತವ್ಯಸ್ತ ಉಡುಗೆಯೂ

ಕೊಳೆಯಾದ ಬಟ್ಟೆಬರೆಯೂ ಅಧಿಕಾರಿಗಳ ಮೇಲೆ ದುಷ್ಪ್ರಭಾವ ಬೀರುತ್ತವೆ. ಸರಿಯಾಗಿ ಬಟ್ಟೆಯನ್ನೂ ತೊಡಲು ಬಾರದ ಮನುಷ್ಯ ಹೊಣೆಗಾರಿಕೆಯ ಹುದ್ದೆಯನ್ನು ನಿರ್ವಹಿಸಬಲ್ಲನೆ?

ಹಾಗೆಂದು ಮಿತಿಮೀರಿದ ಆಡಂಬರ ಪ್ರದರ್ಶನವೂ ಉಚಿತವಲ್ಲ. ಆದರಿಂದ ಅಧಿಕಾರಗಳ ಮನಸ್ಸಿನ ಮೇಲೆ ದುಷ್ಪ್ರಭಾವ ಉಂಟಾಗುವ ಭಯವಿದೆ.

ಒಮ್ಮೆ ಜವಾನನ ಕೆಲಸಕ್ಕಾಗಿ ಒಬ್ಬನನ್ನು ಇಂಟರ್ವ್ಯೂಗೆ ಕರೆಯಲಾಯಿತು. ಅವನು ಭರ್ಜರಿ ಪೋಷಾಕು ಧರಿಸಿ ಠೀವಿಯಿಂದ ಒಳಬಂದ. ಬೆಲೆಬಾಳುವ ಉಡುಗೆ ತೊಡುಗೆಯನ್ನು ಕಂಡು ಸಾದಾ ವೇಷದ ಮ್ಯಾನೇಜರ್ ನಿಬ್ಬೆರಗಾದ. ಆ ಉಮೇದ್ವಾರನಿಗೆ— ಆ ನೌಕರಿ ಸಿಕ್ಕಲಿಲ್ಲ ಸಂದರ್ಭಾನುಕೂಲವಲ್ಲದ ಆಡಂಬರವೂ ಹಾನಿಕರವೆಂದು ನಿಮಗೀಗ ಅರ್ಥವಾಗಿರಬಹುದು.

### ೨. ನಡೆನುಡಿ

ನಡೆನುಡಿಯೂ ಇಂಟರ್ವ್ಯೂನಲ್ಲಿ ಬಹು ಮಹತ್ವದ ಪಾತ್ರ ವಹಿಸುತ್ತದೆ. ಅದು ಪ್ರತ್ಯಕ್ಷವಲ್ಲದಿದ್ದರೂ ಅಪ್ರತ್ಯಕ್ಷವಾಗಿ ಅಧಿಕಾರಿಗಳ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ. ಇಂಟರ್ವ್ಯೂ ವೇಳೆ ಉಮೇದ್ವಾರರು ಹೆಚ್ಚಾಗಿ ಗಾಬರಿಗೊಳ್ಳುವುದರಿಂದ ಅವರ ವ್ಯವಹಾರವೂ ವಿಚಿತ್ರವಾಗುತ್ತದೆ. ಈ ಗಾಬರಿಯನ್ನು ತಪ್ಪಿಸಿಕೊಳ್ಳಬೇಕಾದರೆ ನೀವು ಕೋಣೆಯೊಳಗೆ ಪ್ರವೇಶಿಸುವಾಗ ಒಮ್ಮೆ ಆಳವಾಗಿ ಉಸಿರೆಳೆದುಕೊಳ್ಳಿರಿ. ನಿಮ್ಮ ಭುಜಗಳನ್ನು ಒಮ್ಮೆ ಹಿಂದಕ್ಕೆ ಬಾಗಿಸಿರಿ ಮತ್ತು ಗಡಿಬಿಡಿ ಮಾಡಿಕೊಳ್ಳದೆ ಆತ್ಮವಿಶ್ವಾಸದಿಂದಲೇ ಮುನ್ನಡೆಯಿರಿ. ಆತ್ಮವಿಶ್ವಾಸವೆಂದ ಮಾತ್ರಕ್ಕೆ ಅಹಂಕಾರ ಪ್ರದರ್ಶನವೆಂದರ್ಥವಲ್ಲ. ಅಹಂಕಾರ ಪ್ರದರ್ಶನವು ಸೋಲಿಗೇ ಕಾರಣವಾಗಬಹುದು.

ಕೆಲವೊಮ್ಮೆ ಉಮೇದ್ವಾರರು ಧೈರ್ಯದಿಂದ ಒಳನುಗ್ಗಿ ಅಧಿಕಾರಿಗಳೆದುರು ನಿಲ್ಲುತ್ತಾರೆ; ಮತ್ತು ತಮ್ಮ ಕೈಯಲ್ಲಿರುವ ಕಾಗದಪತ್ರಗಳನ್ನು ಮೇಜಿನ ಮೇಲೆಸೆದು ತಾವಾಗಿಯೇ ಎದುರಿನ ಕುರ್ಚಿಯ ಮೇಲೆ ದೊಪ್ಪನೆ ಕುಳಿತು ಬಿಡುತ್ತಾರೆ; ಮತ್ತು ಎಲ್ಲರಿಗೂ ಪ್ರಣಾಮ ಮಾಡುತ್ತಾರೆ. ಇದು ಉಮೇದ್ವಾರನ ಲಕ್ಷಣವಾಗಿರದೆ ಇಂಟರ್ವ್ಯೂ ತೆಗೆದುಕೊಳ್ಳುವ ಅಧಿಕಾರಿಯ ಲಕ್ಷಣ! ಇಂಥ ವ್ಯವಹಾರದಿಂದ ಉಮೇದ್ವಾರನಿಗೆ ಉದ್ಯೋಗ ದೊರೆಯಲಾರದೆಂದು ದೃಢವಾಗಿ ನಂಬಬಹುದು.

ಉಮೇದ್ವಾರನು ಸಾಮಾನ್ಯವಾಗಿ ಉದ್ಧಟತನವನ್ನೂ ಪ್ರದರ್ಶಿಸಬಾರದು. ಹೆಚ್ಚು ದೈನ್ಯವನ್ನೂ ತೋರ್ಪಡಿಸಬಾರದು. ಎರಡರ ಅತಿರೇಕವೂ ದುಷ್ಪರಿಣಾಮ ಬೀರುತ್ತದೆ. ಕೆಲವರು ಪ್ರತಿಯೊಂದು ಪ್ರಶ್ನೆಗೂ ಉದ್ದಂಡತನದಿಂದಲೇ ಉತ್ತರ ಕೊಡುತ್ತಾರೆ; ಕೆಲವರು ಹೆಜ್ಜೆ ಹೆಜ್ಜೆಗೂ ಗೋಗರೆಯತೊಡಗುತ್ತಾರೆ; ಸಹಜ ವಿನಯ ಹಾಗೂ ಸೌಜನ್ಯದಿಂದ ವರ್ತಿಸುವುದೇ ಮೇಲು. ಉಮೇದ್ವಾರನು ಪ್ರಸನ್ನಚಿತ್ತನಾಗಿರಬೇಕು. ಆದರೆ ನಿಷ್ಕಾರಣವಾಗಿಯೇ ಹಲ್ಲುಕಿರಿಯುವುದು ಅಸಭ್ಯತೆಯ ದ್ಯೋತಕ.

ನೀವು ಯಾವ ನೌಕರಿಗಾಗಿ ಇಂಟರ್ವ್ಯೂ ಕೊಡಬಂದಿದ್ದೀರೋ ಅದರ ಬಗ್ಗೆ ಉಪೇಕ್ಷಾಭಾವನೆ ತೋರ್ಪಡಿಸುವುದು ಸರ್ವಥಾ ಸರಿಯಲ್ಲ. ನನ್ನ ವಿದ್ಯಾರ್ಥಿಯೊಬ್ಬನು ಎಸ್.ಎಸ್.ಎಲ್.ಸಿ. ಪಾಸಾದ ಬಳಿಕ ಬ್ಯಾಂಕಿನ ಕ್ಲಾರ್ಕ್ ಕೆಲಸಕ್ಕೆ ಅರ್ಜಿ ಹಾಕಿದ. ಇಂಟರ್ವ್ಯೂ ವೇಳೆ . . . . 'ನೀನೇಕೆ ಈ ನೌಕರಿಯನ್ನೇ ಬಯಸುತ್ತಿ?' ಎಂದು ಕೇಳಲಾಯಿತು. ತನಗೆ ಬೇರಾವ ಉದ್ಯೋಗವೂ ಸಿಗಲಿಲ್ಲವೆಂದೂ ಲೆಕ್ಕದಲ್ಲಿ ಅಭಿರುಚಿಯಿರದಿದ್ದರೂ ನಿರುದ್ಯೋಗಕ್ಕಿಂತ ಇದಾದರೂ ಇರಲೆಂದು ತಾನು ಸೇರಿದುದಾಗಿಯೂ ಅವನು ಸತ್ಯವನ್ನೇ ನುಡಿದ. ಆದರೆ ಇದು ಕೇವಲ ಸತ್ಯವಂತರಿಗೆ ಹೇಳಿಸಿದ ಕಾಲವಲ್ಲವಷ್ಟೆ! ಲೆಕ್ಕದಲ್ಲಿ ಅಭಿರುಚಿಯಿರದ ಈ

ಪ್ರಾಣಿ ಬ್ಯಾಂಕಿನ ಉದ್ಯೋಗಕ್ಕೆ ಗಂಡಾಂತರಕಾರಿಯೆಂದು ಅಧಿಕಾರಿಗಳು ಭಾವಿಸಿರಲಾರರೆ?

ಒಮ್ಮೆ ಕನ್ನಡ ದಿನಪತ್ರಿಕೆಯೊಂದರ ಉಪ-ಸಂಪಾದಕ ಸ್ಥಾನಕ್ಕೆ ಇಂಟರ್ವ್ಯೂ ಏರ್ಪಡಿಸಲಾಯಿತು, "ನೀವು ಕನ್ನಡದಲ್ಲಿ ಯಾವ ಪತ್ರಿಕೆಯನ್ನು ಓದುತ್ತೀರಿ?" ಎಂದು ಒಬ್ಬ ಉಮೇದವಾರನನ್ನು ಪ್ರಶ್ನಿಸಿದಾಗ ಅವನು ಠೀವಿಯಿಂದ,- "ಕನ್ನಡದಲ್ಲಿ ಓದಲು ಯೋಗ್ಯವಾದ ಪತ್ರಿಕೆಗಳು ಎಲ್ಲಿವೆ? ನಾನು ‘ಹಿಂದು’ ಪತ್ರಿಕೆಯನ್ನು ಓದುತ್ತೇನೆ"—ಎಂದು ಉತ್ತರಿಸಿದ. ಅವನಿಗೆ ಕೆಲಸ ಸಿಗಲಿಲ್ಲ.

ತಮಗೆ ಈ ನೌಕರಿ ಸಿಕ್ಕರೆ ಸಾಕು; ವೇತನ ಎಷ್ಟಾದರೂ ಸರಿಯೇ ಎಂದು ಹೇಳುವವರೂ ಇದ್ದಾರೆ ಇವರಿಗೂ ನೌಕರಿ ದೊರೆಯುವುದಿಲ್ಲ. ಏಕೆಂದರೆ ಇಂತಹರು ಕೇವಲ ಸೋಗು ಹಾಕುತ್ತಾರೆಂದೋ ವ್ಯವಹಾರಜ್ಞಾನಶೂನ್ಯರೆಂದೋ ಅರ್ಥವಾಗುವುದು.

### ೩. ಪ್ರಶ್ನೋತ್ತರ:

ಪ್ರಶ್ನೋತ್ತರವೇ ಇಂಟರ್ವ್ಯೂವಿನ ಕೊನೆಯ ಘಟ್ಟ; ಪ್ರಶ್ನೆಗಳನ್ನು ಸಾಮಾನ್ಯವಾಗಿ ನಾಲ್ಕು ವಿಭಾಗ ಮಾಡಬಹುದು. ಮೊದಲು ನಿಮ್ಮ ಭಯ, ಗಾಬರಿಗಳನ್ನು ಹೋಗಲಾಡಿಸುವ ಸರಳ ಪ್ರಶ್ನೆಗಳು... ನಿಮ್ಮ ಹೆಸರೇನು? ನೀವು ಎಲ್ಲಿ ಶಿಕ್ಷಣ ಪಡೆದಿರಿ?—ಮುಂತಾದವು. ಇವಕ್ಕೆಲ್ಲ ಶಾಂತಿಯಿಂದ ನೀವು ಉತ್ತರ ನೀಡಬಹುದು. ಆ ಬಳಿಕ ನೀವು ಬಯಸುತ್ತಿರುವ ನೌಕರಿಯ ಬಗ್ಗೆ ಪೂರ್ವಾನುಭವ. ಹೀಗಾಗಿ ನಿಮ್ಮ ಉದ್ಯೋಗವನ್ನು ಕುರಿತು ಸಾಕಷ್ಟು ಮಾಹಿತಿಗಳನ್ನು ಸಂಗ್ರಹಿಕೊಂಡೇ ಇರುವುದು ಲೇಸು.

ಇದುವರೆಗೆ ನೀವೆಷ್ಟು ವರ್ಷಗಳ ಅನುಭವ ಪಡೆದಿದ್ದೀರಿ? ನಿಮಗೆಷ್ಟು ವೇತನ ದೊರೆಯುತ್ತಿತ್ತು? ಇಂತಹ ಸಣ್ಣ ಸಣ್ಣ ಪ್ರಶ್ನೆಗಳಿಗೂ ನೀವು ಸರಿಯಾಗಿ ಉತ್ತರ ಕೊಡದೆ ಹೆಜ್ಜೆ ಹೆಜ್ಜೆಗೆ ತಡೆಯುತ್ತಿದ್ದರೆ ನಿಮ್ಮ ಬಗ್ಗೆ ಅಧಿಕಾರಿಗಳಿಗೆ ಸದ್ಭಾವನೆ ಮೂಡಲಾರದು.

ಮುಂದಿನ ಎರಡೂ ರೀತಿಯ ಪ್ರಶ್ನೆಗಳು ನೀವು ಬಯಸುವ ಉದ್ಯೋಗಕ್ಕೆ ಸಂಬಂಧಿಸಿವೆ. 'ನೀವು ಈ ಉದ್ಯೋಗವನ್ನೇ ಅದೇಕೆ ಬಯಸುತ್ತೀರಿ?—' ಎಂಬುದು ಸರ್ವಸಾಧಾರಣವಾದ ಪ್ರಶ್ನೆ. ಒಮ್ಮೆ ಕಾಲೇಜ್ ಅಧ್ಯಾಪಕರೊಬ್ಬರು ಇಂಗ್ಲೀಷ್ ಪತ್ರಿಕೆಯೊಂದರ ಸಂಪಾದಕೀಯ ವಿಭಾಗದಲ್ಲಿ ಉದ್ಯೋಗ ಪಡೆಯಲೆಂದು ಉಮೇದ್ವಾರರಾಗಿ ಬಂದಿದ್ದರು. "ಅಧ್ಯಾಪಕ ವೃತ್ತಿಯನ್ನು ತೊರೆದು ನೀವು ಹೊಸ ಉದ್ಯೋಗಕ್ಕೆ ಸೇರುತ್ತೀರಿ? ಅದು ನಿಮಗೆ ಬೇಸರ ಬರಿಸಿತೆ?" ಎಂದು ಕೇಳಲಾಯಿತು. ಅವರ ಉತ್ತರ ಎಷ್ಟು ಸಮರ್ಪಕವಿತ್ತು ನೋಡಿರಿ—

"ನನಗೆ ಎರಡರಲ್ಲೂ ಸಮಾನ ಅಭಿರುಚಿಯಿದೆ. ಒಂದು ನನ್ನ ಬಲಗಣ್ಣಾದರೆ, ಇನ್ನೊಂದು ಎಡಗಣ್ಣು. ಆದರೆ ಇಲ್ಲಿ ನನ್ನ ಸಾಹಿತ್ಯಿಕ ಅಭಿರುಚಿಯು ಹೆಚ್ಚು ವಿಕಾಸ ಹೊಂದಲು ಎಡೆಯಿದೆಯಲ್ಲವೆ?"

ಉದ್ಯೋಗಕ್ಕೆ ಸಂಬಂಧಿಸಿದ ಹಲವಾರು ಪ್ರಶ್ನೆಗಳನ್ನು ನೀವು ಉತ್ತರಿಸಬೇಕಾಗಬಹುದು. ಇಂಜಿನಿಯರಿಂಗ್ ಅಥವಾ ಇನ್ನಾವುದಾದರೂ ತಾಂತ್ರಿಕ ಉದ್ಯೋಗಕ್ಕೆ ನೀವು ಸೇರಬಯಸುವಿರಾದರೆ ಯಂತ್ರಗಳಿಗೆ ಸಂಬಂಧಿಸಿದ ಹತ್ತಾರು ಸೂಕ್ಷ್ಮ ಪ್ರಶ್ನೆಗಳನ್ನೂ ನೀವು ಉತ್ತರಿಸಬೇಕಾಗುವುದು.

ಉದ್ಯೋಗಕ್ಕೆ ಸಂಬಂಧಿಸದಿದ್ದ, ಆದರೆ ಕೇವಲ ನಿಮ್ಮ ಜಾಣ್ಮೆ ಹಾಗೂ ಚಾತುರ್ಯವನ್ನು ಪರೀಕ್ಷಿಸುವ ಪ್ರಶ್ನೆಗಳನ್ನು ಎದುರಿಸಬೇಕಾಗಬಹುದು.

ಸುಭಾಷಚಂದ್ರ ಬೋಸರು I. C. S. ಪರೀಕ್ಷೆಗೆ ಇಂಟರ್ವ್ಯೂ ಕೊಡಲು ಹೋದಾಗ ಒಬ್ಬರು ಅವರೆದುರು ಒಂದು ಉಂಗುರವಿಟ್ಟು... "ಸುಭಾಷರು ಈ ಉಂಗುರದೊಳಗೆ ಹೋಗಬಲ್ಲರೋ?" ಎಂದು ಪ್ರಶ್ನಿಸಿದರು.

"ಅದಕ್ಕೇನು?" — ಎನ್ನುತ್ತಾ ಸುಭಾಷರು ಒಂದು ಕಾಗದದ ತುಣುಕಿನ ಮೇಲೆ ಸುಭಾಷ ಬೋಸ್ ಎಂದು ಬರೆದು ಸುರುಳಿಸುತ್ತಿ ಉಂಗುರದೊಳಗಿಂದ ತುರುಕಿಸಿ ಹೊರತೆಗೆದರು. ಇಂತಹ ಪ್ರತ್ಯುತ್ಪನ್ನಮತಿಗಳು ಯಾವ ಪರೀಕ್ಷೆಯಲ್ಲಾದರೂ ಅಸಫಲರಾಗಬಲ್ಲರೆ?

'ಈಗೆಷ್ಟು ಸಮಯ?' - ಎಂದು ಒಮ್ಮೆ ಒಬ್ಬನನ್ನು ಪ್ರಶ್ನಿಸಲಾಯಿತು. ಎದುರಿಗೇ ಗೋಡೆಯ ಮೇಲಿರುವ ದೊಡ್ಡ ಗಡಿಯಾರವನ್ನು ನೋಡಿ ಹೇಳುವ ಬದಲು ಉಮೇದ್ವಾರ ತನ್ನ ರಿಸ್ಟ್ ವಾಚ್ ನೋಡತೊಡಗಿದ! ಇದು ಅಷ್ಟೇನೂ ಜಾಣ್ಮೆಯ ಕ್ರಮವಲ್ಲವೆಂದು ನಿಮಗನಿಸುವುದಿಲ್ಲವೆ?

ಉತ್ತರಿಸುವ ಮೊದಲು ಪ್ರಶ್ನೆಯನ್ನು ಲಕ್ಷ್ಯಗೊಟ್ಟು ಕೇಳಬೇಕು. ಯಾವುದೋ ಪ್ರಶ್ನೆಗೆ ಏನೋ ಉತ್ತರ ಕೊಡುವ ಹವ್ಯಾಸ ಸರಿಯಲ್ಲ. ಉತ್ತರವು ಅಪೂರ್ಣವಾಗಿರಲೂ ಬಾರದು, ವ್ಯರ್ಥ ವಿಸ್ತಾರವನ್ನು ಹೊಂದಿರಲೂ ಬಾರದು. ಕಡಿಮೆ ಶಬ್ದಗಳಲ್ಲಿ ಹೆಚ್ಚು ವಿಚಾರಗಳನ್ನು ವ್ಯಕ್ತಗೊಳಿಸುವಂತಿರಬೇಕು.

ನಿಶ್ಚಿತ ಸಮಯಕ್ಕಿಂತ ೧೫ ನಿಮಿಷ ಮೊದಲೇ ಕಾರ್ಯಾಲಯಕ್ಕೆ ತಲುಪುವುದು ಲೇಸು. ಆಗ ನಿಮಗೆ ಅನಾವಶ್ಯಕವಾಗಿ ಉಂಟಾಗುವ ಗಾಬರಿ ತಪ್ಪುತ್ತದೆ. ತಡವಾಗಿ ಖಂಡಿತ ಹೋಗಬಾರದು.

*

ನಿಮ್ಮನ್ನು ನೀವು ಅರಿತುಕೊಳ್ಳಬೇಕು

# ನೀವು "ಸ್ವಂತ ಬುದ್ಧಿ" ಯುವರೇ ?

ನಿಮ್ಮ ಜೀವನದ ರೀತಿನೀತಿಗಳ ವಿಷಯದಲ್ಲಿ ನೀವೇ ಯೋಚಿಸಿ ತತ್‌ಕ್ಷಣದಲ್ಲಿ ನಿರ್ಧಾರ ಮಾಡಿಕೊಂಡು ನಿಮ್ಮ ಸಮಸ್ಯೆಗಳಿಗೆ ನೀವೇ ಪರಿಹಾರ ಕಂಡುಕೊಳ್ಳುವುದರಿಂದ, ನಿಮ್ಮ ಯೋಗ್ಯತೆಯನ್ನು ನೀವೇ ಅರಿತುಕೊಳ್ಳುವದ ರಿಂದ, ನಿಮ್ಮ ವ್ಯಕ್ತಿತ್ವ ವಿಶಾಲವಾಗುವದಲ್ಲದೆ ಜೀವನದಲ್ಲಿ ಸುಖ-ಶಾಂತಿಗಳು ಲಭಿಸುತ್ತವೆ. ಈ ಯೋಗ್ಯತೆಯು ಕೆಲಸಕಾರ್‍ಯಗಳಲ್ಲಿ ಯಶಸ್ಸು, ಜೀವನದಲ್ಲಿ ಸೊಗಸನ್ನು ತಂದುಕೊಡುತ್ತದೆ.

ಸ್ವಂತ ಬುದ್ಧಿ ಎನ್ನುತ್ತಾರಲ್ಲ ಅದು ನಿಮ್ಮ ಗುಣವಾಗಿರಬೇಕು.

ನೀವು ಈ ಬಗೆಯವರೇ ಎಂದು ಅರಿತುಕೊಳ್ಳುವದೇನೂ ಪ್ರಯಾಸದ್ದಲ್ಲ. ಈ ಕೆಳಗೆ ಕಾಣಿಸಿದ ಪ್ರಶ್ನೆಗಳಿಗೆ ಪ್ರಾಮಾಣಿಕವಾಗಿ ಉತ್ತರಿಸಿರಿ. ನಿಮ್ಮ ಉತ್ತರಗಳ ಮೇಲಿಂದ ನಿಮ್ಮ ಯೋಗ್ಯತೆಯನ್ನು ನಿರ್ಧರಿಸಿಕೊಳ್ಳಬಹುದು. ನ್ಯೂನತೆಗಳು ಕಂಡುಬಂದಲ್ಲಿ ಅವನ್ನು ತಿದ್ದಿಕೊಳ್ಳಲು ಪ್ರಯತ್ನಿಸಬಹುದು :

೧. ಯಾವುದೋ ಒಂದು ಚಲಚಿತ್ರ ನಿಮ್ಮ ಮನಸ್ಸನ್ನು ಹಿಡಿಸಿರಲಿಲ್ಲವೆನ್ನಿ. ಆದರೆ ನಿಮ್ಮ ಗೆಳೆಯ ಅದ್ಭುತವಿದೆ ಎಂದು ಹೇಳುತ್ತಾನೆ. ಆಗ ನೀವು:

(ಅ) ಹೋಗಿ ಅದನ್ನು ನೋಡುವಿರಾ ?

(ಬ) ನೋಡುವುದಿಲ್ಲವೆ?

(ಕ) ನಿರ್ಣಯಕ್ಕೆ ಬರುವುದಕ್ಕಿಂತ ಮೊದಲು ಹೋಗಲೋ ಬಿಡಲೋ ಎಂದು ಕೆಲಸಮಯದ ವರೆಗೆ ಗೊಂದಲದಲ್ಲಿ ಬೀಳುವಿರಾ ?

೨. ನಿಮ್ಮ ಅರಿವೆಗಳ ಆಯ್ಕೆಯಲ್ಲಿ ಯಾವುದರ ಕಡೆಗೆ ನಿಮ್ಮ ಗಮನವಿರುತ್ತದೆ:

(ಅ) ಪ್ರಚಲಿತ ಫ್ಯಾಶನ್‌ದಲ್ಲಿಯೆ ?

(ಬ) ನಿಮ್ಮನ್ನು ಆಕರ್ಷಿಸುವ ವಿಶಿಷ್ಟ ಬಟ್ಟೆಯಲ್ಲಿಯೇ ?

(ಕ) ಪ್ರಚಲಿತ ಫ್ಯಾಶನ್ನಿಗನುಗುಣವಾಗಿ ಆದರೆ ಒಂದೆರಡು ವೈಶಿಷ್ಟ್ಯಗಳನ್ನು ಹೊಂದಿರುವುದರಲ್ಲಿಯೆ ?

೩. ನಿಮಗೆ ಮೆಚ್ಚಿಗೆಯಾದ ಒಂದು ಹೊಸ ಮಾದರಿಯಲ್ಲಿ ನೀವು ಕೂದಲು ಕತ್ತರಿಸಿಕೊಂಡಿರುತ್ತೀರಿ. ಆದರೆ ನಿಮ್ಮ ಗೆಳೆಯರು ಅದು ನಿಮಗೆ ಸರಿ ಕಾಣುವದಿಲ್ಲವೆಂದು ಹೇಳುತ್ತಾರೆ. ಆಗ ನೀವು:

(ಅ) ಮತ್ತೆ ಮೊದಲಿನ ರೀತಿಗೆ ಬದಲಿಸಿಕೊಳ್ಳುವಿರಾ ?

(ಬ) ನನಗೆ ಇದು ಮೆಚ್ಚಿಗೆಯಾಗಿದೆಯೆಂದ ಮೇಲೆ ತೀರಿತು ಎಂದುಬಿಡುವಿರಾ ?

(ಕ) ಹೊಸ ಮಾದರಿಯಲ್ಲೆ ಕೂದಲನ್ನಿಟ್ಟುಕೊಂಡು ಮನದಲ್ಲಿ ಮಾತ್ರ ಹೀಗೆ ಕತ್ತರಿಸಿಕೊಳ್ಳಬಾರದಿತ್ತು ಎಂದುಕೊಳ್ಳುವಿರಾ ?

೪. ಒಂದು ಸಮಸ್ಯೆಯನ್ನು ಕುರಿತು ಸ್ವತಃ ಯೋಚಿಸುವವರಲ್ಲಿ ನೀವು ಸದ್ಯದಲ್ಲೆ ಕೆಲವು ತಾಸುಗಳನ್ನು ಕಳೆದಿದ್ದರೆ ಅದು ಯಾವಾಗ ?

(ಅ) ನಿಮಗೆ ನೆನಪಾಗಲೊಲ್ಲದೇ ?

(ಬ) ತೀರ ಇತ್ತೀಚೆಗೆಯೆ ?

(ಕ) ಕೆಲವು ತಿಂಗಳ ಹಿಂದೆಯೆ ?

೫. ನಿಮ್ಮ ಉದ್ಯೋಗ ಜೀವನದಲ್ಲಿ ಯಾವಾಗಲೂ ನೀವು:

(ಅ) ಪ್ರತಿಯೊಂದನ್ನು ನಿಮ್ಮ ವರಿಷ್ಠರ ಸಲಹೆ ಕೇಳಿ ಮಾಡುತ್ತೀರಾ ?

(ಬ) ಸಾಧ್ಯವಾದಷ್ಟು ಮಟ್ಟಿಗೆ ಸ್ವತಂತ್ರವಾಗಿ ಮಾಡಲು ಪ್ರಯತ್ನಿಸುವಿರಾ ?

(ಕ) ಕೆಲವು ಸಲ ಸ್ವತಂತ್ರವಾಗಿ ವರ್ತಿಸು

ವಿರಿ. ಆದರೆ ಆ ಸಂದರ್ಭಗಳಲ್ಲಿ ನಿಮ್ಮಲ್ಲಿ ಅಷ್ಟೊಂದು ಆತ್ಮವಿಶ್ವಾಸವಿರುವುದಿಲ್ಲ.

೬. ನಿಮ್ಮ ಗೆಳೆಯರು ಶಾಸ್ತ್ರೀಯ ಸಂಗೀತದಲ್ಲಿ ಅತ್ಯಂತ ಆಸಕ್ತಿಯುಳ್ಳವರಾಗಿರುತ್ತಾರೆ ಆದರೆ ನಿಮಗೇನೂ ಅದರಲ್ಲಿ ಸ್ವಾರಸ್ಯ ಕಾಣು-ವದಿಲ್ಲ. ಆಗ ನೀವು:

(ಅ) ಅವರಷ್ಟೇ ಆಸಕ್ತಿ ಉಳ್ಳವರಂತೆ ವರ್ತಿಸುವಿರಾ?

(ಬ) ಅದರಲ್ಲಿ ಆಸಕ್ತಿಯೇ ಇಲ್ಲವೆಂದು ಸ್ಪಷ್ಟವಾಗಿ ಒಪ್ಪಿಕೊಳ್ಳುವಿರಾ?

(ಕ) ಆ ವಿಷಯದಲ್ಲಿ ಅವರಷ್ಟು ನಿಮಗೆ ಅನುಭವವಿಲ್ಲ, ಬುದ್ಧಿಯಿಲ್ಲೆಂದು ಬಗೆಯುವಿರಾ?

೭. ನೀವೊಬ್ಬ ಪಂಡಿತನೊಂದಿಗಿರುತ್ತೀರಿ. ಆತ ಗೂಢವಾದ, ನಿಮಗರಿಯದಂಥ ವಿಷಯದ ಮೇಲೆ ಮಾತನಾಡತೊಡಗುತ್ತಾನೆ. ಆಗ ನೀವು:

(ಅ) ಅರ್ಥವಾಗುತ್ತಿದೆಂಬಂತೆ ನಟಿಸುವಿರಾ?

(ಬ) ಸ್ಪಷ್ಟವಾಗಿ ನನಗೆ ತಿಳಿಯುವುದಿಲ್ಲವೆಂದು ಹೇಳುತ್ತೀರಾ?

(ಕ) ವಿಷಯವನ್ನೇ ಬದಲಿಸಲು ಯತ್ನಿಸುವಿರಾ?

೮. ವಿಚಾರಾತ್ಮಕ ಗ್ರಂಥವೊಂದನ್ನು ನೀವು ಓದಿ ಮುಗಿಸಿದ ಮೇಲೆ:

(ಅ) ಗ್ರಂಥಕರ್ತನ ವಿಚಾರಗಳನ್ನೇ ಆ ಬಗ್ಗೆ ಒಂದಿಷ್ಟೂ ಸ್ವಂತವಾಗಿ ಯೋಚಿಸದೆ ಒಪ್ಪಿಕೊಂಡಿದ್ದೀರಾ?

(ಬ) ವಿಷಯವನ್ನು ಅರಿತುಕೊಳ್ಳಲು ಪ್ರಯತ್ನಿಸಿ ನಿಮ್ಮ ವಿಚಾರಗಳೊಂದಿಗೆ ಹೋಲಿಸಿ ಅವನ ವಿಚಾರಗಳನ್ನು ನೋಡಿಕೊಂಡಿದ್ದೀರಾ?

(ಕ) ಸ್ವಲ್ಪ ವಿಚಾರ ಮಾಡಿ ಗ್ರಂಥಕರ್ತನಿಗೇ ಹೆಚ್ಚು ತಿಳಿದಿರಬೇಕು ಎಂದು ಅಷ್ಟಕ್ಕೇ ಆ ವಿಷಯ ಬಿಟ್ಟುಬಿಟ್ಟಿದ್ದೀರಾ?

೯. ಕಳೆದ ಸಂಭಾಷಣೆಯ ಸಮಯದಲ್ಲಿ ನೀವು ಎಲ್ಲಿಂದ ವಿಷಯವನ್ನು ಸಂಗ್ರಹಿಸಿದ್ದಿರಿ?

(ಅ) ವೃತ್ತಪತ್ರಿಕೆಗಳಿಂದಲೆ?

(ಬ) ವೃತ್ತಪತ್ರಿಕೆಗಳಿಂದಲೂ ಆ ವಿಷಯದ ಮೇಲೆ ನಿಮ್ಮದೇ ಆದ ವಿಚಾರಗಳಿಂದಲೂ?

(ಕ) ಗೆಳೆಯರಿಂದಲೆ?

೧೦. ನಿಮಗೆ ಒಪ್ಪಿಗೆಯಿಲ್ಲದಂಥ ವಿಚಾರವನ್ನು ಯಾರಾದರೂ ಹೇಳಿದಾಗ:

(ಅ) ಅವರಂತೆಯೇ ನಿಮ್ಮ ಅಭಿಪ್ರಾಯವೂ ಇದೆಯೆಂದು ನಟಿಸುವಿರಾ?

(ಬ) ಆ ವಿಷಯದ ಮೇಲೆ ನಿಮ್ಮದೇ ಆದ ಅಭಿಪ್ರಾಯವನ್ನು ಹೇಳುವಿರಾ?

(ಕ) ಬರಿ ಕೇಳಿ ಮೌನ ತಾಳುವಿರಾ?

ಇನ್ನು ನಿಮ್ಮ ಉತ್ತರಗಳಿಗೆ ನೀವು ಪಡೆವ ಗುಣಗಳು:

ಪ್ರತಿಯೊಂದು (ಅ) ಕ್ಕೆ ಹೌದು ಎಂದರೆ ೦; (ಬ) ಕ್ಕೆ ೨; (ಕ) ಕ್ಕೆ ೧ ಗುಣಗಳು.

ನೀವು ೧೫ ರಿಂದ ೨೦ ಗುಣಗಳನ್ನು ಪಡೆದರೆ- ಸ್ವತಂತ್ರ ವಿಚಾರ ಶಕ್ತಿ ಮತ್ತು ನಿರ್ಧಾರ ಶಕ್ತಿ ನಿಮ್ಮಲ್ಲಿದೆ ಎಂದರ್ಥ. ಇದರಿಂದ ನಿಮಗೆ ಬಹುಶಃ ನಿಮ್ಮೆಲ್ಲ ಕಾರ್ಯಗಳಲ್ಲಿಯೂ ಜಯ ಸಿಗಬೇಕು. ಹಾಗೆಂದು ಅತಿ ಆತ್ಮವಿಶ್ವಾಸ ಒಳ್ಳೆಯದಲ್ಲ.

ನೀವು ೮ ರಿಂದ ೧೪ ಗುಣಗಳನ್ನು ಪಡೆದರೆ- ಕೆಲವೊಂದು ವಿಷಯಗಳಲ್ಲಿ ನಿಮಗೆ ನಿಮ್ಮದೇ ಆದ ಸ್ವತಂತ್ರ ವಿಚಾರಗಳಿರುತ್ತವೆ. ಆದರೆ ಹಲವಾರು ಸಲ ಅತಿ ಆಲಸ್ಯದಿಂದ ಅವುಗಳ ಪ್ರಯೋಜನ ಪಡೆಯುವುದಿಲ್ಲ.

೭ ಕ್ಕಿಂತ ಕಡಿಮೆ ಗುಣಗಳನ್ನು ಪಡೆದರೆ— ಸ್ವತಂತ್ರವಾಗಿ ವಿಚಾರ ಮಾಡುವುದಕ್ಕಿಂತಲೂ ಇತರರ ನಿರ್ಣಯದಂತೆ ಕೆಲಸ ಮಾಡುವುದೇ ಸುಲಭವೆನ್ನುವ ಜಾತಿ ನಿಮ್ಮದು. ನಿಜವಾಗಿಯೂ ನಿಮಗೆ ನಿಮ್ಮದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕಿದ್ದರೆ, ಜೀವನದಲ್ಲಿ ನಿಮ್ಮ ಪ್ರಭಾವ ಬೆಳೆಸಿಕೊಳ್ಳಬೇಕೆಂದಿದ್ದರೆ ಸ್ವತಂತ್ರವಾಗಿ ವಿ-ಚಾರ ಮಾಡಲು ಕಲಿಯಬೇಕು. ನಿಮ್ಮ ಸಮಸ್ಯೆಗಳಿಗೆ ನೀವೇ ಪರಿಹಾರ ಕಂಡುಕೊಳ್ಳುವ ಅಭ್ಯಾಸ ಇಟ್ಟುಕೊಳ್ಳಿ. ನಿಮ್ಮ ನಿರ್ಧಾರದಲ್ಲಿ ನಿಮಗೇ ವಿಶ್ವಾಸವಿರಬೇಕು. *



ಪ್ರತಿ ಮಗು ಕೇಳುವ ಈ
ಪ್ರಶ್ನೆ ಜಗತ್ಪ್ರಸಿದ್ಧ
ಲೇಖಿಕೆಯನ್ನು
ಪ್ರೇರಿಸಿ ಇದನ್ನು
ಬರೆಸಿತು

# ನಾನು ಹೇಗಾದೆ?

ಮೂಲ: ಪರ್ಲ್ ಬಕ್
ಅನುವಾದ:
ಪ್ರೊ. ವಿ. ಎ. ಕುಲಕರ್ಣಿ

ಜಾನಿ ಜಾಕ್‌ಸನ್ — ಎಲ್ಲರೂ ಕರೆಯುವಂತೆ— ಜಾನಿ ಜಾಕ್ ಇನ್ನೂ ಐದು ವರುಷದ ಹಸುಳೆ. ಗೌರವರ್ಣ, ಹೊಳೆಯುವ ನೀಲ ವರ್ಣದ ಕಣ್ಣುಗಳು, ಹೊಂಬಣ್ಣದ ತಲೆಗೂದಲು ಇವುಗಳಿಂದ ಎಲ್ಲರಿಗೂ ಮುದ್ದಿನ ಕಣಿಯಾಗಿದ್ದ. ಯಾವುದೇ ವಿಷಯವಿರಲಿ, ಎಲ್ಲವನ್ನೂ ತಿಳಿದುಕೊಂಡೇನೆಂಬ ಹುಚ್ಚು ಅವನಿಗೆ. ಯಾಕೆ- ಯಾಕೆ- ಯಾಕೆ- 'ಯಾಕೆ'ನ್ನುವ ಪ್ರಶ್ನೆಯಂತೂ ಆ ಹಸುಳೆಯ ಜೀವನದ ನಾಂದಿಯಾಗಿತ್ತು.

ಜಾನಿ ವಾಸಿಸುತ್ತಿರುವುದು ಹಸಿರು ಗದ್ದೆಯ ಅಂಚಿನಲ್ಲಿದ್ದ ಗುಡಿಸಲಿನಲ್ಲಿ. ದಿನಾಲೂ ಹೊಸತೊಂದನ್ನು ಕಾಣುವ ತಾಣವದು. "ಮೊಟ್ಟೆಗಳು ಎಲ್ಲಿಂದ ಬಂದವು?" ತನ್ನ ತಾಯಿಯನ್ನು ಕೇಳಿದ. "ಕೋಳಿಗಳು ಮೊಟ್ಟೆಗಳನ್ನ ಹಾಕುತ್ತವೆ ಮಗೂ" ಸೇಬಿನ ಕಡುಬಿನಲ್ಲಿ ಸಕ್ಕರೆ ಬೆರೆಸುತ್ತಿದ್ದ ತಾಯಿ ಹೇಳಿದಳು.

"ಅದು ನನಗೆ ಗೊತ್ತು; ಆದರೆ ಯಾಕೆ?" ಜಾನಿ ಜಾಕ್ ಮರುಪ್ರಶ್ನೆ ಮಾಡಿದ. "ಯಾಕೆ?" ತಾಯಿಗೆ ಅರೆಕ್ಷಣ ಮಗನ ಈ ಪ್ರಶ್ನೆ ಗೂಢವಾಗಿ ಕಂಡಿತು. ಮರುಕ್ಷಣದಲ್ಲಿಯೇ ಸಾವರಿಸಿಕೊಂಡು "ಯಾಕಂದರೆ ಮಗೂ, ಮೊಟ್ಟೆಗಳಿಲ್ಲದಿದ್ದರೆ ಕೋಳಿಮರಿಗಳೆಲ್ಲಿಂದ ಬರಬೇಕು?" ತಾಯಿ ಸಮಾಧಾನದಿಂದ ಹೇಳಿದಳು.

"ಹಾಗಾದರೆ ಮೊಟ್ಟೆಗಳೇ ಕೋಳಿಮರಿಗಳ ಆರಂಭವೆನ್ನು" ಒಂದು ಸಿದ್ಧಾಂತವನ್ನೇ ಸ್ಥಾಪಿಸಿದಂತೆ ಹೇಳಿದ ಜಾನಿ. ಒಲೆಯ ಮೇಲೆ ಸೇಬಿನ ಕಡುಬುಗಳನ್ನು ಇಡುತ್ತಿದ್ದ ತಾಯಿ ಜಾನಿಯ ಮಾತುಗಳಿಗೆ ಹೂಗುಟ್ಟಿದಳು ಅಷ್ಟೇ.

ಜಾನಿಯ ವಿಚಾರ ಮೊಟ್ಟೆಗಳಿಗಷ್ಟೇ ಪರಿಮಿತವಾಗಿರಲಿಲ್ಲ. ದನದ ಹಟ್ಟಿಗೆ ಓಡಿ ಹೋಗುವನು. ಎಲ್ಲಿಂದಲೋ ಆಕಸ್ಮಿಕವಾಗಿ ಬಂದು ತನ್ನ ಸೀಳಾದ ನಾಲ್ಕೂ ಕಾಲುಗಳನ್ನು ತೂರುತ್ತ ಜಿಗಿದಾಡುವ ಆಕಳ ಕರುವನ್ನು

ನೋಡಿ ಜಾನಿ ಆಶ್ಚರ್ಯಪಡುವನು. "ಆಕಳ ಕರು ಎಲ್ಲಿಂದ ಬಂದಿತು?" ಜಾನಿ ತಾಯಿಯನ್ನು ಕೇಳಿಯೇಬಿಟ್ಟ. "ಆಕಳು ಕೊಟ್ಟಿತು ಮಗೂ" ಕೂಡಲೇ ಹೇಳಿದಳು ತಾಯಿ.

"ಮೊಟ್ಟೆಗಳಂತೆ ತಾನೇ! ಹಾಗಾದರೆ ಆಕಳ ಕರು ಆಕಳ ಆರಂಭ ಎನ್ನು" ಜಾನಿ ತನ್ನ ಪೂರ್ವ ವಿಚಾರವನ್ನು ದೃಢಪಡಿಸಿಕೊಂಡ.

"ಇಲ್ಲವೆ ಹೋರಿಯ ಆರಂಭವೂ ಆಗಬಹುದು" ತಾಯಿ ಹೇಳಿದಳು. ಪುನಃ, "ನೆನಪಿರಲಿ ಮಗೂ, ಮನುಷ್ಯ ಹಾಗೂ ಇತರ ಪ್ರಾಣಿಗಳಿಗೆ ಜೊತೆ ಬೇಕು" ಎಂದು ತಾಯಿ ತಿಳಿಹೇಳಲು ಯತ್ನಿಸಿದಳು.

"ನನಗಾರೂ ಜೊತೆ ಇಲ್ಲವಲ್ಲ! ನಾನೊಬ್ಬನೇ ಇದ್ದೇನೆ. ನನ್ನ ಜೊತೆ ಆಟವಾಡಲೂ ಕೂಡ ಯಾರೂ ಇಲ್ಲವಲ್ಲವಮ್ಮಾ!"

"ಅಹುದು ಮಗೂ. ನಿನಗೆ ತಮ್ಮ ಇಲ್ಲವೆ ತಂಗಿ ಬೇಕು ಅಲ್ಲವೇ?" ತಾಯಿ ಸಮಾಧಾನದ ಮಾತು ಹೇಳಿದಳು.

ಆರಂಭಗಳು! ಅವುಗಳಿಗೇನೂ ಕೊರತೆಯಿಲ್ಲ. ಅದೊಂದು ಚಳಿಗಾಲದ ಕೊನೆಯ ದಿನ. ಹಿಮರಾಶಿ ಕರಗಿ ನೀರಾಗತೊಡಗಿತ್ತು. ಜಾನಿ ಕಾಡಿಗೆ ಓಡಿದ. ಗುಡ್ಡದ ತುದಿಯಲ್ಲಿ ನಿಂತು ಕರಗುವ ಹಿಮವನ್ನು ಕಂಡ. ಲೋ! ವಸಂತದ ಆರಂಭ! ಕಂದು ಬಣ್ಣದ ಭೂದೇವಿ ಕಾಣತೊಡಗಿದ್ದಾಳೆ. ಅಲ್ಲಲ್ಲಿ ಹಸಿರು ಹುಲ್ಲು ಹಣಿಕಿಕ್ಕುತ್ತಿದೆ. ನಿನ್ನೆಯೇ ಇದ್ದ ಶಿಶಿರ ಋತುವಿನ ಹಿಮರಾಶಿ ಅಲ್ಲಿರಲಿಲ್ಲ. ಇಂದು ವಸಂತ ರಾಜ ಎಲ್ಲಿಂದಲೋ ಬಂದಿದ್ದಾನೆ. ಜಾನಿಗೆ ಅದೊಂದು ಹಬ್ಬ! ನಿನ್ನೆಯ ಆ ಹಸಿರು ಅಲ್ಲಿರಲಿಲ್ಲ. ಇಂದು ಅದು ಕಾಣಿಸಿಕೊಂಡಿದೆ. ಬಾಡಿದ ಹೂಗಳು ತಲೆ ಎತ್ತಲು ಹವಣಿಸಿವೆ. ಜಾನಿ ಓಕ್ ಮರದ ಬಳಿ ಓಡಿದ. ಒಣಗಿದ ಎಲೆಗಳನ್ನು ಸರಿಸಿ ನೋಡಿದ — ಒಳಗೆ ಬೆಚ್ಚಗಿನ ಆವರಣದಲ್ಲಿ ಹೊಸ ಹಸಿರು ಎಲೆಗಳು ಹೊರಬರಲು ಹಣಿಕಿಕ್ಕುತ್ತಿವೆ!

ಕೂಡಲೇ ಅವನ ಮನಸ್ಸಿನಲ್ಲಿ ಒಂದು ವಿಲಕ್ಷಣ ವಿಚಾರ ಮೂಡಿತು. ತನ್ನ ಆರಂಭವೆಲ್ಲಿ? ಕಳೆದ ವಾರ ಅವನ ಸಾಕುನಾಯಿ - ಲುಸೀ, ಏಳು ಕುನ್ನಿಗಳನ್ನು ಕೊಟ್ಟಿತ್ತು. ಆ ಮೊದಲು ಅಲ್ಲಿ ಯಾವ ಕುನ್ನಿಗಳೂ ಇರಲಿಲ್ಲ. ಒಂದು ಮುಂಜಾವು ಅವುಗಳನ್ನು ಒಂದು ಬುಟ್ಟಿಯಲ್ಲಿ ಕಂಡಿದ್ದ. ತನ್ನ ತಾಯಿ ಕಪ್ಪು ಉಲನ್ ಬಟ್ಟೆಯೊಂದನ್ನು ಹೊದಿಸಿದ್ದೂ ಅವನ ಜ್ಞಾಪಕದಲ್ಲಿತ್ತು. ಹಾಗಾದರೆ ತಾನೂ ಒಂದು ದಿನ ಇಲ್ಲಿರಲಿಲ್ಲ. ಮರುದಿನವೇ ತಾನು ಇಲ್ಲಿದ್ದ. ಈ ವಿಚಾರ ಬಂದೊಡನೆಯೇ ಅವನ ಆಶ್ಚರ್ಯಕ್ಕೆ ಮೇರೆ ಇಲ್ಲದಾಗಿ ನೇರವಾಗಿ ತಾಯಿ ಇದ್ದಲ್ಲಿಗೆ ಓಡಿದ.

"ನಾನಿಲ್ಲದಾಗ ಎಲ್ಲಿದ್ದೆ?" ಜಾನಿ ಕೇಳಿದ. ಬಾಟಲಿಯಿಂದ ಸಿಡಿದು ಬೀಳುವ ಬೂಚಿನಷ್ಟು ರಭಸ ಆ ಪ್ರಶ್ನೆಗಿತ್ತು.

ತಾಯಿ ತನ್ನ ಮಗನ ಕಡೆಗೊಮ್ಮೆ ದಿಟ್ಟಿಸಿ ನೋಡಿ "ಏನು ಹೀಗೆಂದರೆ? 'ನಾನಿಲ್ಲದಾಗ ಎಲ್ಲಿದ್ದೆ' ಎಂದರೇನೋ ಮಗೂ?"

ಜಾನಿಗೆ ತನ್ನ ತಾಯಿ ಸವಾಲು ಹಾಕುತ್ತಾಳೇನೋ ಎಂದೆನಿಸದಿರಲಿಲ್ಲ. "ನಾಯಿ ಕುನ್ನಿಗಳಂತೆ ನಾನೂ ಒಂದು ದಿನ ಇಲ್ಲಿ ಇಲ್ಲದಾಗಮ್ಮಾ! ಸೋಮವಾರ ನಾಯಿಕುನ್ನಿಗಳು ಇದ್ದವೇನು ಇಲ್ಲಿ? ಆದರೆ ಮಂಗಳವಾರ ಬೆಳಗು ಹರಿಯುವುದರಲ್ಲಿ ಅವೆಲ್ಲ ಬುಟ್ಟಿಯಲ್ಲಿ! ಅವು ಮೊದಲು ಇದ್ದವೆಲ್ಲಿ?"

ತಾಯಿಗೆ ನಗೆ ತಡೆಯುವುದಾಗಲಿಲ್ಲ. ನಕ್ಕುಬಿಟ್ಟಳು. ಮಗುವಿನ ಪ್ರಶ್ನೆ ಎಷ್ಟು ಬುದ್ಧಿವಂತಿಕೆಯದು ಎನ್ನುವ ಛಾಯೆ ಇತ್ತು ಅವಳ ನಗುವಿನಲ್ಲಿ.

"ಅವು ಆಗಿನ್ನೂ ಹುಟ್ಟಿರಲಿಲ್ಲ ಜಾನಿ" ಎಂದು ಹೇಳಿದಳು.

"ಹುಟ್ಟು!" ಆ ಶಬ್ದದಿಂದ ಜಾನಿಗೆ ತುಂಬ ಆಶ್ಚರ್ಯವಾಯಿತು.

"ಅಹುದು. ಹುಟ್ಟು! ಜಗತ್ತಿನಲ್ಲಿ ಪ್ರತಿ

ಯೊಂದು ಜೀವರಾಶಿಗೂ ಹುಟ್ಟು ಎಂಬುದಿದೆ. ನಾನೂ ನೀನೂ ಹುಟ್ಟಿಯೇ ಇಲ್ಲಿಗೆ ಬಂದಿದ್ದೇವೆ" ತಾಯಿ ಹೇಳಿದಳು.

"ಆದರೆ ನಾನು ಹುಟ್ಟಿದ್ದು ಜ್ಞಾಪಕದಲ್ಲಿ ಇಲ್ಲವಲ್ಲ!" ಜಾನಿ ತಲೆ ತುರಿಸಿಕೊಂಡ.

"ನನಗೆ ಜ್ಞಾಪಕವಿದೆಯಲ್ಲ! ನೀನೆಷ್ಟು ಜೋರಾಗಿ ಅತ್ತುಬಿಟ್ಟೆ ಗೊತ್ತೇ? ನಿನ್ನ ಮುಖವೆಲ್ಲ ಕೆಂಪಾಗಿತ್ತು!"

"ನಾನು ಯಾಕೆ ಅತ್ತುಬಿಟ್ಟೆನಮ್ಮ?"

"ನನಗೆ ತಿಳಿದ ಮಟ್ಟಿಗೆ ಮಗೂ, ನಿನಗೆ ಹುಟ್ಟುವುದೇ ಬೇಡವಾಗಿತ್ತೇನೋ ಎಂದೆನಿಸುತ್ತದೆ. ಏನೋಪ್ಪಾ... ಅದೆಲ್ಲ ನನಗೆ ತಿಳಿಯದು. ಮೊಟ್ಟೆಗಳಿಂದ ಹೊರಬಂದ ಮರಿಗಳೇನೂ ಗಲಾಟೆ ಮಾಡುವುದನ್ನು ಕಂಡಿಲ್ಲ. ತಾಯಿಯ ಹೊಟ್ಟೆಯಿಂದ ಬರುತ್ತಲೇ ನಾಯಿಕುನ್ನಿಗಳು ಬೊಗಳುವುದನ್ನೂ ನಾನು ಕಂಡಿಲ್ಲ."

"ನಾನು ನಿನ್ನೊಳಗಿಂದ ಬಂದೆನೇನಮ್ಮ?" ಜಾನಿ ಕೂಡಲೇ ಕೇಳಿದ.

"ಅಹುದು ಮಗೂ. ನೀನು ನನ್ನೊಳಗೆ ರೂಪುಗೊಳ್ಳುವಾಗ ನನಗೆ ಅವಕಾಶವೇ ಇರಲಿಲ್ಲ. ನಿನ್ನನ್ನು ಸದೃಢನನ್ನಾಗಿ ಹುಟ್ಟಿಸಲು ನಾನು ಎಷ್ಟೊಂದು ಪೌಷ್ಟಿಕ ಆಹಾರವನ್ನು ಸೇವಿಸಬೇಕಾಯಿತು ಗೊತ್ತೇ?" ತಾಯಿ ಹೇಳಿದಳು.

ಒಂದು 'ಯಾಕೆ' ಇನ್ನೊಂದು 'ಯಾಕೆಗೆ' ಕರೆದೊಯ್ಯುತ್ತಲೇ ಇತ್ತು ಜಾನಿಯನ್ನು. ಆದರೆ ಅವನಿಗೆ ಈ ಸಲ ಏಕೋ 'ಯಾಕೆ' ಎಂಬುವ ಬದಲು 'ಎಲ್ಲಿ' ಎಂಬ ಪ್ರಶ್ನೆ ಎದುರಾಯಿತು. ಕೇಳಿಯೇ ಬಿಟ್ಟ. "ಅಮ್ಮಾ, ನಿನ್ನೊಳಗೆ ನಾನೆಲ್ಲಿದ್ದೆ?"

ತಾಯಿ ತನ್ನ ದುಂಡಗಿನ ಹೊಟ್ಟೆಯನ್ನು ತೋರಿಸುತ್ತ "ಇಲ್ಲಿ. ನಿನಗಾಗಿಯೇ ಇಲ್ಲಿ ಪ್ರತ್ಯೇಕವಾದ ಒಂದು ಕೋಣೆ ಇತ್ತು."

"ನೀನು ಸುಳ್ಳು ಹೇಳುತ್ತೀಯಮ್ಮಾ, ನೋಡು, ನಾನೆಷ್ಟು ದೊಡ್ಡವನಿದ್ದೇನೆ!" ಜಾನೀ ತನ್ನ ತುಲನಾತ್ಮಕ ಬುದ್ಧಿಯನ್ನು ಪ್ರದರ್ಶಿಸಿದ.

"ಆರಂಭದಲ್ಲಿ ನೀನು ಹೀಗಿರಲಿಲ್ಲ ಮಗೂ. ಚಿಕ್ಕ ಹೂವಿನ ಬೀಜಕ್ಕಿಂತಲೂ ಚಿಕ್ಕವನಾಗಿದ್ದಿ."

"ಆರಂಭದಲ್ಲಿ."

"ಅಹುದು ನಿನ್ನ ಆರಂಭದಲ್ಲಿ."


"ಆದರೆ ಅದಕ್ಕೂ ಮೊದಲು ನಾನೆಲ್ಲಿದ್ದೆ?"

"ಆಗಲೂ ನನ್ನಲ್ಲಿಯೇ!" ತಾಯಿ ಉತ್ತರಿಸಿದಳು.

"ನೀನು ಹುಟ್ಟುವುದಕ್ಕಿಂತಲೂ ಮೊದಲು ನಾನೆಲ್ಲಿದ್ದೆ?" ಜಾನಿ ನಿಲುಕದ ಪ್ರಶ್ನೆಯನ್ನೇ ಎತ್ತಿದ.

"ನಾನೂ ನನ್ನ ತಾಯಿಯ ಹೊಟ್ಟೆಯಲ್ಲಿ ಅತಿ ಚಿಕ್ಕದಾದ ಬೀಜದಲ್ಲಿ ಹುದುಗಿದ್ದೆ. ನೀನು ನನ್ನೊಳಗಿದ್ದಿ. ನಾನು ನನ್ನ ತಾಯಿಯೊಳಗಿದ್ದೆ; ತಾಯಿ ತನ್ನ ತಾಯಿಯೊಳಗಿದ್ದಳು......... ಹೀಗೆಯೇ ಜಗತ್ತಿನ ಆರಂಭಕ್ಕೇ ಅದು ಹೋಗುತ್ತದೆ. ಮಗೂ, ಈ ಪ್ರಶ್ನೆ ಒಂದು ಒಗಟು— ಒಂದು ಗೂಢ. ಇದರ ಉತ್ತರ ಇನ್ನೂ ಯಾರಿಗೂ ತಿಳಿಯದು. ಆರಂಭವನ್ನು ತಂದ ಆ ದೇವನೊಬ್ಬನಿಗೆ ಗೊತ್ತು, ಅದರ ಗುಟ್ಟು, ಉತ್ತರ." ಜಗತ್ತಿನ ಆದಿ ಅಂತ್ಯಗಳ ವಿಚಾರಕ್ಕೇ ಇಳಿದಳು ಜಾನಿ ಜಾಕಸನ್‌ನ ತಾಯಿ. ಜಾನಿಗೆ ಅದೊಂದೂ ಅರ್ಥವಾಗದು. ಪ್ರಶ್ನೆ ಕೇಳುವ ಕುತೂಹಲ ಒಂದೇ ಬಲವತ್ತರವಾಗಿತ್ತು.

"ನಿನ್ನೊಳಗೆ ನಾನು ಅಷ್ಟೊಂದು ಚಿಕ್ಕವನಾಗಿದ್ದರೆ ನನ್ನ ಬೆಳವಣಿಗೆ ಹೇಗಾಯಿತು?" ಜಾನಿ ಇನ್ನೊಂದು ಪ್ರಶ್ನೆಗೆ ಹಾರಿದ. ತಾಯಿ ನಕ್ಕಳು. "ಜಾನಿ, ನೀನೆಷ್ಟು ಚಪಲನೋ!" ಎಂದು ಬೆನ್ನು ತಟ್ಟಿ ಹೇಳಿದಳು. "ಆರಂಭವು ಚಲಿಸಬೇಕಾದರೆ ಶಕ್ತಿ ಬೇಕು. ಆ ಚಲನೆ ತಂದೆಗೆ ಸಂಬಂಧಿಸಿದ್ದು. ತಾಯಿಯಲ್ಲಿದ್ದ ಬೀಜಕ್ಕೆ ಚಲನೆ ಕೊಟ್ಟು ಮುನ್ನಡೆಸುವವನು ತಂದೆ. ಅದು ಕಾರಣವೇ ನಾನು ಹೇಳುತ್ತಿರುವುದು—ಪ್ರತಿಯೊಂದಕ್ಕೂ ಎರಡು ಮುಖ ಬೇಕು ಎಂದು. ಒಂದೇ ವ್ಯಕ್ತಿಯಿಂದ ಈ ಕಾರ್ಯ ನಡೆಯದು."


ನಿತ್ಯದ ಬಟ್ಟೆಗಳು
ಸನ್‌ಲೈಟ್‌ನಿಂದ
ಎಷ್ಟು ಬೆಳ್ಳಗೆ! ಎಷ್ಟು ಉಜ್ವಲ!
SUNLIGHT SOAP
ನಿಜ. ಅವುಗಳ ಬಿಳುಪಿಗೂ ಹೊಳಪಿಗೂ
ಕಾರಣ ಸನ್‌ಲೈಟ್ ಸೋಪು. ಸನ್‌ಲೈಟ್‌ನಿಂದಲೆ ನಿಮ್ಮ
ಮನೆಯ ಬಟ್ಟೆಗಳನ್ನೆಲ್ಲ ಒಗೆಯಿರಿ.
ಸನ್‌ಲೈಟ್—ಉತ್ಕೃಷ್ಟ ನೊರೆಯ ಶುದ್ಧ ಸೋಪು!
S.33-X29 KN
ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

"ಹೇಗೆ?" ಜಾನಿ ಕೇಳಿಯೇ ಬಿಟ್ಟ.

"ಅದು ತುಂಬ ಸುಲಭ ಮಗೂ," ತಾಯಿ ಹೇಳಲಾರಂಭಿಸಿದಳು. "ತಾಯಿ ಬೀಜ ಹುಟ್ಟಿಸುತ್ತಾಳೆ. ತಂದೆ ಆ ಬೀಜ ಬೆಳೆಯಲು ಪೋಷಕವಾದ ಸಜೀವ ನೀರನ್ನು ಹುಟ್ಟಿಸುತ್ತಾನೆ. ಆ ಸಜೀವ ನೀರಿನ ಒಂದು ಹನಿ ಬೀಜದ ಬೆಳವಣಿಗೆಗೆ ಕಾರಣವಾಗುತ್ತದೆ."

"ಹೇಗೆ?" ಇನ್ನೂ ಕುತೂಹಲಿಯಾಗಿ ಕೇಳಿದ ಜಾನಿ.

"ತಡೆ. ಇದನ್ನು ನೀನು ಕೇಳಬೇಕಾದ ಅವಶ್ಯಕತೆಯೇ ಇಲ್ಲ. ಇದು ಆಮೇಲೆ ನಿನಗೇ ತಿಳಿಯುವುದು. ಒಂದು ದಿನ ನೀನೂ ದೊಡ್ಡವನಾಗುವಿ. ಮನುಷ್ಯನಾಗುವಿ. ನಿನಗೆ ಯೋಗ್ಯಳಾದ ಹುಡುಗಿಯನ್ನು ಸಂಧಿಸುವಿ. ಆಗ ನಿನ್ನ ಎಲ್ಲ ಪ್ರಶ್ನೆಗಳಿಗೂ ಉತ್ತರ ಸಿಗುವುದು. ಆದರೆ ಇಂದು ನಿನಗೆ ಬೇರೊಂದು ವಿಷಯ ತಿಳಿಸಲಿದ್ದೇನೆ. ನಿನಗೆ ಬೇಗನೇ ಒಡನಾಡಿಯನ್ನು ತರಲಿದ್ದೇನೆ ಜಾನಿ! ಇನ್ನೊಂದು 'ಪುಟ್ಟು' ರೂಪುಗೊಳ್ಳುತ್ತಿದೆ ನನ್ನಲ್ಲಿ. ನಿನ್ನ ತಂಗಿಯಾಗಲೆಂದು ನನ್ನಾಸೆ!"

ಜಾನಿಯ ಆನಂದಕ್ಕೆ ಮೇರೆಯೇ ಇಲ್ಲ. ಆನಂದಾತಿರೇಕದಿಂದ ಕೈಯೊಳಗಿನ ಹೋಳಿಗೆಯ ಚೂರು ಕೆಳಗೆ ಬಿದ್ದದೂ ಗೊತ್ತಾಗದೆ "ಅದು ತಂಗಿಯೆಂದೇ ನಿನಗೆ ವಿಶ್ವಾಸವೇನಮ್ಮ?" ಎಂದು ತಾಯಿಯನ್ನು ಪ್ರಶ್ನಿಸಿದ.

"ಹೇಳಲಾರೆನಪ್ಪಾ. ನಿನಗೆ ಬೇಕಾದುದನ್ನು ಬೇಡಿಕೊಳ್ಳು; ಯಾವುದು ಸಿಗುತ್ತೋ ಅದರಿಂದ ಸಮಾಧಾನವಿರಲಿ."

"ಅವಳು ನಾಳೆ ಇಲ್ಲಿ ಇರಬಲ್ಲಳೋ?" ಜಾನಿ ತುಂಬ ಆತುರನಾದ. ತಾಯಿ ತಲೆ ಅಲ್ಲಾಡಿಸಿ, "ಇಲ್ಲ ಮಗೂ, ನಾಳೆಯೇ ಅವಳು ಇಲ್ಲಿ ಇರಲಾರಳು. 'ಪುಟ್ಟು'ವನ್ನು ರೂಪಿಸಲು ಎಷ್ಟೋ ದಿನಗಳು ಬೇಕಾಗುತ್ತವೆ. ಆ ಮೇಲೆ ಚಿತ್ರಕಾರನು ತನ್ನ ಪರಿಪೂರ್ಣ ಚಿತ್ರಕ್ಕೆ ಕೊನೆಯ ಕುಂಚು ತಲುಪಿಸುವಂತೆ ನಿನ್ನ 'ಪುಟ್ಟು'ವಿಗೂ ಉಗುರು, ಕೂದಲು ಮುಂತಾದವುಗಳ ಮುಕ್ತಾಯ ಸಂಸ್ಕಾರ ಬೇಕಾಗುತ್ತದೆ."

"ಏನೆಲ್ಲ ಮಾಡಬೇಕೋ ಅದೆಲ್ಲವನ್ನೂ ಮಾಡಲು ನಿನಗೆ ಬರುತ್ತದೋ ಇಲ್ಲವೋ ನೋಡು," ಜಾನಿ ತನ್ನ ಅಮ್ಮ ಎಲ್ಲಿ ತಪ್ಪುವಳೋ ಎಂಬ ಭೀತಿಯಿಂದ ಕೇಳಿದ.

"ಇಲ್ಲ......ಇಲ್ಲ ಮಗೂ, ಅದನ್ನೆಲ್ಲ ನಾನೇ ಮಾಡಲಾರೆ," ತಾಯಿ ಸಂತೋಷದಿಂದ ಹೇಳತೊಡಗಿದಳು. "ನಾನು ಕೇವಲ ತಿಂದುಂಡು ಮಲಗುತ್ತೇನೆ. ಆನಂದದಿಂದ ಇರುತ್ತೇನೆ. ಸರಿ. ಈಗ ಆಟವಾಡಲು ಹೋಗು ಜಾನಿ. ತುಂಬ ಪ್ರಶ್ನೆಗಳನ್ನು ಕೇಳಿಬಿಟ್ಟಿರುವಿ. ನನಗೆ ತೂಕಡಿಕೆ ಬಂದಿದೆ ನೋಡು."

ಜಾನಿ ಹೊರಗೋಡಿದ. ತಾನು ತಾಯಿಯೊಡನೆ ಮಾತನಾಡಿದ್ದನ್ನೆಲ್ಲ ಮೆಲುಕು ಹಾಕಿ ಪುನಃ ವಿಚಾರಿಸಬೇಕಿತ್ತು ಅವನಿಗೆ. ಬರಲಿರುವ 'ಪುಟ್ಟು' ತಮ್ಮನೋ—ತಂಗಿಯೋ? ಯಾವುದಾದರೂ ಅವನಿಗೆ ಸಂತೋಷ. ಅವಳು ಹುಟ್ಟಿದಾಗ ಎಷ್ಟು ಚಿಕ್ಕವಳಾಗಿ ಕಾಣಬಹುದು? ಅವನ ಆಶ್ಚರ್ಯಕ್ಕೆ ನೆಲೆ ಇರಲಿಲ್ಲ. ತನ್ನ ಮೂರು ಗಾಲಿಯ ಸೈಕಲ್‌ನ್ನು ಅವಳು ಹತ್ತಬಹುದಲ್ಲವೇ? ತನ್ನಲ್ಲಿ ಉತ್ತರ ಸಿಗದೆ ಇದ್ದುದರಿಂದ ಮೆಲ್ಲನೇ ಬೆಕ್ಕಿನಂತೆ ಒಳಗೆ ಹೋದ. ಆದರೆ ತಾಯಿ ಗಾಢ ನಿದ್ರೆಯಲ್ಲಿದ್ದಳು.

ಮರುದಿನ ಜಾನಿಯ ತಾಯಿ-ತಂದೆಗಳು ಅವನನ್ನು ಕಿಂಡರ್‌ಗಾರ್ಟನ್ ಸ್ಕೂಲಿಗೆ ಕಳಿಸಲು ನಿರ್ಧರಿಸಿದರು. ಅದೇ ವಸಂತಮಾಸ ಬೇಸಿಗೆಯನ್ನು ಅಪ್ಪಿಕೊಳ್ಳಲಿತ್ತು. ದಿನಾಲೂ ತಪ್ಪದೇ ಶಾಲೆಗೆ ಹೋಗುವುದು ಜಾನಿಗೆ ಅಭ್ಯಾಸವಾಯಿತು. ಅವನ ಸಮಯವೆಲ್ಲ ಒಡನಾಡಿಗಳೊಡನೆ ಆಟದಲ್ಲಿಯೇ ಕಳೆಯುವುದು. ಈಗ ಮೊದಲಿನಂತೆ ತಾಯಿಗೆ ಪ್ರಶ್ನೆಗಳನ್ನು ಕೇಳುವುದನ್ನೇ ಮರೆತಿದ್ದ. ಶಾಲೆ ಬಿಟ್ಟ ಮೇಲೆ ತಾನೇ ಜೊತೆಗಾರರನ್ನು ಹುಡುಕಿ ಹೋಗುವವನು. ಇಲ್ಲವೇ ಅವರೇ ಇವನೆಡೆಗೆ ಬರುವರು. ಗೋಲಿ ಆಡುವುದು ಚೆಂಡೆಸೆತ ಮುಂತಾದ ಆಟಗಳನ್ನೆಲ್ಲ

ಕಲಿತುಕೊಂಡ.

ಅದೊಂದು ದಿನ ಶಾಲೆಯಿಂದ ಮನೆಗೆ ಕರೆತರಲು ತಾಯಿ ಬದಲು ತಂದೆ ಬಂದರು. "ನಿನ್ನ ತಂಗಿ ತನ್ನ ನಿಶ್ಚಿತ ದಿನದ ಮೊದಲೇ ಬಂದುಬಿಟ್ಟಿದ್ದಾಳೆ ಜಾನಿ" ತಂದೆ ಹೇಳಿದರು.

ಜಾನಿ ಅಟ್ಟಹಾಸದಿಂದ ಕುಣಿದುಬಿಟ್ಟ. ಅಬ್ಬರ ಮಾಡಿ ತನ್ನ ಹರ್ಷಘೋಷವನ್ನೇ ಪ್ರದರ್ಶಿಸಿದ. "ಬೇಗನೇ ಹೋಗಿ ಅವಳನ್ನು ಕಾಣೋಣ" ಎಂದು ತಂದೆಯ ಕೈ ಹಿಡಿದೆಳೆದು ಪುಟ್ಟ ಕಾಲಿನಿಂದ ದೊಡ್ಡ ಹೆಜ್ಜೆ ಹಾಕಿದ.

ಆದರೆ ಪ್ರಸೂತಿಗೃಹದಲ್ಲಿ ಡಾಕ್ಟರರು ಜಾನಿಯನ್ನು ಒಳಗೆ ಬಿಡದಾದರು. ಅವನಿಗೆ ಇದು ಅವಮಾನವೆನಿಸಿತು. ಆದರೆ ಅಸಹಾಯಕನಾಗಿದ್ದ. ತಂದೆ ಜಾನಿಯನ್ನು ಅನೇಕ ಮಾತುಗಳಿಂದ ಮನಗಾಣಿಸಿ ಸಮಾಧಾನ ಹೇಳದಿದ್ದರೆ ಆತ ತುಂಬ ಗಲಾಟೆ ಮಾಡಬಹುದಿತ್ತು. ಬಾಗಿಲು ತೆಗೆದರೆ, ಹುಟ್ಟಿದ ಮಗುವಿಗೆ ಗಾಳಿ ತಗುಲಿ ಕೆಮ್ಮು ನೆಗಡಿ ಬರಬಹುದು; ಇನ್ನೇನಾದರೂ ರೋಗ ಅಂಟಬಹುದು ಮುಂತಾಗಿ ತಂದೆ ಹೇಳಿದಾಗ ಜಾನಿ ಶಾಂತನಾದ. ತಂದೆ ಹಾಸ್ಪಿಟಲ್‌ನಿಂದ ತಾಯಿಯನ್ನೂ ಪುಟ್ಟ ತಂಗಿಯನ್ನೂ ಕರೆತರುವ ದಿನ ಜಾನಿ ತುಂಬ ಆತುರನಾಗಿ ನೆರೆಮನೆಯ ಅಜ್ಜಿಯ ಬಳಿ ಕುಳಿತಿದ್ದ. ಕಾರಿನ ಸಪ್ಪಳ ಕೇಳುತ್ತಲೇ ಟಣ್ಣನೇ ಜಿಗಿದು ಗೇಟಿನ ಬಳಿ ಓಡಿದ.

ಎಂದಿನಂತೆಯೇ ಕಾಣಿಸುತ್ತಿದ್ದ ತಾಯಿ ಹೊರಬಂದಳು ಅವಳ ಕೈಯಲ್ಲಿ ಕಂದುಬಣ್ಣದ ಅರಿವೆಯಲ್ಲಿ ಸುತ್ತಿದ ಒಂದು ಮುದ್ದೆ ಮಾತ್ರ ಇತ್ತು. ತನ್ನ ಕೈಯಲ್ಲಿದ್ದುದು ಜಾನಿಗೆ ಕಾಣಲೆಂದೇ ಅವಳು ಮೊಳಕಾಲೂರಿ ಕುಳಿತಳು. ಆ ಮಾಟ, ದುಂಡಗಿನ ಮುಖವು ಜಾನಿಯನ್ನು ನೋಡಿತು. "ಇವಳು ಸುಸನ್" ತಾಯಿ ಹೇಳಿದಳು. "ನಾನು ಒಳ್ಳೆಯ ಕಾರ್ಯವನ್ನೇ ಮಾಡಿದಂತೆ ಕಾಣುತ್ತದೆ" ಎಂದು ಅಂದಳು.

"ಭೇಷ್! ಒಳ್ಳೆಯದನ್ನೇ ಮಾಡಿರುವಿ. ಮಗು ಬಹಳೇ ಮುದ್ದಾಗಿದೆ" ತಂದೆ ಅವಳ ಮಾತನ್ನು ಸಮರ್ಥಿಸಿ ಹೇಳಿದರು.

ಎಲ್ಲರೂ ಜೊತೆಯಾಗಿ ಮನೆಯಲ್ಲಿ ಕಾಲಿಟ್ಟರು. ತನ್ನೆರಡೂ ಕೈಗಳನ್ನು ಜೇಬಿನಲ್ಲಿ ಸೇರಿಸಿ ತತ್ವಜ್ಞಾನಿಯಂತೆ ದೊಡ್ಡ ಹೆಜ್ಜೆಗಳನ್ನಿಡುತ್ತ ಜಾನಿ ಅವರನ್ನು ಹಿಂಬಾಲಿಸಿದ. ಏನನ್ನೋ ಅವನು ವಿಚಾರಿಸುತ್ತಿರಬೇಕು! ಸುಸನ್ ತನ್ನ ಮೂರು ಗಾಲಿಯ ಸೈಕಲ್‌ನ್ನು ಹತ್ತುವಳೋ ಎಂದು ಅಂದು ಕೇಳಬೇಕೆಂದಿದ್ದವನು ಕೇಳಿರಲಿಲ್ಲ. ಇನ್ನೂ ಅನೇಕ ದಿನಗಳವರೆಗೂ ಆ ಸೈಕಲ್‌ನ್ನು ಹತ್ತಲಾರಳೆಂಬುದು ಈಗ ಅವನಿಗೆ ಖಚಿತವಾಯಿತು. ಅವಳು ಆ ಸೈಕಲ್ಲು ಹತ್ತುವ ವೇಳೆಗೆ ತನಗೆ ಎರಡು ಗಾಲಿಯ ಸೈಕಲ್ ಬೇಕಾಗಬಹುದೆಂದೂ ಲೆಕ್ಕ ಹಾಕಿದ.

ಬೆಚ್ಚಗಿದ್ದ ಕೋಣೆಗೆ ತೆರಳಿದರು. ಮಗು ಅಳುತ್ತಿರುವುದನ್ನು ಕಂಡು "ಅಯ್ಯೋ ಪಾಪ! ಹಸಿವಾಗಿದೆ ಮಗುವಿಗೆ", ಎಂದೆನ್ನುತ್ತ ತಾಯಿ ತೂಗಾಡುವ ಆಸನದಲ್ಲಿ ಕುಳಿತು ಮೊಲೆ ಉಣ್ಣಿಸುವುದನ್ನು ಕಂಡ ಜಾನಿ "ಏನು ಮಾಡುತ್ತಿರುವಿ ಅಮ್ಮಾ?" ಎಂದು ಕೇಳಿದ. "ನಿನಗೆ ಹಾಲು ಉಣಿಸಿದಂತೆ ನಿನ್ನ ತಂಗಿಗೂ ಹಾಲುಣಿಸುತ್ತಿದ್ದೇನೆ ಮಗೂ. ಇದು ತಾಯಂದಿರ ಕೆಲಸ" ಎಂದಳು ಅವನ ತಾಯಿ.

ಜಾನಿಗೆ ಇದೆಲ್ಲ ಒಂದು ವಿಚಿತ್ರವಾಗಿ ಕಂಡಿತು. ಏನನ್ನೋ ನೆನಸಿಕೊಂಡ. ಆಕಳು ತನ್ನ ಕರುವಿಗೆ ಮೊಲೆ ಉಣಿಸುತ್ತಿದ್ದುದು, ಲುಸೀ ತನ್ನ ಮರಿಗಳಿಗೆ ಹಾಲು ಕೊಡುತ್ತಿದ್ದುದು ಅವನ ಜ್ಞಾಪಕಕ್ಕೆ ಬಂದಿತು. ಅದನ್ನೆಲ್ಲ ಆತ ಕಂಡಿದ್ದ, ಆದರೆ ಅದರ ಬಗ್ಗೆ ಏನೊಂದೂ ವಿಚಾರಿಸಿರಲಿಲ್ಲ. ತಾಯಿ-ತಾಯ್ತನ-ಏನೊ ಆ ವಿಚಾರ ಮುಸುಕಾಗಿ ಅವನ ಕಣ್ಣೆದುರು ನಿಂತಿರಬೇಕು.

ತನ್ನ ಸುಸನ್ ಮೊಲೆ ಕುಡಿಯುವುದನ್ನು ನೋಡುತ್ತ ಎಷ್ಟೋ ವೇಳೆ ಅಲ್ಲಿಯೇ ನಿಂತು

ಕೊಂಡ. ಯಾವುದೋ ಅರಿಯದ ಮೃದು ಮಧುರವಾದ ಎಳೆಯ ವಿಚಾರ ಅವನ ಹೃದಯ ವನ್ನು ಸೇರಿತು. ತಾಯಿ ತನ್ನ ತಂದೆಯೆಡಗೆ ಮುಗುಳ್ನಗೆ ಬೀರಿ "ಇನ್ನೊಂದು ಶುಭ ಆರಂಭ" ಎನ್ನುವುದನ್ನು ಕೇಳಿದ

"ಯಾವುದರ ಆರಂಭ ಅಪ್ಪಾ?" ಆರಂಭಗಳ ಗೊಂದಲದಿಂದ ಇನ್ನೂ ಪಾರಾಗದ ಜಾನಿ ಕೇಳಿದ.

ಜಾನಿಯ ತಂದೆ ನಕ್ಕು, ಮಗನ ಸುಂದರ ವಾದ ತಲೆಗೂದಲಿನಲ್ಲಿ ಬೆರಳು ಸೇರಿಸುತ್ತ "ಪ್ರತಿಯೊಂದರ ಆರಂಭ, ಪ್ರತಿಯೊಬ್ಬನಿಗಾಗಿ" ಎಂದರು.

ಕಡೆಗೂ ಆ ನಿಲುಕದ 'ಆರಂಭ' ಒಗಟಾಗಿಯೇ ಉಳಿಯಿತು ಜಾನಿ ಜಾಕ್‌ನಿಗೆ! *

## ಋಷಿವಚನ

ಮನೆಯಲ್ಲಿ ಹಜಾರದಲ್ಲಿ ಬೇಕಾದಷ್ಟು ಸ್ಥಳವಿದೆ. ಆದರೆ ಅಲ್ಲಿ ಏನೇನೋ ಸಾಮಾನುಗಳನ್ನಿಟ್ಟು ಅಲ್ಲಿ ಜಾಗವೇ ಇಲ್ಲದಂತೆ ಮಾಡಿರುತ್ತೇವೆ. ಅಲ್ಲಿ ಸರಿಯಾದ ಜಾಗ ಬೇಕಾದಲ್ಲಿ ಆ ಸಾಮಾನುಗಳನ್ನೆಲ್ಲಾ ತೆಗೆದು ಖಾಲಿಮಾಡಿಕೊಳ್ಳಬೇಕು. ಹಾಗೆಯೇ ನಮ್ಮ ಮನಸ್ಸಿನಲ್ಲಿಯು ಕೊಳಕುಗಳನ್ನೆಲ್ಲಾ ನಿವಾರಿಸಿ ಯಾವ ಯೋಚನೆಗಳನ್ನೂ ಇಟ್ಟುಕೊಳ್ಳದಿದ್ದಲ್ಲಿ ನಿಮಗೆ ಶಾಂತಿ ತಾನಾಗಿಯೇ ಲಭಿಸುವುದು. ಶಾಂತಿಗೆ ಅಡ್ಡಿ ಆಗುವಂಥದ್ದನ್ನೆಲ್ಲಾ ದೂರ ಮಾಡಬೇಕು. ಶಾಂತಿಯೇ ಸ್ಥಿರ.

—ಭಗವಾನ್ ಶ್ರೀರಮಣ

ನಾನು ದೇವರನ್ನು ಪ್ರೀತಿಸುತ್ತೇನೆ ಆದರೆ ನನ್ನ ಅಣ್ಣ ತಮ್ಮಂದಿರನ್ನು ದ್ವೇಷಿಸುತ್ತೇನೆ ಎಂದು ಹೇಳುವ ಯಾವ ಮನುಷ್ಯನೇ ಆಗಲಿ ಆತ ಹೇಳುವುದು ಶುದ್ಧ ಸುಳ್ಳು. ಏಕೆಂದರೆ ಎದುರಿಗೆ ಕಾಣುವಂತಹ ತನ್ನ ಒಡಹುಟ್ಟಿದವರನ್ನು ದ್ವೇಷಿಸುವವನು, ಪ್ರೀತಿಸದವನು ಕಣ್ಣಿಗೆ ಕಾಣದ ಕಾಲ್ಪನಿಕ ದೇವರನ್ನು ಹೇಗೆ ಪ್ರೀತಿಸಲು ಸಾಧ್ಯ?

—ಯೇಸು ಕ್ರಿಸ್ತ

ಮೊದಲು ಜನಕ್ಕೆ ಸತ್ಯದರ್ಶನ ಮಾಡಿಸು. ನಂತರ ಅವರಿಗೆ ಅದರ ರೂಪ ಗೋಚರಿಸುತ್ತದೆ. ನನ್ನ ಮಟ್ಟಿಗೆ ಹೇಳುವುದಾದರೆ ಯಾವುದು ಹಸಿದು ಸಾಯುತ್ತಿರುವ ಜನಕೋಟಿಗೆ ಉಪಯೋಗಕರವಾಗಬಲ್ಲದೋ ಅದೇ ಸತ್ಯದ ರೂಪ. ಮೊದಲು ಬಾಳಿಗೆ ಬೇಕಾದ್ದು ಕೊಟ್ಟು, ನಂತರ ಬಾಳಿನ ಶೃಂಗಾರ ಸೊಗಸು ನೋಡೋಣ. ಇದೇ ಸೌಂದರ್ಯದ ಗುಟ್ಟು.

—ಮಹಾತ್ಮಾ ಗಾಂಧಿ

ಕತ್ತರಿಸಿ ಹಾಕಿದರೂ ಮರ ತಿರುಗಿ ಬೆಳೆಯುತ್ತದೆ. ಚಂದ್ರ ಕ್ಷೀಣನಾಗಿದ್ದರೂ ಪುನಃ ವೃದ್ಧಿಹೊಂದುತ್ತಾನೆ. ಬತ್ತಿಹೋದ ಹೊಳೆ ಪುನಃ ತುಂಬಿ ಹರಿಯುತ್ತದೆ. ಈ ಲೋಕದಲ್ಲಿ ಇದನ್ನು ವಿಮರ್ಶಿಸಿದ ಸತ್ಪುರುಷರು ವಿಪತ್ತಿನಿಂದ ಪೀಡಿತರಾಗಿದ್ದರೂ ಎದೆಗೆಡುವುದಿಲ್ಲ.

—ಸುಭಾಷಿತ

—ಸಂಗ್ರಹ: ಶ್ರೀನಿವಾಸ ಉಡುಪ

# ಒಂದು ಒಳ್ಳೆಯ ಸೂಟ್ ಎಷ್ಟು ಸಮಯ ಬಾಳಿಕೆ ಬರಬೇಕು?

## ಒಳ್ಳೆಯ ಉಡುಪು ಧರಿಸುವ ವ್ಯಕ್ತಿ ಕೇಳುವ ಪ್ರಶ್ನೆ.

ನಿಮ್ಮ ಹೊಸ ಸೂಟು ಉತ್ತಮವಾಗಿ ಕಾಣಬೇಕು—ಆದರೆ ಅದು ಉತ್ತಮವಾಗಿ ಧರಿಸಲ್ಪಡಬೇಕಾದುದೂ ಮುಖ್ಯವಾಗಿದೆ. ನೀವು ಉಡುಪುಗಳಿಗೆ ಕೊಟ್ಟ ಮೌಲ್ಯವನ್ನು ಹೊಂದಿಕೊಂಡು ಒಂದು ಒಳ್ಳೆಯ ಸೂಟು ದೀರ್ಘಕಾಲ ಬಾಳಿಕೆ ಬರಲು ಸಾಧ್ಯವಿದೆ. ಆದರೆ ಒಂದು ವಿಷಯ ಮಾತ್ರ ನಿಶ್ಚಯ. ಯಾವ ಬೆಲೆಯಲ್ಲೂ ನೀವು ಚುನಾಯಿಸಿದ—**ಮಫತ್‌ಲಾಲ್ ಗ್ರೂಪ್ ಸೂಟಿಂಗ್ಸ್**—ಅವುಗಳ ದರ್ಜೆಯಲ್ಲೇ ಮೇಲ್ಮಟ್ಟದ್ದಾಗಿದೆ ಮತ್ತು ನಿಮಗೆ ನಿಜವಾಗಿಯೂ ಉತ್ತಮ ಮತ್ತು ದೀರ್ಘ ಸೇವೆಯನ್ನು ಸಲ್ಲಿಸುತ್ತದೆ.



**ಮಫತ್‌ಲಾಲ್**
**ಗ್ರೂಪ್** ಸೂಟಿಂಗ್ಸ್

ನ್ಯೂ ಶೊರೋಕ್, (ಶೊರೋಕ್), ಅಹಮದಾಬಾದ್. ನ್ಯೂ ಶೊರೋಕ್ ನಡಿಯಾಡ್. ಸ್ಟಾಂಡರ್ಡ್, ಬೊಂಬಾಯಿ. ಸ್ಟಾಂಡರ್ಡ್, (ನ್ಯೂ ಚೈನಾ) ಬೊಂಬಾಯಿ. ಸ್ಟಾಂಡರ್ಡ್, ದೇವಾಸ್. ಸಾಸೂನ್, ಬೊಂಬಾಯಿ. ಸಾಸೂನ್, (ನ್ಯೂ ಯೂನಿಯನ್), ಬೊಂಬಾಯಿ. ಸೂರತ್ ಕಾಟನ್, ಸೂರತ್. ಮಫತ್‌ಲಾಲ್ ಫೈನ್, ನವ್ಸಾರಿ. ಗಗಲ್‌ಭಾಯ್ ಜೂಟ್, ಕಲ್ಕತ್ತ. ಇಂಡಿಯನ್ ಡೈಸ್ಟಫ್, ಬೊಂಬಾಯಿ.

SISTA'S-MG-18A



ಪ್ರಜನನ ಶಾಸ್ತ್ರವೇ ಇದರ
ಬೆನ್ನ ಮೇಲೆ ನಿಂತಿದೆ

# ಈ ನೊರಜು ಅತ್ಯಂತ ಉಪಕಾರಿ

ರಾಧಾಕೃಷ್ಣ ರಾವ್

ಈ ಭೂಮಿಯ ಮೇಲೆ ಜೀವಿಸುವ ಸಹಸ್ರಾರು ಜಾತಿಯ ನೊಣ-ನೊರಜುಗಳಲ್ಲಿ ಮಾನವನಿಗೆ ಅತ್ಯಂತ ಉಪಕಾರ ಮಾಡಿದ ಒಂದನ್ನು ಹೆಸರಿಸಬೇಕಾದರೆ ಹಣ್ಣಿನ ನೊರಜು—ಅದರ ವೈಜ್ಞಾನಿಕ ಹೆಸರು ಡ್ರೊಸೋಫಿಲಾ ಮೆಲನೊಗಾಸ್ಟರ್ ಎನ್ನಬಹುದು. ರೆಕ್ಕೆ ಅರಳಿಸಿದಾಗ ಅದರ ಅಗಲ ಬರಿ ಒಂದಂಗುಲದ ಆರರಲ್ಲೊಂದಂಶದಷ್ಟು. ಆದರೆ ಈ ಹುಳದ ಮೇಲೆ ಇಡೀ ಪ್ರಜನನ ಶಾಸ್ತ್ರದ ಕಟ್ಟಡವೇ ನಿಂತಿದೆ.

ಮಾನವನಿಗೆ ತನ್ನ ವಂಶಪಾರಂಪರ್ಯಗುಣಗಳ ಗುಟ್ಟನ್ನು ಬಿಡಿಸಿ ಹೇಳುವ ಜೀವವಿಜ್ಞಾನದ ಅಂಗವೆ ಪ್ರಜನನ ಶಾಸ್ತ್ರ (ಜೆನೆಟಿಕ್ಸ್). ಆದರೆ ಇದರ ಗುಟ್ಟನ್ನು ಕಂಡುಹಿಡಿಯಲು ಮಾನವ ಪ್ರಾಣಿಗಳನ್ನು ಪ್ರಯೋಗಕ್ಕೊಳಪಡಿಸಲು ಸಾಧ್ಯವಾದೀತೆ? ಆದ್ದರಿಂದ ಪ್ರಜನನ ಶಾಸ್ತ್ರದ ಪ್ರಯೋಗಗಳಿಗೆ ಮೊದಲು ಸಸ್ಯಗಳನ್ನು ಆರಿಸಿಕೊಳ್ಳಲಾಯಿತು. ಮೆಂಡೆಲ್ಲನು ಅವರೆಯ ಮೇಲೆ ಪ್ರಯೋಗ ಮಾಡಿಯೇ ಜೀವಗಳ ಅನುವಂಶಿಕ ಲಕ್ಷಣಗಳಲ್ಲಿ ಯಾವುದು ಮೇಲ್ಗೈ ಯಾವುದು ಕೀಳ್ಗೈ ಮತ್ತು ಎಷ್ಟು ಮಟ್ಟಿಗೆ ಎಂಬುದರ ನಿಯಮಗಳನ್ನು ಸ್ಥಾಪಿಸಿದನು. ಆದರೆ ಸಸ್ಯಗಳನ್ನು ಬೆಳಸುವುದು ಬಲು ವೇಳೆ ತೆಗೆದುಕೊಳ್ಳುವ ಕೆಲಸ. ಬರಿ ಅರ್ಧ ಶತಮಾನದ ಮೊದಲು ಹುಟ್ಟಿದ ಈ ವಿಜ್ಞಾನಶಾಖೆಗೆ ಹೀಗೆ ವೇಳೆಗಳೆಯುವ ಇಷ್ಟವಿರಲಿಲ್ಲ. ಆದ್ದರಿಂದ ಬೇಗನೇ ಅಭಿವೃದ್ಧಿ ಹೊಂದುವ ಕೋಳಿ, ಮೊಲ, ಇಲಿ, ಗಿನಿ ಪಿಗ್ ಮೊದಲಾದ ಪ್ರಾಣಿಗಳನ್ನು ಅವರು ಉಪಯೋಗಿಸತೊಡಗಿದರು.

ಆದರೆ ಪ್ರಜನನ ಶಾಸ್ತ್ರಿಗಳು ಅವಸರದಲ್ಲಿದ್ದಾರೆ. ತತ್ತಿ ಒಡೆಯುವ ವರೆಗೆ, ಗರ್ಭ ಬೆಳೆಯುವ ವರೆಗೆ ಕೂಡ ಕಾಯಲು ಅವರು ಸಿದ್ಧರಿರಲಿಲ್ಲ. ಅತ್ಯಂತ ವೇಗವಾಗಿ ಸಂತಾನಾಭಿವೃದ್ಧಿ ಮಾಡಿಕೊಳ್ಳುವ ಜೀವಿಯೊಂದು ಅವರಿಗೆ ಬೇಕಾಗಿತ್ತು.

ಆಗ ಅವರಿಗೆ ಡ್ರೊಸೋಫಿಲಾ ಕಣ್ಣಿಗೆ ಬಿತ್ತು. ಎಲ್ಲ ವಿಧದಿಂದಲೂ ಅದು ಆದರ್ಶವಾಗಿತ್ತು. ಅದರ ಸಂತಾನದಲ್ಲಿ ವೈವಿಧ್ಯಗಳಿವೆ. ಒಂದು ಸಲಕ್ಕೆ ಮೂರು ನಾಲ್ಕು ನೂರು ಸಂತಾನದಂತೆ ವರ್ಷಕ್ಕೆ ೨೫ ಕ್ಕೂ ಹೆಚ್ಚು ಪೀಳಿಗೆಗಳನ್ನು ಅದು ಉತ್ಪಾದಿಸುತ್ತದೆ. ಒಂದು ಬಾಟಲಿಯಲ್ಲಿ ಬಾಳೇಹಣ್ಣು ಹಾಕಿ ಅದರೊಳಗೆ ಹಣ್ಣಿನ ನೊರಜುಗಳ ಒಂದು ಜತೆಯನ್ನು ಬಿಟ್ಟರಾಯಿತು, ೧೪ ದಿನದೊಳಗೆ ಪ್ರಥಮ ಪೀಳಿಗೆ ಸಿದ್ಧವಾಗಿಬಿಡುತ್ತದೆ.

ಈ ನೊರಜಿನ ಸಹಾಯದಿಂದ ಒಂದೇ ವರ್ಷದೊಳಗೆ ಒಂದು ಚಿಕ್ಕ ಪ್ರಯೋಗಶಾಲೆಯಲ್ಲಿ ಹಲವು ಪೀಳಿಗೆಗಳ ಸಾವಿರ ಸಾವಿರ ಕೀಟಗಳನ್ನು ಬೆಳೆಸಲು ಸಾಧ್ಯವಾಗಿ ಅವುಗಳನ್ನು ಪಾರಂಪರ್ಯವಾಗಿ ಪರೀಕ್ಷಿಸುವುದು ಸುಲಭವಾಯಿತು. ಮೇಲಾಗಿ ಈ ಜೀವಿಯ ಶರೀರದ ಜೀವಕೋಶಗಳ ರಚನೆ ಸರಳವಾಗಿದೆ. ಅದರಿಂದ ಜೀವಿಗಳಲ್ಲಿ ಪೂರ್ವಜರ ಗುಣಲಕ್ಷಣಗಳನ್ನು ತಲೆಯಿಂದ ತಲೆಗೆ ಇಳಿದು ಬರುವಂತೆ ಮಾಡುವ ರಹಸ್ಯಮಯ ವಾಹಕವಾದ 'ಜೀನ್'ನ್ನು ಪರೀಕ್ಷಿಸಿ ಅರ್ಥಮಾಡಿಕೊಳ್ಳಲಿಕ್ಕೂ ಅನುಕೂಲವಾಯಿತು.

ಡ್ರೊಸೋಫಿಲಾ ಕೀಟ ಇತರ ಕೆಲ ಕೀಟಗಳಂತೆ ಚಳಿಗಾಲ ಅಥವಾ ಬೇರಾವ ಋತುವಿನಲ್ಲಿ ನಿಷ್ಕ್ರಿಯವಾಗಿರುವುದಿಲ್ಲ. ಇಡೀ ವರ್ಷ ಅವುಗಳ ಚಟುವಟಿಕೆ ನಡೆದೇ ಇರುತ್ತದೆ. ಹೀಗಾಗಿ ಅವುಗಳ ಮೇಲೆ ಪ್ರಜನನ ಶಾಸ್ತ್ರದ ಪ್ರಯೋಗಗಳನ್ನು ಮಾಡುವ ವಿಜ್ಞಾನಿ ಎರಡೇ ವರ್ಷಗಳಲ್ಲಿ ೫೦ ಕ್ಕೂ ಹೆಚ್ಚು ಪೀಳಿಗೆಗಳ ಗತಿವಿಧಿಗಳನ್ನು ಪರೀಕ್ಷಿಸುತ್ತ ಹೋಗಬಲ್ಲ. ಅದೇ ಮೊಲಗಳ ೫೦ ಪೀಳಿಗೆಗಳನ್ನು ಅಭ್ಯಸಿಸಬೇಕಾದರೆ ಹಲವು ದಶಮಾನಗಳು ಬೇಕಾಗುವವು; ಮತ್ತು ಮಾನವನ ಅಷ್ಟೇ ಪೀಳಿಗೆಗಳನ್ನು ಪರಿಶೀಲಿಸಲು ೨೦ ಶತಮಾನಗಳು ಬೇಕಾಗುವವು ಎಂಬುದನ್ನು ಲಕ್ಷಿಸಿದರೆ ಡ್ರೊಸೋಫಿಲಾ ಕೀಟದ ಉಪಯೋಗ ಅರ್ಥವಾಗಬಹುದು.

ಜೀವವಿಜ್ಞಾನಿಗಳು, ಈ ಕೀಟಗಳಲ್ಲಿ ಕಂಡುಬರುವ ಆನುವಂಶಿಕ ನಿಯಮಗಳೇ ಮಾನವನನ್ನೊಳಗೊಂಡು ಮೇಲಿನ ಹಂತದ ಪ್ರಾಣಿಗಳಿಗೂ ಅನ್ವಯಿಸುತ್ತವೆಂದು ಖಾತ್ರಿ ಮಾಡಿಕೊಂಡಿದ್ದಾರೆ. ಆದ್ದರಿಂದ ಅವುಗಳನ್ನು ಸೂಕ್ಷ್ಮದರ್ಶಕದಲ್ಲಿ ೫೦ ವರ್ಷಗಳಿಂದ ಪರೀಕ್ಷಿಸುತ್ತಿರುವ ವಿಜ್ಞಾನಿಗಳು ಕಂಡ ತಥ್ಯಗಳನ್ನೂ ಕೊಡುವ ಎಚ್ಚರಿಕೆಗಳನ್ನೂ ನಾವು ಮಾನವರು ಕಡೆಗಣಿಸುವುದು ಹಿತವಲ್ಲ.

ಡ್ರೊಸೋಫಿಲಾವನ್ನು ಸಂತತವಾಗಿ ಪರೀಕ್ಷಿಸಿದ ವಿಜ್ಞಾನಿಗಳಲ್ಲಿ ಅಮೇರಿಕದ ಕೊಲಂಬಿಯಾ ವಿಶ್ವವಿದ್ಯಾಲಯದ ಪ್ರೊ. ಥಾಮಸ್ ಹಂಟ್ ಮಾರ್ಗನ್ನರೊಬ್ಬರು. ಅವರೊಬ್ಬರೇ ಈ ಕ್ಷುದ್ರ ಜೀವಿಗಳ ವಿಷಯದಲ್ಲಿ ಕಂಡುಹಿಡಿದ ಅಂಶಗಳು ಅನಾದಿಯಿಂದ ಇಂದಿನ ವರೆಗಿನ ವಿದ್ವಾಂಸರು ಮಾನವನ ವಿಷಯದಲ್ಲಿ ಕಂಡುಹಿಡಿದ ಜ್ಞಾನರಾಶಿಗಿಂತ ಹೆಚ್ಚಾಗಿವೆ. ಅವರ ಸೂಕ್ಷ್ಮದರ್ಶಕದಲ್ಲಿ ನೂರಾರು ಪೀಳಿಗೆಗಳ ಒಂದೂವರೆ ಕೋಟಿ ಹಣ್ಣಿನ ನೊರಜುಗಳು ದಾಟಿಹೋಗಿವೆ.

ಡ್ರೊಸೋಫಿಲಾ ಕೀಟದ ಮತ್ತು ಆನುವಂಶಿಕತೆಯ ಮೇಲೆ ನಡೆಸಿದ ಸಂಶೋಧನೆಗಳಿಗಾಗಿಯೆ ಪ್ರೊ. ಮಾರ್ಗನ್ನರಿಗೆ ೧೯೩೩ ರಲ್ಲಿ ನೋಬೆಲ್ ಪಾರಿತೋಷಕ ಲಭಿಸಿತು. ಪ್ರಾಣಿಗಳ ಆನುವಂಶಿಕ ಗುಣಗಳು ಕ್ರೊಮೊಸೋಮ್ ಎಂಬ ಸೂಕ್ಷ್ಮ ಸಬಳಾಕಾರದ ಪದಾರ್ಥಗಳ ಮೂಲಕ ಪೀಳಿಗೆಯಿಂದ ಪೀಳಿಗೆಗೆ ಮುಂದೆ ಸಾಗುತ್ತವೆ. ಅತ್ಯಂತ ಶಕ್ತಿಶಾಲಿ ಸೂಕ್ಷ್ಮದರ್ಶಕಗಳಿಗಷ್ಟೆ ಕಾಣಿಸುವ ಕ್ರೊಮೊಸೋಮ್‌ಗಳಲ್ಲಿರುವ 'ಜೀನ್' ಎಂಬ ಇನ್ನೂ ಸೂಕ್ಷ್ಮವಾದ ಅಂಶಗಳೇ ಪ್ರಾಣಿಯ ಬೇರೆ ಬೇರೆ ಅಂಗಾಂಗ ಲಕ್ಷಣಗಳನ್ನು ಅದರ ಸಂತಾನಕ್ಕೆ ಸಾಗಿಸುತ್ತವೆ. ಪ್ರೊ. ಮಾರ್ಗನ್ನರು ಡ್ರೊಸೋ-ಫಿಲಾಕ್ಕೆ ಸಂಬಂಧಿಸಿದಂತೆ ಕ್ರೊಮೊಸೋಮ್‌ಗಳ ಒಂದು ನಕಾಶೆಯನ್ನೇ ತಯಾರಿಸಿದ್ದಾರೆ. ಅದರಲ್ಲಿ ೪೦೦ ಕ್ಕೂ ಹೆಚ್ಚು ಪ್ರಾಮುಖ್ಯ ಆನುವಂಶಿಕ ಅಂಶಗಳನ್ನು ಗುರುತು ಹಾಕಿದ್ದಾರೆ. ಆ ನಕಾಶೆಯಲ್ಲಿ ಕ್ರೊಮೊಸೋಮ್‌ನಲ್ಲಿರುವ ಯಾವ ಅಂಶಗಳು ಹುಟ್ಟಲಿರುವ ನೊರಜು ಹೆಣ್ಣಾಗಲಿದೆಯೋ ಗಂಡೋ ಎಂಬುದನ್ನು ನಿರ್ಧರಿಸುತ್ತವೆ, ಯಾವವು ಅದರ ಬಣ್ಣ ಹಳದಿ ಬೂದು ಅಥವಾ ಕಪ್ಪಾಗಲು ಕಾರಣವಾಗುತ್ತವೆ, ಯಾವವು ಅದರ ರೆಕ್ಕೆಗಳು ಸರಿಯಾಗಿ ಅಥವಾ ಮೊಟಕಾಗಿರಲು ಕಾರಣವಾಗುತ್ತವೆ, ಅವರ

ಕಣ್ಣುಗಳು ಬಿಳಿ ಅಥವಾ ಕೆಂಪಾಗುವಂತೆ ಮಾಡುವ ಅಂಶಗಳಾವವು ಎಂದೆಲ್ಲ ನೀವು ಕಾಣಬಹುದು.

ಪಶುಸಂಗೋಪನ ಮಾಡುವವರಿಗೆ ಎದುರಾಗುವ ಒಂದು ಸಮಸ್ಯೆಯೆಂದರೆ ಸಮೀಪ ರಕ್ತ ಸಂಬಂಧವುಳ್ಳ ಪ್ರಾಣಿಗಳ ಸಂಬಂಧದಿಂದ ಹೊಸ ತಳಿಗಳನ್ನು ತಯಾರಿಸುವುದು ಒಳಿತೋ ಕೆಡುಕೋ ಎಂಬುದು. ಹೀಗೆ ಒಳ-ಸಂಬಂಧದಿಂದ ಹುಟ್ಟಿದ ಪ್ರಾಣಿಗಳು ಹೆಚ್ಚು ಬಲಿಷ್ಠವೂ ದೊಡ್ಡವೂ ಆಗುತ್ತವೆಂಬುದು ಅನುಭವಕ್ಕೆ ಬಂದ ಸಂಗತಿ. ಆದರೆ ಇಂಥ ಪ್ರಾಣಿಗಳಲ್ಲಿ ಸಂತಾನೋತ್ಪಾದನ ಶಕ್ತಿ ಕುಗ್ಗುತ್ತದೆಂಬ ಭಾವನೆ ಬಲವಾಗಿ ಬೇರೂರಿದೆ. ಪ್ರೊ. ಡಬ್ಲ್ಯು. ಈ. ಕ್ಯಾಸಲ್‌ರು ಇದನ್ನು ಒರೆಗೆ ಹಚ್ಚಲು ಡ್ರೊಸೋಫಿಲಾಗಳ ೫೯ ಪೀಳಿಗೆಗಳನ್ನು ಒಳ-ಸಂಬಂಧದಿಂದ ಉತ್ಪಾದಿಸಿ ನೋಡಿದ್ದಾರೆ. ಒಳ ಸಂಬಂಧದಿಂದ ಮತ್ತೇನೇ ಆದರೂ ಸಂತಾನೋತ್ಪಾದನ ಶಕ್ತಿ ಹ್ರಾಸ ಹೊಂದುತ್ತದೆಂಬುದು ಸುಳ್ಳು ಎಂದು ನಿಸ್ಸಂದಿಗ್ಧವಾಗಿ ಸಿದ್ಧವಾಯಿತು.

ಆಯುಷ್ಯಕ್ಕೂ ಪರಿಸರದ ಉಷ್ಣತೆಗೂ ಸಂಬಂಧವುಂಟೆಂಬುದನ್ನು ಖಚಿತಪಡಿಸುವಲ್ಲಿಯೂ ಡ್ರೊಸೋಫಿಲಾ ನೆರವು ನೀಡಿದೆ. ೩೦° c ಉಷ್ಣತೆಯಲ್ಲಿ ಬಾಳಿದ ಡ್ರೊಸೋಫಿಲಾ ಕೀಟಗಳು ಸರಾಸರಿ ೨೧ ದಿನ ಬದುಕಿದರೆ ೧೫° c ಉಷ್ಣತೆಯಲ್ಲಿ ಅವುಗಳ ಸರಾಸರಿ ಆಯುಷ್ಯ ೧೨೪ ದಿನಗಳವರೆಗೂ ವೃದ್ಧಿಂಗತವಾಗಬಲ್ಲದೆಂದು ಅನೇಕ ಪ್ರಯೋಗಗಳು ತೋರಿಸಿಕೊಟ್ಟಿವೆ. ತತ್ತಿಯಿಟ್ಟ ಮೇಲೆ ಹೆಣ್ಣು ನೊರಜುಗಳನ್ನು ತಂಪು ಪರಿಸರಕ್ಕೆ ವರ್ಗಾಯಿಸಿದರು. ಹೀಗೆ ಸಂತಾನಗಳು ಬಿಸಿ ಹವೆಯಲ್ಲಿ ಬೆಳೆಯುತ್ತಿದ್ದಾಗ ತಾಯಂದಿರು ತಂಪು ಹವೆಯಲ್ಲಿ ಜೀವಿಸತೊಡಗಿದವು. ಆಗ ಇವು ತಮ್ಮ ಮೊಮ್ಮಕ್ಕಳ ಮಕ್ಕಳ ಮಕ್ಕಳ ಮಕ್ಕಳ ಕಾಲದ ವರೆಗೂ ಬದುಕಿರುವುದು ಕಂಡು ಬಂತು. ಕೀಟಗಳಲ್ಲಿ ಇದು ತೀರ ಅಪರೂಪವಾದ ದೀರ್ಘಾಯುಷ್ಯ.

ಡ್ರೊಸೋಫಿಲಾದ ಅಭ್ಯಾಸದಿಂದ ವಿಕಲ್ಪಗಳನ್ನು ಕುರಿತು ಹೆಚ್ಚು ತಿಳಿವಳಿಕೆ ದೊರೆತಿದೆ. ವಿಕಲ್ಪವೆಂದರೆ ಒಂದು ಪ್ರಾಣಿಯಲ್ಲಿ ಅಕಸ್ಮಾತ್ತಾಗಿ ತನ್ನ ಜಾತಿಯ ಇತರ ಪ್ರಾಣಿಗಳಿಗಿಂತ ಭಿನ್ನವಾದ ಲಕ್ಷಣ ಕಾಣಿಸಿಕೊಳ್ಳುವುದು. ಈ ವಿಕಲ್ಪಗಳು ಕ್ರೊಮೊಸೋಮ್ ಮತ್ತು ಜೀನ್‌ಗಳಲ್ಲಾದ ಬದಲಾವಣೆಗಳಿಂದಲೇ ಉದ್ಭವಿಸುವುವೆಂದೂ ಹೀಗೆ ಕಂಡುಬಂದ ವಿಕಲ್ಪಗಳು ಸಂತಾನಪಾರಂಪರ್ಯವಾಗಿ ಮುಂದುವರಿಯುವವೆಂದೂ ಡ್ರೊಸೋಫಿಲಾದ ಅಧ್ಯಯನದಿಂದ ಬೆಳಕಿಗೆ ಬಂದಿದೆ.

ವಿಕಲ್ಪಗಳು ಉದ್ಭವಿಸುವುದು ಬಲು ಅಪರೂಪ; ಹಲವು ಸಾವಿರಗಳಲ್ಲಿ ಒಮ್ಮೆ ಮಾತ್ರ. ಆದರೆ ಜೀವಶಾಸ್ತ್ರದಲ್ಲಿ ವಿಕಲ್ಪಗಳಿಗೆ ಅತ್ಯಂತ ಮಹತ್ವವಿದೆ. ಒಂದು ಪ್ರಾಣಿಜಾತಿಯ ಗುಣಗಳು ಬದಲಾಗುವುದಕ್ಕೂ ಹೊಸ ಹೊಸ ಪ್ರಾಣಿಜಾತಿಗಳು ರೂಪುಗೊಳ್ಳುವುದಕ್ಕೂ ಇದು ಕಾರಣವಾಗುತ್ತದೆ. ಸಾವಿರಾರು ಸಾಧಾರಣ ಡ್ರೊಸೋಫಿಲಾಗಳು ಹುಟ್ಟುವಾಗ ಎಲ್ಲಾದರೊಂದು ವಿಚಿತ್ರ ರೂಪದ್ದು ಹುಟ್ಟುವುದರಿಂದ ಈ ತಿಳಿವಳಿಕೆ ದೊರೆಯಿತು. ಕೆಲವೊಮ್ಮೆ ಈ ನೊರಜಿನ ಒಂದಕ್ಕೊಂದು ಸಂಬಂಧಿಸಿರದ ತಳಿಗಳಲ್ಲಿ ಒಂದೇ ತರದ ವಿಕಲ್ಪಗಳು ತಲೆದೋರುವುದುಂಟು. ಮಾನವನಿಗೆ ಇದನ್ನು ಅನ್ವಯಿಸುವುದಾದರೆ ಎಲ್ಲ ಮಾನವ ಕುಲಗಳಿಗೆ ಮೂಲ ಪುರುಷ ಒಬ್ಬನೇ ಇರಬೇಕಾಗಿಲ್ಲವೆಂದು ತರ್ಕಿಸಲು ಅವಕಾಶವಿದೆ.

ಕೃತಕವಾಗಿ ವಿಕಲ್ಪಗಳನ್ನು ಉಂಟುಮಾಡುವ ಯತ್ನಗಳು ಸಹಸಾ ಫಲಿಸುವುದಿಲ್ಲ. ಬೆಳಕಿಗೆ ಡ್ರೊಸೋಫಿಲಾಗಳು ತೋರಿಸುವ ಪ್ರತಿಕ್ರಿಯೆ ಬದಲಾಗುವಂತೆ ವಿಕಲ್ಪಗಳನ್ನು ಸೃಷ್ಟಿಸುವ ಉದ್ದೇಶದಿಂದ ಪೀಳಿಗೆಯಿಂದ ಪೀಳಿಗೆಗೆ ಕೆಲ ನೊರಜುಗಳನ್ನು ಕಗ್ಗತ್ತಲಲ್ಲಿ ಬೆಳೆಸಲಾಯಿತು. ಹೀಗೆ ೭೦ ಪೀಳಿಗೆಗಳ ವರೆಗೆ ಕತ್ತಲಲ್ಲಿ ಬೆಳೆದ ಮೇಲೂ ಡ್ರೊಸೋಫಿಲಾಗಳು

ಬೆಳಕಿಗೆ ತೋರುವ ಪ್ರತಿಕ್ರಿಯೆ ಬದಲಾಗಲಿಲ್ಲ. ವಿಜ್ಞಾನಿಗಳು ಸೋಲೊಪ್ಪಿಕೊಂಡರು.

ಆದರೆ ಕೆಲ ವಿಸ್ಮಯಕರ ವಿಕಲ್ಪಗಳನ್ನು ಅವರು ಯಶಸ್ವಿಯಾಗಿ ಸೃಷ್ಟಿಸಿದ್ದಾರೆ. ಕುರುಡು ನೊರಜುಗಳನ್ನು, ಮೀಸೆಯಿಲ್ಲದ ನೊರಜುಗಳನ್ನು, ಆರರ ಬದಲು ೧೨ ಕಾಲಿನ ನೊರಜುಗಳನ್ನು, ಹೆಸರಿಗಷ್ಟೇ ರೆಕ್ಕೆಗಳುಳ್ಳ ನೊರಜುಗಳನ್ನೂ ಅವರು ಉತ್ಪಾದಿಸಿದ್ದಾರೆ. ಈ ಅದ್ಭುತಗಳಲ್ಲಿ ಹೆಚ್ಚಿನವುಗಳನ್ನು ಕ್ಷ-ಕಿರಣ ಪ್ರಯೋಗದಿಂದ ಸಾಧಿಸಲಾಗಿದೆ. ಟೆಕ್ಸಾಸ್ ವಿಶ್ವವಿದ್ಯಾಲಯದ ಡಾ. ಹರ್ಮಾನ್ ಮುಲ್ಲರರು ಇದರಲ್ಲಿ ಪ್ರಮುಖರು. ಮೊದಲು ಪ್ರೊ. ಮಾರ್ಗನ್ನರ ಸಹಕಾರಿಯಾಗಿ ಆ ಮೇಲೆ ಸ್ವತಂತ್ರ ಪ್ರಯೋಗಗಳನ್ನು ಕೈಕೊಂಡ ಅವರು ೧೯೨೭ ರಲ್ಲಿ ಮೊಟ್ಟಮೊದಲು ಕ್ಷ-ಕಿರಣಗಳ ಮೂಲಕ ಡ್ರೊಸೋಫಿಲಾ ನೊರಜಿನಲ್ಲಿ ವಿಕಲ್ಪಗಳು ಉದ್ಭವಿಸುತ್ತವೆಂದು ಬಹಿರಂಗಪಡಿಸಿದರು. ಅದು ಪ್ರಜನನ ಶಾಸ್ತ್ರದಲ್ಲಿ ನವ ಮನ್ವಂತರಕ್ಕೇ ಪ್ರೇರಣೆ ಕೊಟ್ಟಿತು. ೨೦ ವರ್ಷಗಳ ಸಂಶೋಧನೆಯಿಂದ, ಕ್ಷ-ಕಿರಣಗಳ ಸ್ಪರ್ಶವು ಈ ನೊರಜುಗಳಲ್ಲಷ್ಟೇ ಅಲ್ಲ, ಮೇಲ್ವರ್ಗದ ಪ್ರಾಣಿಗಳಲ್ಲೂ ವಿಕಲ್ಪ ಸಂತಾನಗಳಿಗೆ ಕಾರಣವಾಗಬಲ್ಲದೆಂದು ಸ್ಪಷ್ಟವಾಯಿತು.

೧೯೪೬ ರಲ್ಲಿ ಡಾ. ಮುಲ್ಲರರಿಗೆ ನೋಬೆಲ್ ಬಹುಮಾನ ದೊರಕಿಸಿಕೊಟ್ಟ ಈ ಸಂಶೋಧನೆಗಳಿಗೆ ಇಂದಿನ ಪರಮಾಣುಯುಗದಲ್ಲಿ ಅತ್ಯಂತ ಮಹತ್ವ ಪ್ರಾಪ್ತವಾಗಿದೆ. ಇಂದು ಪರಮಾಣು ಮತ್ತು ಹೈಡ್ರೋಜನ್ ಬಾಂಬುಗಳ ಸ್ಫೋಟದ ವಿರುದ್ಧ ಜಗತ್ತಿನಲ್ಲೆಲ್ಲ ಪ್ರತಿಭಟನೆ ಕಾಣಿಸುತ್ತಿದ್ದರೆ ಅದು ಡ್ರೊಸೋಫಿಲಾದ ಮೇಲೆ ಕ್ಷ-ಕಿರಣ ಪ್ರಯೋಗದಿಂದಾದ ಘೋರ ಪರಿಣಾಮಗಳ ತಿಳಿವಳಿಕೆಯಿಂದಲೇ ಆಗಿದೆ. ಏಕೆಂದರೆ ಕ್ಷ-ಕಿರಣವೂ ಈ ಬಾಂಬುಗಳ ಸ್ಫೋಟದಿಂದ ವಾತಾವರಣದಲ್ಲಿ ಹಬ್ಬುವ ವಿಕಿರಣವೂ ಒಂದೇ ಜಾತಿಯವು. ಒಂದು ಇಲಿಯನ್ನು ಕೊಲ್ಲಲು ಸಾಲುವಷ್ಟು ಕ್ಷ-ಕಿರಣವನ್ನು ಪ್ರಯೋಗಿಸಿದರೂ ಡ್ರೊಸೋಫಿಲಾದ ಮೇಲೆ ತೋರಿಕೆಗೆ ಪರಿಣಾಮವಾಗಲಿಲ್ಲ; ಆದರೂ ಅವುಗಳಲ್ಲಿ ಕೆಲವು ಸಂತಾನೋತ್ಪಾದನ ಶಕ್ತಿಯನ್ನು ಕಳೆದುಕೊಂಡವು. ಸಂತಾನೋತ್ಪಾದನೆ ಮಾಡಿದ ಕೆಲವು ಬಲು ವಿಕೃತ ರೂಪದವುಗಳನ್ನು ಹಡೆದವು. ಕೆಂಪು ಕಣ್ಣಿನ ಬದಲು ಬಿಳಿ ಕಣ್ಣು, ಮೊಟಕು ರೆಕ್ಕೆ, ಕವಲು ಮೀಸೆ— ಇಂಥ ರೂಪಗಳ ಸೃಷ್ಟಿಯಾಯಿತು. ಈ ವಿಕೃತ ರೂಪಿನವುಗಳು ಮತ್ತೆ ಸಂತಾನೋತ್ಪತ್ತಿ ಮಾಡಿದಾಗ ಅವುಗಳಲ್ಲಿಯೂ ಈ ವಿಕಲ್ಪಗಳು ತಲತಲಾಂತರಗಳ ವರೆಗೂ ಮುಂದುವರಿದವು.

ಇದನ್ನು ನೋಡಿಯೇ ಈ ಬಾಂಬುಗಳ ಸ್ಫೋಟದಿಂದ ವಿಜ್ಞಾನಿಗಳು ಚಿಂತಿತರಾಗಿದ್ದಾರೆ. ವಿಕಿರಣಕ್ಕೊಳಪಟ್ಟ ಮಾನವರೂ ಇತರ ಪ್ರಾಣಿಗಳೂ ಇಂಥವೇ ವಿಕಲ್ಪಗಳನ್ನು ಸೃಷ್ಟಿಸುವುದಿಲ್ಲೆಂದು ಹೇಳಲು ಸಾಧ್ಯವಿಲ್ಲ. ಹೀಗೆ ೫೦ ವರ್ಷಗಳಲ್ಲಿ ವಿಜ್ಞಾನಿಗಳ ಪರೀಕ್ಷೆಗೊಳಗಾದ ಐದು ಕೋಟಿ ಡ್ರೊಸೋಫಿಲಾ ನೊರಜುಗಳು ಮಾನವನ ಹಣೆಬರಹವನ್ನೇ ಅಳಿಸಿ ಬರೆಯಬಲ್ಲ ಗಂಡಾಂತರದ ಮುನ್ನೆಚ್ಚರಿಕೆಯನ್ನು ಸಕಾಲದಲ್ಲಿ ಕೊಟ್ಟಿವೆ. ಮಾನವ ಅದನ್ನು ಗಣ್ಯಕ್ಕೆ ತೆಗೆದುಕೊಳ್ಳುವನೇ ಎಂಬುದು ಬೇರೆ ಮಾತು. *

## ನುಡಿ-ಕಿಡಿ

* ನಿಮ್ಮನ್ನು ಕೆರಳಿಸುವ ಸಂಗತಿಗಳು ಎಷ್ಟು ದೊಡ್ಡವೋ ಅಷ್ಟೇ ನೀವೂ ದೊಡ್ಡವರು.

* ದುರಹಂಕಾರವು ಅಲ್ಪ ಜನರಿಗೆ ದೇವರಿತ್ತ ವರ.

ಒಂದು
ವಿಚಿತ್ರ
ಪ್ರಕರಣ

# ಘಾಶಿ ಹಗ್ಗ ಹರಿದು ಬದುಕಿದ!

ಮುಕ್ತಾ ರಾಜೆ



“ಧರ್ಮಯುಗ” ದಿಂದ

ಆ ದಿನಗಳಲ್ಲಿ ಶಾಂಘಾಯಿಯ ಜೀವನ ವೈವಿಧ್ಯಪೂರ್ಣವಾಗಿತ್ತು, ವಿಲಾಸಪೂರ್ಣವಾಗಿತ್ತು. ಹಾಗಿದ್ದರೂ ಪಾಕ್ರೊ ರೋಡಿನಲ್ಲಿದ್ದ ಒಂದು ದುಂಡನ್ನ ಕಟ್ಟಡದತ್ತ ಹೋಗುವ ಧೈರ್ಯ ಅಂಥಿಂಥವರಿಗಾಗುತ್ತಿರಲಿಲ್ಲ. ಅದು ಬ್ರಿಟಿಶ್ ಪೋಲೀಸರ ಕಚೇರಿ. ಬಳಿಯಲ್ಲಿಯೆ ಸೈನ್ಯದಲವೊಂದರ ಬಿಡಾರವೂ ಇತ್ತು. ಕಚೇರಿಯ ಹಿಂದುಗಡೆ ಕೈದಿಗಳಿನ್ನಿಡುವ ಜೇಲು.

ಅಂದು ರಾತ್ರಿಪಾಳಿಯ ಮೇಲಿದ್ದ ಬ್ರಿಟಿಶ್ ಸಾರ್ಜಂಟನೊಬ್ಬ ಯಾವುದೊ ವರದಿಯನ್ನು ಬರೆಯುತ್ತ ಕುಳಿತಿದ್ದ. ಪಂಜಾಬದಿಂದ ಕರೆಸಲ್ಪಟ್ಟಿದ್ದ ಕೆಲ ಶೀಖ ಸಿಪಾಯಿಗಳು ರಿಜರ್ವ್ ಕೋಣೆಯಲ್ಲಿ ಕುಳಿತು ಸ್ವದೇಶದ ಮಾತುಕತೆಗಳನ್ನಾಡುತ್ತಿದ್ದರು. ಕೆಲವರು ತೂಕಡಿಸುತ್ತಿದ್ದರು, ಕೆಲವರು ತುಟಿಯಲ್ಲೆ ಹಾಡಿಕೊಳ್ಳುತ್ತಿದ್ದರು. ಅದೇ ಗಸ್ತಿ ಪಾಳಿಯನ್ನು ಮುಗಿಸಿಕೊಂಡು ಒಬ್ಬ ಸಿಪಾಯಿ ಬಂದಿದ್ದ. ಸೆಕೆಗಾಲವಾಗಿತ್ತಾದ್ದರಿಂದ ಆತ ಡ್ಯೂಟಿಯಿಂದ ಮರಳಿ ಬಂದವನೇ ನೆಟ್ಟಗೆ ಬಚ್ಚಲು ಮನೆಗೆ ಹೋಗಿ ಟಬ್ಬಿನಲ್ಲಿ ಕುಳಿತು ಸ್ನಾನ ಮಾಡತೊಡಗಿದ.

ನಸುಕು ಹರಿಯತೊಡಗಿತ್ತು. ಹಕ್ಕಿಗಳು ಹಾಡತೊಡಗಿದ್ದವು. ಬೀದಿಗಳಲ್ಲಿ ಕಸಗೂಡಿಸುವವರು ತಮ್ಮ ಕೆಲಸವನ್ನಾರಂಭಿಸಿದ್ದರು. ಹಠಾತ್ತಾಗಿ ಹೃದಯದ್ರಾವಕವಾದ ಚೀತ್ಕಾರವೊಂದು ಕೇಳಿಸಿತು. ಹಠಾತ್ತಾಗಿ ಕೇಳಿಬಂದ ಆ ಚಿತ್ಕಾರದ ಬೆನ್ನ ಹಿಂದೆಯೆ ಮತ್ತೆ ಮೂರು ನಾಲ್ಕು ಚೀತ್ಕಾರಗಳು ಕೇಳಿಸಿ ಮತ್ತೆ ಹಠಾತ್ತಾಗಿ ನಿಂತುಹೋದವು. ರಿಜರ್ವ್ ಕೋಣೆಯಲ್ಲಿ ತೂಕಡಿಸುತ್ತ ಆಕಳಿಸುತ್ತ ಕುಳಿತಿದ್ದ ಶಿಪಾಯಿಗಳು ಗಾಬರಿಯಿಂದ ಎದ್ದುನಿಂತು ಸಾರ್ಜಂಟನ ಆಜ್ಞೆಯನ್ನು ಎದುರುನೋಡಹತ್ತಿದರು. ಲೆಕ್ಕಣಿಕೆಯನ್ನು ಕೆಳಗಿಟ್ಟವನೇ ಸಾರ್ಜಂಟ್ ಕೂಗು ಕೇಳಿಬಂದತ್ತ ಧಾವಿಸಿದನು. ಬಚ್ಚಲು ಮನೆಯ ಬಾಗಿಲನ್ನು ತೆರೆದು ನೋಡಿದಾಗ ಅವನ ಎದೆ ಡವಡವ ಹೊಡೆದುಕೊಳ್ಳತೊಡಗಿತು. ಸಿಪಾಯಿ ಬಾವಾಸಿಂಹನ ದೇಹ ಛಿನ್ನವಿಚ್ಛಿನ್ನವಾಗಿ ಅರ್ಧ ಟಬ್ಬಿನೊಳಗೆ ಅರ್ಧ ಟಬ್ಬಿನ ಹೊರಗೆ ಬಿದ್ದಿತ್ತು. ಅವನ ಒಂದು ಕೈ ಸಂಪೂರ್ಣವಾಗಿ ಕತ್ತರಿಸಿ

ಹೋಗಿತ್ತು. ತಲೆ ಒಡೆದು ಹೋಗಿತ್ತು. ಮಿದುಳು ಹೊರಗೆ ಬಂದು ಬಿಟ್ಟಿತ್ತು. ರಕ್ತದಿಂದ ತೊಯ್ದು ಅವನ ಎಡಗೈಯ ಬಳಿ ಒಂದು ಕೊಡಲಿ ಬಿದ್ದಿತ್ತು. ಆಸ್ಪತ್ರೆ ತಲುಪಿದ ನಾಲ್ಕು ತಾಸುಗಳಲ್ಲಿ ಬಾವಾಸಿಂಹ ಸತ್ತು ಹೋದ. ಅವನಿದ್ದ ಅವಸ್ಥೆಯಲ್ಲಿ ಅವನು ತನ್ನ ಕೊಲೆಗಡಕನ ಸಮಾಚಾರವನ್ನು ಹೇಳುವುದು ಸಾಧ್ಯವೇ ಇರಲಿಲ್ಲ. ಪೋಲೀಸರಿಗೂ ಕೊಲೆಗಡಕನ ಗುರುತು ಹೇಳುವ ಯಾವ ಸಾಧನವೂ ಸಿಗಲಿಲ್ಲ.

ಕೊಡಲಿಯ ಮೇಲೆ ಬಾವಾಸಿಂಹನ ಬೆರಳುಗಳ ಗುರುತು ಮೂಡಿತ್ತೆಂಬುದೂ ಜೊತೆಗೆ ಇನ್ನೂ ಯಾರದೋ ಬೆರಳುಗಳ ಗುರುತೂ ಇದೆಯೆಂಬುದೂ ತಪಾಸಣೆಯಲ್ಲಿ ತಿಳಿದುಬಂತು; ಈ ಎರಡನೆಯ ಬೆರಳುಗಳ ಗುರುತು ಬಚ್ಚಲು ಮನೆಯ ಬಾಗಿಲ ಮೇಲೂ ಕಂಡಿತು. ಚೀಫ್ ಇನಸ್ಪೆಕ್ಟರ್ ಬೆರಳಿನ ಮುದ್ರೆಯ ತಜ್ಞನನ್ನು ಕರೆಸಿದ. ಆ ತಜ್ಞ ಎರಡೇ ನಿಮಿಷಗಳಲ್ಲಿ ಹೇಳಿದ: "ಸಾಹೇಬ್, ಬಾವಾಸಿಂಹ ಕಳೆದ ವಾರ ಎಣ್ಣೆ ಕಂಪನಿಯ ಮ್ಯಾನೇಜರನ ಮನೆಯಲ್ಲಾದ ಕಳವಿನ ಸಂಬಂಧದಲ್ಲಿ ಹಿಡಿದಿರುವ ಬ್ರಿಟಿಶ್ ಮನುಷ್ಯನ ಬೆರಳ ಗುರುತುಗಳಿವು."

"ಹೌದು ಸಾಹೇಬ್. ನಿರಪರಾಧಿಯಾದ ತನ್ನನ್ನು ಹಿಡಿದಿದ್ದಾನೆಂದು ಆ ಕೈದಿ ಬಾವಾಸಿಂಹನ ಮೇಲೆ ಕಿಡಿ ಕಾರುತ್ತಿರುತ್ತಾನೆ" ಎಂದ ಅಲ್ಲಿಯೆ ಇದ್ದ ಒಬ್ಬ ಕಾವಲುಗಾರ.

"ಅವನನ್ನು ಹಿಡಿದು ತನ್ನಿ" ಚೀಫ್ ಇನಸ್ಪೆಕ್ಟರ್ ಅಪ್ಪಣೆ ಮಾಡಿದ.

ಆಗ ಸಾರ್ಜಂಟ್ ಹೇಳಿದ: "ಸಾಹೇಬ್, ಅವನನ್ನು ಬಂಧಿಸುವ ಪ್ರಶ್ನೆಯೆ ಇಲ್ಲ. ಆತ ಈಗ ಕೈದಿಯಾಗಿ ಹಿಂದಿನ ಕೋಣೆಯಲ್ಲಿದ್ದಾನೆ."

"ಅಂ! ಆತ ಕೋಣೆಯಲ್ಲಿ ಕೈದಿಯಾಗಿದ್ದರೆ ಈ ಕೊಲೆಯನ್ನು ಹೇಗೆ ಮಾಡಿದ?" ಚೀಫ್ ಇನಸ್ಪೆಕ್ಟರ್ ಗರ್ಜಿಸಿದ.

ಅಷ್ಟರಲ್ಲಿ ಗುಪ್ತ ಪೋಲೀಸನೊಬ್ಬ ಅಲ್ಲಿಯ ಅಡಿಗೆಯವನನ್ನು ಕರೆದುಕೊಂಡು ಬಂದು "ಇವನೇನೂ ಕೊಲೆಗಡಕನನ್ನು ಅಥವಾ ಕೊಲೆ ನಡೆದದ್ದನ್ನು ನೋಡಿಲ್ಲ. ಆದರೆ ಈತ ಒಂದು ವಿಚಿತ್ರ



ಮಾತನ್ನು ಹೇಳುತ್ತಾನೆ. ಬಾವಾಸಿಂಹ ಬಂಧಿಸಿದ್ದ ಆ ಬ್ರಿಟಿಶ್ ಕೈದಿ ನಿನ್ನೆ ರಾತ್ರಿ ಜಗುಲಿಯ ಮೇಲಿಂದ ಅತ್ತಕಡೆ ಹೋಗುತ್ತಿದ್ದುದನ್ನು ಕಂಡಿದ್ದೇನೆ ಎನ್ನುತ್ತಾನೀತ" ಎಂದ.

"ಆದರೆ ಕೈದಿ ತನ್ನ ಕೋಣೆಯ ಹೊರಗೆ ಬರುವುದಾದರೂ ಹೇಗೆ ಸಾಧ್ಯ?"

"ಆದರೆ ಅವನನ್ನು ಖಂಡಿತವಾಗಿಯೂ ನೋಡಿದ್ದೇನೆ, ಸಾಹೇಬ್" ಅಡಿಗೆಯವ ನಿರ್ಭಯದಿಂದ ದೃಢ ಸ್ವರದಲ್ಲಿ ಹೇಳಿದ.

ಚೀಫ್ ಇನಸ್ಪೆಕ್ಟರ್ ಹೋಗಿ ಜೇಲಿನ

ಕೋಣೆ ಕೋಣೆಯನ್ನೂ ಪರೀಕ್ಷಿಸಿದ. ಎಲ್ಲವೂ ಭದ್ರವಾಗಿದ್ದವು. ಕಾವಲುಗಾರರೂ ದಕ್ಷರಿದ್ದರು. ಭ್ರಾಂತನಂತಾದ ಚೀಫ್ ನೆಟ್ಟಗೆ ಆ ಬ್ರಿಟಿಶ್ ಕೈದಿಯ ಬಳಿಗೇ ಹೋಗಿ "ನೀನು ನಿನ್ನೆ ರಾತ್ರಿ ಕೋಣೆಯ ಹೊರಗೆ ಏನು ಮಾಡುತ್ತಿದ್ದೆ ?" ಎಂದು ಕೇಳಿದ.

"ನಾನು ಹೊರಗೆ ಹೋಗೇ ಇಲ್ಲ."

ಚೀಫ್ ಇನಸ್ಪೆಕ್ಟರನ ಕಣ್ಣುಗಳು ಮಿನುಗಿದವು. ಆತ ಕೇಳಿದ: "ನಿನ್ನ ಜಾಕೀಟಿನ ಮೇಲೆ ಇದೇನು ಕಲೆ? ರಕ್ತದ್ದೆಂದು ಕಾಣಿಸುತ್ತದಲ್ಲ."

"ಹೌದು. ರಕ್ತದ ಕಲೆಯೇ ಅದು. ನಿನ್ನೆ ನನ್ನ ಮೂಗು ಒಡೆದು ರಕ್ತ ಸೋರಿತು. ಅದರದೇ ಕಲೆ ಇದು."

ಆದರೆ ಅವನ ಮಾತನ್ನು ಯಾರೂ ನಂಬಲಿಲ್ಲ. ಜಾಕೀಟಿನ ಮೇಲೆ ರಕ್ತದ ಕಲೆ ಇತ್ತು. ಅಡಿಗೆಯವನು ರಾತ್ರಿ ಅವನು ಜಗಲಿಯಲ್ಲಿ ಹಾಯ್ದು ಹೋದದ್ದನ್ನು ಕಂಡಿದ್ದ. ಕೊಡಲಿಯ ಮೇಲೆ ಅವನ ಬೆರಳ ಗುರುತು ಇತ್ತು. ಕೊಲೆಗಡಕ ಈತನೇ ಎಂದು ಎಲ್ಲರೂ ನಂಬಿದರು.

ಚೀಫ್ ಇನಸ್ಪೆಕ್ಟರರ ವಿಚಾರಣೆಯಲ್ಲಿ ಅಂದು ರಾತ್ರಿ ಕಚೇರಿಯ ಕಟ್ಟಡದಲ್ಲಿ ಪೋಲೀಸರು, ಕೈದಿಗಳು, ಅಡಿಗೆಯವರಲ್ಲದೆ ಗ್ರಂಥಿ ಆತ್ಮಾಸಿಂಹನೂ ಇದ್ದ ಎಂದು ತಿಳಿದುಬಂತು. ಚೀಫ್ ಅವನನ್ನು ಕರೆಸಿ ಕೇಳಿದಾಗ ಆತ್ಮಾಸಿಂಹ ಹೇಳಿದ: "ಅಡಿಗೆಯವ ಹೇಳಿರುವುದಷ್ಟೇ ನನಗೆ ಗೊತ್ತು. ನಾನೇನೂ ಆ ಬ್ರಿಟಿಶ್ ಕೈದಿಯನ್ನು ರಾತ್ರಿ ಜಗಲಿಯ ಮೇಲೆ ನೋಡಿಲ್ಲ, ಏಕೆಂದರೆ ನಾನು ಕೋಣೆಯೊಳಗೆ ಕುಳಿತು ಪೂಜೆಯಲ್ಲಿ ಮಗ್ನನಾಗಿದ್ದೆ."

ಚೀಫ್ ಶತಪಥ ಹಾಕುತ್ತ ವಿಚಾರ ನಡೆಸಿದ್ದ. ಆತ ಯೋಚಿಸಿದಷ್ಟೂ ಸಂಶಯವು ಆ ಬ್ರಿಟಿಶ್ ಕೈದಿಯ ಮೇಲೇ ದೃಢವಾಗುತ್ತಿತ್ತು. ಆತ ಇನ್ನೇನು ವರದಿ ಬರೆದು ಕಳಿಸಬಿಡಬೇಕು ಎಂದಿದ್ದಾಗ ಆ ಕೈದಿಯ ಕೋಣೆಯ ಕಾವಲುಗಾರ ರಾತ್ರಿಯಿಡೀ ಕೈದಿ ಕೋಣೆಯಲ್ಲಿಯೆ ಇದ್ದ, ಆತನ ಮೂಗು ಒಡೆದಿದ್ದೂ ಹೌದು ಎಂದು ಹೇಳುತ್ತಾನೆಂಬ ಸಮಾಚಾರ ಬಂತು. ಇದೂ ಅಲ್ಲದೆ ಎರಡು ದಿನಗಳ ಮೊದಲು ಆ ಕೈದಿಯನ್ನು ಸ್ನಾನಕ್ಕಾಗಿ ಅದೇ ಬಚ್ಚಲು ಕೋಣೆಗೆ ಕರೆದೊಯ್ದಿದ್ದರೆಂದೂ ತಿಳಿಯಿತು. ಅಲ್ಲಿ ಮೂಲೆಯಲ್ಲಿ ಬಿದ್ದಿದ್ದ ಆ ಕೊಡಲಿಯನ್ನು ಬಹುಶಃ ಆತ ಎತ್ತಿ ಬದಿಗೆ ಸರಿಸಿಟ್ಟಿರಬೇಕು; ಅಂತೇ ಅದರ ಮೇಲೆ ಅವನ ಬೆರಳುಗಳ ಗುರುತು ಮೂಡಿತ್ತು.

ಇದೆಲ್ಲ ಸಮಾಚಾರದಿಂದ ಚೀಫ್ ಇನಸ್ಪೆಕ್ಟರನ ತಲೆ ಕೆಟ್ಟಿತು. ಅವನಿಗೆ ಏನೂ ತಿಳಿಯದಂತಾಯಿತು.

ಬ್ರಿಟಿಶ್ ಗುಪ್ತಚಾರನೊಬ್ಬ ಮಾತ್ರ ಯಾವನೊ ಶೀಖ ಸಿಪಾಯಿಯೆ ಬಾವಾಸಿಂಹನ ಕೊಲೆ ಮಾಡಿರಬೇಕು ಎನ್ನುತ್ತಿದ್ದ. ಅದಕ್ಕೆ ಕಾರಣವನ್ನೂ ಆತ ಹೇಳಿದ್ದ. ಬಾವಾಸಿಂಹ ಇದ್ದಕ್ಕಿದ್ದಂತೆ ನಾಸ್ತಿಕನಾಗಿಬಿಟ್ಟಿದ್ದ. ಕೊಲೆಗೆ ಎರಡು ದಿನ ಮೊದಲು ಆತ ತನ್ನ ಸಲುವಾಗಿ ಪ್ರಾರ್ಥನೆ ಮಾಡಕೂಡದು ಎಂದು ಆತ್ಮಾಸಿಂಹನಿಗೆ ಹೇಳಿದ್ದ. ಈ ಸಂಬಂಧದಲ್ಲಿ ಕೇಳಿದಾಗ ಆತ್ಮಾಸಿಂಹ ಹೇಳಿದ: "ಹೌದು. ಆತ ಬೇಡವೆಂದಿದ್ದೇನೊ ನಿಜ. ಆದರೆ ಯಾವನು ಪರಮಾತ್ಮನಲ್ಲಿ ಎಷ್ಟು ಮಟ್ಟಿಗೆ ಅವಿಶ್ವಾಸಪಡುತ್ತಾನೊ ಅಷ್ಟು ಮಟ್ಟಿಗೆ ಆತನಿಗೆ ಪರಮಾತ್ಮನ ಕೃಪೆಯ ಅವಶ್ಯಕತೆ ಹೆಚ್ಚಾಗುತ್ತದೆ ಎಂದು ನಾನು ಬಲ್ಲೆ. ಆದ್ದರಿಂದ ಆತ ಪ್ರತಿಬಂಧಿಸಿದ್ದರೂ ನಾನು ಆತನ ಸಲುವಾಗಿ ಪರಮಾತ್ಮನಲ್ಲಿ ಪ್ರಾರ್ಥನೆ ಮಾಡುತ್ತಲೇ ಇದ್ದೆ."

ಶೀಖರು ಬಲು ಧರ್ಮಾಂಧರು, ಈ ಧರ್ಮಾಂಧರೇ ನಾಸ್ತಿಕ ಬಾವಾಸಿಂಹನನ್ನು ಕೊಂದು ಹಾಕಿದ್ದಾರೆ ಎಂದು ಆ ಬ್ರಿಟಿಶ್ ಗುಪ್ತಪೋಲೀಸನ ಹೇಳಿಕೆಯಿತ್ತು. ಕೊಲೆಯ ಗೂಢ ಈ ಮಾತಿನಿಂದ ಹೆಚ್ಚಿತಾದರೂ ಈ ಮಾತಿಗೆ ಯಾವ ಸಾಕ್ಷಿಯೂ ಇರಲಿಲ್ಲ. ಚೀಫ್ ಇನಸ್ಪೆಕ್ಟರ್, "ಬಾವಾಸಿಂಹನನ್ನು ಕೊಂದ ಶೀಖ ಸಿಪಾಯಿ ಗುರು ಗ್ರಂಥ ಸಾಹೇಬ ಮತ್ತು ಗ್ರಂಥಿಯ ಎದುರು ತನ್ನ ಅಪರಾಧವನ್ನೊಪ್ಪಿಕೊಂಡಿರಬೇಕು. ಅಪರಾಧಿ ಶೀಖನಾದ್ದರಿಂದ ಆತ್ಮಾಸಿಂಹ ಅವನ ಹೆಸರನ್ನು ಹೇಳುತ್ತಿರಲಿಕ್ಕಿಲ್ಲ. ಅವನನ್ನೇ ಕೇಳಿ ಬಿಡೋಣ" ಎಂದು ಹೇಳಿದಾಗ ಆ ಗುಪ್ತ ಪೋಲೀಸ್ ಏನೋ ಯೋಚನೆ ಹೊಳೆದವನಂತೆ,

"ಧರ್ಮಾಂಧತೆಯಿಂದ ಗ್ರಂಥಿಯೆ ಬಾವಾಸಿಂಹ ನನ್ನು ಕೊಂದಿರುವ ಸಂಭವವೂ ಇದೆ" ಎಂದ.

ಗ್ರಂಥಿ ತನ್ನ ಹೆಂಡತಿಯ ಎದುರು ಏನಾದರೂ ಈ ವಿಷಯ ಹೇಳಿರಬಹುದು ಎಂಬ ಅಂದಾಜಿನ ಮೇಲೆ ಅವಳನ್ನು ಪ್ರಶ್ನಿಸುವ ವಿಚಾರ ಮಾಡಿ ಅವಳನ್ನು ಕಂಡುಬರಲು ಗುಪ್ತ ಪೋಲೀಸನಿಗೆ ಚೀಫ್ ಇನಸ್ಪೆಕ್ಟರ್ ಆಜ್ಞೆಯಿತ್ತ.

ಆತ್ಮಾಸಿಂಹನ ಹೆಂಡತಿಯನ್ನು ಕಂಡು ಗುಪ್ತ ಪೋಲೀಸ್ ಅವಾಕ್ಕಾಗಿಹೋದ. ಎಲಾ! ಇವಳು ಸ್ತ್ರೀಯೊ ಅಥವಾ ಸಂಗಮವರಿ ಮೂರ್ತಿಯೊ! ಅಬ್ಬಾ! ಎಂಥ ರೂಪವತಿ! ಗುಪ್ತ ಪೋಲೀಸ್ ದುರುಗುಟ್ಟಿ ನೋಡುವುದನ್ನು ಕಂಡ ಆ ತರುಣಿ ಕೂಗಿಕೊಂಡು ಕೋಣೆಯ ಬಾಗಿಲನ್ನು ಹಾಕಿ ಕೊಂಡಳು. ಗುಪ್ತ ಪೋಲೀಸ್ ಅವಳೊಡನೆ ಮಾತನಾಡದೆ ತಿರುಗಿ ಬಂದ. ಆದರೆ ಅವನಿಗೆ ತಾನು ಬಾವಾಸಿಂಹನ ಕೊಲೆಗಡಕನ ಪತ್ತೆ ಹಚ್ಚಬಹುದು ಎಂಬ ನಂಬಿಗೆ ಅವಳ ದರ್ಶನ ಮಾತ್ರದಿಂದ ಆಗಿಬಿಟ್ಟಿತ್ತು.

ಆತ್ಮಾಸಿಂಹನ ಮನೆಯ ಅಕ್ಕಪಕ್ಕದವರಲ್ಲಿ ವಿಚಾರಿಸಿದಾಗ ಅವನಿಗೆ ಜನ ಆತ್ಮಾಸಿಂಹನನ್ನು ತುಂಬ ಗೌರವಿಸುತ್ತಾರೆ, ಅದರಂತೆ ಅವನ ಹೆಂಡ ತಿಯ ಅಪ್ರತಿಮ ಸೌಂದರ್ಯದಿಂದಾಗಿ ಮತ್ಸರ ವನ್ನೂ ಪಡುತ್ತಿದ್ದಾರೆಂದು ತಿಳಿಯಿತು. ಬಹುಶಃ ಕೆಲಸದ ಮುದುಕಿಗೆ ಲಂಚ ಕೊಟ್ಟು ಇರಬೇಕು, ಅವಳ ಸಹಾಯದಿಂದ ಆತ್ಮಾಸಿಂಹ ಮನೆಯ ಲ್ಲಿಲ್ಲದಾಗ ಬಾವಾಸಿಂಹ ಅವನ ಹೆಂಡತಿಯನ್ನು ಭೆಟ್ಟಿಯಾಗುತ್ತಿದ್ದ ಎಂದೂ ಜನ ಹೇಳಿದರು.

ಚೀಫ್ ಇನಸ್ಪೆಕ್ಟರ್ ಮತ್ತು ಆ ಗುಪ್ತ ಪೋಲೀಸ್ ಆತ್ಮಾಸಿಂಹನನ್ನು ಕರೆಸಿ ಕೇಳಿದರು: "ಬಾವಾಸಿಂಹನ ಸಲುವಾಗಿಯೇ ನೀನು ಪ್ರಾ-ರ್ಥನೆ ಮಾಡುತ್ತಿದ್ದಿ ಅಲ್ಲವೆ?"

"ಹೌದು. ಗ್ರಂಥಿಯಾದ ನನ್ನ ಕರ್ತವ್ಯ ಅದು."

"ಆದರೆ ಆತ ನಿನ್ನ ಹೆಂಡತಿಯ ಮೇಲೆ ಕಣ್ಣಿ ಟ್ಟಿದ್ದಾನೆಂದು ಗೊತ್ತಿದ್ದರೂ ನೀನು ಆತನ ಬಗ್ಗೆ ಪ್ರಾರ್ಥನೆ ಮಾಡುತ್ತಿದ್ದಿಯಾ?" ಗುಪ್ತ ಪೋ-ಲೀಸ್ ಕೇಳಿದ.

"ಇದೆಲ್ಲ ಗಾಳಿಸುದ್ದಿ. ನನ್ನ ಹೆಂಡತಿಯ ಮೇಲೆ ಯಾರೂ ಕಣ್ಣಿಟ್ಟಿಲ್ಲ."

"ನೀನಿಲ್ಲದಾಗ ಬಾವಾಸಿಂಹ ನಿನ್ನ ಮನೆಗೆ ಹೋಗಿ ನಿನ್ನ ಹೆಂಡತಿಯನ್ನು ಭೆಟ್ಟಿಯಾಗುತ್ತಿದ್ದ ಎಂಬುದಕ್ಕೆ ನನ್ನ ಬಳಿ ನೂರಾರು ಸಾಕ್ಷಿಗಳಿವೆ."

ಗುಪ್ತ ಪೋಲೀಸ್ ಇಷ್ಟು ಹೇಳಿದ್ದೇ ತಡ, ಆತ್ಮಾಸಿಂಹ ಅವನ ಮೇಲೆ ಜಿಗಿದ. ಗುಪ್ತ ಪೋಲೀಸನ ತಲೆ ಗೋಡೆಗೆ ಬಡಿದು ಆತ ಕೆಳಗೆ ಬಿದ್ದ. ಸೋರುತ್ತಿದ್ದ ರಕ್ತವನ್ನು ಒರೆಸುತ್ತ ಗುಪ್ತ ಪೋಲೀಸ್ ಹೇಳಿದ: "ಆತ್ಮಾಸಿಂಹ, ನೀನು ಬಹಳ ಒಳ್ಳೆಯ ಕೆಲಸ ಮಾಡಿದಿ. ಹೆಂ-ಡತಿಯ ಕಾರಣದಿಂದಾಗಿ ನೀನು ಬಾವಾಸಿಂಹ ನನ್ನು ಕೊಂದೆ ಎಂಬುದಕ್ಕೆ ಇದೊಂದು ಪ್ರಬಲ ವಾದ ಸಾಕ್ಷಿಯಾಗಿದೆ. ಹೆಂಡತಿಯ ಕಲಂಕದ ಮಾತು ಕೇಳಿದರೆ ನಿನ್ನ ಬುದ್ಧಿ ನಿನ್ನ ಅಂಕೆಯಲ್ಲಿ ರುವುದಿಲ್ಲ. ಆದರೆ ಕೋರ್ಟಿನಲ್ಲಿ ಬಾವಾಸಿಂಹ ಮತ್ತು ನಿನ್ನ ಹೆಂಡತಿಯ ನಡುವೆ ಅನೈತಿಕ ಸಂಬಂಧವಿತ್ತೆಂಬ ಬಗ್ಗೆ ಎಷ್ಟು ಪುರಾವೆಗಳನ್ನೊ ದಗಿಸುತ್ತೇನೊ ನೋಡುವಿಯಂತೆ. ಆಗ ನಿನ್ನ ಹೆಂಡತಿಯ ಮಾನ ಬೀದಿಪಾಲಾಗಿ ಬಿಡುವುದು. ನಿನ್ನ ಮಾನವೂ ಮಾರಿಹೋಗುವುದು."

ಆತನ ಮಾತು ಕೇಳಿದೊಡನೆ, ಕೋಪದಿಂದ ಉನ್ಮತ್ತನಾಗಿದ್ದ ಆತ್ಮಾಸಿಂಹ ಶಿಥಿಲನಾಗಿ ಹೋದ. ಆತ ತಲೆ ತಗ್ಗಿಸಿ ಕುಳಿತು ಮೆಲ್ಲಮೆಲ್ಲನೆ ಹೇಳಿದ: "ನೀನನ್ನುವುದು ನಿಜ. ನಾಚಿಕೆಯಿಂದ ನಾನು ಬದುಕಿರಲಾರೆ." ಆ ಮೇಲೆ ಚೀಫ್ ಇನ-ಸ್ಪೆಕ್ಟರನ ಮುಖ ನೋಡುತ್ತಾ ಕರುಣಾಪೂರ್ಣ ಸ್ವರದಲ್ಲಿ, "ಮತ್ತಾವ ಹಾದಿಯೂ ಇಲ್ಲವೆ, ಸಾಹೇಬ್?" ಎಂದು ಕೇಳಿದ.

"ಕೊಲೆಮಾಡಿದ್ದನ್ನು ಒಪ್ಪಿಕೊಳ್ಳುವುದೊಂದೇ ಮಾರ್ಗವಿದೆ. ಅದರಿಂದ ನಿನ್ನ ಅಪಮಾನವಾಗು ವುದು ಉಳಿದೀತು" ಗುಪ್ತ ಪೋಲೀಸ್ ಹೇಳಿದ.

ಆತ್ಮಾಸಿಂಹ ತಲೆಯೆತ್ತಿ ಸೆಟೆದು ನಿಂತು ಹೇ-ಳಿದ: "ಹೌದು. ನಾನೇ ಬಾವಾಸಿಂಹನನ್ನು ಕೊಂದೆ. ನನ್ನನ್ನು ಗಲ್ಲಿಗೇರಿಸಿ. ಹೆಂಡತಿಯ ಮಾನ ಹೋಗುವುದಕ್ಕಿಂತಲೂ ಅದೇ ನನಗೆ ಪ್ರಿಯ. ನನ್ನ ಹೆಂಡತಿ ನಿರ್ದೋಷಿ ಎಂದು ನನಗೆ ಗೊತ್ತಿದೆ. ಬಾವಾಸಿಂಹ ವ್ಯರ್ಥ ಅವಳನ್ನು ಪೀಡಿ ಸುತ್ತಿದ್ದ. ಅವಳು ಅವನನ್ನು ತಿರಸ್ಕರಿಸುತ್ತಾಳೆ."

ಇನಸ್ಪೆಕ್ಟರ್ ಹೇಳಿದ: "ನೀನು ಕೊಲೆ ಮಾಡಿ

ದ್ದನ್ನೊಪ್ಪಿಕೊಂಡರೆ ನಿನಗೆ ಫಾಶಿ ಶಿಕ್ಷೆಯಾಗುವುದು, ಗೊತ್ತಿದೆಯಷ್ಟೆ?"

"ಹೌದು. ಫಾಶಿ ತಪ್ಪಿಸಿಕೊಳ್ಳಬೇಕೆಂದೇ ಆ ಬ್ರಿಟಿಶ್ ಕೈದಿಯ ಮೇಲೆ ಸಂಶಯ ಬರುವಂತೆ ಅವನ ಹೆಸರು ಹೇಳಲು ಅಡಿಗೆಯವನಿಗೆ ಹೇಳಿದೆ. ಆದರೆ ಆ ನಿರಪರಾಧಿಯನ್ನು ನೀವೇನಾದರೂ ಗಲ್ಲಿಗೇರಿಸುವ ನಿಶ್ಚಯ ಮಾಡಿದ್ದರೆ ಮಾತ್ರ ನಾನು ನಿಜವನ್ನು ಹೇಳಿ ಅವನನ್ನು ಉಳಿಸಬೇಕೆಂದಿದ್ದೆ."

ಆತ್ಮಾಸಿಂಹನ ವಿಚಾರಣೆಯಾಗಿ ಅವನಿಗೆ ಫಾಶಿಶಿಕ್ಷೆಯಾಯಿತು. ಶೀಖರಲ್ಲಿ ಗಡಿಬಿಡಿಯೆದ್ದಿತು. ಆತ್ಮಾಸಿಂಹ ಆದರಣೀಯನಾದ ಧಾರ್ಮಿಕ ವ್ಯಕ್ತಿ. ಆತ ಮಾಡಿದ್ದು ಮಾನವ ಧರ್ಮಕ್ಕೆ ವ್ಯತಿರಿಕ್ತವಾದದ್ದೇನೂ ಅಲ್ಲ, ತನ್ನ ಹೆಂಡತಿಯ ಸತೀತ್ವ ರಕ್ಷಣೆಮಾಡುವುದು ಪತಿಯ ಕರ್ತವ್ಯವಲ್ಲವೇ? ಅದ್ದರಿಂದ ಆತನಿಗೆ ಇಷ್ಟು ಕಠಿಣ ಶಿಕ್ಷೆ ವಿಧಿಸಲಾಗದು ಎಂದು ಅವರೆಲ್ಲ ಒಕ್ಕೊರಲಿನಿಂದ ಹೇಳಿದರು.

ಆದರೆ ಕಾಯದೆಗೆ ಇದೆಲ್ಲ ವಿಚಾರವೆಲ್ಲಿ?

ಶಾಂಘಾಯಿಯ ಬ್ರಿಟಿಶ್ ವಸಾಹತಿನಲ್ಲಿ ಗಲ್ಲಿಗೇರಿಸುವ ಮನುಷ್ಯನೊಬ್ಬನೂ ಇಲ್ಲದ್ದರಿಂದ ಹಾಂಗ್‌ಕಾಂಗಿನಿಂದ ಒಬ್ಬನನ್ನು ಕರೆಸಿದರು.

ಫಾಸಿಯ ದಿನ ಮುಂಜಾನೆ ಸರಿಯಾಗಿ ಏಳು ಗಂಟೆಗೆ ಬಿಳಿಯ ಬಟ್ಟೆ ಧರಿಸಿದ, ಗಡ್ಡ ಮತ್ತು ತಲೆಗೂದಲನ್ನು ಸರಿಯಾಗಿ ಹಿಕ್ಕಿಕೊಂಡ ಆತ್ಮಾಸಿಂಹ ತನ್ನ ಕೋಣೆಯಿಂದ ಹೊರಬಿದ್ದು ಫಾಶಿಕಂಬದ ಬಳಿಗೆ ನಡೆದ. ಹೊರಗಡೆ ಜನರ ಗುಂಪು ಸೇರಿತ್ತು. ಘೋಷಣೆಗಳು ಕೂಗಲ್ಪಡುತ್ತಿದ್ದವು. ಗಲ್ಲಿಗೇರಿಸುವಾತ ಆತ್ಮಾಸಿಂಹನ ಕೊರಳಿಗೆ ಹಗ್ಗದ ಉರುಲು ಹಾಕಿ ಸಮಯಕ್ಕೆ ಸರಿಯಾಗಿ ಅವನ ಕಾಲ ಕೆಳಗಿನ ಹಲಗೆಯನ್ನು ಸರಿಸಿದ.

ಆದರೆ ಏನಾಶ್ಚರ್ಯ! ಹಿಂದೆಂದೂ ಘಟಿಸದಿದ್ದ ಸಂಗತಿಯೊಂದು ನಡೆದುಹೋಯಿತು. ತಟ್ಟೆಂದು ಹಗ್ಗ ತುಂಡಾಗಿ ಹೋಯಿತು. ಆತ್ಮಾಸಿಂಹ ಕೆಳಗೆ ಬಿದ್ದ. ಅಧಿಕಾರಿಗಳೂ ಗಲ್ಲಿಗೇರಿಸುವವನೂ ಓಡಿ ಬಂದರು. ಆತ್ಮಾಸಿಂಹನ ಮೂಗಿನಿಂದ ರಕ್ತ ಹರಿಯುತ್ತಿತ್ತು. ಆತ ಮೂರ್ಛಿತನಾಗಿ ಬಿದ್ದಿದ್ದ. ಗ್ರಂಥಿಯನ್ನು ಆಸ್ಪತ್ರೆಗೆ ಕಳಿಸಿದರು.

ಶೀಖರು ಆನಂದದಿಂದ ಕುಣಿದಾಡಿದರು. ಪವಿತ್ರನೂ ನಿರ್ದೋಷಿಯೂ ಆದವನನ್ನು ಗಲ್ಲಿಗೇರಿಸುವುದು ಹುಡುಗಾಟವೇ? ಪರಮಾತ್ಮ ಭಕ್ತರನ್ನು ಸದಾ ರಕ್ಷಿಸುತ್ತಲೇ ಬಂದಿದ್ದಾನೆ, ಈಗಲೂ ರಕ್ಷಿಸಿದ್ದಾನೆ!

ಮೂರ್ಛೆ ಹೋದವನನ್ನು ಗಲ್ಲಿಗೇರಿಸಲು ಬರುವುದಿಲ್ಲ. ಎಚ್ಚರ ಬಂದ ಮೇಲೆ ಗಲ್ಲಿಗೇರಿಸೋಣ ಎಂದು ಅಧಿಕಾರಿಗಳು ಹೇಳಿದರು. ಆದರೆ ಒಮ್ಮೆ ಫಾಶಿಗೇರಿಸಿದ ಮೇಲೆ ಮತ್ತೆ ಯಾವ ಕಾಯದೆಯಂತೆ ಫಾಶಿಗೇರಿಸುತ್ತೀರಿ ಎಂದು ಶೀಖರು ಆಕ್ಷೇಪವೆತ್ತಿದರು. "ಸಾಯುವ ವರೆಗೂ ತೂಗಹಾಕಬೇಕು ಎಂದು ಕಾನೂನಿದೆ; ಎಷ್ಟು ಸಲ ತೂಗ ಹಾಕಿದರೆ ಏನು?" ಎಂದರು ಅಧಿಕಾರಿಗಳು.

ಇದೊಂದು ಜಟಿಲ ಸಮಸ್ಯೆಯಾಯಿತು. ಬ್ರಿಟಿಶ್ ಕಾನ್ಸಲ್ ಜನರಲ್ ಸರ್ ಜಾನ್ ಬ್ರೆನನ್ನರಿಗೆ ಯಾವನಾದರೂ ಶೀಖನು ಮೊದಲೇ ಹಗ್ಗವನ್ನು ಕತ್ತರಿಸಿಟ್ಟಿದ್ದನೆ ಎಂಬ ಸಂಶಯ ಬರಲು ಅವರು ವಿಚಾರಣೆ ನಡೆಸಲು ಹೇಳಿದರು. ಆದರೆ ತಜ್ಞರ ಪರೀಕ್ಷೆಯಲ್ಲಿ ಹಗ್ಗವನ್ನು ಕತ್ತರಿಸಿರಲಿಲ್ಲ, ಅದಕ್ಕೇನಾದರೂ ರಸಾಯನವನ್ನೂ ಹಚ್ಚಿರಲಿಲ್ಲವೆಂದು ತಿಳಿದುಬಂತು. ಆತ್ಮಾಸಿಂಹನು ತನ್ನ ಆತ್ಮಶಕ್ತಿಯಿಂದ ಹಗ್ಗವು ತುಂಡಾಗುವಂತೆ ಮಾಡಿದ ಎಂದು ಶೀಖರಲ್ಲಿ ಕೆಲವರೆಂದರೆ ಇನ್ನು ಕೆಲವರು ಆತ್ಮಾಸಿಂಹನು ಅದೇ ರೂಪದಲ್ಲಿ ಎರಡನೆಯ ಜನ್ಮತಾಳಿ ಬಂದಿದ್ದಾನೆ ಎನ್ನುತ್ತಿದ್ದರು. ಒಮ್ಮೆ ಫಾಶಿ ಶಿಕ್ಷೆ ವಿಧಿಸಿದ್ದವನಿಗೆ ಮತ್ತೊಮ್ಮೆ ಫಾಶಿ ಶಿಕ್ಷೆ ಹೇಗೆ ವಿಧಿಸಬಹುದು ಎಂದು ಅವರು ಗದ್ದಲ ಎಬ್ಬಿಸಿದರು.

ಖಟ್ಲೆ ದೀರ್ಘ ಕಾಲ ನಡೆಯಿತು. ಕೊನೆಗೆ ಚೀನದಲ್ಲಿ ಬ್ರಿಟಿಶ್ ರಾಯಭಾರಿಯಾಗಿದ್ದ ಸರ್ ಹ್ಯೂ ನಾಚ್‌ಬುಲ್ ಹ್ಯೂಗ್ರೆಸನ್‌ರು ಆತ್ಮಾಸಿಂಹನ ಫಾಶಿ ಶಿಕ್ಷೆಯನ್ನು ಆಜೀವ ಕಾರಾಗೃಹವಾಸಕ್ಕಿಳಿಸಿದರು. ಫಾಶಿಗೇರಿಸಿದರೂ ಒಬ್ಬ ಶೀಖ ಗ್ರಂಥಿ ಬದುಕುಳಿದ ಎಂಬ ಮಾತು ಅಪರಾಧದ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುವಂತಾಯಿತು.

*



ಪುಸ್ತಕ ವಿಭಾಗ
ಬಿ.ಸಿ.ನಂ ೧೦೮
ಮೂಲ : ಶ್ರೀ. ನಾ. ಪೇಂಡಸೆ
ಸಂಗ್ರಹ : ಶ್ರೀನಿವಾಸ ಹಾವನೂರ
RAO

# ಬಿ. ಸಿ. ನಂ. ೨೦೮

ನಾನು ಕೆಲಸ ಮಾಡುತ್ತಿರುವ ಟ್ರಾನ್ಸ್‌ಪೋರ್ಟ್ ಕಂಪನಿಯ ಕಚೇರಿಯು ಆ ಅವಾಢವ್ಯ ಮೂರು ಅಂತಸ್ತಿನ ಕಟ್ಟಡವನ್ನೆಲ್ಲಾ ವ್ಯಾಪಿಸಿತ್ತು. ಕೆಳ ಅಂತಸ್ತಿನಲ್ಲಿ ಇರುವುದು ಟ್ರಾಫಿಕ್ ಖಾತೆ. ನೂರಾರು ಜನರ ಕಲಕಲಾಟ ಅಹೋರಾತ್ರಿ ಅಲ್ಲಿ ನಡೆದಿರುತ್ತದೆ. ಒಂದು ಕಡೆಗೆ, ಇಡಿಯ ದಿನದ ಕೆಲಸದಿಂದ ಬೆವೆತು ಕೊಳೆಯಾದ ಕಂಡಕ್ಟರ್ ಜನರು ಕೌಂಟರ್ ಮೇಲೆ ಜಮೆ ಮಾಡಬೇಕಾದ, ಹಣವನ್ನು ಎಣಿಸುತ್ತಿರುತ್ತಾರೆ. ಇನ್ನೊಂದೆಡೆಗೆ ಬೆಂಚುಗಳ ಮೇಲೆ ತೂಕಡಿಸುತ್ತಿರುವ ಡ್ರೈವರ್ ಜನರು ಕಾಣುತ್ತಾರೆ.

ಕಂಡಕ್ಟರ್-ಡ್ರೈವರ್ ಜನಕ್ಕೆ ಕೆಲಸದ ವಿತರಣೆಯಾಗುವ ಸ್ಥಳದಲ್ಲಿಯ ಗದ್ದಲವನ್ನಂತೂ ಹೇಳಲಾಸಲ್ಲ. ಜಾಳಿಗೆಯಿಂದ ಮುಚ್ಚಿದ ಕೋಣೆಯೊಳಗೆ ಕೆಲಸವನ್ನು ಹಂಚುತ್ತಿರುವ ಕಾರಕೂನರು ಒಂದೇ ಸಮನೆ ಒದ್ದಾಡುತ್ತಿರುತ್ತಾರೆ. ಊರಲ್ಲಿಯ ಬೇರೆ ಬೇರೆ ಚೌಕಿಗಳಿಂದ ಫೋನು ಬರುತ್ತವೆ; ಹೋಗುತ್ತವೆ. ನನ್ನ ಆಫೀಸಿನ ಸ್ಥಳವಿರುವ ಮೇಲಿನ ಜಿನ್ನೆಗೆ ಹೋಗಬೇಕಾದರೆ ನಾನು ಈ ಗದ್ದಲದಲ್ಲಿ ದೈತರಿಸಿಕೊಳ್ಳುತ್ತಲೇ ಹೋಗಬೇಕಾಗುತ್ತದೆ. ಈ ಜಿನ್ನೆಯ ಪಾವಟಿಗೆಗಳೂ ಸಹಸಾ ಖಾಲೀ ಇದ್ದಾವೆಂಬ ನಿಯಮವಿಲ್ಲ. ನಾಲ್ಕಾರು ಜನ ಡ್ರೈವರರು ಮೊಳಕಾಲಿಗೆ ಟೊಪ್ಪಿಗೆಯನ್ನು ತೊಡರಿಸಿಕೊಂಡು ಹರಟೆ ಕೊಚ್ಚುತ್ತ ಕುಳಿತಿರುವ ಸಂಭವವೇ ಹೆಚ್ಚು.

ಈ ಜಗತ್ತಿನಲ್ಲಿ ಬಿ. ಸಿ. ನಂ. ೨೦೮ ಒಂದು ಬಿಂದು ಮಾತ್ರ.

ಒಂದು ಕ್ಷುಲ್ಲಕ ಜಗಳದಿಂದ ನನ್ನ ಅವನ ಪರಿಚಯದ ಜನ್ಮವಾಯಿತು. ಬೇರೆ ವೇಳೆಯಲ್ಲಿ ಅವನು ಬಂದಿದ್ದರೆ ಜಗಳವಾಗುತ್ತಿತ್ತೋ ಇಲ್ಲವೊ. ಅದು ತಿಂಗಳ ಕೊನೆಯ ವಾರ. ಈ ವಾರದಲ್ಲಿ ನಾವು ಕೆಲಸದ ಕುರುಡು ತೇರಿನ ಗಾಲಿಗೆ ಸಿಕ್ಕು ನುಚ್ಚುನುರಿಯಾಗಿ ಹೋಗುತ್ತೇವೆ. ಸಂಬಳದ ಬಗ್ಗೆ ಅನೇಕ ಕಾಗದಗಳು ಬಂದಿರುತ್ತವೆ. ಸಂಬಳಪತ್ರಿಕೆಗಳಲ್ಲಿ ಇವುಗಳನ್ನು ಸೇರ್ಪಡಿಸಿ ಜಮಾಖರ್ಚಿನ ತಾಳೆ ಹಾಕಬೇಕು. ಸಾವಿರಾರು ಜನ ಕೆಲಸಗಾರರ ಸಂಬಳ ಪತ್ರಿಕೆ ಸಿದ್ಧಪಡಿಸಬೇಕು. ಒಂದಲ್ಲ, ಎರಡು ಮೂರು ಕಡೆಗೆ ಅವುಗಳನ್ನು ನೋಂದಾಯಿಸಬೇಕು. . .

ಅವನು ಬಂದು ನನ್ನ ಮೇಜಿನ ಮುಂದೆ ನಿಂತ. ನಾನಾಗಿಯೇ ಅವನು ಬಂದ ಕಾರಣ ಕೇಳಬಹುದೆಂದೂ ನನ್ನ ಕೈಯಲ್ಲಿಯ ಕೆಲಸ ಮುಗಿಯಲೆಂದೂ ಹಾಗೇ ನಿಂತ. ಅಲ್ಲಿಂದ ತಾನಾಗಿಯೇ ಮೆಲುದನಿಯಲ್ಲಿ—

"ಮಾಸ್ಟರ ಸಾಬ" ಎಂದ.

"ಹೂಂ. ಬೋಲೊ. ನಂಬರ ಕ್ಯಾ ಹೈ?"

"ದೋ ಸೌ ಆಠ."

"ನಾಮ ಕ್ಯಾ ಹೈ?"

"ರಾಮಶರಣ ಲಲಿತಾಪ್ರಸಾದ ಶರ್ಮಾ."

"ಕ್ಯಾ ಮಂಗತಾ ಹೈ?"

"ಮುಝೇ ಐಸಾ ಪೂಛನೇಕಾ ಹೈ—" ಇಷ್ಟು ನುಡಿದು ಸುಮ್ಮನೆ ನಿಂತ. ಅಲ್ಲಿಂದ "ಊಪರ ತೋ ದೇಖಿಯೇ ಸಾಬ" ಎಂದ.

"ನಹೀ."

"ಕ್ಯಾ ನಹೀ?" ಒಂದಿಷ್ಟು ಉಚ್ಚ ಸ್ವರದಲ್ಲಿ ಆತ ಕೇಳಿದ.

"ಊಪರ ದೇಖನೇಕೊ ಟಾಯಿಮ್ ನಹೀ."

"ಆಪ ಮುಝೆ ಕ್ಯಾ ಸಮಝತೇ ಹೈಂ?"

"ಕಂಡಕ್ಟರ ನಂ. ದೋ ಸೌ ಆಠ್." ಡ್ರೈವರ್ ನಂ. ೧೧೫೪ ರ ಧಾನ್ಯ ಖರೀದಿಯ ನೋಂದನ್ನು ಸಂಬಳ ಪತ್ರಿಕೆಯಲ್ಲಿ ಮಾಡುತ್ತ ನಾನು ಹೇಳಿದೆ.

"ಮಾಸ್ಟರ ಸಾಬ್."

"ಕ್ಯಾ ಮಂಗತಾ ಹೈ?"

"ಚಾರ ಬರಸಕಾ ಹಮಾರಾ ರಜಾ."

"ಚಾರ ದಿನಕೆ ಬಾದ ಆವ."

ಆದರೆ ನಂ. ೨೦೮ ಅಲ್ಲೇ ನಿಂತಿದ್ದ. ಅವನ ಉಪಸ್ಥಿತಿಯಿಂದ ನನ್ನ ಕೆಲಸದ ಮೇಲಿನ ಲಕ್ಷ್ಯ ಹಾರತೊಡಗಿತು. ಕೈಯಲ್ಲಿಯ ಲೆಕ್ಕಣಿಕೆಯನ್ನು ಮೇಜಿನ ಮೇಲೆ ಅಪ್ಪಳಿಸಿ ಅವನ ಮೇಲೆ ಹರಿಹಾಯ್ದೆ.

"ಹಟ್ ಜಾವ್ ಇಧರಸೇ, ಖಾಲಿ ಪೀಲೀ ಸಾಲಾ ಸತಾತಾ ಹೈ."

"ನಹೀ ಹಟೇಗಾ! ಕ್ಯಾ ಕರೇಗಾ?" ಅವನ ದೊಡ್ಡ ಧ್ವನಿಯನ್ನು ಕೇಳಿ ನನ್ನ ಸಹೋದ್ಯೋಗಿಗಳು ಇತ್ತ ನೋಡಿದರು. ಅವನು ಇಷ್ಟು ಗಮಜು ತೋರಿಸಿದ ನಂತರ ನಾನು ಸುಮ್ಮನಿರಲೇ? ಕುರ್ಚಿಯನ್ನು ಬಿಟ್ಟೆದ್ದು ಮೊದಲಿನ ಉಚ್ಚ ಧ್ವನಿಯಲ್ಲಿಯೇ—

"ಕ್ಯಾ ಕರೇಗಾ? ತುಮಕೊ ದೇಖನೇಕಾ ಹೈ ಎಂದೆ"

"ಹಾ, ಹಾ, ದೇಖನೇಕಾ ಹೈ? ಬತಾವ್. ಔರ್ ಧ್ಯಾನ ಮೇ ರಖಿಯೇ, ಫಿರ್ ಗಾಲೀ ಬೋಲೇಗಾ ತೊ ಜಾನಸೇ ಕಾಟ್ ದೇಗಾ."

ಇಷ್ಟರಲ್ಲಿ ನಮ್ಮ ಸಾಹೇಬರು ತಮ್ಮ ಕ್ಯಾಬಿನ್ ಬಿಟ್ಟು ಹೊರಗೆ ನಿಂತುಕೊಂಡು "ನಂಬರ್ ದೋ ಸೌ ಆಠ್, ಇಧರ್ ಆವ್" ಎಂದರು.

"ದೇಖೋ ಸಾಬ್ ಇನ್‌ಸಾನ್ ಕೀ ಕೋಯಿ ಇಜ್ಜತ್ ಹೈ ಯಾ ನಹೀ?"

"ಇಧರ ತೋ ಆವ್, ಪಹಿಲಾ."

ಬಿ. ಸಿ. ನಂ. ೨೦೮ ಭಿರಿಭಿರಿ ಸಾಹೇಬರ ಹತ್ತಿರಕ್ಕೆ ಹೋದ. ನಾನು ಏನೂ ಆಗಿಲ್ಲವೆನ್ನುವವರಂತೆ ನನ್ನ ಕೆಲಸದಲ್ಲಿ ತೊಡಗಿದೆನಾದರೂ ನನ್ನ ಕಿವಿ ಸಾಹೇಬರ ಕೋಣೆಯತ್ತ ತಿರುಗಿದ್ದವು. ರಾಮಶರಣನ ಉತ್ತರ ಪ್ರದೇಶದ ಹಿಂದೀ ನನಗೆ ಸಂಪೂರ್ಣ ಅರ್ಥವಾಗಿರದಿದ್ದರೂ ನಾನು ಸಹಜದಲ್ಲಿ ಅಂದ 'ಸಾಲಾ' ಶಬ್ದದ ಲಾಭವನ್ನು ಪಡೆಯುತ್ತಿದ್ದುದು ಕಂಡುಬಂತು. ತುಸು ಹೊತ್ತಿನ ಮೇಲೆ ಅವನ ದನಿ ತಗ್ಗಿತು. ಅವನು ಹೊರಟ ನಂತರ ಸಾಹೇಬರು ನನ್ನನ್ನು ಕರೆಸಿದರು. ನಾನು ಆ ದಿನಗಳಲ್ಲಿ ಎಷ್ಟೊಂದು ಕೆಲಸದಲ್ಲಿ ತೊಡಗಿರುವೆನೆಂಬುದನ್ನು ಅವರು ಬಲ್ಲರು. ಅದನ್ನೇ ನಾನು ಮತ್ತೆ ವಿವರಿಸುತ್ತಿದ್ದಾಗ—

"ಅದಲ್ಲರೀ, ನಿಮ್ಮ ಹರಕು ಹಿಂದಿಯಿಂದಾಗಿ ಈ ಜಗಳವೆದ್ದಿತು" ಎಂದರು.

"ಇದಕ್ಕೇನೂ ಬೈಗಳೆಂದು ಅನ್ನುವುದಿಲ್ಲ. ಸಹಜಾಸಹಜೀ ಎಲ್ಲರೂ ಉಪಯೋಗಿಸುತ್ತಾರೆ" ಎಂದೆ ನಾನು.

"ಹಾಗೆ ಅನ್ನುವುದಕ್ಕಾದರೂ ಎಂಥಾ ರತ್ನವನ್ನು ಹುಡುಕಿ ತೆಗೆದಿರಿ!"

"ಯಾಕೆ?"

"ನಿಮಗೆ ಇವನ ಬಗ್ಗೆ ಗೊತ್ತಿಲ್ಲವೇನು? ಮಹಾ ತಲೆತಿರುಕ. ಹಾಗೆ ಕೇಳಿದರೆ ಸಂಭಾವಿತ. ರೇಗಿದರೆ ಮಾತ್ರ ಇನ್ನೊಬ್ಬರ ಜೀವ ತೆಗೆಯಲಿಕ್ಕೂ ಹಿಂದುಮುಂದೆ ನೋಡುವವನಲ್ಲ."

ಮರುದಿನ ನಾನು ಅವನ ರಜೆಯ ಫೈಲನ್ನು ತಿರುವಿ ಹಾಕುತ್ತಿದ್ದೆ. ಇಡೀ ನಾಲ್ಕು ವರ್ಷದ ಅವಧಿಯಲ್ಲಿ ಅವನು ಒಂದು ಸಲವೂ ರಜೆ ತೆಗೆದುಕೊಂಡಿರಲಿಲ್ಲ. ರವಿವಾರ ಅಥವಾ ಅವರ ಬಿಡುವಿನ ದಿನ ಕಂಡಕ್ಟರ್ ಜನರು ಕೆಲಸ ಮಾಡಿದರೆ, ಅರ್ಧ ಪಗಾರವನ್ನೂ ಒಂದು ದಿನದ ರಜೆಯನ್ನೂ ಅವರ ಹೆಸರಿಗೆ ಜಮಾ ಹಿಡಿಯುತ್ತೇವೆ. ಅವನ ರಜೆಯ ಶಿಲ್ಲಕಿನ ಸಂಖ್ಯೆ ಒಟ್ಟುಗೂಡಿಕೆಯ ಮರ್ಯಾದೆಯನ್ನು ಮೀರಿದ್ದರಿಂದ ೪೦ ದಿನಗಳ ರಜೆ "ಖೋತಾ" ಆಗಿತ್ತು. ನಾಲ್ಕೈದು ವರ್ಷಗಳ ಅವಧಿಯಲ್ಲಿ ದೂರದ ತನ್ನ ಊರಿಗೆ ಒಮ್ಮೆಯೂ ಹೋಗಿರದ ಅದ್ಭುತ ಕಂಡಕ್ಟರ ಅಂದೇ ಮೊದಲ ಸಲ ನನ್ನ ದೃಷ್ಟಿಗೆ ಬಿದ್ದಿದ್ದ.

ಒಂದು ವಾರದ ನಂತರ ಬಿ. ಸಿ. ನಂ. ೨೦೮ ಮೆಟ್ಟಿಲನ್ನೇರಿ ನನ್ನ ಕಡೆಗೇ ಬರುವುದು ಕಂಡಿತು. ಅವನನ್ನು ತುಚ್ಛತೆಯಿಂದ ಕಾಣುವ ಸಿದ್ಧತೆಯಲ್ಲಿ ನಾನಿದ್ದೆ. ಅವನೋ ಎರಡೂ ಕೈ ಜೋಡಿಸಿಕೊಂಡು ನನ್ನೆದುರು ನಿಂತಿದ್ದ. ಅವನೇ ಮೊದಲು ಮಾತನಾಡಿಸಿದ. ತನ್ನನ್ನು ಕ್ಷಮಿಸಬೇಕೆಂದು ಅವನು ಹೇಳಿಕೊಳ್ಳುತ್ತಿದ್ದ. ಆ ದಿನ ಒಬ್ಬ ಪ್ಯಾಸೆಂಜರನ ಕೂಡ ಜಗಳವಾಗಿದ್ದ ಕಾರಣ, ಅವನ ಚಿತ್ತ ಅಸ್ಥಿರವಾಗಿತ್ತಂತೆ!

ಬಹಳ ಹೊತ್ತು ಹೀಗೆ ಅನುನಯಿಸಿದ ಮೇಲೆ ನಾನು ಮಾತನಾಡುವ ಉಪಕಾರ ಮಾಡಿದೆ.

"ರಜಾ ಬೇಕಾಗಿತ್ತೇನು?" ಎಂದು ಕೇಳಿದೆ. "ಹಾಂ ಸಾಬ್" ಎಂದನು. ಬನಾರಸ್ ಕಡೆಯಿಂದ ಒಬ್ಬ ಸಾಧು ಮುಂಬೈಗೆ ಬರಲಿದ್ದು ಅವನಿಂದ ಉಪದೇಶ ಪಡೆಯಲು ರಜೆ ಬೇಕಾಗಿದೆ ಎಂದು ತಿಳಿಸಿದನು.

ಬದಿಯಲ್ಲಿಯ ವಿಭಾಗಕ್ಕೆ ಹೋಗಿ ಒಂದು ಫಾರ್ಮು ತೆಗೆದುಕೊಂಡು ಬಂದು, ಅದರ ವಿವರಗಳನ್ನು ತುಂಬಿ ಪೂರ್ಣ ಮಾಡಿದೆ. ಅವನ ಸಹಿ ಮಾಡಿಸಿದೆ. ನಮ್ರಭಾವದಿಂದ ಆಭಾರ ಮನ್ನಿಸಿ ಅವನು ಹೊರಟುಹೋದ.

ರಜೆ ತಡವಿಲ್ಲದೇ ಮಂಜೂರಾಯಿತು. ಇನ್ನು ಕೆಲ ದಿನ ಅವನನ್ನು ಕಾಣುವ ಪ್ರಸಂಗವಿಲ್ಲವಲ್ಲ ಎಂದುಕೊಂಡೆ. ಒಂದು ದಿನ ಕಚೇರಿಯ ಕೆಲಸ ಮುಗಿಸಿ ಹೊರಡುವ ಬೇತಿನಲ್ಲಿದ್ದೆ. ಇತರ ಸಹೋದ್ಯೋಗಿಗಳು ಆಗಲೇ ಹೋಗಿದ್ದರು. ಅಷ್ಟರಲ್ಲಿ ನಂ. ೩೦೮ ಲಗುಬಗೆಯಿಂದ ನನ್ನ ಹತ್ತಿರ ಬಂದ. ತುಸು ಹೊತ್ತು ಏನೂ ಮಾತಾಡಲಿಲ್ಲ.

"ಯಸ್! ಏನು ಬೇಕಾಗಿತ್ತು? ನೀ ರಜೆಯ ಮೇಲೆ ಇದ್ದೀಯಲ್ಲವೇನು?"

ಅವನು ಮಾತನಾಡದೇ ಕಿಸೆಯಲ್ಲಿಯ ಎರಡು ಕಾಗದದ ಪುಡಿಕೆಗಳನ್ನು ತೆಗೆದು ನನ್ನ ಕೈಯಲ್ಲಿ ಇರಿಸಿದ.

"ಇದೇನೊ?"

"ಗುರುಮಹಾರಾಜರ ಪ್ರಸಾದ, ಸಾಹೇಬ."

ನಾನು ಒಂದು ಪುಡಿಕೆ ಬಿಚ್ಚಿ, ಅದರಲ್ಲಿಯ ಗುಲಾಲನ್ನು ಹಣೆಗೆ ಹಚ್ಚಿಕೊಂಡೆ. ಇನ್ನೊಂದರಲ್ಲಿಯ ಎರಡು ಪುಠಾಣಿ ಕಾಳು, ಸಕ್ಕರೆ ಬಾಯಲ್ಲಿ ಹಾಕಿಕೊಂಡು ಅವನಿಗೆ ಪುಡಿಕೆಗಳನ್ನು ಹಿಂತಿರುಗಿ ಕೊಡಲು ಹೋದೆ.

"ನಿಮ್ಮ ಕಡೆಗೇ ಇರಲಿ ಸಾಬ, ತಮಗಂತೇ ತಂದೆ."

ಇದಾದ ನಂತರ ಪ್ರತಿ ನಿತ್ಯ ಅವನ ಭೆಟ್ಟಿಯಾಗುತ್ತಿತ್ತು. ನನ್ನ ದಾರಿಯನ್ನು ಕಾಯುತ್ತಲೇ ಕುಳಿತಿರುತ್ತಿದ್ದನೆಂದರೂ ಸರಿ. ನಾನು ಬರುವುದೇ ತಡ, ಅವನು ಲಗುಬಗೆಯಿಂದ ಎದ್ದು ಸಲಾಮು ಸಲ್ಲಿಸಿ ನನ್ನ ಕಡೆ ಬರುತ್ತಿದ್ದ. ನಿತ್ಯ ಅವನ ಕೂಡ ಏನು ಮಾತಾಡುವುದು? ಹೀಗೇ ನಾಲ್ಕಾರು ದಿನ ಕಳೆದವು. ಒಂದು ಸಲ ಅವನು ತೀರ ನನ್ನ ಹತ್ತಿರ ಬಂದು ಪಿಸುದನಿಯಲ್ಲಿ—

"ಸಾಹೇಬ, ಕಳೆದ ಎರಡುಮೂರು ದಿನದಲ್ಲಿ ಏನೂ ಆಗಿಲ್ಲವೇನು?" ಎಂದು ಕೇಳಿದ.

ನಾನು ಪ್ರಶ್ನಾರ್ಥಕವಾಗಿ ಅವನ ಕಡೆಗೆ ನೋಡಿದೆ. "ಏನರೆ ಶುಭ ಆಗಲೇಬೇಕು. ಅನೇಕರಿಗೆ ಪ್ರಸಾದದ ಫಲ ಕಂಡುಬಂದಿದೆ."

"ಹೇಳಿಕೊಳ್ಳುವಂತಹದೇನೂ ಆಗಿಲ್ಲ."

ನಿಜವೆಂದರೆ, ಅವನ ಪ್ರಸಾದವನ್ನು ಸ್ವೀಕರಿಸಿದ ಮರುದಿನವೇ ನನಗೆ ತಾತ್ಪೂರ್ತಿಕವಾಗಿ ಮುಖ್ಯ ಗುಮಾಸ್ತನ ಸ್ಥಾನ ದೊರಕಿತ್ತು. ಆ ಸ್ಥಾನವು ನನಗೆ ದೊರೆಯುವುದು ಎಂದೋ ನಿಶ್ಚಿತವಾಗಿತ್ತು. ನಾನು ಅಸತ್ಯವನ್ನು ಆಡಿದುದಕ್ಕೆ ಅದೇನು ಕಾರಣವಾಗಿರಲಿಲ್ಲ. ಆದರೆ ಆ ಸತ್ಯವನ್ನು ಹೇಳಿದ್ದರೆ, ತನ್ನಂತೆ ನಾನೂ ಒಬ್ಬ ಭಾವಿಕ ಭಕ್ತನೆಂದು ರಾಮಶರಣನ ಖಚಿತ ಕಲ್ಪನೆಯಾಗುವ ಸಂಭವವಿತ್ತು.

"ನನಗೆ ಏನೂ ಆಗಿಲ್ಲ. ಅಂಗಾರ, ಗುರು ಮಹಾರಾಜ ಇವರ ಮೇಲೆ ನನಗೆ ವಿಶ್ವಾಸವಿಲ್ಲ" ಎಂದೆ.

ನಾನು ಹೀಗೆ ಮಾತಾಡಬಹುದೆಂದು ಅವನಿಗೆ ಅನಿಸಿರಲಿಲ್ಲ. ಚಕಿತನಾಗಿ ನನ್ನ ಕಡೆ ನೋಡುತ್ತ—

"ಸಾಬ, ಪ್ರಭು ರಾಮಚಂದ್ರನ ಪ್ರಸಾದ ಅದು. ನೀವು ದೇವರಿಗೆ ನಮಸ್ಕಾರವಾದರೂ ಮಾಡುತ್ತೀರಿಲ್ಲೊ?"

"ಜಗತ್ತಿನಲ್ಲಿ ದೇವರೇ ಇಲ್ಲ. ನಮಸ್ಕಾರ ಯಾರಿಗೆಂದು ಮಾಡುವುದು?"

"ಎಲ್ಲರೂ ಹೀಗೇ ಅನ್ನುತ್ತಾರೆ ಸಾಹೇಬ. ಸಂಕಟ ಬಂತೆಂದರೆ ಮಾತ್ರ ದೇವರ ನೆನಪು ಆಗುತ್ತದೆ."

"ಅದರ ಅರ್ಥ ದೇವರು ಇದ್ದಾನೆ ಅಂತ ಅಲ್ಲ. ಅದೆಲ್ಲಾ ಅಂಜುಬುರುಕರ ವಿಚಾರ. ಮನುಷ್ಯ ತನ್ನ ವಿನಾ ಯಾರನ್ನೂ ಅವಲಂಬಿಸಿ ನಿಲ್ಲಬಾರದು. ಈ ದೇವರ ಹುಚ್ಚಿಗೆ ಬಿದ್ದು ಯಾರ ಕಲ್ಯಾಣವೂ ಆಗಿಲ್ಲ. ನೀನೂ ಈ ಹುಚ್ಚು ನಾದವನ್ನು ಬಿಟ್ಟುಬಿಡು" ಎಂದೆ.

ದಿನಗಳೆದಂತೆ, ಅವನು ನನ್ನನ್ನು ತನ್ನ ಶ್ರದ್ಧೆ

ಯುತ್ತ ತಿರುಗಿಸುವ ಯತ್ನದಲ್ಲಿ ತೊಡಗಿದ. ಗಿಡದ ಬೀಜ ಎಲ್ಲಿಂದ ಬಂದಿತು? ನೀವು ಮಾತ ನಾಡುವುದು ಹೇಗೆ? ಗಾಳಿ ಹೇಗೆ ಬೀಸುತ್ತದೆ? ನೀವು ಜನ್ಮಧಾರಣೆ ಮಾಡಿದ್ದು ಹೇಗೆ? ಇತ್ಯಾದಿ ಪ್ರಶ್ನೆಗಳನ್ನು ಕೇಳುತ್ತಿದ್ದ. ಕ್ಯಾಂಟೀನಿನಲ್ಲಿ ಚಹ ಕುಡಿಯುತ್ತ ನಾನು ಕುಳ್ಳಿರುತ್ತಿದ್ದಾಗ ಅಲ್ಲಿಗೂ ಒಮ್ಮೊಮ್ಮೆ ಬರುತ್ತಿದ್ದ. ಆಗ ಅವನ ಇಂಥ ಪ್ರಶ್ನೆಗಳಿಗೆ ಉತ್ತರ ಹೇಳುವಾಗ ಅವ ನನ್ನು ಒಂದು ಹೊತ್ತುಗಳೆಯುವ ಸಾಧನವಾಗಿ ನಾನು ಉಪಯೋಗಿಸುತ್ತಿದ್ದೇನೆ ಎಂಬ ಕಲ್ಪನೆ ಅವನಿಗೆ ಹೊಳೆದಿರಲಿಲ್ಲ.

೨

ಕಳೆದ ಎರಡು ಮೂರು ದಿನಗಳಿಂದ ನಂ. ೨೦೪ ತನ್ನ ಠರಾವಿಕ ಸ್ಥಾನದಲ್ಲಿ ಕಾಣುತ್ತಿರ ಲಿಲ್ಲ. ಆ ಬಗ್ಗೆ ವಿಚಾರಿಸಬೇಕೆಂದೆನಿಸಿತಾದರೂ ನನ್ನ ಸ್ಥಾನ, ಪ್ರತಿಷ್ಠೆಯ ದೃಷ್ಟಿಯಿಂದ ನನ್ನ ಮನಸ್ಸಿಗೆ ಒಪ್ಪಿತವಾಗಿರಲಿಲ್ಲ. ಎರಡು ದಿನದ ನಂತರ ಕಾರಣ ತಿಳಿದುಬಂದು ಅವಾಕ್ಕಾದೆ. ಅವನನ್ನು ಆರು ದಿನದ ಮಟ್ಟಿಗೆ ಸಸ್ಪೆಂಡ್ ಮಾಡಲಾಗಿತ್ತು. ಕನ್ನಡಿಯಂತೆ ಲಕಲಕಿಸುವ ಸರ್ವೀಸ್ ರಿಕಾರ್ಡ್ ಇರುವ ವ್ಯಕ್ತಿಯು ಸಸ್ಪೆಂಡ್ ಆಗುವಂಥದೇನು ಮಾಡಿರಬೇಕು? ನನಗೆ ತಡೆಯಲಾಗಲಿಲ್ಲ. 'ಸ್ಟಾರ್ಟರ್'ನಿಗೆ ಫೋನ್ ಮಾಡಿದೆ.

"ಹೆಲೊ! ಬಿ. ಸಿ. ನಂ. ೨೦೪ ಸಸ್ಪೆಂಡ್ ಆಗಿ ದ್ದಾನಂತಲ್ಲ?"

"ಯಸ್ ಸರ್."

"ಅವನು ಬಂದರೆ ಒಂದಿಷ್ಟು ನನ್ನ ಕಡೆ ಕಳಿಸಿ ಕೊಡು" ಎಂದೆ.

ಆಗಿನಿಂದ ನಾನು ಅವನ ಬರವಿನ ದಾರಿ ಯನ್ನೇ ಉತ್ಸುಕತೆಯಿಂದ ಕಾಯುತ್ತಿದ್ದೆ. ಅಂತೂ ಒಮ್ಮೆ ಬಂದ. ಅವನ ಮೋರೆಯ ಮೇಲೆ ವಿಷಾದದ-ಚಿಂತೆಯ ಯಾವ ಲಕ್ಷಣಗಳೂ ಮೂಡಿರಲಿಲ್ಲ. ಸಸ್ಪೆಂಡ್ ಆದದ್ದರ ನಿಜವಾದ ಕಾರಣವನ್ನು ಕೆದರಿ ಕೇಳಿದೆ. ಸರಿಯಾಗಿ ಉತ್ತರ ಹೇಳಲಿಲ್ಲ. ಈ ಶಿಕ್ಷೆಯ ವಿರುದ್ಧ ಅಪೀಲು ಮಾಡಿದುದಾಗಿಯೂ ಅದರಲ್ಲಿ ತಾನು ಗೆದ್ದೇ ತೀರುವುದಾಗಿಯೂ ಹೇಳಿದ, ಹೊರಟು ಹೋದ.

ಅವನ ಅರ್ಧಮರ್ಧ ಸುದ್ದಿಯಿಂದ ನನಗೆ ಸಮಾಧಾನವಾಗದೇ ಕೋರ್ಟ್ ಕಾರಕೂನನ ಕಡೆಗೆ ಹೋಗಿ, ಈ ಪ್ರಕರಣದ ಫೈಲನ್ನು ಇಸಿದು ಕೊಂಡೆ. ಕಂಪನಿಯ ಅವಾಢವ್ಯ ವ್ಯವಹಾರ ದಲ್ಲಿ ಇಂಥ ಕೇಸುಗಳು ಎಷ್ಟೋ ಏನೋ. ಈ ಪ್ರಕರಣದಲ್ಲಿ ಆದದ್ದೆಂದರೆ, ಒಬ್ಬ ಫಾರಸೀ ಹೆಣ್ಣುಮಗಳು ತನ್ನ ಸಂಗಡ ಒರಟುತನದಿಂದ ಮಾತನಾಡಿದನೆಂದು ಅವನ ಮೇಲೆ ಫಿರ್ಯಾದು ಮಾಡಿದ್ದಳು. ನನಗೆ ಕಾದಿದ್ದ ಆಶ್ಚರ್ಯವೆಂದರೆ, ನನಗೂ ಅವನಿಗೂ ಜಗಳವಾದ ದಿನವೇ ಈ ಘಟನೆ ನಡೆದಿತ್ತು.

ಅಪೀಲು ಮಾಡಿದಂದಿನಿಂದ ರಾಮಶರಣನಲ್ಲಿ ಭಾರೀ ಬದಲಾವಣೆಯಾಗಿತ್ತು. ಮೂಲೆಯಲ್ಲಿ-ಯ ಬೆಂಚಿನ ಮೇಲೆ ಕುಳಿತುಕೊಂಡು, ತುಳಸೀ ಮಣಿಯ ಮಾಲೆಯನ್ನು ತಿರುಗಿಸುತ್ತಿದ್ದ. ತನ್ನೆಲ್ಲ ವೇಳೆಯನ್ನು ರಾಮಧ್ಯಾನದಲ್ಲಿಯೇ ಕಳೆಯುತ್ತಿ-ದ್ದನೆಂದರೂ ಸರಿ. ಅವನ ಪ್ರಭು ರಾಮಚಂದ್ರ-ಜಿಯು ಸತ್ವಪರೀಕ್ಷೆಯಾಗಲಿತ್ತು.

ಅಪೀಲಿನ ನಿರ್ಣಯ ಹೊರಬೀಳುವವರೆಗೂ ಅತ್ಯಂತ ನಿಶ್ಚಿಂತ ಮುದ್ರೆಯಿಂದ ಇದ್ದ ರಾಮ ಶರಣ, ಅದು ಹೊರಬೀಳುತ್ತಲೂ ಕುಸಿದು ಹೋದನು. ಆ ದಿನ ಸಂಜೆ, ಜನ್ನೆಯ ಪಾವಟಿ-ಗೆಯ ಮೇಲೆ ಮೊಣಕಾಲಿನಲ್ಲಿ ಮುಖವನ್ನು ಹುದುಗಿಸಿ ಕುಳಿತ ಅವನ ವೈದಪವಿ 'ರಾಮ ಶರಣ' ಎಂದೆ. ಆತ ಸುಮ್ಮನಿದ್ದ. ನಾನೇ ಬಲ ವಂತದಿಂದ ಅವನ ಮುಖಪೆತ್ತಿದಾಗ ಅವನು ಅಳುತ್ತಿದ್ದುದು ಕಂಡುಬಂತು. ಅವನನ್ನು ಕೈ ಹಿಡಿದು ಎಬ್ಬಿಸಿ, ಗದ್ದಲವಿಲ್ಲದಲ್ಲಿ ಕರೆದು ಕೊಂಡು ಬಂದೆ.

"ನನಗೆ ನಾಚಿಕೆ ಅನಿಸ್ತದೆ ಸಾಹೇಬ. ನನ್ನ ರಿಕಾರ್ಡಿಗೆ ಮಶೀ ಬಳೀತು"

"ಆ ಹೆಣ್ಣುಮಗಳಿಗೆ ಬೈಯುವಾಗ ನಾಚಿಕೆ ಅನಿಸಲಿಲ್ಲೇನು?"

ರಾಮಶರಣ ತಟ್ಟನೇ ಮುಖಪೆತ್ತಿ ತೀಕ್ಷ್ಣ ವಾಗಿ ನೋಡುತ್ತ—

"ನೀವು ಈ ಮಾತು ಅಂದಿರೆಂದು ಸುಮ್ಮನಿ-

ದ್ದೇನೆ. ಇನ್ನಾರಾದರೂ ಅಂದಿದ್ದರೆ ಚಪ್ಪಲಿಯನ್ನೇ ತೆಗೆಯುತ್ತಿದ್ದೆ."

"ಅಂದರೆ ಆಕೆ ಮಾಡಿದ ಆರೋಪ ಸುಳ್ಳೇನು? ಆದದ್ದಾದರೂ ಏನು ?"

"ಐದು ವರುಷದ ಹುಡುಗನ ಟಿಕೇಟು ತೆಗೆಸಿದ್ದಿಲ್ಲ. ಕೇಳಿದರೆ ಎರಡೂವರೆ ವರ್ಷ ಎಂದಳು."

"ಬಿಟ್ಟುಬಿಡಬೇಕಾಗಿತ್ತು."

"ಅಲ್ಲಿಂದ ಇನಸ್ಪೆಕ್ಟರರು ನನ್ನನ್ನು ಬಿಡುತ್ತಿದ್ದರೆ? ಪಾಪಾಣಿಗೆ ಸುಳ್ಳು ಹೇಳುವುದೆ? ನಾನು ಹುಡುಗನ ಟಿಕೆಟ್ ತೆಗೆಯಲೇಬೇಕೆಂದು ಹೇಳಿ ಹಣ ವಸೂಲ್ ಮಾಡಿದೆ."

"ಹೂಂ. ಅದಕ್ಕೆ ಆಕೆ ಹೀಗೆ ದ್ವೇಷ ಸಾಧಿಸಿದಳೇನು? ಮತ್ತೆ ಯೂನಿಯನ್ನಿನ ಕಡೆ ಈ ಪ್ರಕರಣವನ್ನು ಒಯ್ಯಬಹುದಿತ್ತಲ್ಲ?"

"ಯೂನಿಯನ್? ಹಂ. ಯೂನಿಯನ್ ಬರೇ ಚಂದಾ ಹಿರಿಯಲಿಕ್ಕೆ ಇದೆ ಸಾಹೇಬ್."

ಇಷ್ಟು ನುಡಿದು ರಾಮಶರಣ ಮೇಲೆದ್ದ. ಅವನಿಗೆ ಚಹ ತೆಗೆದುಕೊಳ್ಳಲು ಆಗ್ರಹಪಡಿಸಿದರೂ ಒಪ್ಪಲಿಲ್ಲ.

ಒಂದು ವಾರದ ಶಿಕ್ಷೆಯನ್ನು ಅನುಭವಿಸಿ ರಾಮಶರಣನು ಮತ್ತೆ ತನ್ನ ಡ್ಯೂಟಿಗೆ ಹಾಜರಾದ. ಡ್ಯೂಟಿ ಇಲ್ಲದಾಗ, ತನ್ನ ಆ ನಿರ್ದಿಷ್ಟ ಸ್ಥಳದಲ್ಲಿ ಬಂದು ಕುಳಿತನು. ಅವನ ಮೋರೆ ಸಣ್ಣದಾಗಿತ್ತು. ಕಾಯ ಅಟ್ಟಿಸಿತ್ತು. ಕಣ್ಣು ಒಳ ನಟ್ಟಿದ್ದವು.

ತಿಂಗಳ ಕೊನೆಯ ವಾರ ಮತ್ತೆ ಬಂದಿತು. ದೈನಂದಿನಿಯ ಕಡೆಗೆ ನೋಡಿದೆ. ಇಂದು ನಮ್ಮ ಜಗಳದ ಹುಟ್ಟಿದ ದಿನವಿತ್ತು: ಅಲ್ಲ, ಮೊದಲನೆ ಮಾಸಿಕ ಶ್ರಾದ್ಧ. ರಾಮಶರಣ ಬಂದರೆ ಅವನಿಗೆ ಅದರ ನೆನಪು ಮಾಡಿಕೊಡಬೇಕೆಂದಿದ್ದೆ. ಅವನು ಮರುದಿನ ನನ್ನ ಟೇಬಲ್ಲಿಗೇ ಬಂದ. ಸಸ್ಪೆಂಡ್ ಆಗಿದ್ದರಿಂದ ಸಂಬಳದಲ್ಲಿ ಎಷ್ಟು ಕಡಿತವಾಗಬಹುದೆಂಬ ಲೆಕ್ಕ ಅವನಿಗೆ ಬೇಕಾಗಿತ್ತು. ಅವನ ಸಂಬಳ-ಭತ್ತೆಯ ಗುಣಾಕಾರ ಹಾಕಿದೆ. ಶ್ವಾಸ ನಿರೋಧಿಸಿ ರಾಮಶರಣ ನನ್ನ ಕಡೆಗೆ ನೋಡುತ್ತಿದ್ದ. ಅವನ ಮೂಲ ಪಗಾರವಲ್ಲದೇ ಇತರ ಬಾಬುಗಳಲ್ಲಿಯೂ ಕಡಿತವಾಗುತ್ತಿದ್ದುದರಿಂದ ಕಡಿತದ ಒಟ್ಟು ಮೊತ್ತ ಅವನ ಪಾಲಿಗೆ ದೊಡ್ಡದಾಗಿತ್ತು. ಆ ಅಂಕಿಯನ್ನು ಹೇಗೂ ಹೇಳಿದವನೇ ಅವನ ಮನಸ್ಸನ್ನು ಸಮಾಧಾನಪಡಿಸಲಿಕ್ಕೆಂದು ನಾಲ್ಕಾರು ಜನ ಕಂಡಕ್ಟರರ ಹಳೆಯ ಕಾರ್ಡುಗಳನ್ನು ಹುಡುಕಿ ಆಯ್ದು ಅವನ ಮುಂದೆ ಒಗೆದೆ.

"ಏನಿದು ?" ಎಂದು ರಾಮಶರಣ ಕೇಳಿದ.

"ಸಸ್ಪೆಂಡ್ ಆದ ಕಂಡಕ್ಟರ್ ಜನರ ಕಾರ್ಡ್."

"ಪ್ರತಿ ತಿಂಗಳು ಎಷ್ಟು ಮಂದಿ ಸಸ್ಪೆಂಡ್ ಆಗತಾರೆ, ಸಾಹೇಬರೆ?"

"ಬಹಾಳ ಮಂದಿ. ನಿನಗಿಂತ ಹೆಚ್ಚು ದಿವಸ ಸಸ್ಪೆಂಡ್ ಆದವರು ಎಷ್ಟೋ ಮಂದಿ ಇದ್ದಾರೆ."

"ಏನು ಮಾಡಿದ್ದರು ಇವರು ?"

"ಹೀಗೇ ಏನಾದರೂ. ಯಾರು ಚೌಕಶಿ ಮಾಡುತ್ತಾರೆ ?"

"ನಮಗೆ ಯಾರೂ ತ್ರಾತಾ ಇಲ್ಲವೇ ?"

"ನಿಮ್ಮ ತ್ರಾತಾ ಪ್ರಭು ರಾಮಚಂದ್ರಜೀ."

ನಾನು ಆ ಕೂಡಲೇ ತುಟಿ ಕಚ್ಚಿಕೊಂಡೆ. ಹಾಗೆ ಹಂಗಿಸಬಾರದಿತ್ತು. ನನ್ನ ಉಪರೋಧಕ ಉತ್ತರದಿಂದ ಅವನು ಕಂಗೆಡಲಿಲ್ಲ.

"ಮಾಸ್ತರ ಸಾಬ. ಪ್ರಭು ರಾಮಚಂದ್ರಜೀ ಇದ್ದೇ ಇದ್ದಾನೆ. ಆದರೆ ನಾವು ಕೈಕಾಲು ಅಲುಗಾಡಿಸದೇ—"

"ಅದನ್ನೇ ಹೇಳುತ್ತೇನೆ. ನಮ್ಮ ಅನ್ಯಾಯದ ನಿವಾರಣೆ ಒಬ್ಬನಿಂದ, ಇಬ್ಬರಿಂದ ಆಗುವುದಿಲ್ಲಂತ. ಒಬ್ಬ ಕಂಡಕ್ಟರನಿಗೆ ಕುಳಿತ ಹೊಡೆತ— ಅಂs, ನಡಿ. ಕ್ಯಾಂಟೀನಿಗೆ ಹೋಗೋಣ."

ಕ್ಯಾಂಟೀನಿನಲ್ಲಿ ರಾಮಶರಣ ಅಧೀರನಾಗಿ ಕೇಳಿದ:

"ಏನಂತಿದ್ದಿರಿ, ಮಾಸ್ತರ ಸಾಬ ?"

"ಒಬ್ಬ ಕಂಡಕ್ಟರನಿಗೆ ಕೂತ ಹೊಡೆತ ಐದು ಸಾವಿರ ಮಂದಿ ಕಂಡಕ್ಟರ್ ಡ್ರೈವರರಿಗೆ ಕೂತಿತು ಅಂದರೆ ಒಂದು ಶಕ್ತಿ ನಿರ್ಮಾಣ ಆಗುತ್ತದೆ."

"ನೀವನ್ನುವುದು ಬರೋಬರಿ. ರಾಮಪ್ರಭು ಸರ್ವತ್ರ ಇದ್ದಾನೆ ಅಂತ ನಾವು ಬರೇ ಬಾಯಿಂದ ಹೇಳಿ ಏನು ಪ್ರಯೋಜನ ? ನಾವೂ ಕಾರ ಮಾಡಬೇಕು."

ಚಹ ತೆಗೆದುಕೊಂಡಮೇಲೆ ರಾಮಶರಣ ಎದ್ದ.


ನಾನು ಅಭಿಮಾನದಿಂದ ಹೇಳುತ್ತೇನೆ
...ನಾನು ಗ್ಲಾಕ್ಸೋ ಮಗು. ಇದೇ ಕಾರಣದಿಂದ ನಾನು
ತಾಯಿಯ ಹಾಲು ಕುಡಿದು ಬೆಳೆಯುವ ಉತ್ತಮೋತ್ತಮ
ಮಗುವಿನಷ್ಟೇ ಶಕ್ತಿಶಾಲಿ, ಆರೋಗ್ಯವಂತ ಮತ್ತು
ಸಂತುಷ್ಟನಾಗಿದ್ದೇನೆ. ತಾಯಿಯ ಸರ್ವೋತ್ಕೃಷ್ಟ
ಹಾಲಿನಲ್ಲಿ ಯಾವ ಗುಣಗಳಿವೆಯೋ ಅವೆಲ್ಲ
ಗ್ಲಾಕ್ಸೋದಲ್ಲಿಯೂ ಇವೆ. ಉಚಿತವಾಗಿ
ಸಿಗುವ 'ಗ್ಲಾಕ್ಸೋ ಶಿಶು ಪುಸ್ತಕ'ದ
ಒಂದು ಪ್ರತಿಯನ್ನು ಪಡೆಯಲು
೫೦ ನಯೆ ಪೈಸೆಗಳ ಅಂಚೆ
ಚೀಟಿಯನ್ನು (ಅಂಚೆ
ಖರ್ಚಿಗಾಗಿ) ಗ್ಲಾಕ್ಸೋ,
ವರ್ಲಿ, ಮುಂಬಯಿ-೧೮
ಅವರಿಗೆ ಕಳುಹಿಸಿರಿ.
Glaxo
ಗ್ಲಾಕ್ಸೋ—ಶಿಶುಗಳ ಪರಿಪೂರ್ಣ ದುಗ್ಧ-ಆಹಾರ
ಗ್ಲಾಕ್ಸೋ ಲ್ಯಾಬೊರೇಟರೀಸ್ (ಇಂಡಿಯಾ) ಪ್ರೈವೇಟ್ ಲಿ.
ಮುಂಬಯಿ • ಕಲ್ಕತ್ತ • ಮದ್ರಾಸ್ . ನವ ದೆಹಲಿ

"ಹೋಗತೇನೆ ಸಾಹೇಬ್, ಡ್ಯೂಟಿ ವೇಳೆ ಆಯಿತು."

"ಎಂಟು ದಿನದಲ್ಲಿ ಎಷ್ಟು ಸೊರಗಿರುವಿ!"

"ಬರೇ ಹಾಲಿನ ಮೇಲಿದ್ದೆ, ಸಾಹೇಬ್, ಇಡೀ ವಾರಾ."

"ವ್ಯರ್ಥ ತ್ರಾಸ ಮಾಡಿಕೊಂಡಿ."

"ವ್ಯರ್ಥ ಹೇಗಂತೀರಿ ಮಾಸ್ತರ ಸಾಬ್? ಒಳಗೊಳಗೆ ಕುದಿಯಲಿಕ್ಕೆ ಹತ್ತಿದ್ದೇನೆ. ನನ್ನ ರಿಕಾರ್ಡಿಗೆ ಮಸಿ ಹತ್ತಿತು. ನನ್ನ ಹಾಗೆ ಇನ್ನೂ ಎಷ್ಟೋ ಜನರಿಗೆ ಅನ್ಯಾಯ ಆಗಿದೆ ಅಂತ ಹೊಟ್ಟೆಯೊಳಗೆ ತಳಮಳ ಆಗುತ್ತದೆ."

೩

ಈ ಘಟನೆ ನಡೆದು ಒಂದು ವರ್ಷ ಸರಿಯಿತು. ಆ ವರ್ಷವೂ ಘಟನೆಗಳು ನಡೆದುಹೋದವು. ನನ್ನ ಮುಖ್ಯ ಮುನೀಮನ ಸ್ಥಳ ಕಾಯಂ ಆಗಿ ಹಳೆಯ ಮಾತಾಗಿದ್ದಿತು. ನನಗೆ ಚೀಫ್ ಕ್ಲಾರ್ಕನ ಹುದ್ದೆ ದೊರೆಯಲಿದೆಯೆಂಬ ಸುದ್ದಿ ಕೇಳಬರುತ್ತಿತ್ತು. ಒಂದು ದಿನ, ಅದಕ್ಕಾಗಿ ಸಾಹೇಬರಿಂದ ಕರೆ ಬಂದಾಗ, ಎಲ್ಲರೂ ನನ್ನನ್ನು ಅಭಿನಂದಿಸುವವರೇ.

ನಾನು ಒಳಗೆ ಹೋದಕೂಡಲೇ ಸಾಹೇಬರು ತಾವು ಮಾಡುತ್ತಿದ್ದ ಕೆಲಸವನ್ನು ಬದಿಗಿರಿಸಿ "ಕೂಡ್ರಿ! ನಿಮಗೆ ಒಂದು ಆನಂದದ ಸುದ್ದಿಯನ್ನು ಹೇಳುವುದಿದೆ. ನೀವು ಈ ಇಡೀ ಆಫೀಸಿನ ಚೀಫ್ ಕ್ಲಾರ್ಕ್ ಆದಿರೆಂದರೆ— ಬೇಗ ಆಗುವವರೇ ಇದ್ದೀರಿ, ನಿಮ್ಮ ನೇಮಕದ ಆರ್ಡರ್ ಟಿ. ಎ. ಓನ ಕಡೆಗೆ ಹೋಗಿದೆ. ಒಂದೆರಡು ದಿನದಲ್ಲಿ ಬರಬಹುದು."

ಇಷ್ಟು ನುಡಿದು ಸಾಹೇಬರು ಮತ್ತೆ ಕೆಲಸದಲ್ಲಿ ತೊಡಗಿದರು.

"Thank you, Sir" ಎಂದು ಹೇಳಿ ನಾನು ಹೊರಡಹತ್ತಲು, ಅವರು ಸನ್ನೆ ಮಾಡಿ ಕೂಡ್ರಿಸಿದರು.

"ನಿಮ್ಮ ಸಂಗತಿ ಒಂದಿಷ್ಟು ಖಾಸಗೀ ವಿಷಯ ಮಾತನಾಡುವುದಿದೆ. ನಾನೀಗ ಆಫೀಸರ್ ಎಂದಲ್ಲ, ನಿಮ್ಮ ಒಬ್ಬ ಹಿತಚಿಂತಕನೆಂಬ ನಾತೆಯಿಂದ ಹೇಳುತ್ತಿದ್ದೇನೆ. ಒಂದಿಷ್ಟು ಸಾರಾಸಾರ ವಿಚಾರ ಇಟ್ಟುಕೊಂಡಿರೆಂದರೆ ನನ್ನ ಈ ಕುರ್ಚಿಯ ಮೇಲೆ ಕೂಡ್ರುವ ಯೋಗವೂ ನಿಮಗೆ ಬಂದೀತು. ಆಫೀಸರ್ ಆಗಲಿಕ್ಕೆ ಬೇಕಾಗುವ ಚಲಾಖ್ ಬುದ್ಧಿ, ಕರ್ತೃತ್ವಶಕ್ತಿ ಇವು ನಿಮ್ಮಲ್ಲಿ ಇವೆ. ಆದರೆ ಇವುಗಳ ಜೊತೆಗೆ ಮುಂಧೋರಣೆಯೂ ಬೇಕಾಗುತ್ತದೆ. ಉದಾಹರಣಾರ್ಥ ನೀವು ಮೇಲೆ ಹೋದಹಾಗೆಲ್ಲ ಯೂನಿಯನ್ನಿನ ಸಂಬಂಧ ಬಿಡಬೇಕಾಗುತ್ತದೆ."

"ಈಚೆಗೆ ನಾನು ಯೂನಿಯನ್ನಿನ ಸಂಗಡ ಏನೂ ಸಂಪರ್ಕವನ್ನಿಟ್ಟುಕೊಂಡಿಲ್ಲ. ಯಾಕೆ, ನನ್ನ ಮಾತಿನ ಮೇಲೆ ವಿಶ್ವಾಸವಿಲ್ಲವೆ?"

"ಹಾಗೇನಿಲ್ಲ. ಶಬ್ದಶಃ ಅರ್ಥ ಮಾಡಿದರೆ ನಿಮ್ಮ ಅಂಬೋಣ ಸತ್ಯವಿರಬಹುದು. ಆದರೆ-"

"ಹೇಳ್ರಿ ಸಾಹೇಬರೇ, ಸಂಕೋಚ ಮಾಡಿಕೊಳ್ಳಬೇಡಿರಿ."

"ಬಿ. ಸಿ. ನಂ. ೨೦೮ ಹೊತ್ತುಗೊತ್ತು ಇಲ್ಲದೆ ನಿಮ್ಮ ಕಡೆಗೆ ಬರುತ್ತಾನೆ."

"ಹೌದು."

"ನಿಮ್ಮನ್ನು ಕ್ಯಾಂಟೀನಿಗೂ ಕರಕೊಂಡು ಹೋಗುತ್ತಾನೆ. ಇದು ನೋಡ್ರಿ. ಅವ ಯೂನಿಯನ್ನಿನೊಳಗೆ ಸೇರಿಕೊಂಡ ಹೊಸಾ ರಿಕ್ರೂಟ್. ಹುಷಾರ್ ಇದ್ದಾನೆ. ಯೂನಿಯನ್ನಿನೊಳಗೆ ಅವನ ಕೆಲಸ ಬಹಳ ಬೆಳದಿದೆ. ಇಂಥಾ ವ್ಯಕ್ತಿ ಮೇಲಿಂದ ಮೇಲೆ ನಿಮ್ಮ ಕಡೆ ಬರುವುದು—"

"ಅವ ಯೂನಿಯನ್ನಿನ ಮುಖ ಸಹಿತ ನೋಡದಿದ್ದ ಕಾಲದಿಂದ ನನ್ನ ಕಡೆ ಬರುತ್ತಾನೆ—"

"ನನಗೆ ಗೊತ್ತಿದೆ, ನಾನೇ ಅಲ್ಲೇನು ನಿಮ್ಮ ಅವತ್ತಿನ ಜಗಳ ಬಿಡಿಸಿದವ? ಅದೇ ವ್ಯಕ್ತಿ ಇಂದು ನಮ್ಮ ಮುಂದೆ ಎಂಥೆಂಥಾ ಮುದ್ದೆಗಳನ್ನು ಚಾಚುತ್ತಾನೆ. ಅವು ಅವನ ತಿಳಿವಳಿಕೆ ಮೀರಿದವಾಗಿವೆ. ೯೧೦ ಡ್ರೈವರನ ಕೇಸು ನಿಮಗೆ ಗೊತ್ತಿರಬೇಕು. ತುಂಬಿದ ಸಭೆಯೊಳಗೆ ನಿಮ್ಮ ೨೦೮ ಹೇಳಿದ— '೯೧೦ ನಂಬರಿನವನ ಬಡತಿ, ಆರು ತಿಂಗಳು ಮುಂದೂಡೋ ವಿಚಾರವನ್ನು ಕಂಪನಿಯವರು ಮೊದಲೇ ಮಾಡಿದ್ದರು ಅಂತ; ಚೌಕಶಿಯ ಫಾರ್ಸ್ ಮಾಡಿದರು ಅಂತ. ಇಂಥಾ ಆರೋಪದಿಂದ ಕಂಪನಿಗೆ ಏನೂ ಆಗೋದಿಲ್ಲ, ನಿಜ. ಆದರೆ ಆಫೀಸಿನ ಒಳಗಿನ ಈ ಸುದ್ದಿ

ತಿಂಲ ಗೆ ಹೇಗೆ ಗೊತ್ತಾಗುತ್ತದೆ ಅಂತ 'ಟಿ. ಸಿ.' ಯವರು ಮೀಟಿಂಗಿನಲ್ಲಿ ಪ್ರಸ್ತಾಪಿಸಿ ಅದನ್ನು ಕಂಡುಹಿಡಿಯಲಿಕ್ಕೆ ಹೇಳಿದರು."

"ಇದರಲ್ಲಿ ನಂದೇನೂ ಸಂಬಂಧ ಇಲ್ಲ."

"ನನಗೆ ವಿಶ್ವಾಸ ಇದೆ. ಆದರೆ ನಿಮ್ಮ ಅವನ ಸಂಬಂಧ ಎಲ್ಲರಿಗೂ ಗೊತ್ತಿರುವಾಗ ಉಳಿದವರು ಅದನ್ನು ನಂಬಲಿಕ್ಕಿಲ್ಲ. ಇನ್ನೂವರೆಗಂತೂ ನಿಮ್ಮ ಹೆಸರು ಏನೂ ಬಹಿರಂಗಕ್ಕೆ ಬಂದಿಲ್ಲ. ವಿಚಾರ ಮಾಡಿರಿ. ಇಂಥಾ ಜನರು, ಇಲ್ಲೇ ಯಾಕೆ, ಇತರ ರೀತಿಯಿಂದಲೂ ನಿಮ್ಮ ಸಂಬಂಧದೊಳಗೆ ಬರುವುದು ನಿಮ್ಮ ಮುಂದಿನ ಶ್ರೇಯಸ್ಸಿನ ದೃಷ್ಟಿಯಿಂದ ಒಳ್ಳೆಯದಲ್ಲ."

"ನನಗೆ ಅವನೊಡನೆ ಬರೇ ಸ್ನೇಹ ಇದೆ."

"ಬಸ್ ಕಂಡಕ್ಟರನ ಜೋಡಿ?"

"ನೋಡಲಿಕ್ಕೆ ವಿಚಿತ್ರ ಅನಿಸಬಹುದು. ನಾನು ಅಂದರೆ ಅವನು ಜೀವ ಬಿಡತಾನೆ. ಆದರದಿಂದ ಕಾಣುತಾನೆ. ಆದರೆ ಕಂಪನಿಯ ಗುಪ್ತಸುದ್ದಿಯನ್ನು ಅವನ ಮುಂದೆ ಹೇಳುವಷ್ಟು ಬೇಜವಾಬ್ದಾರಿತನ ನಾ ಮಾಡಬಹುದೆ?"

"ಅಲ್ಲರೀ, ಇದು ನನಗೆ ಒಪ್ಪಿಗೆ ಇದೆ ಅಂತ ಹೇಳಿದೆನಲ್ಲ ಆದರೆ ಅನ್ಯರಿಗೆ ಏನು ಹೇಳುವುದು? ಇದು ನೋಡ್ರಿ. ನಿಮ್ಮ ಖಾಸಗೀ ವಿಷಯದೊಳಗೆ ಇದಕ್ಕೂ ಹೆಚ್ಚು ಕೈಹಾಕುವ ಇಚ್ಛೆ ನನಗಿಲ್ಲ. ಇಷ್ಟೇ, ನಿಮ್ಮ ಭವಿಷ್ಯದ್ದು, ನಿಮ್ಮ ಕುಟುಂಬದ್ದು—ಈ ದೃಷ್ಟಿಯಿಂದಲೂ ವಿಚಾರ ಮಾಡಿ ನಿಮಗೆ ಸರಿಕಂಡಂತೆ ನಡೆದುಕೊಳ್ಳಿರಿ. ನೀವು ಹೋಗಬಹುದು."

ಕಳೆದ ವರುಷದಿಂದ ರಾಮಶರಣ ಯೂನಿಯನ್ನಿನಲ್ಲಿ ಕೆಲಸ ಮಾಡಹತ್ತಿದ್ದ. ಈ ಅಲ್ಪಾವಕಾಶದಲ್ಲಿ ಅವನು ಆ ಸಂಘಟನೆಯ ಮುಖವನ್ನೆ ಬದಲಿಸಿಬಿಟ್ಟಿದ್ದ. ಯೂನಿಯನ್ ಎಂದರೆ ಈಗ ಸಾಮರ್ಥ್ಯಶಾಲಿ ಸಂಘಟನೆಯಾದದ್ದರ ಸಾಕ್ಷಾತ್ಕಾರ ಕಾರ್ಮಿಕರಿಗೆ ಬರತೊಡಗಿತು. ಅದರ ಎಲ್ಲ ಶ್ರೇಯಸ್ಸು ರಾಮಶರಣನದು. ಆದರೆ ರಾಮಶರಣನನ್ನು ಯಾರು ನಿರ್ಮಾಣ ಮಾಡಿದರು? ವಾಸ್ತವಿಕವಾಗಿ ಕಂಪನಿಯೇ ನಿರ್ಮಾಣ ಮಾಡಿತ್ತು.

ಸಸ್ಪೆಂಡ್ ಆದದ್ದರಿಂದ ತನಗೆಷ್ಟು ಹಾನಿಯಾಗಿದೆಯೆಂದು ಕೇಳಿಕೊಂಡು ಹೋದ ಒಂದು ವಾರದ ನಂತರ ರಾಮಶರಣ ಒಂದು ದಿನ ಅಕಸ್ಮಾತ್ತಾಗಿ ನನ್ನ ಮನೆಗೇ ಬಂದ. ಮಲಮಲ್ ಅರಿವೆಯ ಜುಬ್ಬಾ, ಹುರಿ ಹಾಕಿದ ಮೀಸೆ, ವ್ಯವಸ್ಥಿತವಾಗಿ ಬಾಚಿದ ಕೂದಲು, ಹಿಂಬದಿ ತೊನೆದಾಡುತ್ತಿದ್ದ ಚಂಡಿಕೆ- ಈ ವೇಷಭೂಷಣದಲ್ಲಿ ಬಂದ ರಾಮಶರಣ ಇಡೀ ನಮ್ಮ ಚಾಳಿನಲ್ಲಿ ಚರ್ಚೆಯ ವಿಷಯವಾದ.

ಮನೆಯ ಒಳಕ್ಕೆ ಬಂದ ಮೇಲೆ, ಕೂಡ್ರಲು ಹೇಳಿದರೂ ನಿಂತುಕೊಂಡೇ ಮಾತಾಡಬಯಸಿದ. ನಾನು ಅವನನ್ನು ಒತ್ತಾಯದಿಂದ ಕೂಡ್ರಿಸಿದೆ.

"ಇದು ನೋಡು. ನೀನೇನು ಆಫೀಸಿಗೆ ಬಂದಿಲ್ಲ. ತಿಳೀತೆ ? ಏನು ಕೆಲಸವಿತ್ತು ಹೇಳು."

"ಸಾಹೇಬ, ನಮ್ಮ ಸಂಬಳದಲ್ಲಿ ಒಂದಿಲ್ಲೊಂದು ರೀತಿಯಿಂದ ರೊಕ್ಕ ಹೇಗೆ ಕತ್ತರಿಸುತ್ತಾರೆ, ಇದರ ಪತ್ತೆಯೇ ಆಗುವುದಿಲ್ಲ. ಹೋದ ಸಂಬಳದಲ್ಲಿ ೩೨೫ ಜನ ಬಸ್ ಡ್ರೈವರರದು ರೂ. ೨೫ ಯಂತೆ ಕಟ್ ಆಗಿದೆ."


"ಈಗ ಎಚ್ಚರ ಬಂತು ಕಾಣಿಸ್ತದೆ ನಿಮಗೆ!" ಎಂದು ನುಡಿದು, ಸ್ವಲ್ಪದರಲ್ಲಿ ಆ ಕಡಿತದ ಬಗೆಯನ್ನು ವಿವರಿಸಿದೆ. ಅವನ ಕೈಯಲ್ಲಿ ಒಂದು ನೋಟುಬುಕ್ ಕಂಡಿತು.

"ಅದೇನು ? ಯಾತರ ವಹಿ ತಂದಿದ್ದಿ?"

"ಎಲ್ಲಾ ಕಾಯದೆ, ನಿಯಮ ಬರೆದು ತೆಗಿಯಬೇಕೆಂದು ಮಾಡಿದ್ದೇನೆ."

ಪ್ರಭು ರಾಮಚಂದ್ರನ ಚಿಂತನದಲ್ಲಿ ವ್ಯಯಿಸುತ್ತಿದ್ದ ಎಲ್ಲ ವೇಳೆಯನ್ನು ಈಗ ರಾಮಶರಣ ಕಂಪನಿಯ ಕಾನೂನು, ನಿಯಮಗಳನ್ನು ತಿಳಿದುಕೊಳ್ಳುವುದರಲ್ಲಿ ವ್ಯಯಿಸುತ್ತಿದ್ದ. ಸರ್ವೀಸ್ ಕಂಡೀಶನ್ ಕೋಡನ್ನು ಮುಖೋದ್ಗತವಾಗಿ ಮಾಡಿಕೊಂಡ. ಇಂಗ್ಲೀಷ್ ಅಭ್ಯಾಸಕ್ಕೂ ತೊಡಗಿದ.

ಪ್ರತಿ ತಿಂಗಳು ತಕರಾರಿನ ಅರ್ಜಿಗಳನ್ನು ತೆಗೆದುಕೊಂಡು ರಾಮಶರಣ ಆಫೀಸಿಗೆ ಬರುವುದು ನಿತ್ಯಕ್ರಮವಾದಂತಾಯಿತು. ಅವನು ಶೋಧಿಸಿ ತೆಗೆಯುವ ಶಂಕೆಗಳನ್ನು ಕುರಿತು ಗಂಭೀರವಾಗಿ ವಿಚಾರ ಮಾಡಬೇಕಾಗುತ್ತಿತ್ತು.







ರಾಮಶರಣನ ವೇಷ ಮುಂಚಿನಂತೆಯೇ ಇತ್ತು: ಹಣೆಗೆ ಗಂಧವಿರುತ್ತಿತ್ತು. ಕೊರಳಲ್ಲಿ ತುಳಸಿಯ ಮಾಲೆಯೂ ಇತ್ತು. ಒಂದೇ ಬದಲಾವಣೆ ಯೆಂದರೆ, ಅವನ ಕಣ್ಣಲ್ಲಿ ಆತ್ಮವಿಶ್ವಾಸದ ದೀಪ್ತಿ ಬೆಳಗುತ್ತಿತ್ತು. ಪ್ರತಿ ತಿಂಗಳು ಅವನ ರಜೆಯ ಕಾರ್ಡಿನ ಮೇಲೆ ನಾಲ್ಕು ನಾಲ್ಕು ದಿನದ ರಜೆಯು ನಮೂದಿತವಾಗಿರುತ್ತಿತ್ತು. ಸ್ಟಾರ್ಟರ್, ಇನ್‌ಸ್ಪೆಕ್ಟರ್, ಸುಪೆರವಾಯಿಜರ್ ಜನ ಒಳಗೊಳಗೆ ಅವನಿಗೆ ಅಂಜತೊಡಗಿದರು.

೪

ಕಂಪನಿಯ ಇತಿಹಾಸದಲ್ಲೇ ಅಂಥ ದೊಡ್ಡ ಸಂಪು ಆಗಿರಲಿಲ್ಲ: ತಾಸೆರಡು ತಾಸಿನ ಅವಧಿ ಯಲ್ಲಿ ನಗರದಲ್ಲಿಯ ಎಲ್ಲ ಬಸ್ಸುಗಳು ನಿಂತಲ್ಲಿ ನಿಂತುಬಿಟ್ಟವು. ಸಾವಿರಾರು ಕಂಡಕ್ಟರ್, ಡ್ರೈವರ್ ಜನರು "ಗೋಲ್ ನಾಕೆ"ಯ ಹತ್ತಿರ ಗುಂಪುಗೂಡಿದ್ದರು. ಉನ್ಮತ್ತ ವಿಶ್ವಾಸದಿಂದ ಕೂಡಿದವರಾಗಿ ಚರ್ಚೆ ನಡೆಸಿದ್ದರು.

ಊರಲ್ಲಿ ಹೊಡೆದಾಟ, ರಕ್ತಪಾತ, ಲಾಠೀ ಚಾರ್ಜ್, ಕೈಸೆರೆಗಳ ಸತ್ರ ಆರಂಭವಾಗಿದೆ ಯೆಂದು ಸುದ್ದಿ ಬರತೊಡಗಿತು. ಬೆಳಗಿನ ಎಂಟಕ್ಕೆ ಮೊದಲಾದ ಸಂಪು ಅಪರಾಹ್ನ ಇಳಿದು ಹೋದರೂ ಮುಕ್ತಾಯವಾಗುವ ಚಿಹ್ನೆ ತೋರ ಲಿಲ್ಲ. ಬಸ್ ವರ್ಕ್‌ಶಾಪಿನ ಜನರೂ ಸಂಪಿ ನಲ್ಲಿ ಭಾಗ ವಹಿಸುವ ವಿಚಾರದಲ್ಲಿದ್ದರು. ನಾಲ್ಕು ಗಂಟೆಯ ಹೊತ್ತಿಗೆ, ರಾಮಶರಣನನ್ನೂ ಇತರ ಐದಾರು ಜನರನ್ನೂ ಬಂಧಿಸಿದ ವರ್ತ ಮಾನ ಬಂದಿತು. ಬಂಧನಸತ್ರದಿಂದ ಪರಿಸ್ಥಿತಿ ಇನ್ನಷ್ಟು ಉಗ್ರವಾಯಿತು.

ಐದೂವರೆ ಗಂಟೆಗೆ ಕಚೇರಿ ಮುಗಿದೊಡನೆ ನಾನು ಗೋಲ್ ನಾಕೆಗೆ ಧಾವಿಸಿದೆ. ತುಸು ಹೊತ್ತಿನಲ್ಲಿ ರಾಮಶರಣ ಹಾಗೂ ಇನ್ನಿತರರ ಬಿಡುಗಡೆಯಾಗಿವೆಯೆಂದೂ ಅವರು ಇತ್ತ ಕಡೆಗೇ ಬರಹೊರಟಿದ್ದಾರೆಂದೂ ವಾರ್ತೆ ಬಂತು. ಮಾಲಕ ಕೆಲಸಗಾರರಲ್ಲಿ ಒಪ್ಪಂದವಾಗಿದ್ದು, ಬೇಗನೇ ಬಸ್ ಓಡಾಟ ಸುರುವಾಗುವುದೆಂದೂ ಸುದ್ದಿ ಬಂತು.

ತುಸು ಹೊತ್ತಿನ ಮೇಲೆ ರಾಮಶರಣನು ನಾಲ್ಕೈದು ಜನ ಸಹಕಾರಿಗಳೊಡನೆ ಬಂದನು. ಜನ ಅವನನ್ನು ಸುತ್ತುಗಟ್ಟಿ ನಿಂತಿತು. ಅವರಿಂದ ದಾರಿ ಬಿಡಿಸಿಕೊಂಡು, ಗೋಲ್ ನಾಕೆಯ ಎತ್ತ ರದ ಕಟ್ಟೆಯ ಮೇಲೆ ನಿಂತು. ರಾಮಶರಣ, ತಮ್ಮ ಬೇಡಿಕೆಗಳನ್ನು ಬಹುಮಟ್ಟಿಗೆ ಮಾನ್ಯಮಾಡಿ ದ್ದಾಗಿಯೂ, ಬಸ್ಸುಗಳನ್ನು ಪೂರ್ವವತ್ ಆರಂಭಿ ಸಬೇಕೆಂದೂ ಹೇಳಿ ಕೆಳಗಿಳಿದನು. ಐದೇ ಮಿನಿ ಟಿನ ಭಾಷಣ. ಆದರೂ ಜನ ತವಕದಿಂದ ಕೇಳು ತ್ತಲಿದ್ದಿತು. ಅಲ್ಲಿಂದ "ಯೂನಿಯನ್ ಝಿಂದಾ ಬಾದ್", "ರಾಮಶರಣ ಝಿಂದಾಬಾದ್" ಎಂಬ ಜಯಜಯಕಾರದಿಂದ ನಮ್ಮೆಲ್ಲರ ಕಿವಿ ಗಡ ಚಿಕ್ಕಿದುವು.

ಆ ಗದ್ದಲದಲ್ಲೇ ನಾನು ದಾರಿ ಮಾಡಿ ಕೊಂಡು, ಅವನ ಹತ್ತಿರ ಹೋಗಿ, ಅವನ ಹೆಗಲ ಮೇಲೆ ಕೈಯಿರಿಸಿದೆ.

"ಸಾಬ್! ಆಪ್?" ಅವನು ಬೆಚ್ಚಿ ನುಡಿದ. ಇಬ್ಬರೇ ತುಸು ದೂರ ನಡೆದು ಬಂದೆವು.

"ರಾಮಶರಣ, ನಿನ್ನ ಜಯಜಯಕಾರ ನಡೆ ದಿದೆ" ಎಂದೆ ನಾನು.

ರಾಮಶರಣ ನಕ್ಕು, ಸಂಪಿನ ಕಾರಣವನ್ನು ನನಗೆ ವಿವರಿಸತೊಡಗಿದ. ಫಾಸ್ಟ್ ಡ್ರೈವಿಂಗ್ ಮಾಡಿದ್ದಕ್ಕೆ ಒಬ್ಬನನ್ನು ಸಸ್ಪೆಂಡ್ ಮಾಡಲಾ-ಗಿತ್ತು. ಎಲ್ಲ ಉಪಾಯ-ಯೋಜನೆಯನ್ನು ಕೈ ಕೊಂಡ ಮೇಲೆ ಯೂನಿಯನ್ನಿನವರು ಸಂಪಿನ ಅಸ್ತ್ರವನ್ನು ಹಿರಿದಿದ್ದರು. ಸಂಪಿನ ಪ್ರಯುಕ್ತ, ಸಂಘಟನೆಯ ನಿಮಿತ್ತ ರಾಮಶರಣ ಹಗಲಿರುಳೆ ನ್ನದೆ ಶ್ರಮಿಸಿದ್ದ. ಸಂಪಿನಲ್ಲಿ ಭಾಗ ವಹಿಸಲು ಅಳುಕಿದ ಒಬ್ಬ ಡ್ರೈವರನ ಬಸ್ಸಿನ ದಾರಿಯಲ್ಲಿ ಅಡ್ಡ ಬಿದ್ದು ಹೇಳಿದ್ದ: "ಎಚ್ಚರಿರಲಿ! ರಾಮ ಶರಣನ ಹೆಣದ ಮೇಲಿಂದ ಬಸ್ಸು ಒಯ್ಯಬೇಕಾ ದೀತು" ಎಂದು. ಆ ಬಸ್ಸಿನ ಬೆನ್ನಿಗೆ ಇತರ ಬಸ್ಸು ಗಳೂ ಸಾಲುಗಟ್ಟಿ ನಿಂತವು.

ರಾಮಶರಣನ ಜೀವನದಲ್ಲಿ ಈ ಸಂಪು ಮಹ ತ್ವದ ಘಟನೆಯಾಯಿತು. ಇಪ್ಪತ್ತುನಾಲ್ಕು ಗಂಟೆಯಲ್ಲಿ ಅವನು ವಿರಾಟ್ ರೂಪಧಾರಣ ಮಾಡಿದ. ಅವನಿಂದಾಗಿ ಯೂನಿಯನ್ ಭೀಮ ಬಲದಿಂದ ಬೆಳೆಯಹತ್ತಿತ್ತು. ಸಾವಿರ ಜನ ಕ್ಕಿಂತ ಎತ್ತರವಾದ ವ್ಯಕ್ತಿತ್ವವನ್ನು ಬೆಳೆಸಿ

# ಅಧಿಕ ಹಾಲು! ಅಧಿಕ ವನಸ್ಪತಿ!

ನಮ್ಮ ಆಹಾರವು ಚೆನ್ನಾಗಿ ಸಂತುಲಿತವಾಗಿರುವುದಕ್ಕೆ ನಾವು ಪ್ರತಿ ದಿನವೂ ಕಡಿಮೆಪಕ್ಷ 280 ಗ್ರಾಮ್ ಹಾಲನ್ನು ಸೇವಿಸಬೇಕೆಂದು ಆಹಾರಶಾಸ್ತ್ರಜ್ಞರು ಹೇಳುತ್ತಾರೆ. ಹಾಲಿನಲ್ಲಿ ಪ್ರೋಟೀನ್‌ಗಳು, ಖನಿಜ ಸತ್ವಗಳು, ವಿಟಮಿನ್‌ಗಳು ಮತ್ತು ಸ್ನಿಗ್ಧ ಪದಾರ್ಥಗಳು ಸಮೃದ್ಧವಾಗಿದ್ದು ಅದು ಸ್ವತಃ ಒಂದು ಪರಿಪೂರ್ಣ ಆಹಾರವಾಗಿರುತ್ತದೆ. ಶಾಕಾಹಾರಿಗಳಂತೂ ಅತ್ಯಾವಶ್ಯಕವಾದ ಪ್ರಾಣಿಜನ್ಯ ಪ್ರೋಟೀನ್‌ಗಳನ್ನು ಕೇವಲ ಹಾಲಿನಿಂದ ಪಡೆಯಬಲ್ಲರು. ಆದರೆ, ದುರ್ಭಾಗ್ಯದಿಂದ ಈಗ ನಮ್ಮ ದೇಶದಲ್ಲಿ ಕುಡಿಯುವುದಕ್ಕೂ ಹಾಲಿನ ಬೇರೆ ಬೇರೆ ಪದಾರ್ಥಗಳನ್ನು ತಯಾರಿಸುವುದಕ್ಕೂ ಪ್ರತಿ ವ್ಯಕ್ತಿಗೆ ಪ್ರತಿ ದಿನಕ್ಕೆ ಒಟ್ಟು 140 ಗ್ರಾಮ್ ಹಾಲು ಮಾತ್ರ ಸಿಗಬಲ್ಲುದು... ಮತ್ತು ನಮ್ಮ ತೃತೀಯ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿಯೂ ಈ ಪ್ರಮಾಣ 145 ಗ್ರಾಮ್‌ನಷ್ಟೇ ಆಗುವುದು.

ನಮ್ಮಲ್ಲಿ ಸಾಗಾಣಿಕೆಗೆ ಅನುಕೂಲತೆಗಳು ಹೆಚ್ಚಿದಂತೆ ಮತ್ತು ಅಧಿಕ ಸುವ್ಯವಸ್ಥಿತ ಡೇರಿಗಳು ಸಂಸ್ಥಾಪಿತವಾದಂತೆ ಕುಡಿಯಲು ಹೆಚ್ಚೆಚ್ಚು ಹಾಲು ಸಿಗು




ವುದು. ಇದರಿಂದ ಹಾಲು ಕುಡಿಯುವವರಿಗೆ ಮಾತ್ರವಲ್ಲ, ಹಾಲಿನವರಿಗೂ ಲಾಭವಾಗುವುದು. ಏಕೆಂದರೆ, ಹಾಲಿನಿಂದ ಬೇರೆ ಬೇರೆ ಪದಾರ್ಥಗಳನ್ನು ತಯಾರಿಸಿ ಮಾರುವುದಕ್ಕಿಂತ ಹಾಲನ್ನೇ ಮಾರಿದರೆ ಅವರಿಗೆ ಹೆಚ್ಚು ಬೆಲೆ ಸಿಗುತ್ತದೆ.

ಆದರೆ, ಜನರು ಹಾಲನ್ನೇ ಹೆಚ್ಚು ಕುಡಿದರೆ ತುಪ್ಪದ ಉತ್ಪಾದನೆಯು ಕಡಿಮೆಯಾಗುವುದು. ಇಂತಹ ಪರಿಸ್ಥಿತಿಯಲ್ಲಿ, ಜಗತ್ತಿನ ಇತರ ಪ್ರಗತಿ ಹೊಂದಿದ ದೇಶಗಳಂತೆಯೆ ಭಾರತದಲ್ಲಿಯೂ ತುಪ್ಪದಂತಹ ಗಟ್ಟಿಯಾದ ಸ್ನಿಗ್ಧ ಪದಾರ್ಥಗಳಿಗಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ವನಸ್ಪತಿ ಕ್ರಮೇಣ ಪೂರೈಸುವುದು. ಡೇರಿ ಉದ್ದಿಮೆಯಲ್ಲಿ ಒಳ್ಳೆಯ ಪ್ರಗತಿ ಹೊಂದಿರುವ ಮತ್ತು ಬೆಣ್ಣೆಯನ್ನು ಧಾರಾಳವಾಗಿ ಉತ್ಪಾದಿಸುವ ಡೆನ್‌ಮಾರ್ಕ್ ಮತ್ತು ಹಾಲೆಂಡ್‌ನಲ್ಲಿಯೂ ನಮ್ಮ ದೇಶದ ವನಸ್ಪತಿಯಂತಹ ಸಸ್ಯೋತ್ಪನ್ನ ಸ್ನಿಗ್ಧ ಪದಾರ್ಥವೇ ಹೆಚ್ಚಾಗಿ ಬಳಸಲ್ಪಡುತ್ತದೆ. ವಿಟಮಿನ್ ಸೇರಿಸಲ್ಪಡುವ ವನಸ್ಪತಿಯು ಹಾಲಿನಿಂದ ತಯಾರಿಸಲ್ಪಡುವ ಪರಿಶುದ್ಧವಾದ ಸ್ನಿಗ್ಧ ಪದಾರ್ಥದಷ್ಟೇ ಪೌಷ್ಟಿಕವಾಗಿರುತ್ತದೆ. ಮಾತ್ರವಲ್ಲದೆ ವನಸ್ಪತಿ ಬಹಳ ಮಿತವ್ಯಯಕರವೂ ಆಗಿರುತ್ತದೆ. ಏಕೆಂದರೆ ಅದು ಸುಲಭವಾಗಿ ಸಿಗುವ ಸಸ್ಯ ಎಣ್ಣೆಗಳಿಂದ ತಯಾರಿಸಲ್ಪಡುತ್ತದೆ.

**ವನಸ್ಪತಿ ಮತ್ತು
ಅದರಂತಹ
ಸ್ನಿಗ್ಧ ಪದಾರ್ಥಗಳು
ಜಗತ್ತಿನಲ್ಲೆಲ್ಲಾ
ಉಪಯೋಗಿಸಲ್ಪಡುತ್ತವೆ!**

ಹೆಚ್ಚಿನ ವಿವರಗಳಿಗೆ ಈ ವಿಳಾಸಕ್ಕೆ ಬರೆಯಿರಿ:
ದಿ ವನಸ್ಪತಿ ಮ್ಯಾನ್ಯುಫ್ಯಾಕ್ಚರರ್ಸ್
ಅಸೋಸಿಯೇಷನ್ ಆಫ್ ಇಂಡಿಯಾ
ಇಂಡಿಯಾ ಹೌಸ್, ಫೋರ್ಟ್ ಸ್ಟ್ರೀಟ್,
ಬೊಂಬಾಯಿ-1

JWT VMA 3904

ಕೊಂಡ ರಾಮಶರಣ ನನ್ನ ಮನೆಗೆ ಆಗಾಗ ಬರುತ್ತಿದ್ದ. ಅದೇ ಆದರ ಭಾವದಿಂದ ನಡೆದುಕೊಳ್ಳುತ್ತಿದ್ದ. ಕಾಯದೆ ಕಾನೂನುಗಳನ್ನು ಚರ್ಚಿಸುತ್ತಿದ್ದ. ಈಗಂತೂ ಕಾರಕೂನರನ್ನು ಯೂನಿಯನ್‌ನಲ್ಲಿ ಸೇರಿಸಿಕೊಳ್ಳುವ ಮಹಾ ಸಾಹಸಕ್ಕೆ ತೊಡಗಿದ್ದ. ಹೀಗೆ ಎಲ್ಲರೂ ಸೇರಿದರೆಂದರೆ, ಸಂಬಳದ ಗ್ರೇಡಿನ ಹೆಚ್ಚಳ, ಬೋನಸ್, ಇತರ ಸೇವಾ ಸೌಲಭ್ಯಗಳಿಗಾಗಿ ಪ್ರಚಂಡ ಸಮರ ಹೂಡುವ ವಿಚಾರವಿತ್ತು ಅವನದು.

ಕೇಳಲಿಕ್ಕೆ ಇದೆಲ್ಲ ರಮ್ಯವಾಗಿತ್ತು. ಆದರೆ ನನಗೂ ಇದಕ್ಕೂ ಏನು ಸಂಬಂಧ? ನನ್ನ ದಾರಿ ಬೇರೆ, ಅವನದು ಬೇರೆ. ಸಾಲದ್ದಕ್ಕೆ ಸಾಹೇಬರು ನನ್ನನ್ನು ಇನ್ನೊಮ್ಮೆ ಕರೆಸಿದರು. ಮತ್ತೆ ನನ್ನ ಬಡತಿಯ ವಿಷಯವನ್ನು ಮುಂಚಾಚಿ ನನ್ನ-ರಾಮಶರಣನ ಅತಿ ಪರಿಚಯದ ಹಗರಣ ಮಾಡಿದರು. ಆಫೀಸಿನಲ್ಲಿರುವ ತನಕ ನನಗೆ ನನ್ನ ಸಾಹೇಬರ ಮೇಲೆ ಸಿಟ್ಟು ಬಂದಿತ್ತು. ಮನಸ್ಸಿನಲ್ಲಿಯೇ ಅವರ ವಿಚಾರಸರಣಿಯನ್ನು ಉಗ್ರವಾಗಿ ಪ್ರತಿಭಟಿಸಿದೆ. ಮನೆಗೆ ಬಂದ ಮೇಲೆ ಅನಿಸಿತು, ನಿಜಕ್ಕೂ ರಾಮಶರಣನ ಸ್ನೇಹದಿಂದ ನನಗೆ ಏನು ಪ್ರಯೋಜನವಾಗಬೇಕಾಗಿದೆ? ಆಗುವುದಾದರೆ ಹಾನಿಯೇ ಆಗಬೇಕು. ಅದೂ ನನ್ನ ಮುಂದಿನ ಜೀವನ ಮಾರ್ಗಕ್ಕೆಯೆ ತಾಗುವಂಥ ಹಾನಿ. ಇಲ್ಲ, ಅವನ ಸಂಬಂಧವನ್ನು ಕಡಿದುಕೊಳ್ಳುವುದೇ ಲೇಸು.

ಅಂದರೆ ಹೇಗೆ? ... ಛೀ, ಅವನೆದುರಿಗೆ, ನಾನೊಬ್ಬ ನೀಚನಾಗಿ ಕಾಣಲಾರೆನೆ?

ಆದರೆ ಇದರಲ್ಲಿ ತಪ್ಪೇನು ಬಂತು? ನಾನೊಬ್ಬ ಸಾಮಾನ್ಯ ಸಂಸಾರವಂದಿಗ. ಒಂದು ನಿಶ್ಚಿತ ಮರ್ಯಾದೆಯನ್ನು ಮೀರಿ ಹೋಗುವ ಕುವ್ವತ್ತು ನನ್ನಲ್ಲಿಲ್ಲ. ಹಾಗೆಂದು ವಿಷಾದಪಡಬೇಕಾದ ಕಾರಣವೂ ಇಲ್ಲ. ಯಾವ ಅಧರ್ಮವನ್ನು ಮಾಡದೇ, ನೌಕರಿಯಲ್ಲಿ ಬಡತಿಯನ್ನು ಪಡೆಯುವುದು ಪಾಪವಲ್ಲ. ರಾಮಶರಣನ ಸಂಬಂಧವನ್ನು ಕಡಿದುಕೊಳ್ಳುವುದೂ ಪಾಪವಲ್ಲ.

ನನ್ನ ನಿರ್ಣಯವನ್ನು ರಾಮಶರಣನಿಗೆ ಬಾಯಿಬಿಟ್ಟು ಹೇಳಲಿಲ್ಲ. ಬದಲಿಗೆ ನಾನು ೧೦-೧೫ ತಾಸು ಮನೆಬಿಟ್ಟು ಹೊರಗೇ ಇರುತ್ತಿದ್ದೆ. ಅವನು ಒಂದೆರಡು ಬಾರಿ ಮನೆಗೆ ಬಂದು ಕೇಳಿ ಹೋಗಿದ್ದ. ಆಫೀಸಿನಲ್ಲಿ, ರಾಮಶರಣ ಬಂದುದರ ಸುಳಿವು ತಿಳಿದೊಡನೆ ನಾನು ಕೆಲಸದ ವಿಪರೀತ ಅವಸರವನ್ನು ತೋರ್ಪಡಿಸುತ್ತಿದ್ದೆ. ರಾತ್ರಿ ಒಂಭತ್ತರ ನಂತರ ಆಫೀಸ್ ಬಿಡುವುದು, ಹಿಂದಿನ ಬಾಗಿಲಿನಿಂದ ಹೊರಟು ಕಾಲು ದಾರಿಯನ್ನು ಕಡಿಯುತ್ತ ಸಾಗುವುದು, ನನ್ನ ದೈನಂದಿನ ಕ್ರಮವೇ ಆಯಿತು.

ಆದರೆ ಎಷ್ಟು ದಿನ ತಾನೇ ನಾನು ಹೀಗೆ ಮಾಡಬಲ್ಲೆ? ಒಂದಿಲ್ಲ ಒಂದಿನ ಅವನ ಭೆಟ್ಟಿಯಾಗದೇ ಹೋಗದೆಂಬ ಸಹಜ ಸಾದಾ ವಿಚಾರವೂ ನನಗೇಕೆ ಬರಲಿಲ್ಲ? ಇದಕ್ಕಿಂತ ನೇರವಾಗಿ ರಾಮಶರಣನನ್ನು ಕಂಡು ಇದ್ದ ಸಂಗತಿಯನ್ನು ಮುಕ್ತಮಾನಸನಾಗಿ ಬಿಚ್ಚಿ ಹೇಳಿದ್ದರೆ, ಅಂಜುಗುಳಿತನದ ವಿನಾ ಅನ್ಯ ದೋಷಗಳಾದರೂ ನನಗೆ ತಟ್ಟುತ್ತಿರಲಿಲ್ಲವಲ್ಲ! ನಾನು ಎಷ್ಟು ಕೀಳುಮಟ್ಟಕ್ಕೆ ಇಳಿದೆನಲ್ಲ ಎಂದು ಅನಿಸಿತು.

ಕೊನೆಗೊಮ್ಮೆ ಆ ಭೆಟ್ಟಿಯ ಪ್ರಸಂಗ ಬಂತು. ನಿರ್ಧಾರ ಮಾಡಿಕೊಂಡೇ ಅಂದು ರಾಮಶರಣ ಆಫೀಸಿಗೆ ಬಂದಂತಿತ್ತು. ನನ್ನ ಮೇಜಿನ ಮುಂದೆ ಬಂದು ನಿಂತವ ಒಂದು ಗಂಟೆಯಾದರೂ ಸರಿದಿರಲಿಲ್ಲ. ನಾನೂ ಒಂದರ ಮೇಲೊಂದು ಫಾಯಿಲನ್ನು ತೆಗೆದು, ಓದುತ್ತ, ಕೆಳಗಿಡುತ್ತ, ಅವನು ಯಾವಾಗ ಹೋದಾನೊ ಎಂದು ಕಾಯುತ್ತ ನಿಂತಿದ್ದೆ. ಹೀಗೆ ನಾನು ಮೂರು ತಾಸು ನಾಟಕ ಮಾಡಿದರೂ ಅವನು ಜಾಗ ಬಿಟ್ಟು ಸರಿಯಲಿಲ್ಲ. ಆಗ ನನ್ನ ಸಹನೆಯು ಕಟ್ಟೊಡೆದು—

"ನಾ ಕೆಲಸದಲ್ಲಿ ಇದ್ದೇನೆ. ನೋಡುತ್ತೀಯಲ್ಲ" ಎಂದು ಕೇಳಿದೆ.

"ನಿಮ್ಮ ಭೆಟ್ಟಿ ಆಗುವುದಾದರೂ ಹೇಗೆ?"

"ಏನು ಮಾಡಲಿ? ಈ ಚೀಫ್ ಕ್ಲಾರ್ಕನ ಕೆಲಸ ಯಾಕಾದರೂ ಹಿಡಿದೆನೊ ಅನಿಸ್ತದೆ."

"ಹಾಗೆ ಅನ್ನಬೇಡಿ, ನೀವು ಇಲ್ಲಿ ಇದ್ದೀರೆಂತ ಇದೆಲ್ಲಾ ಸರಿ ನಡೆದಿದೆ. ನಮಗೆಲ್ಲಾ ಆಧಾರವಿದೆ."


ಮನೆಯಲ್ಲಿಯೇ
ಒಗೆದದ್ದು
ಸರ್ಫ್‌ನಿಂದ
ಒಗೆದದ್ದು
Surf

"ತಪ್ಪು ಕಲ್ಪನೆ ನಿನ್ನದು. ಮನುಷ್ಯ ಮೇಲೇರಿದಂತೆ ಬಂಧನ ಜಾಸ್ತಿ ಆಗುತ್ತದೆ. ಮಂದಿಗೆ ಆಧಾರ ಆಗೋದು ಕಡಿಮೆ ಆಗುತ್ತದೆ."

"ಮಹತ್ವದ ಕೆಲಸ ಇದೆ ನನಗೆ."

"ಈಗಂತೂ ಶಕ್ಯ ಇಲ್ಲ. ನೋಡುತ್ತೀಯಲ್ಲ."

"ಇಂದು ಆಗಲಿಕ್ಕೇ ಬೇಕು! ಅದಕ್ಕಾಗಿ ರಜಾ ತೆಗೆದುಕೊಂಡಿದ್ದೇನೆ."

"ಆಗಲಿಕ್ಕೇ ಬೇಕು ಅಂದರೆ? ಮೇಜಿನ ಮೇಲೆ ಏನು ಫೈಲು ಇವೆ ಅಲ್ಲ; ಅವೂ ಇಂದೇ ಆಗಲಿಕ್ಕೆ ಬೇಕು." ಎಂದು ಹೇಳಿ ಮತ್ತೆ ನಾನು ಫೈಲ್ ತಿರುವಿ ಹಾಕತೊಡಗಿದೆ. ಅರ್ಧ ತಾಸು ತಡೆದು ಅವನು ಮತ್ತೆ ನುಡಿದನು—

"ಸಾಹೇಬ, ಈ ಕೇಸಿನ ಕಾಗದ ನಿಮ್ಮ ಕಡೆಗೇ ಇದೆ. ಬಿ. ಸಿ. ನಂ. ೪೦೯ ರವನ ಸಸ್ಪೆನ್ಶನ್ ಪೀರಿಯಡ್—"

"ನನಗೆ...ಈಗ ವೇಳೆಯಿಲ್ಲ."

"ನಾಳೆಯೇ ಈ ಕೇಸಿನ ಹಿಯರಿಂಗ್ ಇದೆ, ಸಾಹೇಬ."

"ಈಗಂತೂ ಹೊರಗೆ ಹೋಗು. ನಿಮಗೆ ಏನು ಅನಬೇಕು ರಾಮಶರಣ? ನೀವು ತಿಳಿದವರು ನೀವೇ ಹೀಗೆ ಮಾಡಿದರೆ ಹೇಗೆ? ಹೊರಗೆ ನಡೀರಿ. ನನಗೆ ಅವಕಾಶ ಸಿಕ್ಕರೆ ಹೇಳಿ ಕಳಿಸ್ತೇನೆ."

"ಈಗ ಐದು ಆಗಿದೆ. ಐದೂವರೆಗೆ ಹೇಳುತ್ತೀರೇನು?"

"ಹೀಗೆ ಟೈಮು ಹಚ್ಚಿದರೆ ಶಕ್ಯವಿಲ್ಲ."

"ಅದು ಶಕ್ಯ ಇಲ್ಲ, ಸಾಹೇಬರೇ. ನನ್ನ ಕೆಲಸ ಆಗದೇ ನಾ ಈ ಜಾಗ ಬಿಡುವುದಿಲ್ಲ."

"ರಾಮಶರಣ!"

"ನಾ ರಾಮಶರಣ ಅಲ್ಲಾ. ಯೂನಿಯನ್ನಿನ ಅಧಿಕೃತ ಪ್ರತಿನಿಧಿ ಇದ್ದೇನೆ! ಈ ಮಾಹಿತಿ ಕೊಡುವುದರಿಂದ ನೀವೇನೂ ನನ್ನ ಮೇಲೆ ಮೆಹರ್ಬಾನಿ ಮಾಡಿದಂತೆ ಆಗುವುದಿಲ್ಲ. ಅದು ನಿಮ್ಮ ಕರ್ತವ್ಯವಾಗಿದೆ."

"ನನ್ನ ಕರ್ತವ್ಯ ಏನಿದೆ ಅನ್ನೋದನ್ನ ಇನ್ನೊಬ್ಬರಿಂದ ಕಲಿಯೋ ಅಗತ್ಯವಿಲ್ಲ. ತಿಳಿತೇ? ಮಾಹಿತೀ ಕೊಡದಿದ್ದರೆ?"

"ಹಾಗೆ ಲೇಖೀ ಕೊಡಿರಿ. ಮುಂದಿನದು ಮುಂದೆ. ಖುರ್ಚಿಯ ನೀರು ಹತ್ತಿದ ಹಾಗೆ ಕಾಣುತ್ತದೆ."

"ರಾಮಶರಣ! Get out from here."

"ಅಚ್ಛಾ! ಹಮ ದೇಖ ಲೇಗಾ!"

ದನಿ ಎತ್ತರಿಸಿ ನಾನು ಯಾವಾಗ ಮಾತನಾಡಹತ್ತಿದೆನೊ ನನಗೇ ಗೊತ್ತಿಲ್ಲ. ಇಡಿಯ ಕಚೇರಿ ಗದಗಮಿಸಿ ಹೋಯಿತು. ರಾಮಶರಣನೂ ಅದೇ ಎತ್ತರದಲ್ಲಿ ಕೂಗಿ ಹೊರಟುಹೋದ. ಏನಿದ್ದರೂ ನನಗೆ ಭಾರೀ ವಿಜಯವಾಯಿತೆಂದೇ ಸರ್ವರ ಅಭಿಪ್ರಾಯವಾಯಿತು. ಕದಡಿದ ಮನಃಸ್ಥಿತಿಯನ್ನು ಸಾವರಿಸಿಕೊಳ್ಳಲು ಕನ್ನಡಕ ತೆಗೆದು ಒರೆಸಹತ್ತಿದೆ. ನಾನು ಯೂನಿಯನ್ನಿನ ಅಧಿಕೃತ ಪ್ರತಿನಿಧಿಯನ್ನು ನಡೆಸಿಕೊಂಡ ರೀತಿ ಅಸಭ್ಯತನದ್ದಾಗಿತ್ತಲ್ಲದೆ, ಬೇಕಾಯದೇಶೀರ್ ಆಗಿತ್ತೆಂದು ತಿಳಿಯುವ ಪಟ್ಟಿಗೆ ನನ್ನ ಮೈಮೇಲೆ ಎಚ್ಚರವಿತ್ತು.

ಆದರೆ ಆದದ್ದು ಬೇರೆಯೇ. ರಾಮಶರಣನು ಐದು ಮಿನಿಟಿನ ನಂತರ ಪುನಃ ನನ್ನ ಕಡೆಗೆ ಬಂದ.

"ಸಾಹೇಬ, ಮಾಫ್ ಮಾಡಿರಿ ನನ್ನನ್ನ" ಎಂದ!

"ಆಂ! ಯಾಕೆ?" ಎಂದು ನಾನು ತಡವರಿಸಿದೆ.

"ಮರ್ಯಾದೆಯನ್ನು ಬಿಟ್ಟು ಮಾತಾಡಿದೆ. ನಿಮ್ಮ ಖುರ್ಚಿಯ ವಿಷಯ ಎತ್ತಿದೆ. ಹಾಗೆ ನಾ ಅನ್ನಬಾರದಿತ್ತು" ಆತ ಹೇಳಿದ.

"ನನ್ನದೂ ಒಂದಿಷ್ಟು ಜೋಲಿ ಹೋಯಿತು. ಒಮ್ಮೊಮ್ಮೆ ಸ್ವಭಾವದೋಷ ಕೈಕೊಡುತ್ತದೆ" ಇಳಿದನಿಯಲ್ಲಿ ನಾನು ಪಿಸುಗುಟ್ಟಿದೆ. ಅಲ್ಲಿಂದ ಅವನಿಗೆ ಬೇಕಾದ ಮಾಹಿತಿಯನ್ನು ಪೂರೈಸಿದೆ. ಅವನು ಹೊರಟುಹೋದ.

ಕಚೇರಿಯಲ್ಲಿ ಇನ್ನೂ ಹಾಗೇ ಕುಳಿತಿದ್ದೆ. ಅಕಸ್ಮಾತ್ ಸಾಹೇಬರು ಕರೆ ಕಳುಹಿದರು.

"ಸ್ವಲ್ಪ ಹೊತ್ತಿಗೆ ಮುಂಚೆ ಬಿ. ಸಿ. ನಂ. ೨೦೪ ನಿಮ್ಮ ಕಡೆಗೆ ಬಂದಿದ್ದ?"

"ಹೌದು."

"ನಾನೆಲ್ಲ ಕೇಳಿದ್ದೇನೆ. ಅವ ಬಹಳ ಉದ್ಧಟತನದಿಂದ ಮಾತಾಡಿದ."

"ಆದರೆ ಮತ್ತೆ ಬಂದು ಕ್ಷಮಾ ಕೇಳಿಕೊಂಡ."

"ಸುಳ್ಳು ಹೇಳಬೇಡ್ರಿ."

"ಇಲ್ಲ. ಎಲ್ಲರ ಸಮಕ್ಷಮವೇ ಹೇಳಿದ."

"ಮುಖ್ಯ ಮುದ್ದೆ ಅದಲ್ಲ. ನಿಮ್ಮ ಸಂಗಡ ಅವ ಉದ್ಧಟ ರೀತಿಯಿಂದ ಮಾತನಾಡಿದ್ದು ಅಂತೂ ನಿಜ. ಹೌದಲ್ಲೊ?"

"ನನಗೇನು ಹಾಗೆ ಅನಿಸುವುದಿಲ್ಲ."

"ಹಮ್ ದೇಖ ಲೇಗಾ! ಇದರ ಅರ್ಥವೇನು ಹಾಗಾದರೆ?"

"ಅದರ ಸಲುವಾಗೇ ಅವ ಕ್ಷಮಾ ಕೇಳಿದ್ದು."

"ಅವನನ್ನು ಉಳಿಸುವುದಕ್ಕಾಗಿ ನೀವು ಪ್ರಯತ್ನ ಮಾಡುತ್ತಿದ್ದೀರಿ. ನನಗೆ ತಿಳಿಯಿತು. ಇಷ್ಟೇ ಹೇಳಿರಿ. ಅವ ನಿಮಗೆ ಬೆದರಿಕೆ ಹಾಕಿದನೊ ಇಲ್ಲವೊ?"

"ಬೆದರಿಕೆ—ಅಂ. ಇದ್ದ ಸಂಗತಿ ಹೇಳತೇನೆ. ನನಗೂ ಅವನಿಗೂ ಸಂಬಂಧ ಉಳಿದಿಲ್ಲ. ನನ್ನ ಅವನ ಭೆಟ್ಟಿ ಸಹಿತ ಆಗೋದಿಲ್ಲ. ಮಾತುಕಥ ಅಂತೂ ಇಲ್ಲೇ ಇಲ್ಲ."

"೨೦೮ ರ ಮಾತು ಹೊರಟಿತಂದರೆ ನಿಮ್ಮ ತಲೆ ಜಾಗದಲ್ಲಿ ಇರುವುದಿಲ್ಲ. ನಿಮ್ಮ ಸ್ಥಾನದ ವಿಷಯವಾಗಿ ಅವ ಹಂಗಿಸಿದ. ಮತ್ತೆ ಹಮ್ ದೇಖ ಲೇಗಾ ಅಂತ ಹೆದರಿಕೆ ಹಾಕಿದ. ಅವ ಹಾಗೆ ಅಂದದ್ದು ನಿಜ ಹೌದಲ್ಲೊ. ಇಷ್ಟೇ ಹೇಳಿರಿ."

"ಆಂ...ಹೂಂ. ಅಂದರೆ—"

"O. K. ಹಾಗಂತ ನನಗೆ ಲೇಖೀ ರಿಪೋರ್ಟ್ ಕೊಡಿರಿ."

"ಲೇಖೀ ರೀಪೋರ್ಟು?"

"ಕೊಡಲಿಕ್ಕೆ ಏನಡ್ಡಿ? ನಡೆದ ಸಂಗತಿ ತಾನೆ!"

"ಅದರ ಪರಿಣಾಮ..."

"ಅದನ್ನ ಕಂಪನಿಯವರು ನೋಡಿಕೊಳ್ಳತಾರೆ."

"ಆದರೆ..."

"ನನಗೆ ರಿಪೋರ್ಟು ಬೇಕು! ಇನ್ನು ಕೊಡಬಾರದು ಅಂತ ಇದ್ದರೆ ನಿಮ್ಮ ಮರ್ಜಿ."

"ವಿಚಾರ ಮಾಡತೇನೆ. ವೇಳೆ ಕೊಡಿರಿ."

"ಎಷ್ಟು?"

"ನಾಕಾರು ದಿವಸ."

"ಊಂಹು! ಕೂತ ಪೆಟ್ಟಿನ ಮೇಲೆ ಎಷ್ಟು ವೇಳೆ ಬೇಕೊ ಅಷ್ಟು ತಗೊಳ್ಳಿರಿ. ಇವತ್ತಿಂದು ಇವತ್ತೇ ರಿಪೋರ್ಟು ಹೋಗಬೇಕು! ನನ್ನ ಆಫೀಸಿನಲ್ಲಿ ಇಂಥಾ ಗೈರ್‌ಶಿಸ್ತು ನಡೆಯುವುದು ನನಗೆ ಸರಿ ಬರುವುದಿಲ್ಲ. ಆಫೀಸೆಂದರೆ ಕಾಮಗಾರ ಮೈದಾನ ಅಲ್ಲ ಅನ್ನುವುದು ಅವರಿಗೆ ತಿಳಿಯಲಿ."

ಪರಿಸ್ಥಿತಿ ನನ್ನ ಸುತ್ತು ಹಿಡಿತವನ್ನು ಬಿಗಿ ಮಾಡುತ್ತ ನಡೆದಿತ್ತು. ಹೇಗೊ ಏನೊ ರಿಪೋರ್ಟು ಗೀಚಿಕೊಂಡು ಸಾಹೇಬರ ಕಡೆಗೆ ಹೋದೆ. ಅವರು ಅದನ್ನು ನೋಡಿ ಹಣೆಗೆ ಗಂಟು ಹಾಕಿ, ಅದನ್ನು ನನ್ನ ಕಡೆಗೆ ಎಸೆದರು.

"ಇದು ನಡೆಯುವುದಿಲ್ಲ. ಇದರಲ್ಲಿ ನೀವು ಬರೆದ ಯೂನಿಯನ್ನಿನ ಅವನ ಕೆಲಸದ ಮತ್ತು ಕ್ಷಮಾಪಣೆಯ ಉಲ್ಲೇಖ ತೆಗೆದುಹಾಕಿರಿ."

ಸಾಹೇಬರು ನಿರ್ಧಾರ ಮಾಡಿಯೇ ಕುಳಿತಂತಿತ್ತು. ನನಗೂ ವಿಚಾರ ಮಾಡುವ ಶಕ್ತಿಯೇ ಉಡುಗಿಹೋಗಿತ್ತು. ಭ್ರಮಿಷ್ಠ ಮನಃಸ್ಥಿತಿಯಲ್ಲಿಯೇ ಯೂನಿಯನ್ನಿನ ಅಧಿಕೃತ ಪ್ರತಿನಿಧಿಯ ಉಲ್ಲೇಖವನ್ನು ತೆಗೆದುಹಾಕಿದೆ. ಕ್ಷಮೆಯ ಉಲ್ಲೇಖವನ್ನು ಬಹು ಪ್ರಯಾಸದಿಂದ ದುಂಡು ಸುತ್ತಿ ಹೇಳಿ, ಉಳಿಸಿಕೊಂಡೆ. ಹೊರಗೆ ಹೊರಡುತ್ತ ಸಾಹೇಬರು ನನ್ನ ಹೆಗಲ ಮೇಲೆ ಕೈಯಿರಿಸಿ—

"ತರುಣ ಮಿತ್ರಾ, ಭಾವನಾವಶನಾಗಬೇಡ. ಮುಂದೆ ಮರುಗಬೇಕಾದೀತು" ಎಂದರು.

ಮರುದಿನ ಸರಿಯಾಗಿ·ಹತ್ತು ಗಂಟೆಗೆ, ನಾನು, ನಮ್ಮ ಸಾಹೇಬರು, ರಾಮಶರಣ, ಅವನ ವಕೀಲರು ಜನರಲ್ ಮ್ಯಾನೇಜರರ ಕೋಣೆಯಲ್ಲಿ ಕೂಡಿದೆವು.

ನನಗೆ ರಾಮಶರಣನನ್ನು ನೇರವಾಗಿ ನೋಡುವ ಧೈರ್ಯವಾಗಲಿಲ್ಲ. ಆದರೆ ಅವನ ಮಾತಿನ ರೀತಿ ಎಂದಿನಂತೆಯೆ ಇತ್ತು. ಆತ್ಮವಿಶ್ವಾಸದಿಂದ ಕೂಡಿತ್ತು. ಕಂಪನಿಯವರು ಎಬ್ಬಿಸಿದ ಈ ಫಾರ್ಸಿನ ಕಡೆಗೆ ತುಚ್ಛತೆಯಿಂದ ನೋಡುತ್ತಿರಬೇಕೆಂದು ನನಗನಿಸಿತು. ಅಚಾನಕವಾಗಿ ನನ್ನ ಅವನ ದೃಷ್ಟಾದೃಷ್ಟಿಯಾಯಿತು. ಅವನು ನಕ್ಕ, ನಾನೂ ನಕ್ಕೆ.

ವಿಚಾರಣೆ ಆರಂಭವಾಗಲು ಇನ್ನೂ ಅವಕಾಶವಿತ್ತು. ಅಷ್ಟರಲ್ಲಿ ಹೊರಗೆ ಕೂಗಾಟ ನಡೆದದ್ದು ಕೇಳಬಂತು. ಕಚೇರಿಯ ದಿಕ್ಕಿನಲ್ಲಿ

ಕಂಡಕ್ಟರ್ ಡ್ರೈವರ್ ಜನರ ದೌಡು ಹೊರಟಿತ್ತು. ರಾಮಶರಣನ ಹೆಸರಿನ ಜಯಜಯಕಾರ ನಡೆದಿತ್ತು. ಹೊರಗಿನ ಕೂಗಾಟವನ್ನು ಕೇಳುತ್ತ ನಾನು ಇದ್ದಾಗ, ನನ್ನ ಹೆಸರಿನ ಉಚ್ಚರಣೆಯೂ ಕೇಳಬಂತು. ಹೌದು, ಯಾರೋ ಉಚ್ಚ ಕಂಠದಲ್ಲಿ ನನ್ನ ನಾಮನಿರ್ದೇಶ ಮಾಡಿದರು. ಅದರ ಬೆನ್ನಿಗೇ ಸಹಸ್ರ ಮುಖದಿಂದ "ಮುರ್ದಾಬಾದ"ದ ಜೋಡಣೆ ದೊರೆಯಿತು. ನಾನು ಜನರಲ್ ಮ್ಯಾನೇಜರರನ್ನೊಮ್ಮೆ ನೋಡಿದೆ, ರಾಮಶರಣನನ್ನೂ ನೋಡಿದೆ. ಅವನು ಅಸ್ವಸ್ಥನಾಗಿದ್ದಂತೆ ಕಂಡಿತು. ತುಸು ಹೊತ್ತಿನ ಮೇಲೆ ಮತ್ತೆ ಅದೇ ಘೋಷಣೆಯಾಯಿತು.

ಗಡಿಬಿಡಿಯಿಂದ ಎದ್ದವನೇ ರಾಮಶರಣ ಹೊರಗೆ ಹೋದನು. ಅವನು ಸಮೂಹದೊಡನೆ ಚರ್ಚೆ ನಡೆಸಿದ ಹಾಗೆ ಕಂಡಿತು. ಕೊನೆಗೆ ಕೂಗಾಟ ನಿಂತಿತು. ರಾಮಶರಣ ಒಳಗೆ ಬಂದ. ಅಂದಿನ ದಿನ ಪ್ರಾಥಮಿಕ ವಿಚಾರಣೆ ನಡೆದು, ಕೇಸು ಸ್ಥಗಿತವಾಯಿತು.

ಆ ದಿನ ರಾಮಶರಣ ಮತ್ತೆ ನನ್ನ ಕಡೆ ಬರಬಹುದೆಂಬ ಅಂದಾಜು ಇದ್ದೇ ಇತ್ತು. ಅವನನ್ನು ತಪ್ಪಿಸುವ ಪ್ರಯತ್ನ ಫಲ ಕೊಡಲಿಲ್ಲ. ಹತ್ತಿರ ಯಾರೂ ಇಲ್ಲದಾಗ ಹೇಳಿದ:

"ಸಾಹೇಬ, ನಿಮ್ಮ ಹೆಸರು ತೊಗೊಂಡು ಜನ ಕೂಗದ ಹಾಗೆ ವ್ಯವಸ್ಥೆ ಮಾಡಿದ್ದೇನೆ."

"ಕದಾಚಿತ್ ನನ್ನ ಯೋಗ್ಯತೆ ಅದೇ ಇರಬೇಕು, ರಾಮಶರಣ."

"ಛೇ. ಎಂದಿಗೂ ಇಲ್ಲ. ನಿಮ್ಮ ಕೈಯಿಂದ ಒಳ್ಳೆಯದೇ ಆಗಿದೆ."

"ಆಂ?"

"ನೀವು ರಿಪೋರ್ಟ್ಗೆ ಬಹಳ ಕೌಶಲ್ಯದಿಂದ ಬರೆದಿದ್ದೀರಿ ಅಂತ ವಕೀಲರು ಹೇಳಿದರು."

"ನೀ ಏನೇ ಹೇಳು, ನಾ ಮಾತ್ರ ಈ ಫಾರ್ಸಿಗೆ ನಿಮಿತ್ತ ಆಗಬಾರದಿತ್ತು."

ರಾಮಶರಣ ನಿರ್ದೋಷಿಯಾಗುವನೆಂದು ಎಲ್ಲ ಕಡೆಗೂ ಸುದ್ದಿ ಇತ್ತು. ಮೊದಲನೇ ದಿನದ ಕಾರ್ಯಕಲಾಪದ ನಂತರ ನನಗೂ ಹಾಗೇ ಅನಿಸಿತು. ಮ್ಯಾನೇಜರರು ಸಹಾನುಭೂತಿಯಿಂದ ನಡೆದುಕೊಳ್ಳುತ್ತಿದ್ದರು. ನಗೆ ವಿನೋದ ಮಾಡು

ತ್ತಿದ್ದರು. ಆದರವು ಕಂಪನಿಯ ಹಂಚಿಕೆಯಾಗಿತ್ತು. ವಾತಾವರಣ ಕಾಯಬಾರದು. ಪ್ರದರ್ಶನ ಇತ್ಯಾದಿ ನಡೆಯಬಾರದೆಂದು ಎಚ್ಚರಿಕೆಯನ್ನು ತೆಗೆದುಕೊಳ್ಳಲಾಗಿತ್ತು.

ವಿಚಾರಣೆಯ ಫಾರ್ಸು ಮುಗಿದ ನಂತರ ರಾಮಶರಣನನ್ನು ಕೆಲಸದಿಂದ ತೆಗೆದುಹಾಕಲಾಯಿತು. ರಾಮಶರಣ ನನ್ನ ಕಡೆಗೆ ಬರುವುದೇನು, ಇಬ್ಬರಲ್ಲೂ ಒಂದೆರಡು ಮಾತು ಆಗುವುದೆಂದರೇನು, ಅಷ್ಟರ ಮೇಲಿಂದ ಅವನನ್ನು ನೌಕರಿಯಿಂದ ತೆಗೆಯುವುದೆಂದರೇನು, ಎಲ್ಲವೂ ವಿಚಿತ್ರವಾಗಿತ್ತು.

ನಿರ್ಣಯ ಹೊರಬಿದ್ದ ದಿನ ನಮ್ಮ ಕಚೇರಿಗೆ ಪೋಲೀಸರ ಸರ್ಪಗಾವಲಿತ್ತು. ಊರಲ್ಲಿಯ ಡಿಪೋಗಳ ಮೇಲೆಯೂ ಪೋಲೀಸರ ಕಾವಲಿತ್ತು. ಬಸ್ಸುಗಳ ಸಂಪು ಆಗದಂತೆ ಸರ್ವ ಮುಂಜಾಗ್ರತೆಯನ್ನು ಅಧೀಸರ್ ಜನರು ಕೈಕೊಂಡಿದ್ದರು.

ನಾನು ನನ್ನ ಜಾಗದಲ್ಲಿ ಶೂನ್ಯಮನಸ್ಕನಾಗಿ ಕುಳಿತಿದ್ದೆ. ಸಾಹೇಬರಿಂದ ತ್ವರಿತದ ಕರೆ ಬಂತು. ಹೋದೊಡನೆಯೆ ಒಂದು ಕಾಗದದ ಕಟ್ಟನ್ನು ನನ್ನ ಕೈಗಿತ್ತರು.

"ಇದು ನಂ. ೨೦೮ ರ ಫಾಯಿನಲ್ ಬಿಲ್ಲಿನ ಕಾಗದ. ಇವನ್ನು ಇಂದೇ ಪೂರ್ಣಮಾಡಿ ಆಡಿಟ್ ಸೆಕ್ಷನ್ನಿಗೆ ಕಳಿಸಿಬಿಡ್ರಿ. ಇದು ನೋಡ್ರಿ. ಈ ಕೆಲಸವನ್ನು ಬೇರೆ ಯಾರಿಗೂ ಒಪ್ಪಿಸಬೇಡಿರಿ. ಜವಾಬ್ದಾರೀ ಕೆಲಸ ಮತ್ತೆ. ಬೇಗ ಮುಗಿಯಬೇಕಾಗಿದೆ."

"ನಾನೇ ಈ ಕೆಲಸ ಮಾಡಬೇಕು. ಅನ್ನುವ

'ಅನಾಸಿನ್'

## ನಾಲ್ಕು ಔಷಧಗಳಿಂದ ಕೂಡಿದ

ನೋವನ್ನು ಗುಣಪಡಿಸುತ್ತದೆ


ನರಗಳನ್ನು ಶಾಂತಪಡಿಸುತ್ತದೆ

ನಿರುತ್ಸಾಹವನ್ನು ಹೋಗಲಾಡಿಸುತ್ತದೆ

ಜ್ವರವನ್ನು ಕಡಿಮೆಗೊಳಿಸುತ್ತದೆ

ಡಾಕ್ಟರರ ಸುರಕ್ಷಿತ ಔಷಧದಂತೆ ಶಾಸ್ತ್ರೀಯ ರೀತಿಯಲ್ಲಿ ಸಮ್ಮಿಲನವಾದ ನಾಲ್ಕು ಔಷಧಗಳಿಂದ ಕೂಡಿದ 'ಅನಾಸಿನ್' ನೋವನ್ನು ಸಂಪೂರ್ಣವಾಗಿ, ಅತಿ ಶೀಘ್ರವಾಗಿ ಗುಣಪಡಿಸುತ್ತದೆ. ಅನಾಸಿನ್ (1) ತಲೆ ನೋವು, ಶೀತ, ಜ್ವರ, ಹಲ್ಲು ನೋವು ಹಾಗೂ ಸ್ನಾಯುಗಳ ನೋವನ್ನು ಅಧಿಕ ಶೀಘ್ರವಾಗಿ ಉಪಶಮನಗೊಳಿಸುತ್ತದೆ; (2) ಗಾಬರಿಗೊಳಿಸುವ ನರಗಳಿಗೆ ಶಾಂತತೆಯನ್ನೀಯುತ್ತದೆ—ನೀವು ಸುಖವಾಗಿ, ಆರಾಮದಿಂದಿರುವಂತೆ ಮಾಡುತ್ತದೆ; (3) ನಿರುತ್ಸಾಹವನ್ನು ಹೋಗಲಾಡಿಸುತ್ತದೆ; (4) ಜ್ವರವನ್ನು ಕಡಿಮೆ ಮಾಡುತ್ತದೆ. ನಾಲ್ಕು ಔಷಧಗಳಿಂದ ಕೂಡಿರುವ ಅನಾಸಿನ್, ನೋವನ್ನು ಉಪಶಮನಗೊಳಿಸುವುದಕ್ಕೆ ಅಧಿಕ ಉತ್ತಮವಾಗಿದೆ. ಯಾವಾಗಲೂ ಮನೆಯಲ್ಲಿ 'ಅನಾಸಿನ್' ಇಟ್ಟುಕೊಳ್ಳಿರಿ.

- ಆರೋಗ್ಯಕರವಾಗಿರುವ ಸೆಲೋಫೇನ್ ಪ್ಯಾಕ್‌ನಲ್ಲಿ ಸೀಲ್ ಮಾಡಿದ ಎರಡು ಬಿಲ್ಲೆಗಳೂ, ಭದ್ರವಾಗಿ ಪಿಲ್ಫರ್-ಪ್ರೂಫ್ ಪ್ಯಾಕಿಂಗ್‌ನಲ್ಲಿ ಮುಚ್ಚಲ್ಪಟ್ಟ ಸೀಸೆಗಳಲ್ಲಿ 32 ಬಿಲ್ಲೆಗಳೂ—ಮನೆಗಳಲ್ಲಿ ಉಪಯೋಗಿಸಲು ಅನುಕೂಲವಾಗುವಂತೆ—ದೊರೆಯುತ್ತವೆ.




## ಅನಾಸಿನ್ ಅಧಿಕ ಉತ್ತಮವಾಗಿದೆ

*Registered User:* GEOFFREY MANNERS & CO. LIMITED

KAN. 2-43

ಆಗ್ರಹ ಏನು ತಮ್ಮದು? ನನ್ನ ಕಡೆಯಿಂದ ಈಗಾಗಲೇ ಒಂದು ಪಾಪ ಘಟಿಸಿದೆ."

"ಪಾಪ!" ಸಾಹೇಬರು ಕಿರುಚಿದರು. "ಇದು ನೋಡ್ರಿ. ನಿಮ್ಮ ಭಾವನಾದ ಹುಚ್ಚು ಚ್ಯಾರವನ್ನು ಕಾಯಲಿಕ್ಕೆ ಕಂಪನಿ ಈ ವ್ಯಾಪಾರ ನಡಿಸಿಲ್ಲ. ನೀವೇ ಈ ಕೆಲಸ ಮಾಡಬೇಕು ಮತ್ತು ಎರಡು ತಾಸಿನೊಳಗೆ ಮುಗಿಸಿಕೊಡಬೇಕು. ಆಡಿಟ್‌ನವರಿಗೆ ಹೇಳಿಟ್ಟಿದೆ."

"ಇಷ್ಟು ಸ್ವಲ್ಪ ವೇಳೆಯಲ್ಲಿ ನನ್ನ ಕಡೆಯಿಂದ-"

"ಆಗಲಿಕ್ಕೇ ಬೇಕು. ಅದು ಹೇಗೆ ಮುಗಿಸುವುದು ಅನ್ನೋದನ್ನ ನೀವೇ ನೋಡಿಕೊಳ್ಳಬೇಕು."

"ಕ್ಷಮಿಸಿರಿ, ಸಾಹೇಬರೆ. ನಾನು ಈ ಕೆಲಸ ಮಾಡುವುದಿಲ್ಲ."

ಚಟ್ಟನೇ ಕುರ್ಚಿಯನ್ನು ಸರಿಸಿ ಸಾಹೇಬರು ಎದ್ದು ನಿಂತು-

"ಮಾಡುವುದಿಲ್ಲ? ನಿಮಗೆ ಅಂತ ಇನ್ನೊಂದು ಚಾನ್ಸ್ ಕೊಡತೇನೆ! ಎತ್ತಿರಿ ಆ ಕಾಗದ. ಪೂರ್ಣ ಮಾಡಿ ತಂದುಕೊಡಿರಿ. ಇಲ್ಲದಿದ್ದರೆ ಪರಿಣಾಮ ಬಹಳ ಗಂಭೀರ ಆದೀತು! ಹಾಗೇನಾದ್ರೂ ಆದರೆ ನನ್ನಿಂದ ಏನೂ ಅಪೇಕ್ಷಾ ಮಾಡಬೇಡಿರಿ."

ಕಾಗದ ತೆಗೆದುಕೊಂಡು ಹೋಗಿ ಎರಡು ತಾಸಿನಲ್ಲಿ ಕೆಲಸ ಮುಗಿಸಿ ಅವರ ಕಡೆಗೆ ಕಳಿಸಿಕೊಟ್ಟೆ. ರಾಮಶರಣನ ಹೆಸರಿನಲ್ಲಿ ನಾಲ್ಕು ತಿಂಗಳ ರಜೆಯು ಬಾಕಿ ಇತ್ತು. ಕಂಪನಿ ಅವನಿಗೆ ಈ ಸಂಬಳವನ್ನು ಕೊಟ್ಟಿತು. ಪ್ರಾವಿಡೆಂಟ್ ಫಂಡಿನ ತನ್ನ ಪಾಲನ್ನು ಕೊಟ್ಟಿತು. ಸಂಪೂರ್ಣ ಗ್ರ್ಯಾಚುಯಿಟಿಯನ್ನೂ ಕೊಡಲಾಯಿತು. ಮಾನಸನ್ಮಾನದಿಂದಲೇ ಅವನ ಸರ್ವೀಸಿನ ಮೇಲೆ ಹೂ-ಪತ್ರೆ ಏರಿಸಲಾಗಿತ್ತು.

೫

ಕಳೆದ ಎರಡು ದಿನಗಳಿಂದ ನಾನೇ ರಾಮಶರಣನ ಭೆಟ್ಟಿಗೆ ಚಡಪಡಿಸುತ್ತಿದ್ದೆ. ಅವನು ಭೆಟ್ಟಿಯಾಗಬೇಕು; ಅನುಚಿತ ಶಬ್ದದಿಂದ ನನ್ನ ನಿರ್ಭರ್ತ್ಸನೆಯನ್ನು ಮಾಡಬೇಕು. ನಾನು ಮುಕ್ತಮಾನಸನಾಗಿ ಅವನ ಕ್ಷಮೆ ಕೇಳಬೇಕು ಎಂಬ ಧ್ಯಾಸ ಹಿಡಿದಿತ್ತು. ಆಫೀಸಿನ ಕೆಲಸದಲ್ಲಿ ನನ್ನ ಲಕ್ಷ್ಯವೇ ಇರಲಿಲ್ಲ.

ಸಂಜೆಯು ಮುಂಜೆ ಕಚೇರಿ ಬಿಟ್ಟ ಕೂಡಲೆ ಕಾಲು ಎಳೆದಲ್ಲಿಗೆ ಹೊರಟುಬಿಡುತ್ತಿದ್ದೆ. ಕ್ವಚಿತ್ ಯಾವನಾದರೂ ಒಬ್ಬ ಕಂಡಕ್ಟರ್ ತನ್ನ ಸಹಕಾರಿಗೆ ನನ್ನನ್ನು ಬೊಟ್ಟುಮಾಡಿ ತೋರಿಸಿ, ನನ್ನ ಲಕ್ಷ್ಯ ಸೆಳೆಯುತ್ತಿದ್ದ. ನನ್ನ ಬಗ್ಗೆ ಎಲ್ಲ ಕಡೆಗೂ ವಾತಾವರಣವು ಕಲುಷಿತವಾಗಿದೆಯೆಂಬ ಸುದ್ದಿ ಕಿವಿಗೆ ಬಿದ್ದಿತ್ತು. ನಾನೇ ಅವರ ಮುಂದಾಳಿನ ಬಡತರ್ಫಿಗೆ ಕಾರಣನೆಂದು ಎಲ್ಲರೂ ಆಡಿಕೊಳ್ಳುತ್ತಿದ್ದರು.

ಆದರೆ ನನ್ನ ವಿನಾ ರಾಮಶರಣನ ಬಡತರ್ಫಿ ಏನಾದರೂ ನಿಲ್ಲುವಂತಿದ್ದಿತೇನು? ಎಂದಾವದೊಮ್ಮೆ ಅವನ ನೌಕರಿಯ ಇತಿಶ್ರೀ ಆಗುತ್ತಿತ್ತೆಂಬುದು ಖಚಿತ! ಅದು ರಾಮಶರಣನಿಗೂ ಗೊತ್ತಿತ್ತು. ಅದು ಇಷ್ಟು ಬೇಗ, ಮತ್ತು ಅದಕ್ಕೆ ನಾನು ನಿಮಿತ್ತನಾಗುವುದು ಮಾತ್ರ ಬೇಡವಾಗಿತ್ತು.

ನೌಕರಿ ಹೋದ ಮೇಲೆಯೂ ರಾಮಶರಣ ನಿಶ್ಚಿಂತ ಮನುಷ್ಯನಂತೆಯೇ ಕಂಡನು. ಮತ್ತೊಂದು ಸಾರ್ವತ್ರಿಕ ಸಂಪು ಆಗದಿದ್ದುದಕ್ಕೆ ಅಧಿಕಾರಿಗಳು ಅಚ್ಚರಿಪಟ್ಟರು. ಆದರೆ ಅದಕ್ಕೆ ರಾಮಶರಣನ ವಾಣಿಯೇ ಕಾರಣವಾಗಿತ್ತು. "ನನ್ನ ನೌಕರಿಗಿಂತ ಹಿರಿದಾದ ಧ್ಯೇಯವನು ನಾವು ಸಾಧಿಸಬೇಕಾಗಿದೆ. ಅಸ್ಥಾನದಲ್ಲಿ ಸಾವರ್ಥ್ಯವನ್ನು ಕಳೆದುಕೊಳ್ಳುವುದು ಬೇಡ" ಎಂದು ಅವನು ಎಲ್ಲರಿಗೂ ತಿಳಿಸಿ ಹೇಳಿದ್ದ. ಜನ ಅದನ್ನು ಅಕ್ಷರಶಃ ಪಾಲಿಸಿದರು. ಈ ಪ್ರಕರಣದಿಂದ ಅವನಿಗೆ ಅಂಥ ಅಭೇದ್ಯ-ಅಸಾಮಾನ್ಯ ಸಾಮರ್ಥ್ಯವು ಪ್ರಾಪ್ತವಾಗಿತ್ತು. ಆ ಪ್ರಕರಣವನ್ನು ಕುರಿತು ಹಳಹಳಿಸುವುದಂತಿರಲಿ, ರಾಮಶರಣನು ತನ್ನ ಮನಸ್ಸಿನಲ್ಲಿ ಕಂಪನಿಗೆ ಆಭಾರಿಯೇ ಆಗಿರಬೇಕು.

ಇದೆಲ್ಲವನ್ನು ಮಾತನಾಡಲು ರಾಮಶರಣನ ಭೆಟ್ಟಿಯ ಅಗತ್ಯವಿತ್ತು. ನಾನಾಗಿ ಅವನು ಇದ್ದಲ್ಲಿಗೆ ಹೋಗುವ ಧೈರ್ಯ ನನ್ನಲ್ಲಿರಲಿಲ್ಲ. ಕಾಯುತ್ತಲಿದ್ದೆ. ಅವನಂತೂ ಆಫೀಸಿನ ಕಡೆಗೆ ಹಾಯ್ದಿರಲೇ ಇಲ್ಲ.

ಅಂದು ರವಿವಾರ ಹನ್ನೆರಡೂವರೆ ಗಂಟೆ

ಯಾದರೂ ಊಟಮಾಡಲು ಮನಸ್ಸೇ ಆಗಿದ್ದಿಲ್ಲ. ಸಿಗರೇಟಿನ ಹೊಗೆಯನ್ನು ಉಗುಳುತ್ತ ಕುಳಿತಿದ್ದೆ. ಬಾಗಿಲು ತಟ್ಟಿದ ಸದ್ದಾಯಿತು. ಮಕ್ಕಳು ಹೊರಚಿಲಕ ಹಾಕಿದ್ದರು.

"ಯಾರವರು ?" ಎಂದೆ.

"ನಾನು ರಾಮಶರಣ."

"ಚಟ್ಟನೇ ಕುರ್ಚಿ ಬಿಟ್ಟು ಎದ್ದೆ. ಅವನ ಭೀಮ ಕಾಯ ನನ್ನೆದುರು ನಿಂತಿತ್ತು. ಕೈಗೆ ಸುತ್ತಿದ ಒಂದು ಹಾರವಿತ್ತು. ಇನ್ನೇನು ಮಾತನಾಡಬೇಕೋ ತಿಳಿಯದೆ ನಿಂತಿದ್ದೆ. ಅಷ್ಟರಲ್ಲಿ ರಾಮಶರಣ ನನ್ನ ಕಾಲು ಹಿಡಿದುಕೊಂಡ.

"ಏ, ಏ ರಾಮಶರಣ, ಇದೇನು ? ಎನ್ನುತ್ತ ನಾನು ಅವನನ್ನು ಹಿಡಿದು ಎಬ್ಬಿಸಿದೆ. ದಿಙ್ಮೂಢನಂತೆ ನಾನು ಅವನ ಕಡೆಗೆ ನೋಡುತ್ತ ನಿಂತಾಗ, ಆ ಹಾರವನ್ನು ತೆಗೆದು ನನ್ನ ಕೊರಳಿಗೆ ಹಾಕಬಂದ.

"ಛೇ ಇದೇನು ನಡೆಸಿದ್ದೀ ರಾಮಶರಣ ?" ಎಂದು ದೂರ ಸರಿದೆ.

"ಇಲ್ಲ ಸಾಹೇಬರೆ, ಹಾಗೆ ಮಾಡಬೇಡ್ರಿ" ಎಂದ. ಅವನ ಕಂಠ ತುಂಬಿ ಬಂದಿತ್ತು. ಅವನು ಜುಲುಮೆಯಿಂದ ಹಾಕಿದ ಹಾರವನ್ನು ತೆಗೆದು ಅವನಿಗೇ ಒಪ್ಪಿಸುತ್ತ,

"ನನ್ನದು ನನಗೇ ನಾಚಿಕೆಯಾಗುವ ಹಾಗೆ ಮಾಡುತ್ತೀಯಲ್ಲ" ಎಂದೆ.

"ನಿನ್ನೆ ಯೂನಿಯನ್ನಿನ ಸಭೆಯಲ್ಲಿ ನನ್ನನ್ನು ಒಮ್ಮತದಿಂದ ಅಧ್ಯಕ್ಷ ಅಂತ ಆರಿಸಿದರು. ನನ್ನ ಜೀವನವನ್ನು ಯಾರು ಬೆಳಗಿಸಿದರು, ವ್ಯಕ್ತಿತ್ವವನ್ನು ಯಾರು ಅರಳಿಸಿದರು ಅನ್ನುವುದು ಹೊರಗಿನವರಿಗೆ ಹೇಗೆ ತಿಳಿಯಬೇಕು ? ನನಗೆ ಇಲ್ಲಿಯ ವರೆಗೆ ದೊರೆತ ಶ್ರೇಯಸ್ಸು ತಮ್ಮದೇ" ಹಾಗನ್ನುವಾಗಲೇ ನಾನು ಅವನನ್ನು ಬಿಗಿಯಾಗಿ ಅಪ್ಪಿಕೊಂಡೆ.

"ರಾಮಶರಣ, ನಿನ್ನ ದಾರಿಯನ್ನೇ ನಾ ಕಾಯುತಿದ್ದೆ."

"ಏನು, ಹೇಳ್ರಿ."

"ನೀ ನಿನ್ನ ಸಂಬಳದ ಹಣ ತೆಗೊಂಡಿಲ್ಲ?"

"ಮುದ್ದಾಂ ತೆಗೊಂಡಿಲ್ಲ. ಲೇಬರ್ ಕೋರ್ಟಿಗೆ ಕೇಸ್ ಒಯ್ಯೋದಿದೆ. ಸಾಹೇಬರೇ, ನಿಜ ಹೇಳಿರಿ. ನಾ ಅಂದು ನಿಮ್ಮ ಅಪಮಾನ ಮಾಡಿದೆನೆ ?"

"ರಿಪೋರ್ಟಿನೊಳಗೆ ನಾ ಹಾಗೇನಾದರೂ ಉಲ್ಲೇಖ ಮಾಡಿದ್ದೇನೆಯೆ?"

"ನಾನೂ ಅದನ್ನೆ ಹೇಳತಿದ್ದೆ. ನಾನು ನಿಮ್ಮ ಅಪಮಾನ ಮಾಡಿದೇ ಅಂತೇ ಇಟ್ಟುಕೊಳ್ಳಿ. ಅದೇ ಕ್ಷಣಕ್ಕೆ ಕ್ಷಮಾನೂ ಕೇಳಿದೆ."

"ಅದರ ಉಲ್ಲೇಖ ಮಾಡಿದೆ. ಅದನ್ನ ತೆಗೆದು ಹಾಕಬೇಕಂತ ಸಾಹೇಬರು ಬಹಳ ಒದರಾಡಿದರು. ನಿನ್ನನ್ನು ಕೆಲಸದಿಂದ ತೆಗೆದು ಹಾಕುವ ವಿಚಾರ ಇತ್ತೇ ಇತ್ತು ಅವರದು. ಅದಕ್ಕೆ ನಾ ನಡುವೆ ಸಿಕ್ಕೆ."

"ಏನೂ ಕೆಡಕು ಆಗಲಿಲ್ಲ. ನೀವು ಇದ್ದ್ಹಾರಿ ಅಂತ ಹೀಗೆ ರಿಪೋರ್ಟು ಆಯಿತು ಲೇಬರ್ ಕೋರ್ಟಿಗೆ ಹೋಗೋದಕ್ಕೆ ಬಲಾ ಬಂತು."

"ರಾಮಶರಣ, ನೀನು ನಿಜವಾಗೇ ದೊಡ್ಡ ಮನುಷ್ಯ."

"ಇದ್ದದ್ದೇ ಸತ್ಯ ಇದ್ದರೆ ನೀವು ಮಾಡಿದವರು ! ಹೋಗಲಿ ಬಿಡಿರಿ. ಒಂದು ಸೂಕ್ಷ್ಮ ಕೆಲಸದ ಸಲುವಾಗಿ ನಾನು ನಿಮ್ಮ ಕಡೆ ಬಂದಿದ್ದೇನೆ."

"ಏನು ?"

"ಕೇಸ್ ನಡೆಯಿತು ಅಂದರೆ ನೀವು ಅಜಾರಿ ಆಗಿ, ಅಥವಾ ಊರಿಗೆ ಹೋಗಿ, ಕೋರ್ಟಿನೊಳಗೆ ಗೈರ್‌ಹಾಜರ್ ಉಳಿಯಲಿಕ್ಕೆ ಸಾಧ್ಯ ಇದೆ ಏನು ?"

ನಾನು ಏನು ಉತ್ತರ ಹೇಳಬೇಕೆಂಬುದು ತಿಳಿಯದೇ ಸುಮ್ಮನಿದ್ದೆ. ಅದರಿಂದ ಉತ್ಸುಕನಾದ ಅವನು,

"ಸಾಹೇಬ, ಐದು ಸಾವಿರ ಮಂದಿ ಕೆಲಸಗಾರರು ನಿಮ್ಮನ್ನ ಹರಸಿ ಹಾಡತಾರೆ. ನಮ್ಮ ಪ್ರತಿಷ್ಠೆ, ಮಾನಾ ಅಪಮಾನಾ ಈ ಕೇಸನ್ನು ಅವಲಂಬಿಸಿದೆ— ನೀವು ಮನಸ್ಸಿನ ಮೇಲೆ ತೆಗೊಂಡರೆ—"

"ನನ್ನ ಗೈರ್‌ಹಾಜರಿ ಎಷ್ಟು ದಿವಸ ನಡೆದೀತು ? ಈ ಪರಿಸ್ಥಿತಿಯೊಳಗೆ ಸುಳ್ಳು ಕಾರಣ ಹೇಳುವುದು ಖೊಟ್ಟಿ ಸರ್ಟಿಫಿಕೇಟು ಕೊಡೋದು ಇವು ದಕ್ಕುವುದು ಕಠಿಣ."

"ಅದು ನಮಗೆ ಹತಿತು. ನಿಮಗೆ ಬೇಕಾ






DALDA

ದಂಥ ಸರ್ಟಿಫಿಕೇಟ್ ತಂದು ಕೊಡತೇನೆ."

"ಒಂದಿಷ್ಟು ವಿಚಾರ ಮಾಡಲಿಕ್ಕೆ ಪುರಸೊತ್ತು ಕೊಡು. ನಿಮಗೆ ಸಹಾಯ ಮಾಡೋದರೊಳಗೆ ನಾ ಸಿಗಬೀಳದಂತೆ ಆಗಬೇಕಲ್ಲ."

"ಅದು ಹೌದು. ಇನ್ನೂ ಮತ್ತೆ ಬೇರೇ ಉಪಾಯ ಇವೆ. ನಾ ಯಾವಾಗ ಬರಲಿ ?"

"ನಾ ಹೇಳಿ ಕಳಿಸ್ತೇನೆ. ಅಲ್ಲದೇ ನಿನ್ನ ಲಕ್ಷದೊಳಗೆ ಇರಲಿ. ನಾನು ನಿನ್ಹಾಗೆ ದೊಡ್ಡ ಮನುಷ್ಯ ಅಲ್ಲ."

"ಏನಾದರೂ ಅಂತೀರಿ ಆಯಿತು."

"ನಿಜ. ನಿನ್ನ ಹಾಗೆ ಲಟ್ಟನೇ ನಿರ್ಣಯ ತಗೊಳ್ಳುವ ಯೋಗ್ಯತೆ ನನ್ನದಲ್ಲ."

ರಾಮಶರಣ ಎದ್ದು ಹೋದ.

ಆದರೆ ಈ ಸಮಸ್ಯೆಯನ್ನ ನಾನು ಆಗಲೇ ಬಿಡಿಸಿದಂತಾಗಿತ್ತು. ನನ್ನ ಹಿತವನ್ನು ಕಡೆಗಣಿಸಿ ಐದು ಸಾವಿರ ಜನ ಕಾರ್ಮಿಕರ ಕಲ್ಯಾಣದ ಭಾರವನ್ನು ಹೊತ್ತುಕೊಳ್ಳುವಷ್ಟು ನಾನೇನು ವ್ಯವಹಾರಶೂನ್ಯನಿರಲಿಲ್ಲ. ಕಂಪನಿಯಲ್ಲಿಯ ೧೨೩೪ಲ ಕಾರಕೂನರಲ್ಲಿ ನಾನೂ ಒಬ್ಬನಾಗಿದ್ದೆ. ನಾನು ಹುತಾತ್ಮನಲ್ಲವೆಂಬ ಮಾತನ್ನು ನನ್ನ ಮನಸ್ಸು ಒಂದೇ ಸಮನೆ ಹೇಳುತ್ತಿದ್ದಿತು. ಆದ್ದರಿಂದ ನಾನು ಅವನಿಗೆ ನೆರವಾಗುವ ವಿಚಾರವನ್ನು ಅವನಿದ್ದಾಗಲೇ ತೆಗೆದು ಹಾಕಿದ್ದೆ. ಕೇವಲ ರಾಮಶರಣನ ಹಿತಸಂಬಂಧ ಈ ಸಮಸ್ಯೆಯಲ್ಲಿ ತೊಡಗಿದ್ದರೆ ಇಷ್ಟು ತ್ವರೆಯಾಗಿ ನಿರ್ಣಯಕ್ಕೆ ಬರಲು ಸಾಧ್ಯವಾಗುತ್ತಿದ್ದಿಲ್ಲ.

ರಾಮಶರಣ ನನ್ನ ಹುಟ್ಟಿನ ಹನ್ನೆರಡನೆಯ ದಿನದ ಗುಗ್ಗರಿಯನ್ನು ಮುಕ್ಕಿ ಕುಳಿತಿದ್ದ. ಎರಡನೆಯ ದಿನವೇ ಮತ್ತೆ ಬಂದ.

"ಸಾಹೇಬರೇ ನಿಮ್ಮ ಕ್ಷಮಾ ಕೇಳಲಿಕ್ಕೆ ಬಂದೇನಿ, ಮೊನ್ನೆ ನಾ ನಿಮಗೆ ಸುಳ್ಳು ಹೇಳಿದೆ."

"ಅಂದರೆ ?"

"ಈ ಅಪೀಲಿಗೂ ಕಾಮಗಾರರ ಕಲ್ಯಾಣಕ್ಕೂ ಏನೂ ಸಂಬಂಧ ಇಲ್ಲ. ನಿಜ ಅಂದರೆ, ಇದರೊಳಗೆ ನನ್ನದೇ ಸ್ವಾರ್ಥ ಇದೆ."

"ಹೌದ ? ಸುಳ್ಳು ಯಾಕೆ ಹೇಳಿದಿ ?"

"ನಿಮ್ಮ ಮುಂದೆ ದಿಮಾಕು ತೋರಿಸಲಿಕ್ಕೆ ಹೋದೆ. ಮನೆಗೆ ಹೋದ ಮೇಲೆ ಕಸಿವಿಸಿ ಆಯಿತು. ನಿದಾನ ನಿಮ್ಮ ಮುಂದೆ ಸುಳ್ಳು ಆಡಬಾರದಿತ್ತು ಅಂತ ಅನಿಸಿತು."

"ಹೋಗಲಿ, ಮತ್ತೇನಾದರೂ ಉಪಾಯ ಇದ್ದರೆ ಹೇಳು. ನೋಡೋಣ."

"ಅದನ್ನೇ ಹೇಳತೇನೆ. ನಮ್ಮ ಜನಕ್ಕೆ ಊರಿನ ಸೆಳೆತ ಎಷ್ಟು ಇರುತ್ತದೆ ಅನ್ನುವುದು ನಿಮಗ ಗೊತ್ತಿದೆ. ನಾನು ನೌಕರಿಗೆ ಬಂದಂದಿನಿಂದ, ಅಂದರೆ ಎಂಟು ವರ್ಷದಿಂದ ನಾನು ಊರ ಕಡೆಗೆ ಹೋಗಿಲ್ಲ."

"ಹೌದು. ನನಗೂ ಇದು ಸುಮಸ್ಯಾನೇ ಆಗಿತ್ತು."

"ಪ್ರವಾಸ ಅಂದರೆ ಖರ್ಚು ಆಗುವುದೇ. ಹೇಳಿಕೇಳಿ ನಾನು ಒಬ್ಬನೇ ಇರುವವ. ಶಕ್ಯ ಇದ್ದಷ್ಟು ಹಣ ಉಳಿಸಿ ಊರಿಗೆ ಹಣ ಕಳಿಸುತ್ತಿದ್ದೆ. ಹಿಂದಕ್ಕೆ ನಾನು ಒಬ್ಬ ಸಾಧುವಿನ ನಾದಕ್ಕೆ ಬಿದ್ದಿದ್ದೆ. ನಿಮಗೆ ನೆನಪು ಇದೆ ಅಲ್ಲ?"

"ಹೌದು ಅಂದ್ಹಾಗೆ ನಾನೂ ನಿನಗೆ ಸುಳ್ಳು ಹೇಳಿದ್ದೆ. ನೀ ಅವನ ಅಂಗಾರಾ - ಪ್ರಸಾದಾ ತಂದು ಕೊಟ್ಟ ಮೂರನೆಯ ದಿನವೇ ನನಗೆ ಮೊದಲನೇ ಬಡತಿ ಸಿಕ್ಕಿತ್ತು. ಮತ್ತು ಈ ಸಾಧೂ ಏನಾದರೂ—"

"ಯಾತಕ್ಕೆ ಸಾಹೇಬರೇ, ಇದರ ನಾದಕ್ಕನೇ ಬೀಳಬೇಡಿರಿ. ಅಂಗಾರಕ್ಕೆ, ನಿಮ್ಮ ಬಡತೀಗೆ ಏನೂ ಸಂಬಂಧ ಇಲ್ಲಾ. ನಿಮ್ಮ ಹುಷಾರಿಗೂ ಇಡೀ ಆಫೀಸಿನೊಳಗೇ ವಾಹವ್ವಾ ಇದೆ. ಇನ್ನೂ ನನ್ನಂಥವನ ಇಚ್ಛೆ ಪೂರ್ಣ ಆಗಿದ್ದರೆ ನನಗೂ ಇದು ಪಟಾಯಿಸುತಿತ್ತು."

"ನಿಂದೇನು ಇಚ್ಛೆ ಇತ್ತು ?"

"ನನಗೆ ಹಣದ ಅಗತ್ಯ ಇತ್ತು. ಅದಂತೂ ಸಿಗಲಿಲ್ಲ. ತಿರುಗಿ ನನ್ನ ಕಿಸೆಯಿಂದೇ ಐವತ್ತು ರೂಪಾಯಿ ಹೋದವು."

"ನಿನಗೆ ಎಷ್ಟು ಹಣ ಬೇಕಾಗಿತ್ತು ?"

"ಐದು ಸಾವಿರ."

"ಯಾತರ ಸಲುವಾಗಿ ?"

"ಅದೊಂದು ದೊಡ್ಡ ಇತಿಹಾಸವೇ ಇದೆ. ನಮ್ಮ ಊರೊಳಗೆ ಒಂದು ಕಾಲಕ್ಕೆ ನಾವು ಬಹಳ ಆಸ್ತಿವಂತರಾಗಿದ್ದೆವು. ಆದರೆ ಪರಿಸ್ಥಿತಿ ತಿರುಗಿ ಬಿತ್ತು. ಎಷ್ಟು ಅಂತೀರಿ? ಒಂದು

ಸ್ವಲ್ಪನೂ ಆಸ್ತಿ ಉಳಿಯದ್ಹಾಗೆ, ಎಲ್ಲಾ ಒತ್ತೆ ಬಿದ್ದಿತು. ನಮ್ಮ ತಂದೆ ಸಾಯುವಾಗ ಅವರಿಗೆ ವಚನ ಕೊಟ್ಟೆ. ಒತ್ತೇ ಹಾಕಿದ ಆಸ್ತಿ ಬಿಡಿಸಿಕೊಳ್ಳುವ ತನಕ ಲಗ್ನ ಆಗುವುದಿಲ್ಲ ಅಂತ, ರಕ್ತಾ ಆಟ್ಟಿಸಿ ಎರಡು ಸಾವಿರ ಕೂಡಿಸಿದೆ. ಇನ್ನೂ ಮೂರು ಸಾವಿರ ಕೂಡಿಸಬೇಕಾಗಿದೆ. ನನ್ನ ನೌಕರಿ ಮುಂದುವರಿಯೋದು ಈಗ ಅಗತ್ಯ ಇದೆ."

"ಹಾಗಿದ್ದರೆ ಈ ಯೂನಿಯನ್ನಿನ ಉಪದ್ವ್ಯಾಪ ಯಾರು ಹೇಳಿದ್ದರು ನಿನಗೆ?"

"ನಾನೂ ಈ ವಿಷಯದಲ್ಲಿ ಬಹಳ ಯೋಚನೆ ಮಾಡಿದೆ ಸಾಹೇಬ, ಈ ಯೂನಿಯನ್ನಿನೊಳಗೆ ನಾ ಯಾಕೆ ಬಿದ್ದೆ—ಅಂತ. ಹೇಗೊ ಆ ಸೆಳವಿನಲ್ಲಿ ಸಿಕ್ಕೆ ಈಗ ಬಿಡಬೇಕಂದರೆ... ಈಗ 'ರಾಮಶರಣ ಜಿಂದಾಬಾದ'ದ ಸವಿ ಹತ್ತಿದೆ!" —ಇಷ್ಟು ನುಡಿದು ರಾಮಶರಣ ದೊಡ್ಡದಾಗಿ ನಕ್ಕು ಮತ್ತೆ ಕನಿಕರದ ದನಿಯಲ್ಲಿ ಹೇಳಿದ:

"ಈಗ ಸಾಹೇಬ, ಈ ಕೇಸಿನಿಂದ ಪಾರಾಗ ಬೇಕಾದರೆ ಇನ್ನೊಂದು ಉಪಾಯ ಇದೆ. ಅದಂದ್ರೆ...ನೀವು ಕೋರ್ಟಿನಲ್ಲಿ ಸಾಕ್ಷಿ ಅವಶ್ಯ ಹೇಳಿರಿ. ಆದರೆ ಒಂದು ಮಾಡಿರಿ. ನನಗೆ ಬೇಕಾದ ಕಚ್ಚಾ ಪಾಯಿಂಟ್ ಅದರಲ್ಲಿ ತರ್ರಿ."

"ಅಂದರೆ? ವಕೀಲರ ಕೆಲಸ ನನಗೆ ಹೇಳಲಿಕ್ಕೆ ಹತ್ತಿದಿಯಲ್ಲ?"

"ನಾ ವಕೀಲರನ್ನ ಕರಕೊಂಡೇ ಬಂದೇನಿ."

"ಕಮಾಲ ಮಾಡಿದಿ! ಯಾರವರು?"

ಗ್ಯಾಲರಿಯಲ್ಲಿ ಯಾರಾದರೂ ನಿಂತಿರಬೇಕೆಂಬ ಸಂಶಯ ನನಗೆ ಆಗಿನಿಂದಲೇ ಬಂದಿತ್ತು. ರಾಮಶರಣ ಹೊರಗೆ ಹೋಗಿ ಯೂನಿಯನ್ನಿನ ವಕೀಲರನ್ನು ಕರೆದುಕೊಂಡು ಬಂದನು. ಈ ಎರಡನೆಯ ಉಪಾಯದಲ್ಲಿಯೂ ರಾಮಶರಣನ ಮನಸ್ಸನ್ನು ನೋಯಿಸಲಾಗದೆ ಉಳಿದೆ.

ಔಪಚಾರಿಕ ಮಾತು ಮುಗಿದು, ಕೋರ್ಟಿನಲ್ಲಿಯ ನನ್ನ ಸಾಕ್ಷಿಯ ತರಬೇತಿ ಸುರುವಾಯಿತು. ಈ ಫಾರ್ಸು ಎರಡು ತಾಸಿನ ವರೆಗೆ ನಡೆಯಿತು. ವಕೀಲರು ನಾನು ಸಾಕ್ಷಿಯಲ್ಲಿ ಏನು ಹೇಳಬೇಕು, ಯಾವುದನ್ನು ಹೇಳಬಾರದು ಎನ್ನುವುದನ್ನು ಕಲಿಸಿಕೊಟ್ಟರು. ಅವರಿಗೆ ಸಂಪೂರ್ಣ ಸಮಾಧಾನವಾದ ನಂತರ ಈ ನಾಟಕ ಮುಗಿಯಿತು. ರಾಮಶರಣ ನನ್ನನ್ನು ಮನಸಾ ವಂದಿಸಿ ತನ್ನ ವಕೀಲರೊಂದಿಗೆ ಹೊರಟುಹೋದನು.

ಮುಂದಿನ ಕೆಲ ದಿನಗಳಲ್ಲಿ ವಾತಾವರಣಕ್ಕೆ ಮತ್ತೆ ಕಾವೇರತೊಡಗಿತು. ಈ ಕೇಸಿನ ವಿಷಯ ಬಿಟ್ಟರೆ ಕಾರ್ಮಿಕರಿಗೆ, ಕಾರಕೂನ ಜನರಿಗೆ ಚರ್ಚೆಗೆ ಅನ್ಯ ವಿಷಯವೇ ಇಲ್ಲವಾಗಿತ್ತು. ರಾಮಶರಣನ ಚಾಕರಿಯ ಪ್ರಶ್ನೆ ಎಂದೋ ಲುಪ್ತವಾಗಿತ್ತು. ಕೋರ್ಟುಕಚೇರಿಯ ವ್ಯಾಪದಲ್ಲಿ ಯೂನಿಯನ್ನಿನ ಕೆಲಸವೂ ಹಿಂದುಳಿದಿದ್ದಿತು. ಈ ಕೇಸಿನ ಭವಿತವ್ಯವು ನನ್ನ ಸಾಕ್ಷಿ, ಹೇಳಿಕೆಗಳ ಮೇಲೆಯೆ ಅವಲಂಬಿಸಿದೆ ಎಂಬುದು ಎಲ್ಲರಿಗೂ ನಿಶ್ಚಿತವಾಗಿತ್ತು.

ಅಂದು ನನ್ನ ಸಾಕ್ಷಿ ಮೊದಲಾಗಿ ಮುಗಿಯಿತು. ಮುಗಿದೊಡನೆಯೆ ಯಾರ ಕೂಡ ಮಾತನಾಡದೇ ಕಂಪನಿಯ ಮೋಟಾರಿನಲ್ಲಿ ಕುಳಿತು ಮನೆಗೆ ಬಂದೆ. ಕೋರ್ಟಿನ ಭಯಾನಕ ವಾತಾವರಣವು ಮನೆಗೆ ಬಂದರೂ ಕಣ್ಣಿಂದ ಮರೆಯಾಗದಾಯಿತು. ಸಾಕ್ಷಿಯು ಮುಗಿಯುತ್ತ ಬಂದಾಗ ರಾಮಶರಣನ ಹಾಗೂ ಅವನ ವಕೀಲರ ಮುಖಮುದ್ರೆ ಬಿದ್ದುಹೋಗಿದ್ದುದನ್ನು ನನಗೆ ನೋಡಲಾಗಿರಲಿಲ್ಲ.

ಆದರೆ ಇಂಥ ಸ್ಥಿತಿಯಲ್ಲಿಯೂ ನನ್ನಿಂದ ಪ್ರಮಾದ ಘಟಿಸಿದೆ ಎಂದು ಮಾತ್ರ ಅನಿಸುತ್ತಿರಲಿಲ್ಲ. ಇಂದಿಗೂ ಅನಿಸುವುದಿಲ್ಲ. ನಾನು ಎಂದೂ ದೊಡ್ಡ ಮನುಷ್ಯನಿರಲಿಲ್ಲ. ಇಲ್ಲದ ಅಪೇಕ್ಷೆಯನ್ನು ರಾಮಶರಣ ನನ್ನಿಂದ ಏಕೆ ಮಾಡಬೇಕಾಗಿತ್ತು? ಹಾಗಿದ್ದರೆ, ನಾನು ಸರಿಯಾದುದನ್ನೇ ಮಾಡಿದ್ದರೆ ಕೋರ್ಟಿನಲ್ಲಿ ನನ್ನ ಸರ್ವಸಾಮರ್ಥ್ಯ ಉಡುಗಿತೇಕೆ? ಸ್ವಂತದ ಸ್ವಾರ್ಥಕ್ಕೆ ಅಂಟಿಕೊಂಡು ನಾನು ಈ ಕೆಲಸ ಮಾಡಿದೆನೆಂಬ ಶಂಕೆ ಯಾವ ಮಾಯೆಯಿಂದಲೋ ಮನಸ್ಸಿನಲ್ಲಿ ಸೇರಿಕೊಂಡು ಬಿಟ್ಟದ್ದು, ಏನು ಮಾಡಿದರೂ ಹೋಗಲೊಲ್ಲದಾಯಿತು.

ನಾಳೆ ಕಚೇರಿಗೆ ಹೋಗುವುದಿದೆ ಎಂಬ ನೆನಪು ಬಂದಿತ್ತಷ್ಟೇ — ಮೈಯಲ್ಲಿ ಭೀತಿಯ ಚಳಕು

ಆರುಪಾರಾಗಿ ಹೋಯಿತು. ಯಾವನಾದರೂ ಒಬ್ಬ ತಲೆತಿರುಕ ಡ್ರೈವರ್ ನನ್ನನ್ನು ಹೊಡೆಯಲಿಕ್ಕಿಲ್ಲವಲ್ಲ! ಈ ವಿಚಾರ ಬಂದೊಡನೆಯೇ ಕಾಗದ-ಲೇಖನಿಯನ್ನು ತೆಗೆದುಕೊಂಡು ರಜೆಗೆ ಅರ್ಜಿ ಹಾಕಿದೆ.

ಮೂರು ದಿನ ಹೀಗೆಯೆ ಕಳೆದೆ. ಒಂದಿಷ್ಟು ಶಾಂತಿ ಮೂಡಿತ್ತು. ಇನ್ನೂ ಕೆಲ ದಿನ ಹೋದ ಮೇಲೆ, ಎಲ್ಲವೂ ಮರೆವಿಗೆ ಬೀಳಬಹುದು, ವಾತಾವರಣ ತಿಳಿಯಾಗಬಹುದು ಎಂಬ ಆಶೆಯನ್ನು ಕಟ್ಟಿಕೊಂಡಿದ್ದೆ. ಆದರೆ ಹಾಗಾಗಬಾರದೆಂದು ವಿಧಿ ಸಂಕಲ್ಪಿಸಿತ್ತೇನೊ.

ನನ್ನ ಭೆಟ್ಟಿಗೆ ಮುಚ್ಚಂಜೆಯ ವೇಳೆಯನ್ನು ಆರಿಸಿಕೊಂಡು ರಾಮಶರಣ ಬಂದ. ಅವನ ಕೆದರಿದ ಕೂದಲು, ಹಿಗ್ಗಿದ ಕಣ್ಣು ಅಷ್ಟೇ ನನಗೆ ಮೊದಲು ಕಂಡವು. ತುಸು ಹೊತ್ತಿನ ನಂತರ ಅವನ ಒಂದು ಕೈ ಮಡಿಚಿದ್ದುದು ಕಂಡಿತು. ಅವನ ಕೈಯಲ್ಲಿ ಚಾಕು ಇದ್ದಿರಬಹುದೆ? ಸಾಹೇಬರು ರಾಮಶರಣನ ಬಗ್ಗೆ ಮೊದಲ ಸಲ ಹೇಳುವಾಗ ಅಂದಿದ್ದರು— ರೇಗಿದರೆ ಅವನು ಇನ್ನೊಬ್ಬರ ಜೀವ ತೆಗೆಯುವುದಕ್ಕೂ ಹಿಂಜರಿಯುವವನಲ್ಲ—ಎಂದು.

ನಡುಗುತ್ತ ನಾನು ಅವನ ಕಾಲಿಗೆ ಬಿದ್ದೆ. ಅವನು ನನ್ನನ್ನು ಅನಾಮತ್ತಾಗಿ ಮೇಲಕ್ಕೆ ಎತ್ತಿ ಕುರ್ಚಿಯಲ್ಲಿ ಕುಕ್ಕರಬಡಿದ.

ತುಸು ಹೊತ್ತು ಇಬ್ಬರೂ ಮೌನ. ನನ್ನ ಮುಖ ರಾವುಹೊಡೆದಿತ್ತು. ಅವನದು ವಿಚಾರ-ಮಗ್ನವಾಗಿತ್ತು. ಅವನ ಬಾಯಿಂದ ಏನು ಬರುವುದೊ ಎಂದು ಕಾದಿದ್ದೆ.

"ಇದೇನು ಮಾಡಿದಿರಿ, ಸಾಹೇಬರೆ?" ಅಂದ.

"ರಾಮಶರಣ, ಹೊಟ್ಟೆಯ ದೆಸೆಯಿಂದ ಮನುಷ್ಯ ನೀಚ ಆಗತಾನೆ."

"ಆದರ ಇಷ್ಟು?"

"ರಾಮಶರಣ, ಹಾಗೆ ಸಾಕ್ಷಿ ಹೇಳದೇ ನನಗೆ ಗತ್ಯಂತರನೇ ಇದ್ದಿಲ್ಲ."

"ಸಾಕ್ಷೀ ಬಗ್ಗೆ ಅಲ್ಲರಿ ಸಾಹೇಬ, ನಾ ಅನ್ನುವುದು. ನಿಮಗೆ ಆಫೀಸರ್ ಜಾಗಾ ಸಿಕ್ಕಾಗೇ ನಾವು ಅದನ್ನು ತಿಳಕೊಂಡಿದ್ದೆವು. ಆದರೆ ನಿದಾನ, ನೀವು ಮುಂಚೇ ಹೀಗೆ ಸಾಕ್ಷಿ ನುಡಿಯುವವರು ಅಂತ ನಮಗೆ ಹೇಳಬೇಕಾಗಿತ್ತು."

"ಧೈರ್ಯಾ...ಧೈರ್ಯಾ ಸಾಲಲಿಲ್ಲ ಅನ್ನು."

"ಅದು ಹೋಗಲಿ ಬಿಡಿರಿ. ಆದರೆ ಇದನ್ನೇನು ಮಾಡಿದಿರಿ?"

ರಾಮಶರಣ ತನ್ನ ಕೈಮುಷ್ಟಿಯಿಂದ ಒಂದು ಪಾಕೀಟನ್ನು ಹೊರತೆಗೆದ. ನಾಲ್ಕು ದಿನಗಳ ಕೆಳಗೆ ನಾನು ಅವನಿಗೆ ಕಳಿಸಿದ್ದ ೩,೦೦೦ ದ ಚೆಕ್ಕು ಇದ್ದಂತೆಯೇ ಇತ್ತು.

"ನಿಮ್ಮ ಚೆಕ್ಕು ತಗೊಳ್ಳಿರಿ. ನಿಮ್ಮ ಕಿಸೆಗೆ ಯಾಕೆ ಕತ್ತರಿ ಹಾಕತೀರಿ? ನನ್ನ ಬಡಿದಾಟ ಕಂಪನಿಯ ಜೋಡಿ ಇದೆ."

"ನನಗೆ-ನನಗೆ ಇಷ್ಟೂ ಸಮಾಧಾನ ಇರಬಾರದು ಅಂತೀಯಾ?"

"ನಿಮ್ಮದು ಯಾಕೆ, ನಿಮ್ಮ ಅಪ್ಪನ ಸಮಾಧಾನಕ್ಕ ಸಹಿತ ನನಗ ಇದನ್ನ ಸ್ವೀಕರಿಸುವುದು ಶಕ್ಯ ಇಲ್ಲ. ಇದು ವ್ಯಭಿಚಾರ. ಒಳ್ಳೇದು. ನಾ ಹೋಗತೇನಿ."

"ನಿನ್ನೆ ಈ ಶಾಂತ ಮಾತಿನಿಂದ ನನಗೆ ಸಂಕಟ ಆಗತದೆ. ಒಂದೆರಡು ಬೈದಾದರೂ ಬೈಯಿ."

"ಅದಕ್ಕೂ ಒಂದಿಷ್ಟು ಯೋಗ್ಯತಾ... ಮಾಫ ಮಾಡಿರಿ ಸಾಹೇಬ. ನಿಮಗೆ ಹೆಚ್ಚು ಕಡಿಮೆ ಏನೂ ಆಡೊಹಾಗಿಲ್ಲಂತ ನಿಶ್ಚಯ ಮಾಡಿದ್ದೇನೆ."

"ನೀನು ನನ್ನ ಖೂನಿ ಮಾಡಲಿಕ್ಕೆ ಬಂದಿರಬೇಕು ಅಂತ ಅನಿಸಿತ್ತು. ನಿಲ್ಲು, ರಾಮಶರಣ—!"

ರಾಮಶರಣ ಏನೂ ಮಾತನಾಡಲಿಲ್ಲ. ಬರೇ ನಕ್ಕು ಹೊರಟುಬಿಟ್ಟ.

*

"ರಾಮಚರಣಜೀ ಗೋಷ್ಟ" ಎಂಬ ಮೂಲ ಮರಾಠಿ ಕಿರುಕಾದಂಬರಿಯು
ಶ್ರೀ ಕೊಟ್ಟಲಗಿ ರಾಮಚಂದ್ರ ಕೃತ ಅನುವಾದದ ಸಂಗ್ರಹ

This Magazine owned by the Loka Shikshana Trust, Hubli is printed and published by Shri H. R. Purohit at the Samyukta Karnatak Press, Koppikar Road, Hubli.

ಹಿಮಾಲಯ ದರ್ಶನ

ಅಧ್ಯಾತ್ಮ ಕಾರ್ಯಾಲಯ ಹುಬ್ಬಳ್ಳಿ, ಹಾಗೂ ೨. ರೆಸಿಡೆನ್ಸಿರೋಡ್ ಬೆಂಗಳೂರು-೧

ಲೇ: ಭಾರತ ಸಂಚಾರಿ ಬೆಲೆ: ೨-೫೦